ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಫ್ಯಾಷನ್
ಮುಂಬೈನಲ್ಲಿ ಶನಿವಾರ ನಡೆದ ಫ್ಯಾಷನ್ ಶೋದಲ್ಲಿ ಬಾಲಿವುಡ್ ನಟ ಆತಿಯಾ ಶೆಟ್ಟಿ ಪಾಲ್ಗೊಂಡಿದ್ದರು



ಕೋವಿಡ್–19: ಎರಡನೇ ಅಲೆ ಮತ್ತಷ್ಟು ಗಂಭೀರ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಕೋವಿಡ್–19 ಎರಡನೇ ಅಲೆ ಮುಂದಿನ ವಾರಗಳಲ್ಲಿ ಮತ್ತಷ್ಟು ಗಂಭೀರವಾಗಲಿದ್ದು, ಪರಿಸ್ಥಿತಿ ಹದಗೆಡುವ ಸಾಧ್ಯತೆ ಇದೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ.

ಎಲ್ಲ ದೊಡ್ಡ ರಾಜ್ಯಗಳಲ್ಲಿ ಸೋಂಕು ಹಬ್ಬುತ್ತಿದೆ. ಸೋಂಕು ಹರಡುವ ವೈರಸ್ ಸಾಮರ್ಥ್ಯವನ್ನು ವಿಶ್ಲೇಷಿಸಿದಾಗ 17 ರಾಜ್ಯಗಳ ಪೈಕಿ 16ರಲ್ಲಿ ಪ್ರಕರಣಗಳು ಹೆಚ್ಚುತ್ತಿರುವುದು ಗೊತ್ತಾಗಿದೆ.

10 ಸೋಂಕಿತ ವ್ಯಕ್ತಿಗಳು ಇತರ 13 ಮಂದಿಗೆ ಕಾಯಿಲೆಯನ್ನು ಹಬ್ಬಿಸಬಹುದು. ಮಾರ್ಚ್ 17ರಿಂದ ಪರಿಸ್ಥಿತಿ ಬಿಗಡಾಯಿಸುತ್ತಿದೆ. ಸಾಂಕ್ರಾಮಿಕ ಕಾಯಿಲೆ ಕುರಿತು ಕಂಪ್ಯೂಟರ್ ಮಾದರಿಗಳ ಮೂಲಕ ವಿಶ್ಲೇಷಣೆ ನಡೆಸಿದಾಗ ಈ ವಿಷಯ ಗೊತ್ತಾಗಿದೆ ಎಂದು ಚೆನ್ನೈನಲ್ಲಿರುವ ಗಣಿತ ವಿಜ್ಞಾನಗಳ ಸಂಸ್ಥೆಯ ವಿಜ್ಞಾನಿ ಸೀತಾಭ್ರಾ ಸಿನ್ಹಾ ಅವರು ತಿಳಿಸಿದ್ದಾರೆ.

‘ಸಿದ್ದರಾಮಯ್ಯ, ಎಚ್‌ಡಿಕೆ, ಬಿಎಸ್‌ವೈ ನಡುವೆ ಹೊಂದಾಣಿಕೆ ರಾಜಕೀಯ’

ಮೈಸೂರು: ಸಿದ್ದರಾಮಯ್ಯ, ಕುಮಾರಸ್ವಾಮಿ ಹಾಗೂ ಯಡಿಯೂರಪ್ಪ ನಡುವೆ ಹೊಂದಾಣಿಕೆ ರಾಜಕೀಯ ನಡೆಯುತ್ತಿದೆ ಎಂದು ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಶನಿವಾರ ಇಲ್ಲಿ ಆರೋಪಿಸಿದರು.

‘ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿ ಪರಸ್ಪರ ರಕ್ಷಣೆ ಮಾಡಿಕೊಳ್ಳುತ್ತಿದ್ದಾರೆ. ಇಬ್ಬರೂ ಸೇರಿ ಯಡಿಯೂರಪ್ಪ ಅವರನ್ನು ರಕ್ಷಣೆ ಮಾಡುತ್ತಿದ್ದಾರೆ. ಬಿಎಸ್‌ವೈ ಎಲ್ಲಾ ಪಕ್ಷದವರಿಗೂ ಅನುಕೂಲ ಮಾಡಿಕೊಡುತ್ತಿದ್ದಾರೆ. ಮೂರೂ ಪಕ್ಷ ಗಳಲ್ಲಿ ತತ್ವ ಸಿದ್ಧಾಂತ ಇಲ್ಲ’ ಎಂದರು.

‘ದೇಶದ ಅಭಿವೃದ್ಧಿಗಾಗಿ ಹೊಂದಾಣಿಕೆ ಮಾಡಿಕೊಂಡಿದ್ದರೆ ಒಳ್ಳೆಯದಿತ್ತು. ಆದರೆ, ‘ಭ್ರಷ್ಟಾಚಾರ ಮುಚ್ಚಿಕೊಳ್ಳಲು, ಪರಸ್ಪರ ರಕ್ಷಣೆ ಮಾಡಿಕೊಳ್ಳಲು ಹೊಂದಾಣಿಕೆ ನಡೆಯುತ್ತಿದೆ. ಸಿ.ಡಿ ವಿಚಾರದಲ್ಲೂ ಹೊಂದಾಣಿಕೆ ಮಾಡಿಕೊಳ್ಳಲಾಗಿದೆ. ಸಿದ್ದರಾಮಯ್ಯ ಅವರ ರೀಡೂ, ಅರ್ಕಾವತಿ ವಿಚಾರ ಏನಾಯಿತು? ಕುಮಾರಸ್ವಾಮಿ 700 ಮಂದಿಯ ದೂರವಾಣಿ ಕದ್ದಾಲಿಕೆ ಮಾಡಿದ ಪ್ರಕರಣಕ್ಕೆ ಸಿಲುಕಿದ್ದಾರೆ. ಮೂವರು ಸ್ವಾಮೀಜಿಯ ದೂರವಾಣಿ ಕೂಡ ಕದ್ದಾಲಿಕೆ ಆಗಿದೆ. ರಾಮಕೃಷ್ಣ ಹೆಗಡೆ ಕೇವಲ ಒಂದು ದೂರವಾಣಿ ಕದ್ದಾಲಿಕೆಗೆ ರಾಜೀನಾಮೆ ನೀಡಿದ್ದರು’ ಎಂದರು.

WEEKEND CORNER ಕ್ಲಾಸಿಫೈಡ್ಸ್







ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

Commercial

PETROL BUNK Space Available for RENT, Nagarabhavi Ring Road (Corner Site) (Build to Suit). 9845791332.

COMMERCIAL SHOWROOM & office Space available for rent No. 603, 1st Block 'D' Group employees layout, Andrahalli main road Bangalore GF2600, FF3100. SF3100 Sq.feet Contact 9343750831

PRIME LOCATION Space available for rent: 2200sqft space Available at 1st floor in Koppikar road Opposite Tansihq Showroom, Koppikar road, Hubli. Preferable for office space. Contact: 8553226526

BANASHANKARI 600 SQFT, FURNISHED OFFICE SPACE NEAR BDA COMPLEX SECOND FLOOR, 16400- RENT, 9986033339, 26713802.

RENT OFFICE Space @ J.P. Nagar 1st Phase. Semi Furnished, 1800 sqft. 60000/ month. 9844012858, 8310947622

Flats

PRESTIGE SONG OF THE SOUTH, Bannerghatta Main Road, 1/ 2/ 3 BHK ready to occupy apartment for Rent with all amenities. Call: 9008999266.

AUGUSTA GOLF VILLAGE, Luxury units for Rent, 3 & 4 BHK ready to occupy with all amenities, Off Hennur Road. Call: 9900085276/ 9900020184.

PRESTIGE Lakeside HABITAT, Varthur Road, 2/ 3/ 4 BHK ready to occupy apartment for Rent with all amenities. Call: 6366971311.

3 TO 18 bedroom flats for rent. RMV/ Sadashivnagar/ Manyatha/ Malleshwaram. 45,000/- to 4,50,000/- . 9845004307.

PRESTIGE FALCON CITY, Kanakapura Road, ready to occupy Apartment for Rent with all amenities. Call: 9108050577.

Industrial And Factory

RENT AT Nadakarappa Industrial Estate near Peenya 2nd stage, Total- 3 acres land, Built-up total 1,00,000 sqft. Power- 500 KVA, Lift, garden, fire security,fully compounded. Previously occupied by Bosch-Rexroth. Contact: 9538199944, 9535388399

14000 SQFT. Built to Suit Godown /Factory Space Available for Rent, @ KIADB Dobaspet 1st Phase. 9845017259.

INDUSTRIAL BUILDING RENT, Ground 3700 Sft, 1st 3700, 100 KV, Sunkadakatte, Magadi Road, Bangalore. 9900543709.

House

SANJAYANAGAR 2 BHK , 3 BHK both For Rent Immediate Occupation, (Vegetarian Preferred) Call: 9900205475.

INDEPENDENT HOUSE, 60x40 site. 24th cross Bsk 2. For rent 11 month renewable (company lease). 3bedrooms, 3bath, covered car park. Brokers excuse. Call 8861711375, 9844358534

2BHK House Ground, Rent 12,000/-. Negotiable, Vegetarians Only, All Facilities, Near Mookambika Temple, Hoskerehalli, Banashankari 3rd Stage. 9341627152, 9964929074.

MALLESWARAM (EIGHTH Main, Ninth Cross) 2 BHK (Two) Houses with dining hall. 1250 sft. Carparking. Only vegetarians. Rent: Ground: 24000/-Second floor: 21000/- 9845243757

4BHK DUPLEX House for Rent @90,000, Rajajinagar with 4 CarParking, East Facing fully furnished, 100% Vastu, Call: 9845216235/ 9945976441

KANAKAPURA ROAD House Rent/Lease 3BHK, Decent Locality Aishwarya Layout Doddakallasandra Near Metro Car-Parking: 7090466137

4 BEDROOM north east facing independent house for rent at BSK 3rd stage near Kamakhya contact 9790039509

RENT 5 BHK Duplex House Just Behind Basaveswar Nagar Main Road Post Office Contact 8088535399

JOB OPPORTUNITIES

Teachers/ Professors

KARNATAKA REDDYJANA SANGHA®
Requires
I) RJS - INSTITUTE OF MANAGEMENT STUDIES
PRINCIPAL - 1
Qualification: M.B.A. Regular with Ph.D.
II) CJR RJS PU & FIRST GRADE COLLEGE Marathalli
PRINCIPAL - 1
Qualification: MA/M.Com/M.Sc Regular with Ph.D.
III) ACCOUNTS MANAGER –1.
Qualification: M.Com. Regular with 10 yrs Exp.& Tally must.
Resumes may be sent to: krjsestablishment@gmail.com within 10 days or post to: The General Secretary, No.1, Mahayogi Vemana Road, 3rd Block, Koramangala, Bangalore - 34. Head Office Ph: 080 25534194. For details visit: www.reddyjanasangha.org

REQUIRES LADY Teachers for English (MABEd) Art and Craft, Social Studies (BA.BEd),Substitution Teacher BA/BCom Graduates with good English Skills. Walk-in Interview with the Secretary, Srikrishna International School, ITI- Layout, BSK 3rd Stage, Bangalore-85. Ph: 65365824.

TRANSCEND SCHOOL, Requires Primary School TEACHERS with D.Ed/ B.Ed and Good Teaching knowledge of English. Preferred in & around Chikkaballapur. Call: 8105030697 Mail: transcend.edu2021@gmail.com

NIRMAN INTERNATIONAL PUBLIC SCHOOL, Near Automated RTO, 7th Block, Vishweshwaraiah Layout, Bangalore-91 Requires efficient Female Candidate for the post of 1.PRINCIPAL with 5 years of Experience. 2.LADY TEACHERS with B.Ed to teach English, Mathematics, Science (Physics, Chemistry & Biology),Social Science for High School. Contact: 8123030731. Email: nirmanorganisation @gmail.com

MAHADEVA GROUP OF INSTITUTIONS HOSKOTE Required Experienced lecturers in Commerce and Management for B.com and Experienced teachers For Primary & High School for the academic year 2021-22 to teach CBSE/ICSE curriculum with post graduation, B.Ed preferred and fluency in English is mandatory Mail the resume to: srisaieducationtrust2015 @gmail.com Contact: 9980618815/ 9945475096

MOTHER MARY School, Thippasandra require Teachers. PRIMARY: English/ Kannada/ Science. HIGH SCHOOL: English/ Hindi/ Computer. Walkin Interview 11.00AM to 1.30PM. Call: 080 25281661

WANTED IMMEDIATELY CHEMISTRY & BIOLOGY TEACHER For 'VIKAS HIGH SCHOOL,' BSK 3rd Stage, Bangalore-85 Contact: 9448110651/ 26797652 between 9- 1pm

Accounts & Finance

REQUIRED 1) ACCOUNTS- cum- ADMIN EXECUTIVE (Female) Any Graduate, Experience in Tally, TDS, GST filing etc., 2) MARKETING Executives (Female/ Male) for an Advertising Agency, Fluency in English, having 2 Wheeler, Walk-in- Interview on March 22nd between 11:00am-02:00pm, Adverto Advertising Pvt Ltd., No. 97, 2nd Floor, RV Road, Basavanagudi, Near Lalbagh Metro Stn, Ph: 26575020, email: advertoadvtg@gmail.com

WE ARE Builders Looking for Accounts Executives with work Experience in GST , IT , TDS, Tally with 10 years of Experience capable of Handling accounts independently, Salary 50k plus. Mail devubangalore@gmail.com

AN ISO 9001- 2015 Company Requires Accountant with 3 - 4 years experience Contact :9686198500 excelwirecut@yahoo.co.in

REQUIRED EXPERIENCED Accountant for Nelamangala office with Tally Knowledge Contact: 9108066888

Drivers

WANTED BIKE rider's Join with India's largest bike taxi service and earn up to 30,000 per month & ride at your convenience, redeemable earnings, insured rides & more details please contact:- 080-47096073

DRIVER CUM Helper Experience 3Years, Salary: 12000 + DA, Age: 25 to 40 Years, Interview Date: 24/3/2021 Timing: 10:30 am to 3.00 pm, Mount Publication Contact: 9343122427/ 9343309169

Engg/ Production Technical

REQUIRED (1) DYNAMIC SHOP- SUPERVISOR with 10 years experience for Mechanical workshop with CNC Machines (2) PLANNING ENGINEER with 5-6 years experience. Requires Immediately at Factory in Nelamangala, Bangalore. Contact: 9845941263

WANTED SITE ENGINEER, able to independently handle a high-end Residential Project at J.P.Nagar 4th phase. 5years+ Site Experience. Contact: 93412-49829

REQUIRED PLUMBING ENGINEERS/ PLUMBING SUPERVISORS/ PLUMBERS with 3 -5 years experience. Contact: 99807-99996/ sridhar@vinayaka-plumbing.com

Graphic Designers

PRAGATI ADVERTISERS PRINT & ELECTRONIC MEDIA AGENCY
INS ACCREDITED
WANTED
GRAPHIC DESIGNER @ VIJAYANAGAR
(CorelDRAW, Photoshop, English & Kannada Typing Knowledge must)
Salary: Upto 20K
Call: 9742543188

General

CONSULTANTS: LOOKING for capable and dynamic resource person to develop PUC/Degree College in North Bangalore. 9845223588

Marketing & Sales

TELECALLER FEMALE, Required For Advertising Company with Computer Knowledge, Good Communication Skill. (Basaveswaranagar): 9945465871

Multiple Vacancy

WANTED: SAI Siddi Lakshmi Chits (KAR) Pvt. Ltd., General Manager, Branch Manager, Marketing Manager, Marketing Executive, Telecallers & Receptionist, Accountant & Cashier, Mobile no: 8660233085/ 9900508464

UNIVERSAL GROUP OF INSTITUTIONS A DEGREE COLLEGE NEAR KENGERI, KOLURU, RAMOHALLI POST, BANGALORE SOUTH - 560074

REQUIRED

DYNAMIC PRINCIPAL with PhD	in Humanities Subjects, minimum 4-5 years experience.
POLITICAL SCIENCE/ HISTORY FACULTY	with MA, NET and minimum 5 years experience
ACCOUNTANT	with M.Com and minimum 5 years experience
PHYSICAL TRAINER	with Mped and minimum 5 years experience
DIGITAL MARKETING EXPERT	any graduation with 3-4 yrs experience
FRONT OFFICE EXECUTIVE	with any graduation and good communication skills

96866 64985/3/1
info@universalinstitutions.com | www.universalinstitutions.com

WANTED FULLY Experienced Accountant/ Salesmen/ Sales girls (age 20- 40 years) Helpers at Chickpet for Ladies Item. Call :9448121073/ 6362616776.

Receptionist/ Secretary

WANTED FEMALE Personal Secretary Cum Admin Asst for an NGO Office in Manipal, English Fluency, Computer Skills, Age 20- 30. Contact: 8925311477

Wanted

ST. ANNE'S FIRST GRADE COLLEGE FOR WOMEN #2, Miller Road, Bangalore-560 052
WANTED IMMEDIATELY
FULL TIME LECTURERS in Commerce, Management, Computer Science, Mathematics and Physical Education Instructor.
PART TIME LECTURERS in Mathematics, Psychology Typist-cum-clerk with Computer knowledge, Attender
SC/ST candidates will be given preference.
Contact: 080-22383421

WANTED OFFICE Staffs (Male) With Computer Knowledge To work in Srirampuram, Peenya and Cubbonpet Qualification: SSLC, 2nd PUC, Contact: 9738421001/ 9886683188

WANTED EXPERIENCED Female Tele-Callers Fluency in Telugu, Kannada, English for Reputed Real Estate Company. Ph:7499809993.

OTHERS

For Sale

OWNER LEAVING immediate sale Leather Sofa Teapoy Dining Box cot call 7975436976/ 9845414482

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

AUTOMOTIVE

Four Wheelers Selling

General Motors/ Chevrolet

SKODA SUPERB 2011 end Elegance TSI MT top end with Sunroof, New Pirelli Tyres, Showroom condition, done 38000 km. 2nd owner Maroon Color. Rs 9.50 Lac. Call: Owner- 98454-96007

Honda

ACCIDENT DAMAGED Vehicle with RC.Vehical No. HR-26-BK -8113, HONDA CIVIC, 2011 Model. Vehicle at owner's custody. Contact: 9845036847

Mahindra

SCHOOL BUS For Sale Mahindra 2008 Model 24 Seater, 2010 model 17 seater & 24 seater school bus in good condition is for sale. Contact Camlin English School. Mob: 6360644721

BUSINESS

Business to Business

Business

GREAT BUSINESS opportunity. Do all govt related services and earn good returns,along with E- Services. Estamp facility also provided. Contact : 6363242408 / 8792353813

Construction And Maintenance

CONSTRUCTION OF YOUR Dream House/ Villa- Renovation, Extension Floor Work etc with good Materials- 9353082981.

Finance

AVAILABLE PRIVATE Mortgage Loans at Low ROI A.B Khatha Properties No Income CIBIL. Contact Nagesh 8495057413, 9538904373.

EDUCATIONAL

Admission

ADMISSIONS OPEN in Commerce, Arts, Science, Management, Law, Engineering, Pharmacy, Nursing, Para-Medical Courses, 9341273990.

Correspondence Courses

DIRECT FINAL (ONE Sitting) PUC/B. Com/ BA/BBA/BCA/ MBA/ B.Ed/ Diploma/ B.Tech/ D.Pharma, 100%Success. Shilpa: 9663366823

MATRIMONIAL

Brides Wanted

Hindu

UK BORN Never married Bachelor Bangalore based B.E. Engineer, Proprietor, HR Consultancy seeks Hindu Bride CNB/ Intercaste 32-42. Mobile 9845276647.

Grooms Wanted

Brahmin

ALLIANCE INVITED for a beautiful girl 26, BE, MBA Brahmin working in MNC, Parents senior management professional. Boy should be highly qualified working preferably in Govt/MNC/Banks in managerial cadre belonged to any Brahmin community, sub sect no bar. Call 9448699856 (7:00Pm to 9:30Pm Sat & Sun 9:00am to 9:00Pm) ganges2093@gmail.com

Hindu

ALLIANCE INVITED from qualified, employed, unmarried Bangalore settled boy for Yadava girl 40/ 5'4' MCA not working. Cont: 7349623569

Matrimonial Bureaus

ವೈವಾಹಿಕ
ಕನ್ನಡ ಸ್ಮಾರ್ಥ ಬ್ರಾಹ್ಮಣ ಸಮುದಾಯದ ವಧು–ವರರ ಅಂತರ್ಜಾಲ ತಾಣ
http://www.hoysalakarnatakabrahmins.com.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಸುಮ ಗೋಪಾಲಕೃಷ್ಣ
ದೂರವಾಣಿ: 9886908152

PERSONAL

Change of Name

I, SAILAJA PUTTANNA Alias HAROKETHANAHALLY SATYANARAYANA SAILAJA Alias SHYLAJA. H.S. Alias H.S. SAILAJA Alias SHAILAJA. H.S R/@ #110, Sriraksha, Megharanjini Street, (3rd Main) Near Raghavendraswamy Mutt, Akshaynagar, Yelchenahalli, Madivala, Bommanahalli, Anekal Bangalore-68 Have Changed My Name To SAILAJA. H.S Vide Affidavit dated: 15/03/2021 Before Notary R. Shivannachari Bengaluru

I PONNAPPA KARUMBAIAH IYCHODIANDA , R/@, G-01, S R Residency, Ist Main, Pai Layout, Near Tin Factory, Udaya Nagar, Bangalore North, Dooravaninagar, Bangalore- 560016, Have Changed My Name To PONNAPPA KARUMBAIAH. Vide Affidavit Dated: 20/03/2021 Sworn Before Notary L. Gopalakrishna Bangalore

I, TUKIVAKAM Rani (Alias) T.Rani, House wife, resident of Qtrs, No.25, Type -IV, Officers Quarters, BEML Nagar, K.G.F. 563115. Have changed my name to Putta Rani (Alias) P. Rani vide affadavit dated 21.03.2018 before Notary Thangaraj S. KGF. Henceforth i shall be called as Putta Rani (Alias) P. Rani only

I,JAYAPRASAD BHAT Residing-at No.59/C, 2nd-Main, 2nd-Cross, 3rd-Phase, 6th-Block, BSK-3rd-Stage, Bangalore-560085 have-changed my-Name-to JAYAPRASAD GAJANAN BHAT Vide-Affidavit Dated:16-03-2021 Sworn-before Notary H.S.Sakalesh Aradhya,Bangalore

I, JAYA PUNJABI, R/@ Somerset Apartments, 'B' Block 6th Floor, Flat No. 604, 18, M.G Road, Trinity Circle, Ashok Nagar, Bengaluru-01 Have Changed My Name to JAYA PRAKASH PUNJABI Vide affidavit dated 17/03/21 Before Notary S Ramesh, Bengaluru.

I, BIBEK KUMAR SENGUPTA, R/@, Flat No. B203, VRR Vista Apartment, Kodigehalli Main Road, Hoodi, Bangalore- 560048. Have Changed My Name To BIBEK SENGUPTA Vide Affidavit Dated: 16/03/2021 Before Notary J. Anand Kumar, Bangalore

I, UDAY KUMAR S S/o. Sitaraman, have changed my name to UDAYA KUMAR S Vide affidavit dated 18-03-2021 sworn before notary J.Anand Kumar, Bengaluru

MORE Classifieds IN SUPPLEMENT

PUBLIC NOTICE

ಪ್ರಕಟಣೆ

ಸೈಟ್ ನಂ. 25, (50x100 ಅಡಿ) (5000 ಅಡಿ) ಅಳತೆ ಇರುವ, ಸರ್ವೆ ನಂ. 158 (ಚಿಕ್ಕಬೆಗೂರ್ ವಿಸ್ತರಣೆ, ಬೇಗೂರು ಗ್ರಾಮ, ಬೇಗೂರ್ ಹೊಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬಿಬಿಎಂಪಿ ವಾರ್ಡ್ ನಂ. 192 ಆಸ್ತಿ ಮಾರಾಟಕ್ಕಿದೆ. ಶ್ರೀ ಮಂಜುನಾಥ್ ಮತ್ತು ಶ್ರೀಮತಿ ಶಶಿಕಲಾ ಮಂಜುನಾಥ್ ಒಡೆತನದ ಪ್ರತ್ಯೇಕ ಆಸ್ತಿಯ ಮೇಲೆ ಯಾವುದೇ ಹಕ್ಕು ಪಡೆಯುವ ಯಾರಾದರೂ ಇಂದಿನಿಂದ 10 ದಿನಗಳಲ್ಲಿ ವಾಟ್ಸಾಪ್ ಸಂಖ್ಯೆ: 6366934481 ಮೂಲಕ ತಮ್ಮ ದಾಖಲೆಗಳನ್ನು ಕಳುಹಿಸಬೇಕು. ಯಾವದೇ ಪ್ರತಿಕ್ರಿಯೆ ಇಲ್ಲದಿದ್ದರೆ, ಆಸ್ತಿಯನ್ನು ಸರಿಯಾದ ಮಾಲೀಕರಿಂದ ಖರೀದಿಸಲಾಗುತ್ತದೆ. ಸಹಿ/–

ಎಂ.ಎ. ಪೂವಯ್ಯ
ವಕೀಲರು

PUBLIC NOTICE

My client intends to purchase the property more fully mentioned and described in the Schedule hereunder from its Owners **Shri. M. S. Vasanth Kumar** and **Shri. Lakshminarayana Shetty,** both sons of Sundar Raj Shetty and their respective children. The Owners represent that they are the absolute owners of the Schedule Property and have a good marketable, right, title and interest therein and that apart from them there are no other person/s having any right or claim over the Schedule Property. The Owners further represent that they have not entered into any Agreements/ Memorandum of Understanding etc, and they have not mortgaged, created any right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within Ten (10) days** from the date of this Notice with the Undersigned, failing which, my client shall proceed with the above-mentioned transaction.

SCHEDULE

All that piece and parcel of agricultural lands bearing **Survey No.112**, measuring 02 acres 16 guntas and **Survey No.143**, measuring 02 acres 04 guntas, (both survey numbers earlier part of survey No.49), both situated at Bellavi Village, Kasaba Hobli, Malur Taluk, Kolar District and adjacent to one another and together bounded on the:

East by : Road
West by : Road and Plantation
North by : Property of Sri. R. Venkatesh
South by : Property of Sri. Somashekhar

Vinay K.S.
Advocate,
Jayanth Pattanshetti Associates
102, Ground Floor, "Rams Infantry Manor", No. 70, Infantry Road, Bengaluru-560 001.
Ph: 25593195/41238516/ 41238367

Place : Bengaluru
Date: 20-03-2021

ಭಾನುವಾರ, ಮಾರ್ಚ್ 21, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 80 | ಪುಟ 20 + 4
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ತ್ರಿವಿಧ ದಾಸೋಹಕ್ಕೆ ಹೆಸರಾಗಿದ್ದ ಮಠಗಳು ಈಗ ಜಾತಿಯ ವಿಷಬೀಜಕ್ಕೆ ನೀರೆರೆಯುತ್ತಿವೆ. ಮಠಗಳ ನೈತಿಕತೆ ದಿವಾಳಿ ಎಳಲು ಯಾರು ಹೊಣೆ?



ಕಂಬಳ: ಹೊಸ ದಾಖಲೆ ಬರೆದ ಶ್ರೀನಿವಾಸ ಗೌಡ 5A
ಪಶ್ಚಿಮ ಬಂಗಾಳದಲ್ಲಿ ಪ್ರಧಾನಿ ಪ್ರಚಾರ
'ನ್ಯಾಯಾಂಗ ನಿಂದನೆ ಕಾಯ್ದೆ ರದ್ದಾಗಲಿ' 4
'ಟಿಎಂಸಿಯದ್ದು ವಸೂಲಿಬಾಜಿ' 8

ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯವಿಲ್ಲದೇ ವಿದ್ಯಾರ್ಥಿಗಳು, ಶಿಕ್ಷಕರ ಪರದಾಟ

ಬಳಕೆಗಿಲ್ಲದ ಶೌಚಾಲಯ

• ಡಿ.ಬಿ.ನಾಗರಾಜ



ಹಳೇ ಹುಬ್ಬಳ್ಳಿಯ ವೀರಾಪುರ ಓಣಿಯ ಹಿರಿಯ ಕನ್ನಡ ಗಂಡು ಮಕ್ಕಳ ಶಾಲೆಯ ಶೌಚಾಲಯದ ಸ್ಥಿತಿ

ಮೈಸೂರು: ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ದಡ್ಡಲಕಾಡು ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗದ ಹೊಸಯಳನಾಡಿನ ಹಾಗೂ ಶಿವಮೊಗ್ಗ ಜಿಲ್ಲೆಯ ಆನೆಗದ್ದೆಯ ಸರ್ಕಾರಿ ಶಾಲೆಗೆ ಭೇಟಿ ನೀಡಿದಾಗ, 'ಇವೆಲ್ಲ ಸರ್ಕಾರಿ ಶಾಲೆಗಳೇ...?' ಎಂದು ಬೆರಗು ಮೂಡುತ್ತದೆ. ಸ್ವಚ್ಛ ಪರಿಸರ, ಶುದ್ಧ ಕುಡಿಯುವ ನೀರು ಹಾಗೂ ಶೌಚಾಲಯದ ವ್ಯವಸ್ಥೆ ಮಾದರಿಯಾಗಿದೆ. ಇವುಗಳಂತೆಯೇ ರಾಜ್ಯದ ಎಲ್ಲ ಸರ್ಕಾರಿ ಶಾಲೆಗಳೂ ಇದ್ದಿದ್ದರೆ....

ಆದರೆ, ಇಂಥ ಶಾಲೆಗಳ ಸಂಖ್ಯೆ ವಿರಳಾತಿವಿರಳ. ಸರ್ಕಾರಿ ಶಾಲೆಗಳ ಹೆಚ್ಚಿನ ವಿದ್ಯಾರ್ಥಿಗಳಿಗೆ ಇಂಥ ಸೌಲಭ್ಯವಿಲ್ಲ. ಶೌಚಾಲಯವಿದ್ದರೆ ನೀರಿಲ್ಲ; ನೀರಿನ ವ್ಯವಸ್ಥೆ ಇದ್ದರೆ ಶೌಚಾಲಯವಿಲ್ಲ. ಎರಡೂ ಇದ್ದರೆ ನಿರ್ವಹಣೆ ಇಲ್ಲ.... ಹೀಗೆ ಒಂದಿದ್ದರೆ ಮತ್ತೊಂದಿಲ್ಲ ಎನ್ನುವ ಸ್ಥಿತಿಯಲ್ಲಿರುವ ಸರ್ಕಾರಿ ಶಾಲೆಗಳನ್ನು ಒಮ್ಮೆ ನೋಡಿಬಂದಾಗ, ಅಲ್ಲಿನ ವಿದ್ಯಾರ್ಥಿಗಳು– ಶಿಕ್ಷಕರು ಅನುಭವಿಸುತ್ತಿರುವ ಸಂಕಟ ವೇದ್ಯವಾಗುತ್ತದೆ.

ಬಹುತೇಕ ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಪೂರೈಕೆ ಸೌಲಭ್ಯವು ಹೆಸರಿಗಷ್ಟೇ ಇದೆ. ಬಳಕೆಗೆ ಯೋಗ್ಯವಲ್ಲದ, ಶೌಚಾಲಯದ ಸನಿಹವೇ ಹೋಗಲಾಗದಂಥ ಅಧ್ವಾನ ವಾತಾವರಣ ಕಂಡುಬರುತ್ತದೆ. ಬಹುತೇಕ ಶಾಲೆಗಳ ಮೈದಾನದಲ್ಲಿ 2-3 ಶೌಚಾಲಯಗಳನ್ನು ನಿರ್ಮಿಸಿದ್ದರೂ, ವಿದ್ಯಾರ್ಥಿಗಳು ಮೂತ್ರ ವಿಸರ್ಜನೆಗಾಗಿ ಬಯಲಿಗೆ ಹೋಗುವುದು ತಪ್ಪಿಲ್ಲ.

ಕೋವಿಡ್ ಪ್ರಕರಣಗಳ ಸಂಖ್ಯೆ ಮತ್ತಷ್ಟು ಹೆಚ್ಚುತ್ತಿರುವ ಈ ಹೊತ್ತಿನಲ್ಲಿಯೂ, ಶಾಲೆಗಳಲ್ಲಿ ಶುಚಿತ್ವಕ್ಕೆ ಸಿಗಬೇಕಾದ ಆದ್ಯತೆ ಸಿಗದೇ ಇರುವುದು ವಿದ್ಯಾರ್ಥಿಗಳ ಆರೋಗ್ಯದ ಬಗ್ಗೆ ಪ್ರಶ್ನೆಯನ್ನು ಹುಟ್ಟುಹಾಕಿದೆ.

'ಸರ್ಕಾರಿ ಶಾಲೆಗಳಲ್ಲಿ ಶುದ್ಧ ಕುಡಿಯುವ ನೀರು ಮತ್ತು ಸ್ವಚ್ಛ ಶೌಚಾ ಲಯಗಳ ಸೌಲಭ್ಯ ನಿರ್ವಹಣೆಯಲ್ಲಿ ಯಾವುದೇ ಲೋಪಕ್ಕೆ ಆಸ್ಪದ ನೀಡಬಾರದು' ಎಂದು 2012ರ ಸೆ.5ರಂದು ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದ್ದರೂ ಇಂದಿಗೂ ಅಸಂಖ್ಯಾತ ಶೌಚಾಲಯಗಳಿಗೆ ನೀರಿನ ಪೂರೈಕೆಯೇ ಇಲ್ಲದಿರುವ ಸ್ಥಿತಿ ಇದೆ.

ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ನ ಕಟ್ಟುನಿಟ್ಟಿನ ನಿರ್ದೇಶನಗಳನ್ನು ಉಲ್ಲೇಖಿಸಿ, ಶಿಕ್ಷಣ ಇಲಾಖೆಯೂ ಪ್ರತಿ ಶೈಕ್ಷಣಿಕ ಜಿಲ್ಲೆಯ ಡಿಡಿಪಿಐ, ಬಿಇಒ, ಆಯಾ ಶಾಲೆಯ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿಗೆ ಆಗಾಗ್ಗೆ ಸುತ್ತೋಲೆಗಳ ಮೂಲಕ ಶುದ್ಧ ಕುಡಿಯುವ ನೀರು, ಸ್ವಚ್ಛ ಶೌಚಾಲಯ ಸೌಲಭ್ಯ ಒದಗಿಸುವಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳುವಂತೆ ಸೂಚಿಸುತ್ತಿದೆ. ಆದರೆ, ಈ ಎಲ್ಲ ಪ್ರಕ್ರಿಯೆ ಕಡತ ದಾಖಲೆಗಷ್ಟೇ ಸೀಮಿತವಾಗಿದೆ ಎಂಬುದು ಶಾಲೆಗಳಲ್ಲಿರುವ ಸೌಲಭ್ಯ ವನ್ನು ಒಳಹೊಕ್ಕು ನೋಡಿದಾಗ ಗೊತ್ತಾಗಿದೆ.

6ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 6

ಒಳನೋಟ
ಶಾಲಾ ಶೌಚಾಲಯದ ಸ್ಥಿತಿಗತಿ
ಪ್ರತಿಕ್ರಿಯಿಸಿ: 9606038256



ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಅವಶ್ಯವಿರುವ ಅನುದಾನ ಯಾವುದೇ ಪಕ್ಷದ ಸರ್ಕಾರದಲ್ಲೂ ಸಿಗುತ್ತಿಲ್ಲ. ಎಸ್‌ಎಸ್‌ಎ ಮಾದರಿಯಲ್ಲಿ ನಮ್ಮಲ್ಲೂ ಅಭಿಯಾನ ನಡೆಯಲಿ

ಅರುಣ ಶಹಾಪುರ, ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ

'ಶೌಚಾಲಯ, ಕುಡಿಯುವ ನೀರು ಒದಗಿಸಲಾಗಿದೆ'



ಶಾಲೆಗಳಿಗೆ ಶೌಚಾಲಯ, ನೈರ್ಮಲೀಕರಣ, ಕುಡಿಯುವ ನೀರು ಪೂರೈಕೆ, ಬಸ್ ಸೌಲಭ್ಯ ಒದಗಿಸಲಾಗಿದೆ. ಶಾಲಾ ಶೈಕ್ಷಣಿಕ ಚಟುವಟಿಕೆ ಕುರಿತು ಅಧಿಕಾರಿಗಳಿಗೆ, ಶಿಕ್ಷಕರಿಗೆ, ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರಿಗೆ ಸಲಹೆ–ಸೂಚನೆ ನೀಡಲಾಗಿದೆ. ವಿಡಿಯೊ ಸಂವಾದದ ಮೂಲಕ ಜಿಲ್ಲಾಧಿಕಾರಿ ಸೇರಿದಂತೆ ಜಿಲ್ಲಾಮಟ್ಟದ ಎಲ್ಲ ಅಧಿಕಾರಿಗಳೊಂದಿಗೆ ಸಂಪರ್ಕ ಇಟ್ಟುಕೊಂಡು ಮಾರ್ಗದರ್ಶನ ನೀಡಲಾಗುತ್ತಿದೆ.

ಸುರಕ್ಷಿತ ವಾತಾವರಣದಲ್ಲಿ ವೈಯಕ್ತಿಕ ಅಂತರ ಕಾಪಾಡಿಕೊಂಡು ಶಾಲಾ ಶೈಕ್ಷಣಿಕ ಚಟುವಟಿಕೆಗಳು ನಡೆಯುತ್ತಿವೆ. ಮುಂದಿನ ಶೈಕ್ಷಣಿಕ ವರ್ಷವನ್ನು ಜುಲೈ 15ರಿಂದ ಆರಂಭಿಸಲು ನಿರ್ಧರಿಸಲಾಗಿದೆ. ಮಕ್ಕಳ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದ್ದು, ಮುಂದೆಯೂ ಹೆಚ್ಚಿನ ಆಸ್ಥೆ ವಹಿಸಲಾಗುವುದು.

ಎಸ್.ಸುರೇಶ್‌ಕುಮಾರ್, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ

ಬೆಂಗಳೂರಿಗೂ ದಿಗ್ಬಂಧನ ಹಾಕಿ

ರೈತರಿಗೆ ಶಿವಮೊಗ್ಗದಲ್ಲಿ ರಾಕೇಶ್ ಟಿಕಾಯತ್ ಕರೆ

ಪ್ರಜಾವಾಣಿ ವಾರ್ತೆ



ಶಿವಮೊಗ್ಗದಲ್ಲಿ ಶನಿವಾರ ನಡೆದ ರೈತರ ಮಹಾ ಪಂಚಾಯತ್‌ನಲ್ಲಿ ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ಮಾತನಾಡಿದರು

ಶಿವಮೊಗ್ಗ: 'ಕೃಷಿ ಕಾಯ್ದೆಗಳನ್ನು ವಿರೋಧಿಸಿ ಹೋರಾಟ ನಡೆಸಲು ಎಲ್ಲರೂ ದೆಹಲಿಗೇ ಬರುವ ಅಗತ್ಯವಿಲ್ಲ. ದೆಹಲಿಯಲ್ಲಿ ರೈತರು ಮಾಡಿದಂತೆ ನೀವೂ ಬೆಂಗಳೂರನ್ನು ಸುತ್ತುವರಿದು ದಿಗ್ಬಂಧನ ಹಾಕಬೇಕು' ಎಂದು ಸಂಯುಕ್ತ ಕಿಸಾನ್ ಮೋರ್ಚಾ ನಾಯಕ ರಾಕೇಶ್ ಟಿಕಾಯತ್ ರೈತರಿಗೆ ಕರೆ ನೀಡಿದರು.

ಐಕ್ಯ ಹೋರಾಟ ಸಮಿತಿ, ರಾಜ್ಯ ರೈತ ಸಂಘವು ನಗರದ ಸೈನ್ಸ್ ಮೈದಾನದಲ್ಲಿ ಶನಿವಾರ ಹಮ್ಮಿಕೊಂಡಿದ್ದ ರೈತರ ಮಹಾ ಪಂಚಾಯತ್ ಉದ್ಘಾಟಿಸಿ ಅವರು ಮಾತನಾಡಿದರು.

'ಮೂರು ಕರಾಳ ಕಾಯ್ದೆಗಳ ಮೂಲಕ ಕೇಂದ್ರ ಸರ್ಕಾರ ದೇಶದ ಬಡವರ ರೊಟ್ಟಿ, ಅನ್ನವನ್ನು ತಿಜೋರಿಗಳಲ್ಲಿ ಬಂಧಿಸಿಡುವ ಕೆಲಸ ಮಾಡುತ್ತಿದೆ. ಭೂಮಿ ಕಳೆದುಕೊಳ್ಳುವ ರೈತರು ಭವಿಷ್ಯದಲ್ಲಿ ಸಂಕಷ್ಟ ಅನುಭವಿಸಲಿದ್ದಾರೆ. ಕಿಸಾನ್ ಕ್ರೆಡಿಟ್ ಕಾರ್ಡ್ ನೀಡಿ ಮತ್ತಷ್ಟು ಸಾಲಗಾರರನ್ನಾಗಿ ಮಾಡಿದೆ. ಕಾಯ್ದೆಗಳನ್ನು ವಾಪಸ್ ಪಡೆಯಬೇಕು. ಕನಿಷ್ಠ ಬೆಂಬಲ ಬೆಲೆಯನ್ನು ಕಾಯ್ದೆಯಾಗಿಸಬೇಕು. ಅಲ್ಲಿಯವರೆಗೂ ದೆಹಲಿ ಗಡಿ ಬಿಟ್ಟು ಒಂದಿಂಚೂ ಕದಲುವುದಿಲ್ಲ' ಎಂದು ಎಚ್ಚರಿಸಿದರು.

'ಕೃಷಿ ಮಾರುಕಟ್ಟೆಯ ಹೊರಗೆ ಬೆಳೆಗಳ ಮಾರಾಟಕ್ಕೆ ಸರ್ಕಾರ ಅವಕಾಶ ಕಲ್ಪಿಸಿದೆ. ಕನಿಷ್ಠ ಬೆಂಬಲ ಬೆಲೆ ನೀಡಿದರೆ ಡಿಸಿ, ಎಸಿ ಕಚೇರಿ ಮುಂದೆ ಬೆಳೆ ಮಾರಾಟಕ್ಕೂ ಸಿದ್ಧ. ನೂತನ ಕೃಷಿ ಕಾಯ್ದೆಗಳಿಂದ ಲಾಭ ಪಡೆಯುವ ಕಂಪನಿಗಳ ನಾಯಕರೇ ಸರ್ಕಾರ ನಡೆಸುತ್ತಿದ್ದಾರೆ. ಹೀಗಾಗಿ ಮಾತುಕತೆ ಸಾಧ್ಯವಾಗುತ್ತಿಲ್ಲ' ಎಂದು ಅವರು ಟೀಕಿಸಿದರು.

'ಸರ್ಕಾರ ಪ್ರತಿ ವಿಷಯದಲ್ಲೂ ದ್ವಂದ್ವ ನೀತಿ ಅನುಸರಿಸುತ್ತಿದೆ. ಸೈನಿಕರು, ಪೊಲೀಸರೂ ಶೋಷಣೆಗೆ ಒಳಗಾಗಿದ್ದಾರೆ' ಎಂದರು.

ಮಲೆನಾಡಲ್ಲಿ ಮೊಳಗಿದ ದೆಹಲಿಧ್ವನಿ
ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3lxh5AK

5B ಪುಟ ನೋಡಿ

ಅಂತರ್ಜಾತಿ ವಿವಾಹಕ್ಕೆ ವಿರೋಧವಿಲ್ಲ: ಹೊಸಬಾಳೆ

'ಲವ್ ಜಿಹಾದ್ ಸಹಿಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುವತಿಯರಿಗೆ ಆಮಿಷ ಒಡ್ಡಿ ಮೋಸದಿಂದ ವಿವಾಹವಾದ ಬಳಿಕ ಮತಾಂತರ ಮಾಡುವುದನ್ನು (ಲವ್ ಜಿಹಾದ್) ಸಹಿಸಲು ಸಾಧ್ಯವೇ ಇಲ್ಲ. ಅದನ್ನು ವಿರೋಧಿಸುವ ಜತೆಗೆ, ಅದರ ತಡೆಗೆ ಸೂಕ್ತ ಕಾನೂನು ತರಬೇಕಿದೆ' ಎಂದು ಆರೆಸ್ಸೆಸ್ ನೂತನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅಭಿಪ್ರಾಯಪಟ್ಟರು.

ಆರೆಸ್ಸೆಸ್‌ನಲ್ಲಿ ಹೊಸ ಜವಾಬ್ದಾರಿ ವಹಿಸಿಕೊಂಡ ಬಳಿಕ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, 'ಕರ್ನಾಟಕ ಮತ್ತು ಕೇರಳ ಹೈಕೋರ್ಟ್‌ಗಳು ಕೂಡಾ 'ಲವ್ ಜಿಹಾದ್' ಬಗ್ಗೆ ಹೇಳಿವೆ. ಅದನ್ನು ತಡೆಯುವ ಕಾನೂನನ್ನು ಆರೆಸ್ಸೆಸ್ ಬೆಂಬಲಿಸಲಿದೆ' ಎಂದು ಸ್ಪಷ್ಟಪಡಿಸಿದರು.

'ಮೋದಿ ನೇತೃತ್ವದ ಕೇಂದ್ರ ಸರ್ಕಾರ ನಾಗಪುರದಿಂದ (ಆರೆಸ್ಸೆಸ್ ಕೇಂದ್ರ ಕಚೇರಿ) ನಿಯಂತ್ರಿಸಲ್ಪಡುತ್ತಿದೆ' ಎಂದು ರಾಹುಲ್ ಗಾಂಧಿ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ಆರೋಪಿಸುತ್ತಿದ್ದಾರಲ್ಲ' ಎಂದು ಕೇಳಿದಾಗ, 'ದೇಶದಲ್ಲಿ ಪ್ರಜಾಪ್ರಭುತ್ವವಿದೆ. ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಅವರು ಸ್ವತಂತ್ರರು. ಸರ್ಕಾರವನ್ನು ಒಂದು ಸ್ಥಳದಿಂದ ನಿಯಂತ್ರಿಸಲಾಗುತ್ತಿದೆ ಎನ್ನುವುದು ತಪ್ಪು. ರಾಜಕೀಯ ಉದ್ದೇಶದಿಂದ ಹೀಗೆ ಹೇಳುತ್ತಿದ್ದಾರೆ. ಆದರೆ, ಅಗತ್ಯಬಿದ್ದಾಗ ಇಡೀ ದೇಶ ಒಂದು ಕಾರಣಕ್ಕೆ ಒಟ್ಟಾಗುತ್ತದೆ' ಎಂದರು.

5B ಪುಟ ನೋಡಿ

ಹೊಸಬಾಳೆ ನೂತನ ಸರಕಾರ್ಯವಾಹ



ಬೆಂಗಳೂರು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರೆಸ್ಸೆಸ್) ನೂತನ ಸರಕಾರ್ಯವಾಹರಾಗಿ ಕನ್ನಡಿಗ ದತ್ತಾತ್ರೇಯ ಹೊಸಬಾಳೆ ಚುನಾಯಿತರಾಗಿದ್ದಾರೆ. ಆರೆಸ್ಸೆಸ್‌ನಲ್ಲಿ ಸರಕಾರ್ಯವಾಹ ಎರಡನೇ ಅತಿ ದೊಡ್ಡ ಹುದ್ದೆ.

ಇಲ್ಲಿನ ಚನ್ನೇನಹಳ್ಳಿಯಲ್ಲಿ ನಡೆದ ಎರಡು ದಿನಗಳ ಅಖಿಲ ಭಾರತೀಯ ಪ್ರತಿನಿಧಿ ಸಭೆಯಲ್ಲಿ (ಎಪಿಬಿಎಸ್) ಆಂತರಿಕ ಚುನಾವಣೆಯಲ್ಲಿ ಹೊಸಬಾಳೆ ಅವರಿಗೆ ಹೊಸ ಜವಾಬ್ದಾರಿ ನೀಡಲಾಗಿದೆ. 12 ವರ್ಷಗಳಿಂದ ಈ ಹುದ್ದೆಯಲ್ಲಿದ್ದ ಸುರೇಶ್ (ಭಯ್ಯಾಜಿ) ಜೋಶಿ ಅವರ ಸ್ಥಾನವನ್ನು ಅವರು ತುಂಬಲಿದ್ದಾರೆ. ಈವರೆಗೆ ಹೊಸಬಾಳೆ ಸಹ ಸರಕಾರ್ಯವಾಹ ಆಗಿದ್ದರು. ಸುರೇಶ್ (ಭಯ್ಯಾಜಿ) ಜೋಶಿ 2009ರಲ್ಲಿ ಸರಕಾರ್ಯವಾಹ ಆಗಿ ನೇಮಕಗೊಂಡಿದ್ದರು. ಪ್ರತಿ ಮೂರು ವರ್ಷಗಳಿಗೊಮ್ಮೆ ಈ ಹುದ್ದೆಗೆ ಆಯ್ಕೆ ಪ್ರಕ್ರಿಯೆ ನಡೆಯುತ್ತದೆ. ತಲಾ ಮೂರು ವರ್ಷಗಳ ನಾಲ್ಕು ಅವಧಿಗಳಲ್ಲಿ ಸರಕಾರ್ಯವಾಹ ಆಗಿ ಅವರು ಆಯ್ಕೆ ಆಗಿದ್ದರು.

5B ಪುಟ ನೋಡಿ

ಭ್ರಷ್ಟಾಚಾರ ಇಲ್ಲ ಎಂದು ಹೇಳಲಾರೆ: ಬಿಎಸ್‌ವೈ

ಪ್ರಜಾವಾಣಿ ವಾರ್ತೆ

ತುಮಕೂರು: 'ರಾಜ್ಯದಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಅದು ಸುಳ್ಳು ಎಂದು ನಾನು ಸಹ ಹೇಳುವುದಿಲ್ಲ' ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹೇಳಿದರು.

ತಿಪಟೂರಿನಲ್ಲಿ ಶನಿವಾರ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿದ ನಂತರ ಅವರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು.

ಏಪ್ರಿಲ್‌ನಿಂದ ಜಿಲ್ಲಾ ಪ್ರವಾಸ: ಜಿಲ್ಲಾಧಿಕಾರಿ ಕಚೇರಿ ಸೇರಿದಂತೆ ಇತರೆ ಕಚೇರಿಗಳಲ್ಲಿ 15–20 ದಿನಗಳವರೆಗೆ ಕಡತಗಳನ್ನು ಇಟ್ಟುಕೊಳ್ಳಲಾಗುತ್ತಿದೆ. ಸಕಾಲಕ್ಕೆ ಕಡತಗಳು ವಿಲೇವಾರಿಯಾಗುತ್ತಿಲ್ಲ. ಈ ಬಗ್ಗೆ ಬಿಗಿ ಕ್ರಮ ಕೈಗೊಳ್ಳಬೇಕಾಗಿದೆ. ಅನಗತ್ಯವಾಗಿ ಕಡತ ಇಟ್ಟುಕೊಂಡು ಜನರನ್ನು ಅಲೆದಾಡಿಸುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಎಚ್ಚರಿಸಿದರು.

'ಜನರ ಸಮಸ್ಯೆ ಆಲಿಸುವ ಸಲುವಾಗಿ ಏಪ್ರಿಲ್‌ನಿಂದ ಜಿಲ್ಲಾ ಪ್ರವಾಸ ಮಾಡಲಾಗುವುದು. ವಾರದಲ್ಲಿ ಒಂದು ದಿನ ಜಿಲ್ಲೆಗೆ ಭೇಟಿ ನೀಡಿ ಇಡೀ ದಿನ ಅಲ್ಲಿದ್ದು, ಸಾರ್ವಜನಿಕರ ಸಮಸ್ಯೆ ಪರಿಹರಿಸಲಾಗುವುದು. ಜಿಲ್ಲೆಗಳಿಗೆ ಭೇಟಿ ನೀಡುವಂತೆ ಮುಖ್ಯ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೂ ಸೂಚಿಸಿದ್ದೇನೆ' ಎಂದರು.

'ಪರಿಸ್ಥಿತಿ ಅವಲೋಕಿಸಿ ನಿರ್ಧಾರ'



'ಕೊರೊನಾ ಸೋಂಕು ಹೆಚ್ಚುತ್ತಿದ್ದರೂ ಶಾಲೆಗಳನ್ನು ಮುಚ್ಚುವಂತಹ ವಾತಾವರಣ ನಿರ್ಮಾಣವಾಗಿಲ್ಲ. ಒಂದು ವಾರ ಪರಿಸ್ಥಿತಿಯನ್ನು ಗಮನಿಸಿ ಮುಂದೆ ನಿರ್ಧಾರ ಕೈಗೊಳ್ಳಲಾಗುವುದು. ಸಾರ್ವಜನಿಕ ಸಭೆಗಳನ್ನು ನಡೆಸಲು ಯಾವುದೇ ಷರತ್ತುಗಳನ್ನು ವಿಧಿಸಿಲ್ಲ. ಆದರೆ ಮಾಸ್ಕ್ ಧರಿಸಿ, ಅಂತರ ಕಾಯ್ದುಕೊಳ್ಳಬೇಕು. ಉಪಚುನಾವಣೆ ಸಮಯದಲ್ಲಿ ನಡೆಯುವ ಸಭೆಗಳು, ಇತರ ಕಾರ್ಯಕ್ರಮಗಳಿಗೂ ಇದು ಅನ್ವಯವಾಗುತ್ತದೆ' ಎಂದು ಯಡಿಯೂರಪ್ಪ ಸ್ಪಷ್ಟಪಡಿಸಿದರು. 'ಕೋವಿಡ್ ನಿಯಂತ್ರಣ, ನಿರ್ವಹಣೆ ಸಮಯದಲ್ಲಿ ಹಣ ದುರುಪಯೋಗ ಆಗಿದ್ದರೆ ವಿರೋಧ ಪಕ್ಷದವರು ಸಾಕ್ಷ್ಯಾಧಾರಗಳ ಸಮೇತ ತಿಳಿಸಲಿ. ಆಗ ಕ್ರಮ ಕೈಗೊಳ್ಳಲಾಗುವುದು. ಆಧಾರ ರಹಿತವಾಗಿ ಆರೋಪ ಮಾಡುವುದು ಅವರಿಗೆ ಶೋಭೆ ತರುವುದಿಲ್ಲ' ಎಂದರು.

ಕ್ರಿಕೆಟ್: ಭಾರತಕ್ಕೆ ಸರಣಿ ಜಯ

ಅಹಮದಾಬಾದ್ (ಪಿಟಿಐ): ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಕ್ರಿಕೆಟ್ ತಂಡವು ಇಂಗ್ಲೆಂಡ್ ವಿರುದ್ಧದ ಟ್ವೆಂಟಿ–20 ಸರಣಿಯಲ್ಲಿ 3–2ರಿಂದ ಜಯಿಸಿತು.

ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕೊನೆಯ ಹಾಗೂ ಐದನೇ ಪಂದ್ಯದಲ್ಲಿ ಭಾರತ ತಂಡವು 36 ರನ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರೋಹಿತ್ ಶರ್ಮಾ (64 ರನ್) ಮತ್ತು ವಿರಾಟ್ ಕೊಹ್ಲಿ (ಔಟಾಗದೆ 80) ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಭಾರತ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 224 ರನ್ ಗಳಿಸಿತು. ಅದಕ್ಕುತ್ತರವಾಗಿ ಇಂಗ್ಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 188 ರನ್ ಗಳಿಸಿತು.

ಮಧ್ಯಮವೇಗಿ ಭುವನೇಶ್ವರ ಕುಮಾರ್ (4–0–15–2) ಅಮೋಘ ಬೌಲಿಂಗ್ ಮಾಡಿದರು. ಶಾರ್ದೂಲ್ ಠಾಕೂರ್ (45ಕ್ಕೆ3) ಅವರಿಗೆ ಉತ್ತಮ ಬೆಂಬಲ ನೀಡಿದರು. ಭುವನೇಶ್ವರ್ ಕುಮಾರ್ ಪಂದ್ಯಶ್ರೇಷ್ಠ ಗೌರವಕ್ಕೆ ಪಾತ್ರರಾದರು. ಒಟ್ಟು ಮೂರು ಅರ್ಧಶತಕಗಳನ್ನು ಸಿಡಿಸಿದ ಕೊಹ್ಲಿ ಸರಣಿಶ್ರೇಷ್ಠ ಪ್ರಶಸ್ತಿ ಗಳಿಸಿದರು.

ಈಚೆಗೆ ಭಾರತ ತಂಡವು ನಾಲ್ಕು ಟೆಸ್ಟ್‌ಗಳ ಸರಣಿಯಲ್ಲಿಯೂ ಇಂಗ್ಲೆಂಡ್ ತಂಡವನ್ನು ಸೋಲಿಸಿತ್ತು.

ವಿವರ 15

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ದ್ವಿತೀಯ ಪಿಯು ಬಳಿಕ ಪ್ರಥಮ ಪಿಯು ಪರೀಕ್ಷೆ

ಬೆಂಗಳೂರು: ಇದೇ ಮೊದಲ ಬಾರಿಗೆ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ಮುಗಿದ ಬಳಿಕ ಪ್ರಥಮ ಪಿಯು ಪರೀಕ್ಷೆಗಳನ್ನು ನಡೆಸಲು ಪದವಿ ಪೂರ್ವ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಕೋವಿಡ್ ಕಾರಣದಿಂದ ಪ್ರಸಕ್ತ ಸಾಲಿನಲ್ಲಿ ಜ. 1ರಿಂದ ದ್ವಿತೀಯ ಪಿಯು ಹಾಗೂ ಫೆ. 1ರಿಂದ ಪ್ರಥಮ ಪಿಯು ತರಗತಿಗಳು ಆರಂಭವಾಗಿದ್ದವು.

ಇಲಾಖೆಯ ಶೈಕ್ಷಣಿಕ ವೇಳಾಪಟ್ಟಿಯ ಪ್ರಕಾರ ಮೇ 24ರಿಂದ ದ್ವಿತೀಯ ಪಿಯು ವಾರ್ಷಿಕ ಪರೀಕ್ಷೆ ಆರಂಭಗೊಂಡು ಜೂನ್ 16ರಂದು ಕೊನೆಯಾಗಲಿದೆ. ಜೂನ್ 18ರಿಂದ ಜುಲೈ 13ರವರೆಗೆ ಮೌಲ್ಯಮಾಪನ ನಡೆಯಲಿದೆ.ಪ್ರಥಮ ಪಿಯುಪರೀಕ್ಷೆಗಳು ಜುಲೈ 5ರಿಂದ 17ರವರೆಗೆ ನಡೆಯಲಿದೆ. 19ರಿಂದ 28ರವರೆಗೆ ಪ್ರಥಮ ಪಿಯು ಮೌಲ್ಯಮಾಪನ ನಡೆದು 30ರಂದು ಫಲಿತಾಂಶ ಪ್ರಕಟವಾಗಲಿದೆ. ಆಗಸ್ಟ್ 2ರಿಂದ ದ್ವಿತೀಯ ಪಿಯು ದಾಖಲಾತಿ, ಪರೀಕ್ಷೆಗಳು ಆರಂಭವಾಗಲಿದೆ.

ವಿಮರ್ಶಕ ಪ್ರೊ.ಸಿ.ಎನ್‌. ರಾಮಚಂದ್ರನ್ ಬೇಸರ

‘ಸ್ವಾತಂತ್ರ್ಯ ಕಸಿಯುತ್ತಿದೆ ನವ ವಸಾಹತುಶಾಹಿತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುದೀರ್ಘ ಹೋರಾಟದ ಬಳಿಕ ವಸಾಹತುಶಾಹಿಗಳಿಂದ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲಾಯಿತು. ಆದರೆ, ಅದನ್ನು ಉಳಿಸಿಕೊಳ್ಳುವ ಬದಲು ನವ ವಸಾಹತುಶಾಹಿತ್ವದಲ್ಲಿ ಅದನ್ನು ಕಳೆದುಕೊಳ್ಳುತ್ತಿದ್ದೇವೆ’ ಎಂದು ವಿಮರ್ಶಕ ಪ್ರೊ.ಸಿ.ಎನ್.ರಾಮಚಂದ್ರನ್ ಬೇಸರ ವ್ಯಕ್ತಪಡಿಸಿದರು.

ಶಿವರಾಮ ಕಾರಂತ ಪ್ರತಿಷ್ಠಾನ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 2020ನೇ ಸಾಲಿನ ‘ಶಿವರಾಮ ಕಾರಂತ ಪ್ರಶಸ್ತಿ’ ಸ್ವೀಕರಿಸಿದರು. ಈ ಪ್ರಶಸ್ತಿಯು ₹ 20 ಸಾವಿರ ನಗದು ಬಹುಮಾನವನ್ನು ಒಳಗೊಂಡಿದೆ. ಇದೇ ವೇಳೆ ಡಾ.ಎಚ್.ಎಸ್.ಎಂ. ಪ್ರಕಾಶ್ ಅವರು ಇಂಗ್ಲಿಷ್‌ಗೆ ಅನುವಾದಿಸಿರುವ ‘ದಿ ಫ್ರೀಡಮ್’ ಕೃತಿಯನ್ನು (ಡಾ. ಲತಾಗುತ್ತಿ ಅವರ ‘ಕರಿ ನೀರು’ ಕಾದಂಬರಿ ಮೂಲ ಕೃತಿ) ಬಿಡುಗಡೆ ಮಾಡಿದರು.



ಕಾರ್ಯಕ್ರಮದಲ್ಲಿ ಪ್ರೊ.ಸಿ.ಎನ್‌. ರಾಮಚಂದ್ರನ್ ಅವರಿಗೆ ‘ಶಿವರಾಮ ಕಾರಂತ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. (ಎಡದಿಂದ) ಡಾ.ಎಂ.ಎಸ್‌. ಆಶಾದೇವಿ, ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಜಯಪ್ರಕಾಶ್ ಮಾವಿನಕುಳಿ, ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷ ಡಾ.ಆರ್‌. ಲಕ್ಷ್ಮೀನಾರಾಯಣ, ಲೇಖಕಿ ಡಾ. ಲತಾಗುತ್ತಿ ಹಾಗೂ ಅನುವಾದಕ ಡಾ.ಎಚ್‌.ಎಸ್‌.ಎಂ. ಪ್ರಸಾದ್ ಇದ್ದರು –ಪ್ರಜಾವಾಣಿ ಚಿತ್ರ

‘ಸ್ವಾತಂತ್ರ್ಯ ಪಡೆದು ಆರೇಳು ದಶಕಗಳು ಕಳೆದರೂ ಅದರ ಮಹತ್ವವನ್ನು ಸರಿಯಾಗಿ ಅರ್ಥಮಾಡಿಕೊಂಡಿಲ್ಲ. ಪರಿಣಾಮ ನಮ್ಮ ಸ್ವಾತಂತ್ರ್ಯ ನವವಸಾಹತುಶಾಹಿಗಳ ಪಾಲಾಗುತ್ತಿದೆ. ಸ್ವಾತಂತ್ರ್ಯವನ್ನು ಗಳಿಸುವುದರ ಜತೆಗೆ ಅದನ್ನು ಉಳಿಸಿಕೊಳ್ಳುವುದೂ ಮುಖ್ಯ. ಕಾದಂಬರಿಯಲ್ಲೂ ಇದನ್ನೇ ಹೇಳಲಾಗಿದೆ’ ಎಂದರು.

‘ಭಾರತೀಯ ಸಮಾಜದ ಆತ್ಮನಿರೀಕ್ಷೆಯಂತಿದ್ದ ಶಿವರಾಮ ಕಾರಂತರ ನಡೆ–ನುಡಿಯಲ್ಲಿ ಯಾವುದೇ ವ್ಯತ್ಯಾಸ ಇರಲಿಲ್ಲ. ಅವರು ಸಾಹಿತ್ಯದಲ್ಲಿ ಎತ್ತಿ ಹಿಡಿದ ಮೌಲ್ಯಗಳು ಬದುಕಿಗೆ ಕೂಡ ಸಂಬಂಧಿಸಿದ್ದಾಗಿದ್ದವು. ಅವರು ರೂಪಿಸಿದ ಮಾದರಿಯ ಹತ್ತಿರ ಹೋಗುವ ಪ್ರಯತ್ನ ಮಾಡುತ್ತಿದ್ದೇನೆ’ ಎಂದರು.

ವಿಮರ್ಶಕಿ ಡಾ.ಎಂ.ಎಸ್. ಆಶಾದೇವಿ, ‘ಸಿ.ಎನ್.ರಾಮಚಂದ್ರನ್ ಅವರು ಶಾಸ್ತ್ರ ಮತ್ತು ತತ್ವದ ತಳಹದಿಯಲ್ಲಿ ವಿಮರ್ಶೆಯನ್ನು ಪ್ರಾರಂಭಿಸಿದರು. ವಿಮರ್ಶೆಯಲ್ಲಿ ಆರೋಗ್ಯಪೂರ್ಣ ಮನಸ್ಸನ್ನು ಉಳಿಸಿಕೊಳ್ಳುವುದು ದೊಡ್ಡ ಸವಾಲು. ಅವರ ಆತ್ಮಕಥೆಯಲ್ಲಿ ಎಲ್ಲಿಯೂ ಆತ್ಮರಂಜನೆಯಿಲ್ಲ’ ಎಂದರು.

ಮಹಿಳೆಯರಿಗಾಗಿ ಉದ್ಯಮಶೀಲತೆ ಅಭಿವೃದ್ಧಿ ಶಿಬಿರ ನಾಳೆ

ಬೆಂಗಳೂರು: ರುಡ್‌ಸೆಟ್ ಸಂಸ್ಥೆಯ ಸಹಯೋಗದಲ್ಲಿ ಶ್ರೀ ಮಂಜುನಾಥ ಟ್ರಸ್ಟ್ ಮಹಿಳಾ ಉದ್ಯಮಶೀಲ ಅಭಿವೃದ್ಧಿ ಜಾಗೃತಿ ಶಿಬಿರವನ್ನು ಕುರುಬರಹಳ್ಳಿಯ ಸಿದ್ಧಲಿಂಗೇಶ್ವರ ಕಲ್ಯಾಣ ಮಂಟಪದಲ್ಲಿ ಸೋಮವಾರ ಬೆಳಿಗ್ಗೆ 10 ಗಂಟೆಗೆ ಹಮ್ಮಿಕೊಂಡಿದೆ.

ಮಹಿಳೆಯರಿಗೆ, ನಿರುದ್ಯೋಗಿಗಳಿಗೆ ವಿವಿಧ ರೀತಿಯ ಸ್ವ–ಉದ್ಯೋಗ ತರಬೇತಿ ನೀಡಲಾಗುತ್ತದೆ. ಕೃಷಿ ಉತ್ಪಾದಕ ಉದ್ಯಮ, ಹೈನುಗಾರಿಕೆ, ಎರೆಹುಳು ಗೊಬ್ಬರ ತಯಾರಿ ಸೇರಿದಂತೆ ವಿವಿಧ ಕೃಷಿ ಚಟುವಟಿಕೆ ಬಗ್ಗೆ ತಿಳಿಸಲಾಗುತ್ತದೆ. ಸಿದ್ಧ ಉಡುಪು, ಅಗರಬತ್ತಿ, ಬೊಂಬೆ, ಹಪ್ಪಳ–ಉಪ್ಪಿನಕಾಯಿ ಹಾಗೂ ಸಾಂಬಾರು ಪುಡಿ ತಯಾರಿ, ಕಸೂತಿ ಸೇರಿದಂತೆ ವಿವಿಧ ಉದ್ಯಮಗಳ ಬಗ್ಗೆ ತರಬೇತಿ ನೀಡಲಾಗುತ್ತದೆ. ಫೋಟೋಗ್ರಾಫಿ, ಬ್ಯೂಟಿ ಪಾರ್ಲರ್ ನಿರ್ವಹಣೆ, ದ್ವಿಚಕ್ರ ವಾಹನ ದುರಸ್ತಿ, ಮೊಬೈಲ್ ಫೋನ್‌ಗಳ ದುರಸ್ತಿ ಸೇರಿದಂತೆ ವಿವಿಧ ಉದ್ಯಮಗಳಲ್ಲಿ ಕೌಶಲ ವೃದ್ಧಿಸಲು ಸಲಹೆ ನೀಡಲಾಗುತ್ತದೆ ಎಂದು ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಸಂಪರ್ಕ: 9845451196, 9964029888

ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯು ಚಿತ್ರಕಲೆಗೆ ಉತ್ತೇಜನ ನೀಡುವ ಉದ್ದೇಶದಿಂದ, ದೃಶ್ಯ ಕಲಾ ವಿಭಾಗದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿರುವ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಪ್ರೋತ್ಸಾಹ ಧನಕ್ಕೆ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಚಿತ್ರಕಲೆಗೆ ಸಂಬಂಧಿಸಿದಂತೆ ಅಧ್ಯಯನ ಮಾಡುತ್ತಿರುವ ನಾಡಿನ ಅಭ್ಯರ್ಥಿಗಳು ವಿಶ್ವವಿದ್ಯಾಲಯದ ಮಾರ್ಗದರ್ಶಕರಿಂದ ದೃಢೀಕರಿಸಿದ ಪೂರ್ವಭಾವಿ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸಿರಬೇಕು. ಸರ್ಕಾರಿ ಸೇವೆಯಲ್ಲಿರುವವರಿಗೆ ಅರ್ಜಿ ಸಲ್ಲಿಸಲು ಅವಕಾಶವಿಲ್ಲ. ಭರ್ತಿ ಮಾಡಿದ ಅರ್ಜಿಯನ್ನು ಮಾ.28ರೊಳಗೆ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆಯಲ್ಲಿ ಅಕಾಡೆಮಿ ರಿಜಿಸ್ಟ್ರಾರ್ ತಿಳಿಸಿದ್ದಾರೆ.

ಸಂಪರ್ಕಕ್ಕೆ ದೂ: 080 22480297

ನಾಳೆಯಿಂದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ವಿದ್ಯುತ್ ಕೇಂದ್ರಗಳಲ್ಲಿ ತುರ್ತು ಕಾರ್ಯನಿರ್ವಹಣೆ ಕೈಗೆತ್ತಿಕೊಂಡಿರುವುದರಿಂದ ಇದೇ 22ರಿಂದ 27ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30 ರವರೆಗೆ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯ ಆಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವ್ಯತ್ಯಯವಾಗುವ ಸ್ಥಳಗಳು (ಮಾ.22): ಬಿಸಿಎಂಸಿ ಬಡಾವಣೆ, ತಿಪ್ಪಸಂದ್ರ, ಚನ್ನಮ್ಮ ಗಾರ್ಡನ್, ಗಣಪತಿಪುರ ರಸ್ತೆ.

ಮಾ.23: ಆರ್‌ಬಿಐ ಬಡಾವಣೆ, ಶ್ರೀನಿಧಿ ಬಡಾವಣೆ, ಚುಂಚಘಟ್ಟ ಗ್ರಾಮ, ಜೆ.ಪಿ. ನಗರ 1 ಮತ್ತು 6ನೇ ಹಂತ, ಸಾರಕ್ಕಿ ತೋಟ, ರೋಸ್ ಗಾರ್ಡನ್, ಸಿದ್ದೇಶ್ವರ ಚಿತ್ರಮಂದಿರ ಸುತ್ತಮುತ್ತ, ಸಿಂಧೂರ್ ಕಲ್ಯಾಣ ಮಂಟಪದ ಹತ್ತಿರ.

ಮಾ.24: ಈಶ್ವರ್ ಬಡಾವಣೆ, ಶಾರದಾ ನಗರ, ಶಿವಶಕ್ತಿ ನಗರ, ಭೀರಪ್ಪ ಗಾರ್ಡನ್, ಚುಂಚಘಟ್ಟ ಮುಖ್ಯರಸ್ತೆ, ಶ್ರೀನಿವಾಸ ಕಲ್ಯಾಣ ಮಂದಿರ, ಚರ್ಚ್ ರಸ್ತೆ, ರಾಜೀವ್‌ಗಾಂಧಿ ರಸ್ತೆ, ದೊಡ್ಡಮನೆ ಕೈಗಾರಿಕಾ ಪ್ರದೇಶ, ಎಂ.ಎಸ್. ಬಡಾವಣೆ, ಕನಕಪುರ ಮುಖ್ಯ ರಸ್ತೆ, ಚುಂಚಘಟ್ಟ ರಸ್ತೆ.

ಮಾ.25: ಬಿಸಿಎಂಸಿ ಬಡಾವಣೆ, ತಿಪ್ಪಸಂದ್ರ, ಶ್ರೀನಿಧಿ ಬಡಾವಣೆ.

ಮಾ.26: ಎಸ್.ಎಲ್.ವಿ.ಹೋಟೆಲ್ ಎದುರಿನ ರಸ್ತೆ, ಬ್ರಾಹ್ಮಿನ್ ಹೋಟೆಲ್, ಜೆ.ಪಿ.ನಗರ 6ನೇ ಹಂತ, ಸಾರಕ್ಕಿ ತೋಟ, ರೋಸ್ ಗಾರ್ಡನ್, ಸಿದ್ದೇಶ್ವರ ಚಿತ್ರಮಂದಿರ ಸುತ್ತಮುತ್ತ, ಸಿಂಧೂರ್ ಕಲ್ಯಾಣ ಮಂಟಪದ ಹತ್ತಿರ, ಗಣಪತಿಪುರ ರಸ್ತೆ.

ಮಾ.27: ಸಾರಕ್ಕಿ ಕೆರೆ ಮತ್ತು ಸುತ್ತಮುತ್ತಲ ಪ್ರದೇಶ, ಜರಗನಹಳ್ಳಿ, ರಾಜಮ್ಮ ಗಾರ್ಡನ್, ರಾಜೀವ್‌ಗಾಂಧಿ ರಸ್ತೆ, ಎಂ.ಎಸ್.ಬಡಾವಣೆ, ಜಿ.ಕೆ.ಎಂ.ಕಾಲೇಜು ಸುತ್ತಮುತ್ತ.

ನಿಧನ ವಾರ್ತೆ

ಗೌರಮ್ಮ

ಬೆಂಗಳೂರು: ಸಿ.ವಿ.ರಾಮನ್ ನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ರಘು ಅವರ ತಾಯಿ ಗೌರಮ್ಮ ಸುಬ್ರಹ್ಮಣ್ಯ (76) ಅವರು ಅನಾರೋಗ್ಯ ಸಮಸ್ಯೆಯಿಂದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.



ಇವರಿಗೆ ಶಾಸಕ ರಘು ಸೇರಿದಂತೆ ಇಬ್ಬರು ಪುತ್ರರು ಹಾಗೂ ಐದು ಮಂದಿ ಪುತ್ರಿಯರು ಇದ್ದಾರೆ. ನ್ಯೂ ತಿಪ್ಪಸಂದ್ರದ ನಿವಾಸದ ಬಳಿ ಭಾನುವಾರ ಮಧ್ಯಾಹ್ನ 2 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬೃಂದಾವನಕ್ಕೆ ‘ಲಕ್ಷ ಪುಷ್ಪಾರ್ಚನೆ’

ಪ್ರಜಾವಾಣಿ ವಾರ್ತೆ



ವಿಶ್ವಪ್ರಸನ್ನತೀರ್ಥರು ಲಕ್ಷ ಪುಷ್ಪಾರ್ಚನೆ ಕಾರ್ಯಕ್ರಮ ನಡೆಸಿಕೊಟ್ಟರು

ಬೆಂಗಳೂರು: ರಾಘವೇಂದ್ರ ಸ್ವಾಮಿಯ 426ನೇ ವರ್ಧಂತ್ಯುತ್ಸವದ ಅಂಗವಾಗಿ ಜಯನಗರದ 5ನೇ ಬಡಾವಣೆಯಲ್ಲಿರುವ ಮಠದಲ್ಲಿ ಸ್ವಾಮಿಯ ಬೃಂದಾವನಕ್ಕೆ ಅಷ್ಟೋತ್ತರ ಪಾರಾಯಣ, ಫಲ ಪಂಚಾಮೃತಾಭಿಷೇಕ ನೆರವೇರಿಸಲಾಯಿತು.

ಪರಮಪೂಜ್ಯ ಸುಬುಧೇಂದ್ರತೀರ್ಥ ಶ್ರೀಪಾದರ ಆದೇಶದಂತೆ ಮಠದ ಹಿರಿಯ ವ್ಯವಸ್ಥಾಪಕರಾದ ಆರ್. ಕೆ.ವಾದೀಂದ್ರ ಆಚಾರ್ಯ ಹಾಗೂ ಜಿ.ಕೆ ಆಚಾರ್ಯರ ನೇತೃತ್ವದಲ್ಲಿ ಪವಮಾನ ಹೋಮದ ಪೂರ್ಣಾಹುತಿ, ಉತ್ಸವಗಳು, ಪಾದಪೂಜೆ, ಕನಕಾಭಿಷೇಕ ಕಾರ್ಯಕ್ರಮ ಶನಿವಾರ ನಡೆದವು.

ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥರು ಸಂಸ್ಥಾನ ಪೂಜೆ ನೆರವೇರಿಸಿದರು. ಬಳಿಕ ಸ್ವಾಮಿಯ ಬೃಂದಾವನಕ್ಕೆ ವಿಶೇಷವಾಗಿ ವಿಷ್ಣು ಸಹಸ್ರನಾಮ, ವೆಂಕಟೇಶ ಸ್ತೋತ್ರ, ಶ್ರೀಹರಿ-ವಾಯುಸ್ತುತಿ, ರಾಘವೇಂದ್ರ ಅಷ್ಟೋತ್ತರ ಸ್ತೋತ್ರ ಪಾರಾಯಣ, ವಿವಿಧ ಬಗೆಯ ಪುಷ್ಪಗಳಿಂದ ‘ಲಕ್ಷ ಪುಷ್ಪಾರ್ಚನೆ’ ನೆರವೇರಿಸಿದರು.

ಸಂಜೆ ವಿದ್ವಾನ್ ವಿ. ವಿವೇಕ್ ಕೃಷ್ಣ ಕೊಳಲು ವಾದನ ನಡೆಸಿಕೊಟ್ಟರು. ನಟಿ ಪ್ರೇಮಾ, ನಟ ದೀಪಕ್ ರಾಯರ ದರ್ಶನ ಪಡೆದರು.

ಕಲ್ಲಹಳ್ಳಿ ಚಿತಾಗಾರ 7ದಿನ ಬಂದ್

ಬೆಂಗಳೂರು: ಕಲ್ಲಹಳ್ಳಿಯ ವಿದ್ಯುತ್ ಚಿತಾಗಾರದ ಕಾರ್ಯಾಚರಣೆಯನ್ನು ಉನ್ನತೀಕರಣ ಕಾಮಗಾರಿ ಸಲುವಾಗಿ ಬಿಬಿಎಂಪಿ ಏಳು ದಿನಗಳ ಕಾಲ ಸ್ಥಗಿತಗೊಳಿಸಲಿದೆ.


ಸರ್ವಜ್ಞನಗರ ವಾರ್ಡ್‌ನ ಕಲ್ಲಹಳ್ಳಿ ಸ್ಮಶಾನದಲ್ಲಿ ಎರಡು ವಿದ್ಯುತ್ ಚಿತಾಗಾರಗಳಿವೆ. ಒಂದರ ಉನ್ನತೀಕರಣ ಕಾಮಗಾರಿಯನ್ನು ಡಿಸೆಂಬರ್‌ನಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಇನ್ನೊಂದು ಚಿತಾಗಾರದ ಉನ್ನತೀಕರಣ ಕಾರ್ಯ ಬಾಕಿ ಇದೆ.

‘ಈ ಎರಡು ಚಿತಾಗಾರಗಳ ಸ್ನಬ್ಬರ್‌ಗಳು ಚಿಮಣಿಗೆ ಒಂದೇ ಕೊಳವೆಯ ಮೂಲಕ ಜೋಡಣೆಯಾಗಿವೆ. ಒಂದು ಚಿತಾಗಾರದ ಉನ್ನತೀಕರಣ ಪೂರ್ಣಗೊಂಡಿದ್ದರೂ, ಇನ್ನೊಂದು ಚಿತಾಗಾರಕ್ಕೆ ಪ್ರತ್ಯೇಕವಾಗಿ ಸ್ನಬ್ಬರ್ ಅಳವಡಿಸಿ ಚಿಮಣಿಗೆ ಜೋಡಣೆ ಮಾಡಬೇಕಾಗಿದೆ. ಆದ್ದರಿಂದ ಎರಡೂ ಚಿತಾಗಾರಗಳನ್ನು ಏಳು ದಿನಗಳವರೆಗೆ ಸ್ಥಗಿತಗೊಳಿಸಬೇಕಾಗಿದೆ’ ಎಂದು ಪೂರ್ವ ವಲಯದ ಕಾರ್ಯಪಾಲಕ ಎಂಜಿನಿಯರ್ ಶಂಕರಪ್ಪ ತಿಳಿಸಿದ್ದಾರೆ.

ನಗರದಲ್ಲಿ ಇಂದು

ಮರಗಳ ಸಂರಕ್ಷಣೆಯ ಜಾಗೃತಿಗಾಗಿ ಮಾನವ ಸರಪಳಿ ನಿರ್ಮಾಣ: ಆಯೋಜನೆ: ವಿ3 ಫೌಂಡೇಷನ್, ಚೇಂಜ್‌ಮೇಕರ್ಸ್ ಫಾರ್ ಬೆಂಗಳೂರು, ಬೆಂಗಳೂರು ನಾಗರಿಕ ಸಮಿತಿ, ಸ್ಥಳ: ಎಚ್‌ಎಎಲ್ ವಿಮಾನ ನಿಲ್ದಾಣ, ಬೆಳಿಗ್ಗೆ 8

ಎಚ್.ಎಂ. ರೇವಣ್ಣ ಅಭಿನಂದನೆ ಹಾಗೂ ಗ್ರಂಥಗಳ ಬಿಡುಗಡೆ ಸಮಾರಂಭ: ಅಧ್ಯಕ್ಷತೆ: ಎಂ. ವೀರಪ್ಪ ಮೊಯಿಲಿ, ಉದ್ಘಾಟನೆ: ಸಿದ್ದರಾಮಯ್ಯ, ‘ಸಂಗತ’ ಗ್ರಂಥ ಬಿಡುಗಡೆ: ಎಸ್.ಎಂ. ಕೃಷ್ಣ, ‘ದೃಶ್ಯಯಾನ’ ಚಿತ್ರಗುಚ್ಛ ಬಿಡುಗಡೆ: ಮಲ್ಲಿಕಾರ್ಜುನ ಖರ್ಗೆ, ‘ಇಟ್ಟ ಹೆಜ್ಜೆ ದಿಟ್ಟ ನಿಲುವು’ ಕಿರುಚಿತ್ರ ಬಿಡುಗಡೆ: ಬಸವರಾಜ ಹೊರಟ್ಟಿ, ವಿಶೇಷ ಅತಿಥಿ: ರಾಮಲಿಂಗಾರೆಡ್ಡಿ, ಅಭಿನಂದನಾ ನುಡಿ: ಕೆ.ಎಂ. ನಾಗರಾಜ್, ಡಾ. ಸಿದ್ದಲಿಂಗಯ್ಯ, ಗ್ರಂಥಗಳ ಕುರಿತು: ಬಿ.ಟಿ. ಲಲಿತಾ ನಾಯಕ್, ಗ್ರಂಥ ಸಂಪಾದಕರು: ಕಾ.ತ. ಚಿಕ್ಕಣ್ಣ, ಲಕ್ಷ್ಮಣ ಕೊಡಸೆ, ಕಿರುಚಿತ್ರ ನಿರ್ದೇಶಕರು: ಹುಲಿ ಚಂದ್ರಶೇಖರ, ಆಯೋಜನೆ: ಎಚ್.ಎಂ. ರೇವಣ್ಣ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ದೇವಂ ಹಾಲ್, ಪೂರ್ಣಿಮಾ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್, ಆರ್.ವಿ. ಎಂಜಿನಿಯರಿಂಗ್ ಕಾಲೇಜು ಬಳಿ, ಮೈಸೂರು ರಸ್ತೆ, ಬೆಳಿಗ್ಗೆ 10



ಸದ್ಗುರು

ಅಂತರರಾಷ್ಟ್ರೀಯ ಅರಣ್ಯ ದಿನ ಮತ್ತು ರೈತರಿಗೆ ಸನ್ಮಾನ: ‘ಕಾವೇರಿ ಕೂಗು’ ಅಭಿಯಾನ ಒಂದು ವರ್ಷ ಪೂರೈಕೆ, ಮುಖ್ಯ ಅತಿಥಿಗಳು: ಪ್ರಕಾಶ್ ಜಾವಡೇಕರ್, ಬಿ.ಎಸ್. ಯಡಿಯೂರಪ್ಪ, ಉಪಸ್ಥಿತಿ: ಸದ್ಗುರು ಜಗ್ಗಿ ವಾಸುದೇವ್, ಆಯೋಜನೆ: ಈಶ ಫೌಂಡೇಶನ್, ಸ್ಥಳ: ವೈಟ್ ಪೆಟಲ್ಸ್ ಗಾರ್ಡೇನಿಯಾ, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಮಧ್ಯಾಹ್ನ 12

ನಂದಿನಿ ಬಡಾವಣೆ ವಾರ್ಡ್‌ನ ಎಎಪಿ ಕಚೇರಿ ಉದ್ಘಾಟನೆ: ಎಚ್.ಆರ್. ಅನಂತರಾಮು, ಸ್ಥಳ: ನ.88, 12ನೇ ಮುಖ್ಯರಸ್ತೆ, 4ನೇ ಬ್ಲಾಕ್, ನಂದಿನಿ ಲೇಔಟ್, ಸಂಜೆ 4




‘ಸುಭದ್ರಾ ಕಲ್ಯಾಣ’ ಪೌರಾಣಿಕ ಯಕ್ಷಗಾನ

ಯಕ್ಷಗಾನ ಪ್ರದರ್ಶನ: ಹಟ್ಟಿಯಂಗಡಿ ರಾಮ ಭಟ್ಟ ವಿರಚಿತ ‘ಸುಭದ್ರಾ ಕಲ್ಯಾಣ’ ಪೌರಾಣಿಕ ಯಕ್ಷಗಾನ, ಭಾಗವತರು: ಭರತೋಟ ಗಣಪತಿ ಭಟ್ಟ, ಗಜಾನನ ಭಟ್ಟ ವಾನಳ್ಳಿ, ಮೃದಂಗ: ಸಂಪತ್ ಆಚಾರ್ಯ ಉಡುಪಿ, ರಾಜೇಶ ಆಚಾರ್ ಸಾಗರ, ಚಂಡೆ: ನಾಗಭೂಷಣ ಕೇಡಲಸರ, ಲಕ್ಷ್ಮೀನಾರಾಯಣ ಸಂಪ, ಮುಮ್ಮೇಳ: ಅಜಿತೇಶ ಹೆಗಡೆ ಸಾಗರ, ರಾಧಾಕೃಷ್ಣ ಬೆಳೆಯೂರು, ರಾಮಕೃಷ್ಣ ಭಟ್ಟ ಹಳಕಾರ, ದೇವದಾಸ ಶೆಟ್ಟಿ ಮರಳಿ, ಶ್ರೀಪಾದ ಹೆಗಡೆ ಶುಂಠಿ, ಸಾಯಿರಾಂ ಭಟ್ಟಿಪ್ರೋಲು, ಸತ್ಯನಾರಾಯಣ ಭಟ್ಟ ಗಾಳಿ, ಆಯೋಜನೆ: ಯಕ್ಷಗಾನ ತಪಸ್ಸಂಗ, ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಮಧ್ಯಾಹ್ನ 3

ದಿ.ಡಾ.ಎ.ಆರ್. ಕೃಷ್ಣಶಾಸ್ತ್ರಿಯವರ ಸ್ಮರಣೆ: ಉದ್ಘಾಟನೆ: ಬಿ.ಎ. ಅನ್ನದಾನೇಶ್ ಹರೀಶ್, ಮುಖ್ಯ ಅತಿಥಿ: ಎಸ್.ಎಲ್. ಶ್ರೀನಿವಾಸಮೂರ್ತಿ, ಅಧ್ಯಕ್ಷತೆ: ವೀರಶೇಖರಸ್ವಾಮಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಕಾಲೇಜು, ತೇಜಸ್ವಿ ಕನ್ನಡ ಸಂಶೋಧನಾ ಕೇಂದ್ರದ ಕನ್ನಡ ವಿಭಾಗ, (ಆನ್‌ಲೈನ್ ಕಾರ್ಯಕ್ರಮ), ಸಂಜೆ 4.30

‘ಏಕಂ’ ಒಡಿಸ್ಸಿ ನೃತ್ಯ ಪ್ರದರ್ಶನ: ಮಧುಲಿತಾ ಮೋಹಪಾತ್ರಾ, ಸ್ಥಳ: ಜಾಗೃತಿ ಥಿಯೇಟರ್, ಸಂಜೆ 6.30



ಮಧುಲಿತಾ ಮೋಹಪಾತ್ರಾ

ಪುಸ್ತಕ ಬಿಡುಗಡೆ: ‘ಬಹುಮುಖಿ’ ಎಸ್. ಮಾಲತಿ ನೆನಪಿನ ಪುಸ್ತಕ, ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಮಾಲತಿ ನೆನಪು: ಲಕ್ಷ್ಮೀ ಚಂದ್ರಶೇಖರ್, ಗಾಯತ್ರಿ ಎಸ್., ಶರೀಫಾ ಕುಂಸಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳ ಮಾತು: ಜಯಪ್ರಕಾಶ ಮಾವಿನಕುಳಿ, ಪುರುಷೋತ್ತಮ ತಲವಾಟ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಡಾ.ಎಚ್.ಎನ್. ಮಲ್ಟಿ ಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಸಂಜೆ 5

ವಿಶ್ವ ಜಲ ದಿನದ ಪ್ರಯುಕ್ತ ವಿಶೇಷ ಗೋಷ್ಠಿ: ನದಿಗಳ ಮೇಲಿನ ದಾಳಿ, ಪರಿಸರ ನ್ಯಾಯಕ್ಕಾಗಿ ಜನರ ಹೋರಾಟಗಳು, ಭಾಗವಹಿಸುವವರು: ಜಾಗೃತಿ ರಾಹಿ, ಮಹೇಂದ್ರ ಯಾದವ್, ರಾಜ್‌ಕುಮಾರ್ ಸಿನ್ಹಾ, ಸುಪ್ರಭಾ ಶೇಷನ್, ಆಯೋಜನೆ: ನ್ಯಾಷನಲ್ ಅಲಯನ್ಸ್ ಆಫ್ ಪೀಪಲ್ಸ್ ಮೂವ್‌ಮೆಂಟ್ಸ್, (ಆನ್‌ಲೈನ್ ಕಾರ್ಯಕ್ರಮ) ಸಂಜೆ 7

ಗೋವಾ ನಿಯೋಗದವರ ಮೇಲೆ ಥಳಿತ: ಆರೋಪ

ಬೆಳಗಾವಿ: 'ಕಳಸಾ ಬಂಡೂರಿ ಯೋಜನಾ ಪ್ರದೇಶವಾದ ಖಾನಾಪುರ ತಾಲ್ಲೂಕಿನ ಕಣಕುಂಬಿಗೆ ಸುಪ್ರೀಂ ಕೋರ್ಟ್ ಆದೇಶದ ಪ್ರಕಾರ ಪರಿಶೀಲನೆಗೆಂದು ಶುಕ್ರವಾರ ಭೇಟಿ ನೀಡಿದ್ದ ಗೋವಾ ನಿಯೋಗದವರನ್ನು ಕರ್ನಾಟಕದವರು ಥಳಿಸಿದ್ದಾರೆ' ಎಂದು ಆರೋಪಿಸಿ ಆ ರಾಜ್ಯದ ವಿಧಾನಸಭೆ ವಿರೋಧ ಪಕ್ಷದ ನಾಯಕ ದಿಗಂಬರ ಕಾಮತ್ ಶನಿವಾರ ಟ್ವೀಟ್ ಮಾಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಖಾನಾಪುರ ಎಸ್‌ಐ, 'ಯಾರನ್ನೂ ಯಾರೂ ಥಳಿಸಿಲ್ಲ. ಪರಿಸರವಾದಿ ಹಾಗೂ ಪತ್ರಕರ್ತ ಎಂದು ಹೇಳಿಕೊಂಡು ಗೋವಾ ಅಧಿಕಾರಿಗಳೊಂದಿಗೆ ಬಂದಿದ್ದ ವ್ಯಕ್ತಿಯನ್ನು ಹೊರ ಕಳುಹಿಸಲಾಗಿತ್ತು' ಎಂದು ತಿಳಿಸಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಹೊನ್ನಾವರ ವಿಭಾಗ, ಹೊನ್ನಾವರ

No: B1/DTS/Apr-2021/MSTC/CR-01/2020-21 Date: 15.03.2021

ಹೊನ್ನಾವರ ವಿಭಾಗ, ಹೊನ್ನಾವರದ ಇಡಗುಂಜಿ ಮತ್ತು ಕಟ್ಗಲ್ ಡಿಪೋದಲ್ಲಿರುವ ಟಿಂಬರ್ ಮತ್ತು ಫಯರ್‌ವುಡ್‌ಗಳ ಇ-ಟೆಂಡರ್‌ನ ವಿವರವಾದ ಪ್ರಕಟಣೆ

ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ, ಈ ಕೆಳಗಿನಂತೆ ವಿವರಿಸಲಾಗಿರುವ ಮರದ ಜಾತಿ ಹಾಗೂ ಪ್ರಮಾಣದ ಟಿಂಬರ್, ಫಯರ್‌ವುಡ್, ಬಿಲ್ಲೆಟ್‌ಗಳು ಮತ್ತು ಪೋಲ್‌ಗಳನ್ನು ಹೊನ್ನಾವರ ವಿಭಾಗ, ಹೊನ್ನಾವರದ ಕಟ್ಗಲ್ ಸರ್ಕಾರಿ ಟಿಂಬರ್ ಡಿಪೋದಲ್ಲಿ **ದಿನಾಂಕ: 16.04.2021** ಮತ್ತು ಇಡಗುಂಜಿ ಸರ್ಕಾರಿ ಟಿಂಬರ್ ಡಿಪೋದಲ್ಲಿ **ದಿನಾಂಕ: 17.04.2021** ರಂದು **ಬೆಳಿಗ್ಗೆ 9.00 ಗಂಟೆಯಿಂದ ಸಂಜೆ 5.00 ಗಂಟೆಯುವರೆಗೆ** ಷರತ್ತುಗಳಿಗೊಳಪಟ್ಟು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಅಥವಾ ಅವರಿಂದ ಅಧಿಕಾರ ಪಡೆದ ಇತರ ಅಧಿಕಾರಿಗಳಿಂದ ಇ-ಟೆಂಡರ್ ಮುಖೇನ ಮಾರಾಟ ಮಾಡಲಾಗುತ್ತದೆ.

ಯಾವುದೇ ಸ್ಪಷ್ಟೀಕರಣಕ್ಕಾಗಿ, ನೀವು ಸಂಪರ್ಕಿಸಹುದು:
The Range Forest Officer, Honnavar - Ph: 08387-220640
The Range Forest Officer, Timber Depot Katgal- Ph: 08386-264100
OR
Deputy Conservator of Forests, Honnavar Division
Ph: 08387-220235

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,
ಹೊನ್ನಾವರ ವಿಭಾಗ, ಹೊನ್ನಾವರ
DIPR/KWR/MCA/875/20-21 Dt.20.3.2021

ಕರ್ನಾಟಕ ಸರ್ಕಾರ
ಕಾರ್ಯಕಾರಿ ಅಭಿಯಂತರವರ ಕಚೇರಿ, ಲೋಕೋಪಯೋಗಿ ಇಲಾಖೆ, ಉಡುಪಿ ವಿಭಾಗ,
E-mail : eeudp@kpwd.gov.in Website: https://www.kpwd.gov.in
ನಂ/ಪಿಡಬ್ಲ್ಯೂಡಿ:ಯುಡಿಎನ್:ಎನ್ಐಟಿ-53:2020-21/ಎಇ2 ದಿನಾಂಕ: 20.03.2021

ಅಲ್ಪಾವಧಿ ಟೆಂಡರು ಪ್ರಕಟಣೆ

ಈ ಕೆಳಕಂಡ ಕಾಮಗಾರಿಗಳಿಗೆ 'ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್' **https://www.eproc.karnataka.gov.in"** ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದೆ. **ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 29.03.2021**, 3ನೇ ದರ್ಜೆ ವಿದ್ಯುತ್ ಗುತ್ತಿಗೆದಾರರು ಟೆಂಡರ್ ಸಲ್ಲಿಸಬಹುದಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರಿಗಿರಿಸಿದ ಮೊತ್ತ ರೂ. ಲಕ್ಷಗಳಲ್ಲಿ
1	ಬೈಂದೂರು ವಿಧಾನ ಸಭಾ ಕ್ಷೇತ್ರದ (ಎ) ಅಜ್ರಿ ಗ್ರಾಮ ಪಂಚಾಯತ್‌ನ ಗೋರಿಜಡ್ಡು ಕಡ್ರಿ ಎಸ್.ಸಿ. ಕಾಲೋನಿ ಮುಖ್ಯ ರಸ್ತೆ ಅಭಿವೃದ್ಧಿ. ಬಿ) ಕಾವ್ರಾಡಿ ಗ್ರಾಮ ಪಂಚಾಯತ್‌ನ ಹಳ್ನಾಡು ಹುಂಡಿಜೆಡ್ಡು ರಸ್ತೆ ಅಭಿವೃದ್ಧಿ. ಸಿ) ನಾವುಂದ ಗ್ರಾಮ ಪಂಚಾಯತ್‌ನ ಕಂತಿಹೊಂಡ ರಸ್ತೆ ಪ.ಜಾತಿ ಮನೆಗಳಿಗೆ ಸಂಪರ್ಕ ರಸ್ತೆಗಳನ್ನು ಕಾಂಕ್ರೀಟೀಕರಣಗೊಳಿಸುವುದು.	41.19
2	ಬೈಂದೂರು ವಿಧಾನ ಸಭಾ ಕ್ಷೇತ್ರದ ಎ) ಹಳ್ಳಿಹೊಳೆ ಗ್ರಾಮ ಪಂಚಾಯತ್‌ನ ವಾಟೆಬಚ್ಚಲು ರಸ್ತೆ ಅಭಿವೃದ್ಧಿ. ಬಿ) ಮಚ್ಚಟ್ಟು ಗ್ರಾಮದ ಈರಿಜೆಡ್ಡುವಿನಿಂದ ಬೊಬ್ಬರ್ಯನ ಜೆಡ್ಡಿಗೆ ಹೋಗುವ ರಸ್ತೆ ಅಭಿವೃದ್ಧಿ ಸಿ) ಶಂಕರನಾರಾಯಣ ಗ್ರಾಮ ಪಂಚಾಯತ್‌ನ ತಲ್ಲೂರು ಮಕ್ಕಿಯಿಂದ ಹೊಯ್ಗಿಮನೆ ಹೋಗುವ ರಸ್ತೆ ಅಭಿವೃದ್ಧಿ. ಡಿ) ಗೋಳಿಹೊಳೆ - ಕಡುಕೋಡ್ಲು ತುಂಬೆಗದ್ದೆ ಯತ್ತಾಬೇರು ಎಸ್.ಟಿ. ಕಾಲನಿ ರಸ್ತೆ ಅಭಿವೃದ್ಧಿ ಇ) ಚಿತ್ತೂರು ಗ್ರಾಮ ಪಂಚಾಯತ್‌ನ ನಂಜೇರಿ ರಸ್ತೆಯಿಂದ ಕಪ್ಪಿಕೊಡ್ಲು ಆನಂದ ನಗರ ಪ.ಪಂಗಡ ಮನೆಗಳಿಗೆ ಸಂಪರ್ಕ ರಸ್ತೆಗಳನ್ನು ಕಾಂಕ್ರೀಟೀಕರಣಗೊಳಿಸುವುದು.	132.05
3	ಕುಂದಾಪುರ ತಾಲೂಕು, ಅಮಾಸೆಬೈಲು ಗ್ರಾಮ ಪಂಚಾಯತ್ ವ್ಯಾಪ್ತಿಯ ಜಡ್ಡಿನ ಗದ್ದೆ ಪೇಟೆಯಿಂದ ಶಾಲೆ ಮೂಲಕ ಕೊಂತಾಳಿ ವಿಠಲ ನಾಯ್ಕ ಹಾಗೂ ಮತ್ತಿತರ ಪರಿಶಿಷ್ಟ ಪಂಗಡ ಮನೆಗಳ ಸಂಪರ್ಕ ರಸ್ತೆ ಅಭಿವೃದ್ಧಿ.	131.59

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ಉಡುಪಿ ವಿಭಾಗ, ಉಡುಪಿ
ವಾಸಾಇಂ/ಸನಿಉ/ಎಂಸಿಎ/842/20-21 ದಿ: 20.3.2021

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ರಸ್ತೆ ಮೂಲಭೂತಸೌಕರ್ಯ-ಟ್ರಾಫಿಕ್ ಇಂಜಿನಿಯರಿಂಗ್ ಸೆಲ್, ನರಸಿಂಹರಾಜ ಚೌಕ, ಬೆಂಗಳೂರು - 02.
ಸಂಖ್ಯೆ: ಕಾಪಾಅ/ರಮೂ-ಟಿಇಸಿ/ಟೆಂಡರ್/11/2020-21 ದಿನಾಂಕ: 20.03.2021

ಅಲ್ಪಾವಧಿ ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಟ್ರಾಫಿಕ್ ಇಂಜಿನಿಯರಿಂಗ್ ಸೆಲ್-ರಸ್ತೆ ಮೂಲಭೂತಸೌಕರ್ಯ) ಬೃ.ಬೆಂ.ಮ.ಪಾಲಿಕೆ ಬೆಂಗಳೂರು ಇವರು ಹೆಸರಾಂತ ಸಂಸ್ಥೆ/ಏಜೆನ್ಸಿಗಳಿಂದ ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯಲ್ಲಿ ಈ ಕೆಳಕಂಡ ರಸ್ತೆ ಸುರಕ್ಷತೆ ಕಾಮಗಾರಿಗಳಿಗಾಗಿ ಸ್ಪರ್ಧಾತ್ಮಕ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.
ಈ ಕೆಳಕಂಡ ಪ್ರತಿ ವಲಯಗಳಿಗೆ ಸಂಬಂಧಿತ ಇಎಂಡಿ ಮತ್ತು ಅರ್ಜಿ ಶುಲ್ಕಗಳೊಂದಿಗೆ ಪ್ರಸ್ತಾವನೆಗಳನ್ನು ಪ್ರತ್ಯೇಕವಾಗಿ ಸಲ್ಲಿಸತಕ್ಕದ್ದು.

ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಅಂದಾಜು ಮೊತ್ತ (₹. ಲಕ್ಷ ಗಳಲ್ಲಿ)	ಇಎಂಡಿ (₹. ಲಕ್ಷ ಗಳಲ್ಲಿ)
ಬೃ.ಬೆಂ.ಮ.ಪಾಲಿಕೆ ವ್ಯಾಪ್ತಿಯ ಪೂರ್ವ, ಮಹದೇವಪುರ, ದಕ್ಷಿಣ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿರುವ ಪ್ರಧಾನ ಮತ್ತು ಉಪ ಪ್ರಧಾನ ರಸ್ತೆಗಳಲ್ಲಿ ರಸ್ತೆ ಸುರಕ್ಷತೆ ಕಾಮಗಾರಿಗಳು ಮಾರ್ಗ ಗುರುತು ಮಾಡುವುದು, ಜಂಕ್ಷನ್ ಗುರುತು ಮಾಡುವುದು, ಕರ್ಬ್ ಬಣ್ಣ ಬಳಿಯುವಿಕೆ, ಅಪಾಯ ಸೂಚಕ ಫಲಕಗಳು, ರಸ್ತೆ ಮೀಡಿಯನ್ಸ್ ಮತ್ತು ಮೀಡಿಯನ್ ಗುರುತು ಮಾಡುವುದು, ಸೂಚನಾ ಫಲಕಗಳು ಹಾಗೂ ದಿಕ್ಸೂಚಕ ನಾಮಫಲಕಗಳನ್ನು ಒದಗಿಸುವುದು. (2ನೇ ಕರೆ)	756.99	11.36

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದಿನಾಂಕ:**22.03.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ**29.03.2021**ರ ಸಂಜೆ **4:00** ಗಂಟೆಯವರೆಗೆ. (3) ತಾಂತ್ರಿಕ ಬಿಡ್ಡನ್ನು ದಿನಾಂಕ: **31.03.2021**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವುದನ್ನು **ಟೆಂಡರುದಾರರಿಗೆ ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು (ರ.ಮೂ.ಸೌ-ಟಿ.ಇ.ಸಿ)

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,
ಆಣೆಕಟ್ಟು ವಿಭಾಗ, ಆಲಮಟ್ಟಿ. ತಾ:ಬ.ಬಾಗೇವಾಡಿ, ಜಿ:ವಿಜಯಪುರ.
ದೂರವಾಣಿ:08426-281027.ಇಮೇಲ್:dam_division@rediffmail.com
ಸಂ:ಕೃಭಾಜನಿನಿ/ಡಿ.ಬಿ/ಟೆಂಡರ್/2020-21/5233 ದಿನಾಂಕ:19.03.2021

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Indent No. 19651 for Rs. 76.21 Lakhs (Others) (2) Indent No. 19652 for Rs. 72.10 Lakhs (Others) (3) Indent No. 20193 for Rs. 35.84 Lakhs (SC) (4) Indent No. 20194 for Rs. 17.93 Lakhs (ST) (5) Indent No. 19594 for Rs. 26.88 Lakhs (Others) (6) Indent No. 20195 for Rs. 8.96 Lakhs (SC) (7) Indent No. 20196 for Rs. 4.48 Lakhs (ST)** ಶೇಕಡಾವಾರು ದ್ವಿ-ಲಕೋಟೆಗಳಲ್ಲಿ ಕೆ.ಟಿ.ಪಿ.ಪಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಆಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು ಇ-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್‌ದಾಗಿದ್ದು, ಅಗತ್ಯವಿರುವ ದಾಖಲೆಗಳನ್ನು ಒಳಗೊಂಡಿದ್ದು ಪ್ಯಾರಾ 1.1 ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್‌ದಾಗಿದ್ದು ತಾಂತ್ರಿಕ ಬಿಡ್‌ನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

1) ಟೆಂಡರ ಡಾಕುಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ **ಕೊನೆಯ ದಿನಾಂಕ: 22.03.2021 ರಿಂದ 09.04.2021 ಸಾಯಂಕಾಲ 5.00 ಘಂಟೆಯವರೆಗೆ.** 2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ:13.04.2021 ಮುಂಜಾನೆ 11.00 ಘಂಟೆಗೆ.** 3) ಆರ್ಥಿಕ ಬಿಡ್ ತೆರೆಯುವ **ದಿನಾಂಕ:16.04.2021** ಮುಂಜಾನೆ 11.00 ಘಂಟೆಗೆ.

ಟೆಂಡರಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ.
ವಾಸಾಸಂಇ/ವಿಜಯಪುರ/643/ಎಂಸಿಎ/2020-21

ಸಂವಿಧಾನವೇ ರಕ್ಷಾಕವಚ, ಖಾಕಿ ಚಡ್ಡಿಯಲ್ಲ: ನಿವೃತ್ತ ನ್ಯಾ. ಎಚ್‌.ಎನ್‌. ನಾಗಮೋಹನ್ ದಾಸ್

ನ್ಯಾಯಾಂಗ ನಿಂದನೆ ಕಾಯ್ದೆ ರದ್ದಾಗಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ್ರೋಹ, ಮಾನಹಾನಿ ಹಾಗೂ ನ್ಯಾಯಾಂಗ ನಿಂದನೆ ಕಾಯ್ದೆಗಳನ್ನು ಕಾನೂನಿನ ಪುಸ್ತಕದಿಂದಲೇ ತೆಗೆದುಹಾಕಬೇಕು. ಇವೆಲ್ಲಾ ವಸಾಹತುಶಾಹಿ ಕಾಯ್ದೆಗಳು. ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾಗಿವೆ' ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್ ದಾಸ್ ಅಭಿಪ್ರಾಯಪಟ್ಟರು.

ಫೋರಂ ಫಾರ್ ಡೆಮಾಕ್ರಸಿ ಆ್ಯಂಡ್ ಕಮ್ಯುನಲ್ ಅಮಿಟಿ ಶನಿವಾರ ಆಯೋಜಿಸಿದ್ದ 'ದೇಶವು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳ ಕುರಿತ ಚರ್ಚೆ'ಯಲ್ಲಿ ಅವರು ಮಾತನಾಡಿದರು.

'ದೇಶದ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ವ್ಯವಸ್ಥೆಗಳು ಸಂವಿಧಾನದ ತಳಹದಿಯ ಮೇಲೆ ನಿಂತಿವೆ. ಸಂವಿಧಾನ ನಮ್ಮ ಧರ್ಮ ಗ್ರಂಥ. ಅದೇ ನಮ್ಮೆಲ್ಲರ ರಕ್ಷಾ ಕವಚ ಆಗಬೇಕೆ ಹೊರತು ಖಾಕಿ ಚಡ್ಡಿಯಲ್ಲ' ಎಂದು ಪರೋಕ್ಷವಾಗಿ ಆರ್‌ಎಸ್‌ಎಸ್ ಅನ್ನು ಕುಟುಕಿದರು.

'ಇಂದು ಸಂವಿಧಾನಕ್ಕೇ ಆಪತ್ತು ಎದುರಾಗಿದೆ. ನ್ಯಾಯಾಂಗ ವ್ಯವಸ್ಥೆಯು ಆಂತರಿಕ ಹಾಗೂ ಬಾಹ್ಯ ಒತ್ತಡ ಎದುರಿಸುತ್ತಿದೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳ ನೇಮಕದ ವೇಳೆ ರಾಜಕೀಯ ಹಸ್ತಕ್ಷೇಪ ನಡೆಸಲಾಗುತ್ತಿದೆ. ಅರ್ಹರನ್ನು ಕಡೆಗಣಿಸಿ ತಮಗೆ ಬೇಕಾದವರಿಗೆ ಆಯಕಟ್ಟಿನ ಹುದ್ದೆ ನೀಡಲಾಗುತ್ತಿದೆ. ನ್ಯಾಯದಾನದ ವಿಚಾರದಲ್ಲೂ ಅಸಮಾನತೆ ಮನೆ ಮಾಡಿದೆ. ಸರ್ಕಾರದ ನೀತಿಗಳಲ್ಲಿ ಕಾರ್ಪೊರೇಟ್ ಕಂಪನಿಗಳು ಮೂಗು ತೂರಿಸುತ್ತಿವೆ. ಭಾವನಾತ್ಮಕ ವಿಚಾರಗಳನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲಾಗುತ್ತಿದೆ. ಇತರ ಜ್ವಲಂತ ಸಮಸ್ಯೆಗಳೆಲ್ಲಾ ಗೌಣವಾಗಿವೆ. ಇದು ಆತಂಕಕಾರಿ' ಎಂದರು.


'ದೇಶವು ಪ್ರಸ್ತುತ ಎದುರಿಸುತ್ತಿರುವ ಸಮಸ್ಯೆಗಳು' ಕುರಿತ ಚರ್ಚೆಯಲ್ಲಿ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲ ಗೌಡ (ಎಡಬದಿ) ಮಾತನಾಡಿದರು. ಎಚ್‌.ಎನ್‌. ನಾಗಮೋಹನ್ ದಾಸ್ ಇದ್ದಾರೆ —ಪ್ರಜಾವಾಣಿ ಚಿತ್ರ

ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯ ಮೂರ್ತಿ ವಿ.ಗೋಪಾಲ ಗೌಡ ಮಾತನಾಡಿ, 'ಸರ್ಕಾರ ಜಾರಿಗೊಳಿಸಿರುವ ಗೋಹತ್ಯೆ ನಿಷೇಧ ಕಾಯ್ದೆ ಅವೈಜ್ಞಾನಿಕವಾದುದು. ಇದು ರೈತ ವಿರೋಧಿ. ದೇಶವು ಇಂದು ಹಲವು ಸವಾಲುಗಳನ್ನು ಎದುರಿಸುತ್ತಿದೆ. ಸಂವಿಧಾನವು ಆಳುವವರ ಅಧೀನಕ್ಕೊಳಪಟ್ಟಿದೆ. ಅದನ್ನು ತಮಗೆ ಬೇಕಾದ ರೀತಿಯಲ್ಲಿ ತಿದ್ದುಪಡಿ ಮಾಡಲಾಗುತ್ತಿದೆ. ಕೇಂದ್ರ ಜಾರಿಗೊಳಿಸಿರುವ ಕೃಷಿ ಕಾಯ್ದೆಗಳಿಂದ ರೈತರ ಆದಾಯ ದ್ವಿಗುಣ ವಾಗುತ್ತದೆ ಎಂದು ಹೇಳಲಾಗುತ್ತಿದೆ. ಹಾಗಾದರೆ ಕನಿಷ್ಠ ಬೆಂಬಲ ಬೆಲೆಯನ್ನು (ಎಂಎಸ್‌ಪಿ) ಶಾಸನಬದ್ಧಗೊಳಿಸಲು ಸರ್ಕಾರ ಏಕೆ ಹಿಂದೇಟು ಹಾಕುತ್ತಿದೆ. ಭಾರಿ ವಿರೋಧದ ನಡುವೆಯೂ ಇವುಗಳನ್ನು ಅನುಷ್ಠಾನಗೊಳಿಸಿದ್ದಾದರೂ ಏಕೆ' ಎಂದು ಪ್ರಶ್ನಿಸಿದರು.

'ಪ್ರಜ್ಞಾವಂತರು ಸರ್ಕಾರದ ಧೋರಣೆಯನ್ನು ಟೀಕಿಸಿ ಕೇಂದ್ರಕ್ಕೆ ಪತ್ರ ಬರೆದರೆ ಅವರ ವಿರುದ್ಧವೇ ದೇಶದ್ರೋಹದ ಪ್ರಕರಣ ದಾಖಲಿಸಲಾಗುತ್ತಿದೆ. ಜನರು ಭಯದಿಂದಾಗಿ ಪ್ರಶ್ನಿಸುವ ಮನೋಭಾವವನ್ನೇ ಕಳೆದುಕೊಂಡಿದ್ದಾರೆ. ಇದು ಅಪಾಯಕಾರಿ ಬೆಳವಣಿಗೆ' ಎಂದು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಎ.ನಾರಾಯಣ ಹೇಳಿದರು.

ಪತ್ರಕರ್ತ ಸುಗತ ಶ್ರೀನಿವಾಸ ರಾಜು, 'ಸುದ್ದಿಮನೆಗಳಲ್ಲಿ ವೈವಿಧ್ಯ ಮರೆಯಾಗಿದೆ. ಮಾಧ್ಯಮ ಕ್ಷೇತ್ರವು ಕುಸಿದು ಬಿದ್ದಿದೆ. ಆಳುವವರನ್ನು ಟೀಕಿಸುವ ನೈತಿಕತೆಯನ್ನೇ ಕಳೆದುಕೊಂಡಿದೆ' ಎಂದರು.

ಎಫ್‌ಡಿಸಿಎ ಕಾರ್ಯದರ್ಶಿ ಎಂ.ಎಫ್.ಪಾಷಾ, ಉಪಾಧ್ಯಕ್ಷೆ ಕಾತ್ಯಾಯಿನಿ ಚಾಮರಾಜ್, ವೈದ್ಯ ಮೊಹಮ್ಮದ್ ತಾಹ ಮತೀನ್ ಇದ್ದರು.

ನದಿ ಜೋಡಣೆ ಯೋಜನೆ: ಸಮಾಲೋಚನಾ ಕಾರ್ಯಾಗಾರ 24ಕ್ಕೆ

ಶಿರಸಿ: ಬೇಡ್ತಿ, ಅಘನಾಶಿನಿ-ವರದಾ ನದಿ ಜೋಡಣೆ ಯೋಜನೆ ಸಾಧಕ-ಬಾಧಕಗಳ ಕುರಿತ ಸಮಾಲೋಚನಾ ಕಾರ್ಯಾಗಾರ ಮಾ.24 ರಂದು ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಶಿರಸಿಯ ಟಿ.ಆರ್.ಸಿ.ಬ್ಯಾಂಕ್ ಸಭಾಭವನದಲ್ಲಿ ನಡೆಯಲಿದೆ.

ಬೇಡ್ತಿ ಮತ್ತು ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಆಯೋಜಿಸುತ್ತಿರುವ ಈ ಕಾರ್ಯಾಗಾರದಲ್ಲಿ, ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ನೇತೃತ್ವ ವಹಿಸಲಿದ್ದಾರೆ.

ಮಾಹಿತಿಗೆ ಗಣಪತಿ ಕೆ.ಬಿಸಲಕೊಪ್ಪ (94814 61612) ಸಂಪರ್ಕಿಸುವಂತೆ ಸಮಿತಿ ಕಾರ್ಯಾಧ್ಯಕ್ಷ ವಿಘ್ನೇಶ್ವರ ಎನ್. ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ನಿರ್ದೇಶಕರ ಕಚೇರಿ, ಹುಬ್ಬಳ್ಳಿ-580 021
ದೂರವಾಣಿ (ಕ): 0836-2373348 ಫ್ಯಾಕ್ಸ್ : 0836-2373724
ಕ್ರ.ಸಂ.ಕಿಮ್ಸ್/ಪೂವಿ(4)/27/2020-21 ದಿನಾಂಕ: 12-03-2021

ಟೆಂಡರ್ ಪ್ರಕಟಣೆ

ಈ ಮೂಲಕ ಅಧಿಕೃತ ಪೂರೈಕೆದಾರರಿಗೆ ತಿಳಿಸುವುದೇನೆಂದರೆ, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿನ ವೈದ್ಯಕೀಯ ವಿದ್ಯಾರ್ಥಿಗಳಿಗೆ ಎಸ್.ಸಿ.ಪಿ./ಟಿ.ಎಸ್.ಪಿ ಯೋಜನೆ ಅಡಿಯಲ್ಲಿ 2020-21ನೇ ಸಾಲಿಗೆ ವಿವಿಧ ಸಾಮಗ್ರಿಗಳ ಪೂರೈಸುವುದಕ್ಕಾಗಿ ಇ-ಟೆಂಡರ್ ಮುಖಾಂತರ ಕರೆಯಲಾಗಿದೆ. ಈ ಬಗ್ಗೆ ನಿಗದಿಪಡಿಸಿದ ಹೆಚ್ಚಿನ ವಿವರ ಮತ್ತು ಮಾಹಿತಿಯನ್ನು **www.eproc.karnataka.gov.in** ವೆಬ್‌ಸೈಟನಲ್ಲಿ ಪಡೆಯಬಹುದು.

ಟೆಂಡರ್ ಸಲ್ಲಿಸುವ ಪ್ರಾರಂಭ ದಿನಾಂಕ	21-03-2021
ತುಂಬಿದ ಟೆಂಡರ್ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ	05-04-2021
ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ	07-04-2021

ಸಹಿ/- ನಿರ್ದೇಶಕರು
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರು-1 ರವರ ಕಛೇರಿ, (ಕೆರೆಗಳು), 3ನೇ ಮಹಡಿ, ಹೊಸ ಕಟ್ಟಡ, ಬಿಬಿಎಂಪಿ, ಎನ್. ಆರ್. ವೃತ್ತ, ಬೆಂಗಳೂರು-560 002.
ಸಂ: ಕಾಪಾಅ-1(ಕೆರೆಗಳು)/ಟೆಂಡರ್/18/2020-21 ದಿನಾಂಕ: 20.03.2021

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ(ಐಎಫ್‌ಟಿ)
(ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು- 1 (ಕೆರೆಗಳು), ಬಿಬಿಎಂಪಿ, ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1	ಹೊರಮಾವು ಕೆರೆಯ ಅಭಿವೃದ್ಧಿ ಕಾಮಗಾರಿಗಳು - 3ನೇ ಕರೆ	400.00
2	ವೆಂಗಯ್ಯನ ಕೆರೆಯ ಸುಧಾರಣಾ ಕಾಮಗಾರಿಗಳು - 2ನೇ ಕರೆ	200.00

ಇಎಂಡಿ ಘೋಷಣೆ: ಸರ್ಕಾರದ ಆದೇಶ ಸಂಖ್ಯೆ : FD 675 Expenditure-12 / 2020 ದಿನಾಂಕ: 22.12.2020ರಂತೆ. (1) ಟೆಂಡರ್ ಡಾಕ್ಯುಮೆಂಟ್‌ಗಳನ್ನು GoK ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ದಿನಾಂಕ **22.03.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ: **29.03.2021ರ ಸಂಜೆ 3.30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ : **05.04.2021 ರ ಸಂಜೆ 4.00 ಗಂಟೆಯವರೆಗೆ** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **:06.04.2021 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು).

"ಅಭಿವೃದ್ಧಿ ಶುಲ್ಕ ಪಾವತಿಸಿ, ಬೆಂಗಳೂರು ಅಭಿವೃದ್ಧಿಗೆ ಸಹಕರಿಸಿ"
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

'ಶಿವಸೇನಾ ಪುಂಡಾಟಿಕೆ ನಿಲ್ಲಿಸಲು ಕಠಿಣ ಕ್ರಮ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ರಾಜ್ಯದಲ್ಲಿ ಶಿವಸೇನಾದವರ ಪುಂಡಾಟಿಕೆ ನಿಲ್ಲಿಸಲು ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಶನಿವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಶಿವಸೇನಾದವರು ನಿರಂತರವಾಗಿ ಪುಂಡಾಟಿಕೆ ನಡೆಸುತ್ತಿರುವುದನ್ನು ಗಮನಿಸಿದ್ದೇವೆ. ಕಠಿಣ ಕ್ರಮದ ಮೂಲಕ ಅದನ್ನು ನಿಲ್ಲಿಸಲೇಬೇಕಾಗಿದೆ. ಈ ನಿಟ್ಟಿನಲ್ಲಿ ಪೊಲೀಸ್ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗೆ ಸೂಚನೆ ಕೊಡಲಾಗಿದೆ' ಎಂದರು.

'ಬೆಳಗಾವಿಯಲ್ಲಿ ಬಹಳ ಜನ ಮರಾಠಿ ಭಾಷಿಗರಿದ್ದು ಅವರು ಶಾಂತಿ ಬಯಸುತ್ತಾರೆ. ಕೆಲವರು ಪುಂಡಾಟ ಮಾಡುತ್ತಿದ್ದಾರೆ. ಅಂಥವರನ್ನು ಮಟ್ಟ ಹಾಕಿ ಸರಿಯಾದ ಪಾಠ ಕಲಿಸಲಾಗುವುದು. ಆಗ ಮಾತ್ರ ಶಾಂತಿ ನೆಲೆಸಲು ಸಾಧ್ಯವಾಗುತ್ತದೆ' ಎಂದು ಹೇಳಿದರು.

'ಶಿವಸೇನಾ ಒಂದು ರಾಜಕೀಯ ಪಕ್ಷ. ಅದನ್ನು ನಿಷೇಧಿಸಲು ಕಾನೂನಿನಲ್ಲಿ ಅವಕಾಶ ಇದೆಯೋ, ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ಚರ್ಚಿಸಲಾಗುವುದು' ಎಂದು ಅವರು ಪ್ರತಿಕ್ರಿಯಿಸಿದರು.

ಬೆಳಗಾವಿ ಸೇರಿದಂತೆ ಗಡಿ ರಕ್ಷಣೆ ವಿಷಯದಲ್ಲಿ ರಾಜಿ ಇಲ್ಲ. ನೆಲ-ಜಲ ಸಂರಕ್ಷಣೆಗೆ ಯಾವುದೇ ಬೆಲೆ ತೆರಲು ಸರ್ಕಾರ ಸಿದ್ಧ
ಆರ್.ಅಶೋಕ, ಕಂದಾಯ ಸಚಿವ

ಟಿಕೆಟ್- ಅಭಿಪ್ರಾಯ ತಿಳಿಸಿದ್ದೇನೆ: 'ಬೆಳಗಾವಿ ಲೋಕಸಭಾ ಕ್ಷೇತ್ರದ ಉಪ ಚುನಾವಣೆ ಟಿಕೆಟ್ ವಿಷಯದಲ್ಲಿ ಚರ್ಚೆಯಾಗಿದೆ. ನಾನೂ ಆ ಸಮಿತಿಯಲ್ಲಿದ್ದು, ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಪಕ್ಷದ ಉಸ್ತುವಾರಿ ಅರುಣ್ ಸಿಂಗ್ ಅವರೊಂದಿಗೆ ಚರ್ಚಿಸಿದ್ದೇನೆ. ಯಾರಿಗೆ ಕೊಟ್ಟರೆ ಒಳ್ಳೆಯದು ಎನ್ನುವ ನಿಟ್ಟಿನಲ್ಲಿ ನನ್ನ ಅಭಿಪ್ರಾಯ ತಿಳಿಸಿದ್ದೇನೆ. ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗಿದೆ. ಹೈಕಮಾಂಡ್ ಯಾವ ತೀರ್ಮಾನ ಮಾಡಲಿದೆ ನೋಡೋಣ' ಎಂದು ಅಶೋಕ ಅವರು ಹೇಳಿದರು.

ನೈಜ ಜನನಾಯಕ, ನಿತ್ಯ ಸಚಿವ: ಎಚ್.ಎಂ. ರೇವಣ್ಣ

ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ನಡೆಸುತ್ತಿರುವ ವಿರಳ ಪಂಕ್ತಿಯ ಜನನಾಯಕರಲ್ಲಿ ಎಚ್ ಎಂ.ರೇವಣ್ಣ ಪ್ರಮುಖರು. ಎಪ್ಪತ್ತರ ದಶಕದಲ್ಲಿ ವಿದ್ಯಾರ್ಥಿ ನಾಯಕರಾಗಿ ದೇವರಾಜ ಅರಸು ಅವರ ಗಮನ ಸೆಳೆದರು. ಆ ದಿನಗಳಲ್ಲಿ ಸಾರ್ವಜನಿಕವಾಗಿ ಚರ್ಚೆಗೆ ಬರುತ್ತಿದ್ದ 'ಗರೀಬಿ ಹಠಾವೋ' ಘೋಷಣೆಯಿಂದ ಆಕರ್ಷಿತರಾಗಿ ಕಾಂಗ್ರೆಸ್ ನಾಯಕಿ ಇಂದಿರಾಗಾಂಧಿ ಅವರ ಅಭಿಮಾನಿಯಾದರು. ಇವರಿಬ್ಬರ ಪ್ರಭಾವ ರೇವಣ್ಣ ಅವರ ಸಾರ್ವಜನಿಕ ಬದುಕಿನಲ್ಲಿ ಮಹತ್ವದ್ದು. ದೇವರಾಜ ಅರಸರು ಪ್ರಾರಂಭ ಮಾಡಿದ್ದ ಹಿಂದುಳಿದ ವರ್ಗಗಳ ಸಬಲೀಕರಣ ಪ್ರಕ್ರಿಯೆಯನ್ನು ಒಂದು ಆಂದೋಲನದಂತೆ ಮುಂದುವರಿಸಿ ಹಿಂದುಳಿದ ವರ್ಗಗಳ ಕಾರ್ಯಕರ್ತರಲ್ಲಿ ಹೋರಾಟದ ಕಿಚ್ಚನ್ನು ಇಂದಿಗೂ ಉಳಿಸಿಕೊಂಡವರು ಎಚ್. ಎಂ.ರೇವಣ್ಣ.

ದೇವರಾಜ ಅರಸರ ಸಂಪರ್ಕಕ್ಕೆ ಬರುವ ಮೊದಲೇ ನಾಯಕತ್ವದ ಗುಣವನ್ನು ಪ್ರಕಟಸಿದ್ದವರು ಹೊಸಪೇಟೆ ಮಾಗಡಯ್ಯ ರೇವಣ್ಣ. ರಾಮನಗರ ಜಿಲ್ಲೆಯ ಮಾಗಡಿ ಪಟ್ಟಣಕ್ಕೆ ಹೊಂದಿಕೊಂಡ ಹೊಸಪೇಟೆಯ ಕೃಷಿಕ ಕುಟುಂಬದಲ್ಲಿ ಜನಿಸಿದ ಅವರು, ತಂದೆ ಮಾಗಡಯ್ಯ ಅವರಂತೆ ಪೈಲ್ವಾನರಾಗುವ ತರಬೇತಿಯನ್ನು ಬಾಲ್ಯದಿಂದಲೇ ಪಡೆದಿದ್ದರು. ತಂದೆಗೆ ಮಗನನ್ನು ದೈಹಿಕವಾಗಿ ಸದೃಢನನ್ನಾಗಿ ಮಾಡುವ ಹೆಬ್ಬಯಕೆ. ತಾಯಿಗೆ ಮಗನನ್ನು ಜನನಾಯಕನನ್ನಾಗಿ ರೂಪಿಸುವ ಸಂಕಲ್ಪ. ರೇವಣ್ಣ ಹೆತ್ತವರ ಆಸೆಯಂತೆ ಬಲಿಷ್ಠರಾದರು. ಯಶಸ್ವಿ ಜನನಾಯಕರಾಗಿಯೂ ರೂಪುಗೊಂಡರು.

ಕಳೆದ ಶತಮಾನದ ಎಪ್ಪತ್ತರ ದಶಕ ನಾಡಿನಲ್ಲಿ ಅವಕಾಶ ವಂಚಿತರಾದವರು ಸ್ವಾತಂತ್ರ್ಯದ ಆಶಯವಾದ ಸಮಾನ ಅವಕಾಶಗಳನ್ನು ಪಡೆದುಕೊಳ್ಳುವುದಕ್ಕೆ ಜಾಗೃತರಾದ ಕಾಲಘಟ್ಟ. ರಾಜಕೀಯ ಕ್ಷೇತ್ರದಲ್ಲಿ ಇಂಥ ಜಾಗೃತಿಯನ್ನು ದೇವರಾಜ ಅರಸರು ಪ್ರಾರಂಭಿಸಿದ್ದರು. ಆಗ ಮೂಡಿದ ಜಾಗೃತಿಯಿಂದ ರೇವಣ್ಣನವರು ನಾಯಕತ್ವದ ಲಕ್ಷಣ ಪ್ರದರ್ಶಿಸಿ ಆ ಕಾಲದ ಜನಪ್ರತಿನಿಧಿಗಳ ಗಮನ ಸೆಳೆದರು. ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಘಟಕದಲ್ಲಿ ಶ್ರಮಿಸಿದರು. ಯುವ ಕಾಂಗ್ರೆಸ್ ಮುಖಂಡರಾದರು. ಸಂಘಟನಾ ಸಾಮರ್ಥ್ಯ ಬೆಳೆಸಿಕೊಂಡರು. ಕೆಳಹಂತದಲ್ಲಿ ಜವಾಬ್ದಾರಿಗಳನ್ನು ನಿರ್ವಹಿಸುತ್ತ ಎಐಸಿಸಿ ಸದಸ್ಯರಾಗುವವರೆಗೂ ಮುನ್ನಡೆದರು.

ರಾಜಕೀಯ ಪ್ರವೇಶ: ಎಚ್.ಎಂ.ರೇವಣ್ಣ ಅವರು ಚುನಾವಣಾ ರಾಜಕೀಯಕ್ಕೆ ಪ್ರವೇಶಿಸಿದ್ದು ಅನಿರೀಕ್ಷಿತವಾಗಿ, ಅದು ಮುನ್ಸಿಪಲ್ ಚುನಾವಣೆಯ ಮೂಲಕ. ಆ ಚುನಾವಣೆಯಲ್ಲಿ ಗೆದ್ದು ಮಾಗಡಿ ಪುರಸಭಾ ಅಧ್ಯಕ್ಷರಾದರು. ನಂತರ 1989ರಲ್ಲಿ ಮೊದಲ ಬಾರಿಗೆ ವಿಧಾನಸಭಾ ಸದಸ್ಯರಾಗಿ ಚುನಾಯಿತರಾದರು. ಆಗ, ಸಾರ್ವಜನಿಕ ಸಭೆಯಲ್ಲಿ 'ಹುಟ್ಟೂರಿಗೆ ಹಾಗೂ ಹುಟ್ಟು ತಾಲೂಕಿಗೆ ಹೆಸರು ತರುವ ಕೆಲಸ ಮಾಡುತ್ತೇನೆ. ಹುಟ್ಟೂರಿನಲ್ಲಿ ಕಿಮ್ಮತ್ತಿಲ್ಲದಿದ್ದರೆ ಇಡೀ ರಾಜ್ಯದಲ್ಲಿ ಕಿಮ್ಮತ್ತಿರುವುದಿಲ್ಲ' ಎಂದು ಹೇಳಿದ್ದರು. ಅಂತೆಯೇ ಮೊದಲಿನಿಂದಲೂ ನಂಬಿಕೊಂಡು ಕೆಲಸ ಮಾಡುತ್ತ ನುಡಿದಂತೆ ನಡೆದು ಜನ ಮನ್ನಣೆ ಗಳಿಸಿದವರು. 1999 ರಲ್ಲಿ ಮಾಗಡಿ ವಿಧಾನಸಭಾ ಕ್ಷೇತ್ರದಿಂದ ಪುನರಾಯ್ಕೆಯಾದ ರೇವಣ್ಣ 2014 ರಿಂದ 6 ವರ್ಷಗಳ ಕಾಲ ವಿಧಾನ ಪರಿಷತ್ ಸದಸ್ಯರಾಗಿದ್ದರು.



ಎಂಟರ ನಂಟು

ವಿಶೇಷ ಸಂಗತಿ ಎಂದರೆ, ರೇವಣ್ಣನವರಿಗೂ ಎಂಟರ ಸಂಖ್ಯೆಗೆ ಬಿಡಿಸಲಾರದ ನಂಟು. ಅವರ ಹುಟ್ಟಿದ ದಿನಾಂಕ ಎಂಟು. ಪುರಸಭೆ ಅಧ್ಯಕ್ಷರಾಗಿದ್ದು ಎಂಟು ತಿಂಗಳ ಅವಧಿ. ಮೊದಲ ಬಾರಿಗೆ ಕೃಷಿ ಸಚಿವರಾಗಿ ವೀರಪ್ಪ ಮೊಯಿಲಿ ಅವರ ಸಂಪುಟದಲ್ಲಿದ್ದುದು ಎಂಟು ತಿಂಗಳ ಅವಧಿಗೆ. ಎರಡನೆ ಬಾರಿಗೆ ರೇಷ್ಮೆ, ಮೂಲಸೌಕರ್ಯ ಹಾಗೂ ವಿಮಾನಯಾನ ಖಾತೆಯ ಮಂತ್ರಿಯಾಗಿ ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿದ್ದದ್ದು ಎಂಟು ತಿಂಗಳ ಅವಧಿಗೆ.

ಇನ್ನು ಮೂರನೇ ಬಾರಿ, ಸಿದ್ದರಾಮಯ್ಯನವರ ಸಂಪುಟದಲ್ಲಿ ಸಾರಿಗೆ ಸಚಿವರಾಗಿದ್ದುದು ಎಂಟು ತಿಂಗಳ ಅವಧಿ. ಹೀಗಾಗಿ ರೇವಣ್ಣ ಅವರಿಗೆ ಎಂಟರಲ್ಲಿ ಏನೋ ನಂಟಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ರೇವಣ್ಣ ಮೊದಲ ಬಾರಿಗೆ 1992 ರಲ್ಲಿ ಎಂ. ವೀರಪ್ಪ ಮೊಯಿಲಿ ಅವರ ಸಂಪುಟದಲ್ಲಿ ಕೃಷಿ ಸಚಿವರಾದರು. ಆಗ ಕೃಷಿ ಇಲಾಖೆಯಲ್ಲಿ ಸಿಬ್ಬಂದಿಯ ಸೇವಾ ವ್ಯವಸ್ಥೆಯು ಸುಧಾರಣೆ ಕಂಡಿತು. ಗ್ರಾಮೀಣ ಭಾಗದಲ್ಲಿ ಕೆಲಸ ಮಾಡಲು ಹಿಂಜರಿಯುತ್ತಿದ್ದ ನೌಕರ ಶಾಹಿ ಗ್ರಾಮಗಳಲ್ಲಿ ಸೇವೆ ಸಲ್ಲಿಸುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡರು. ಕೇವಲ ಎಂಟೇ ತಿಂಗಳ ಅವಧಿಯಲ್ಲಿ ಕೃಷಿ ಇಲಾಖೆಯನ್ನು ಸಾರ್ವಜನಿಕ ಸೇವೆಗೆ ಅಣಿಗೊಳಿಸಿದ್ದು, ಈಗಲೂ ಕೃಷಿ ಇಲಾಖೆಯಲ್ಲಿ ದಾಖಲೆಯಾಗಿ ಉಳಿದಿದೆ.

ನಂತರ, ಎಚ್.ಎಂ.ರೇವಣ್ಣ ಎಸ್.ಎಂ.ಕೃಷ್ಣ ಅವರ ಸರ್ಕಾರದಲ್ಲಿ ರೇಷ್ಮೆ, ಜವಳಿ, ಮೂಲ ಸೌಕರ್ಯ ಮತ್ತು ವಿಮಾನಯಾನ ಖಾತೆ ಸಚಿವರಾದರು. ಆಗ, ರೇಷ್ಮೆ ಬೆಳೆಗಾರರದು ಸಂಕಷ್ಟದ ಬದುಕು. ಒಳ್ಳೆಯ ಬೆಲೆ ಕನಸಿನ ಮಾತಾಗಿತ್ತು. ಬೆಂಬಲ ಬೆಲೆ ದೊರೆಯುತ್ತಿರಲಿಲ್ಲ. ಆದರೆ, ಸಚಿವರಾದ ಕೇವಲ ಎರಡು ತಿಂಗಳ ಅವಧಿಯಲ್ಲೇ ರೇಷ್ಮೆ ಬೆಳೆಗಾರರಿಗೂ ಬೆಂಬಲ ಬೆಲೆ ಸಿಗುವಂತೆ ಕ್ರಮ ಕೈಗೊಂಡು, ರೇಷ್ಮೆ ಬೆಳೆಗಾರರ ಮೊಗದಲ್ಲಿ ಸಂತಸ ತಂದರು. ಜವಳಿ ನೀತಿಯನ್ನು ಜಾರಿಗೆ ತಂದು ಜವಳಿ ಉದ್ಯಮವನ್ನು ಉತ್ತಮ ಸ್ಥಿತಿಗೆ ತಂದರು. ಚೀನಾ ದೇಶದಿಂದ ಆಮದಾಗುತ್ತಿದ್ದ ರೇಷ್ಮೆಯನ್ನು ತಡೆದು ದೇಶಿಯ ರೇಷ್ಮೆ ಬೆಳೆಗೆ ಮಹತ್ವ ನೀಡಿದರು. ರೇಷ್ಮೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ 10 ಸಾವಿರ ದಿನಗೂಲಿ ನೌಕರರನ್ನು ಕೆ.ಎಸ್.ಶರ್ಮಾ ಅವರ ನೇತೃತ್ವದಲ್ಲಿ ಕಾಯಂಗೊಳಿಸಿದರು. ವಿಮಾನಯಾನ ಸಚಿವರಾಗಿ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ 'ಕ್ಲಿಯರೆನ್ಸ್' ನೀಡಿದವರು.

ಅಭಿನಂದನಾ ಸಮಾರಂಭ ಇಂದು
ಸ್ಥಳ: ಪೂರ್ಣಿಮಾ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್, ಮೈಸೂರು ರಸ್ತೆ, ಬೆಂಗಳೂರು.
ಸಮಯ: ಬೆಳಿಗ್ಗೆ 10 ಗಂಟೆ.

ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರದಲ್ಲಿ ಎಚ್.ಎಂ.ರೇವಣ್ಣ ಸಾರಿಗೆ ಸಚಿವರಾಗಿದ್ದರು. ಅವರ ಅವಧಿಯಲ್ಲಿ ಕೆಎಸ್‌ಆರ್‌ಟಿಸಿ ಹಾಗೂ ಬಿಎಂಟಿಸಿ ಹಲವು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಪುರಸ್ಕಾರಗಳಿಗೆ ಪಾತ್ರವಾಯಿತು. ಬೆಂಗಳೂರಿನಲ್ಲಿ ವಾಯುಮಾಲಿನ್ಯ ತಗ್ಗಿಸುವ 'ಲೆಸ್ ಟ್ರಾಫಿಕ್ ಡೇ' ಪ್ರಯೋಗ ಯಶಸ್ವಿಯಾಗಿ ನಡೆಯಿತು. ಬಸ್‌ಗಳಲ್ಲಿ ಮಹಿಳೆಯರಿಗಾಗಿ 'ಪಿಂಕ್ ಸೀಟ್' ಅಳವಡಿಸಲು ಕ್ರಮ ಕೈಗೊಳ್ಳಲಾಗಿತ್ತು. ಜೊತೆಗೆ ಗೋಲ್ಡನ್ ಅವರ್ ಅಂಬುಲೆನ್ಸ್ ಟ್ರಾನ್ಸಿಟ್ ಕ್ಲಿನಿಕ್ ಮೊದಲಾದ ಯೋಜನೆಗಳು ಜಾರಿಗೊಳ್ಳುವುದರೊಂದಿಗೆ ಸಾರಿಗೆ ಇಲಾಖೆಯನ್ನು ಪಾರದರ್ಶಕವಾಗಿ ರೂಪಿಸಲಾಯಿತು.

ಸಾಂಸ್ಕೃತಿಕ ರಾಯಭಾರಿ: ಕುರುಬ ಸಮುದಾಯದ ಸಾಂಸ್ಕೃತಿಕ ಇತಿಹಾಸವನ್ನು ದಾಖಲಿಸಿದ ಬೃಹತ್ ಮಾಲೆಯ ಪ್ರೇರಕ ಶಕ್ತಿ ರೇವಣ್ಣನವರು. ಅವರ ಸಾಂಸ್ಕೃತಿಕ ಕಾಳಜಿ, ಆಸಕ್ತಿ ಮತ್ತು ಬದ್ಧತೆ ಬೆರಗುಗೊಳಿಸುವಂತಹದ್ದು. ಕುರುಬರ ಸಂಸ್ಕೃತಿ ದರ್ಶನ ಬೃಹತ್ ಪ್ರಕಟಣಾ ಮಾಲೆಯನ್ನು ಪ್ರಕಟಿಸಲು ಕುರುಬರ ಸಾಂಸ್ಕೃತಿಕ ಪರಿಷತ್ತು ಎಂಬ ಪ್ರತಿಷ್ಠಾನ ಇದ್ದು ಅದರ ಅಧ್ಯಕ್ಷರಾಗಿ ಎಚ್.ಎಂ.ರೇವಣ್ಣ ಅವರೇ ಆಗಿದ್ದಾರೆ. ಆ ಪ್ರತಿಷ್ಠಾನದ ಮೂಲಕವೇ ಬೃಹತ್ ಸಂಪುಟಗಳು ಪ್ರಕಟವಾಗಿವೆ. 14 ಸಂಪುಟಗಳಲ್ಲಿ ಹೊರಬಂದ ಈ ಸಂಪುಟಗಳು ದೇಶದಲ್ಲಿ ಸಮುದಾಯವೊಂದರ ಬಗ್ಗೆ ನಡೆದ ಮೊದಲ ಸಮಗ್ರ ಅಧ್ಯಯನವಾಗಿದೆ.

ಕಾಗಿನೆಲೆಯ ಕನಕಗುರು ಪೀಠದ ಸ್ಥಾಪನೆ, ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರದ ಅಭಿವೃದ್ಧಿ, ಸಂಗೊಳ್ಳಿ ರಾಯಣ್ಣ ಪ್ರಾಧಿಕಾರ ಸ್ಥಾಪನೆ, ವಿಧಾನಸೌಧ ಮತ್ತು ಶಾಸಕರ ಭವನದ ನಡುವೆ ಕನಕದಾಸರ 12 ಅಡಿಯ ಪ್ರತಿಮೆ ಸ್ಥಾಪನೆಯ ಹಿಂದೆ ರೇವಣ್ಣನವರ ಕನಸು ಮತ್ತು ಶ್ರಮವಿದೆ. ರಾಜ್ಯ ಯಾವುದೇ ಮೂಲೆಯಲ್ಲಿ ಕುರುಬ ಸಮುದಾಯ, ಹಿಂದುಳಿದ ವರ್ಗದವರ ಯಾವುದೇ ಕಾರ್ಯಕ್ರಮ ಇರಲಿ, ಅಲ್ಲಿ ಹಾಜರಾಗಿ ಒಗ್ಗೂಡಿಕೆಯ ಸಂದೇಶ ನೀಡಿ ಬರುತ್ತಾರೆ ರೇವಣ್ಣ.

ಜನಪರ ಚಿಂತನೆ, ಜನಪರ ಧ್ವನಿ ಹಾಗೂ ಜನಪರ ಹೋರಾಟ ಮಾಡುತ್ತ ಬೆಳೆದ ಸಿದ್ದರಾಮಯ್ಯನವರ ಕಾಂಗ್ರೆಸ್ ಪಕ್ಷದ ಸೇರ್ಪಡೆ ಮತ್ತು ಮುಖ್ಯಮಂತ್ರಿ ಆಗುವುದರಲ್ಲಿ ರೇವಣ್ಣನವರ ಕೊಡುಗೆ ಅಪಾರ.

ಅಜಾತ ಶತ್ರು: ಎಚ್.ಎಂ.ರೇವಣ್ಣ ಕೇವಲ ಕುರುಬ ಸಮಾಜದ ನಾಯಕರಲ್ಲ. ಹಿಂದುಳಿದ, ಅಲ್ಪಸಂಖ್ಯಾತ, ದಲಿತ ಸಮುದಾಯದ ನಾಯಕ. ಹಾಗಂತ ಮೇಲ್ಜಾತಿಯವರ ವಿರೋಧಿಯಲ್ಲ. ಮೇಲ್ಜಾತಿಯ ಬಡವರ ಬಗ್ಗೆಯೂ ಅವರು ಅಪಾರ ಕಾಳಜಿ ಹೊಂದಿದ್ದಾರೆ.

‘ಚುನಾವಣೆಯ ಬಳಿಕ ಬಿಎಸ್‌ವೈ ಬದಲಾವಣೆ ನಿಶ್ಚಿತ’



ಬಸನಗೌಡ ಪಾಟೀಲ ಯತ್ನಾಳ

ವಿಜಯಪುರ: ‘ಪಶ್ಚಿಮ ಬಂಗಾಳ ಸೇರಿದಂತೆ ಪಂಚರಾಜ್ಯಗಳ ಚುನಾವಣೆ ಬಳಿಕ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬದಲಾವಣೆ ಖಚಿತ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಉತ್ತರಾಖಂಡದಲ್ಲಿ ಯಾವ ರೀತಿ ಮುಖ್ಯಮಂತ್ರಿ ಬದಲಾವಣೆ ಮಾಡಲಾಗಿದೆಯೋ ಅದೇ ರೀತಿ ಕರ್ನಾಟಕ ಹಾಗೂ ಹರಿಯಾಣ ಸಿ.ಎಂ ಬದಲಾವಣೆ ಆಗಲಿದ್ದಾರೆ ಎಂದು ಭವಿಷ್ಯ ನುಡಿದರು.

ಭ್ರಷ್ಟಾಚಾರ, ಕುಟುಂಬ ರಾಜಕಾರಣದಲ್ಲಿ ಮುಳುಗಿರುವ ಬಿಎಸ್‌ವೈ ಅವರನ್ನು ಮುಂದಿಟ್ಟುಕೊಂಡು ಮುಂದಿನ ವಿಧಾನಸಭೆ ಚುನಾವಣೆಗೆ ಹೋಗಲು ಸಾಧ್ಯವಿಲ್ಲ. ದಕ್ಷಿಣ ಭಾರತದಲ್ಲಿ ಬಿಜೆಪಿಯ ಕೊನೆಯ ಮುಖ್ಯಮಂತ್ರಿ ಇವರೊಬ್ಬರೇ ಎಂದಾಗಬಾರದು. ಇನ್ನೂ ಹಲವರು ಆಗಬೇಕಾಗಿದೆ. ಬಿಸ್‌ವೈ ಅವರಿಗೆ ಶಾಸಕಾಂಗ ಪಕ್ಷದ ಸಭೆ ಕರೆಯುವ ಇಚ್ಛೆ ಇಲ್ಲ, ಅವರ ಉದ್ದೇಶವೇ ಬೇರೆಯಾಗಿದೆ. ಅಧಿಕಾರಕ್ಕೆ ತಂದ ಬಿಜೆಪಿ ಶಾಸಕರನ್ನು ಕಡೆಗಣಿಸಿ, ಬಿಜೆಪಿಯ 38, ಕಾಂಗ್ರೆಸ್ 40 ಹಾಗೂ ಜೆಡಿಎಸ್ ಶಾಸಕರಿಗೆ ಮಾತ್ರ ಅನುದಾನ ನೀಡಿದ್ದಾರೆ ಎಂದು ಆರೋಪಿಸಿದರು.

ಎಐಸಿಸಿ ಪ್ರಾದೇಶಿಕ ಸಂಯೋಜಕರಾಗಿ ರಮೇಶ್ ನೇಮಕ



ಬೆಂಗಳೂರು: ಎಐಸಿಸಿ ದಕ್ಷಿಣ ಭಾರತ ಪ್ರಾದೇಶಿಕ ಸಂಯೋಜಕರಾಗಿ ರಾಜ್ಯದ ಡಿ. ರಮೇಶ್ ಅವರನ್ನು ನೇಮಿಸಲಾಗಿದೆ.

ಎಐಸಿಸಿ ಅಧ್ಯಕ್ಷೆ ಸೋನಿಯಾ ಗಾಂಧಿಯವರ ನಿರ್ದೇಶನದಂತೆ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು ರಮೇಶ್ ಅವರನ್ನು ನೇಮಿಸಿದ್ದಾರೆ. 31 ವರ್ಷಗಳಿಂದ ಕೆಪಿಸಿಸಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ರಮೇಶ್, ಪಕ್ಷದ ಕಾರ್ಮಿಕ ಘಟಕದಲ್ಲಿ ವಿವಿಧ ಹುದ್ದೆಗಳನ್ನು ನಿರ್ವಹಿಸಿದ್ದಾರೆ. ವಿವಿಧ ರಾಜ್ಯಗಳಲ್ಲಿ ಪಕ್ಷ ಸಂಘಟನೆಗಾಗಿ ಶ್ರಮಿಸಿದ್ದಾರೆ. ಪಕ್ಷದಲ್ಲಿನ ಅವರ ಸೇವೆ ಪರಿಗಣಿಸಿ ಪ್ರಾದೇಶಿಕ ಸಂಯೋಜಕರಾಗಿ ನೇಮಿಸಲಾಗಿದೆ ಎಂದು ಕಾಂಗ್ರೆಸ್ ಹೇಳಿದೆ.

ಧಿಕ್ಕಾರ ಕೂಗಿದ ಕಾರ್ಯಕರ್ತನಿಗೆ ಕಪಾಳಮೋಕ್ಷ

ಪ್ರಜಾವಾಣಿ ವಾರ್ತೆ

ಹರಪನಹಳ್ಳಿ: ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ ಅವರು ಶನಿವಾರ ಪಟ್ಟಣಕ್ಕೆ ಭೇಟಿ ನೀಡಿದ್ದ ವೇಳೆ ತಮ್ಮ ವಿರುದ್ಧ ಕೆಲವರು ಧಿಕ್ಕಾರ ಕೂಗಿದ್ದರಿಂದ ಸಿಟ್ಟಿಗೆದ್ದು ಕಾರ್ಯಕರ್ತರೊಬ್ಬರಿಗೆ ಕಪಾಳಮೋಕ್ಷ ಮಾಡಿದರು.

ಅಧ್ಯಕ್ಷರ ಬರುವಿಕೆಗೆ ತಾಲ್ಲೂಕು ಪಂಚಾಯಿತಿ ಮುಂಭಾಗದ ರಸ್ತೆಯಲ್ಲಿ ತಾಲ್ಲೂಕು ಯುವ ಘಟಕದ ಪದಾಧಿಕಾರಿಗಳು ಕಾದು ನಿಂತಿದ್ದರು. ಯುವ ಘಟಕದ ಅಧ್ಯಕ್ಷ ಮತ್ತೂರು ಬಸವರಾಜ್ ಮತ್ತು ಚಿಗಟೇರಿ ಬ್ಲಾಕ್ ಯುವ ಘಟಕದ ಅಧ್ಯಕ್ಷ ಶಿವಕುಮಾರ್, ‘ಪ್ರವಾಸಿ ಮಂದಿರದಲ್ಲಿ ಸಭೆ ನಿಗದಿಪಡಿಸಲಾಗಿದೆ. ಅಲ್ಲಿಗೆ ಬನ್ನಿ’ ಎಂದು ರಕ್ಷಾ ರಾಮಪ್ಪ ಅವರನ್ನು ಆಹ್ವಾನಿಸಿದರು. ಆದರೆ, ರಕ್ಷಾ ರಾಮಯ್ಯ, ‘ಹೊಸಪೇಟೆ ಕಾರ್ಯಕ್ರಮಕ್ಕೆ ತೆರಳಲು ಈಗಾಗಲೇ ತಡವಾಗಿದೆ’ ಎಂದು ಹೇಳಿದರು. ಆಗ ಅವರ ವಿರುದ್ಧ ಕೆಲವರು ಧಿಕ್ಕಾರ ಕೂಗಿದರು. ತಕ್ಷಣವೇ ರಕ್ಷಾ ರಾಮಯ್ಯ ಅವರು ಧಿಕ್ಕಾರ ಕೂಗಿದವರ ಪೈಕಿ ಒಬ್ಬನ ಕೆನ್ನೆಗೆ ಏಟು ನೀಡಿ ಅಲ್ಲಿಂದ ತೆರಳಿದರು.

ಮತ್ತೂರು ಬಸವರಾಜ್, ‘ಧಿಕ್ಕಾರ ಕೂಗಿದವರು ಯಾರೆಂಬುದು ಗೊತ್ತಿಲ್ಲ. ಅವರು ಯುವ ಘಟಕದವರಲ್ಲ. ರಾಜ್ಯ ಘಟಕದ ಅಧ್ಯಕ್ಷರ ಭೇಟಿ ವೇಳೆ ನಡೆದ ಘಟನೆಯಿಂದ ಬೇಸರವಾಗಿದೆ’ ಎಂದು ಪ್ರತಿಕ್ರಿಯಿಸಿದರು.

ಕಮ್ಮಸಂದ್ರ ಗ್ರಾಮದಲ್ಲಿ ‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ • ಸಾರ್ವಜನಿಕರಿಂದ ಕುಂದುಕೊರತೆಯ 97 ಅರ್ಜಿ ಸಲ್ಲಿಕೆ

ಜನರಿಗೆ ತಲುಪದ ಸವಲತ್ತು: ಡಿ.ಸಿ ತರಾಟೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧವಾ ವೇತನ, ವೃದ್ಧಾಪ್ಯ ವೇತನ ಸೌಲಭ್ಯ ಗ್ರಾಮದ ಅರ್ಧದಷ್ಟು ಫಲಾನುಭವಿಗಳಿಗೂ ತಲುಪಿಲ್ಲ ಏಕೆ ಎಂದು ಕಂದಾಯ ಇಲಾಖೆ ಅಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಶನಿವಾರ ತರಾಟೆಗೆ ತೆಗೆದುಕೊಂಡರು.

‘ಜಿಲ್ಲಾಧಿಕಾರಿ ನಡೆ ಹಳ್ಳಿ ಕಡೆ’ ಕಾರ್ಯಕ್ರಮದ ಅಂಗವಾಗಿ ಬೆಂಗಳೂರು ಉತ್ತರ ತಾಲ್ಲೂಕಿನ ಕಮ್ಮಸಂದ್ರ ಗ್ರಾಮಕ್ಕೆ ಭೇಟಿ ನೀಡಿದ್ದ ಜಿಲ್ಲಾಧಿಕಾರಿ, ‘ಗ್ರಾಮದಲ್ಲಿ 150ರಿಂದ 200 ಮನೆಗಳಿವೆ. ಕುಂದುಕೊರತೆಯ 97 ಅರ್ಜಿಗಳು ಬಂದಿವೆ. ಇವುಗಳನ್ನು ನೋಡಿದರೆ ನಿಮ್ಮ ಕಾರ್ಯವೈಖರಿ ಅರ್ಥ ವಾಗುತ್ತದೆ. ಇವುಗಳ ವಿಲೇವಾರಿಗಾಗಿ ಕೈಗೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿ ಸಲ್ಲಿಸಬೇಕು’ ಎಂದು ಸೂಚಿಸಿದರು.

‘ಮನೆ ಮನೆಗೆ ಅಥವಾ ಬೀದಿಗಳಿಗೆ ತೆರಳಿ ಸವಲತ್ತುಗಳ ಬಗ್ಗೆ ತಿಳಿಸಿ ಅರ್ಹ ಫಲಾನುಭವಿಗಳನ್ನು ಗುರುತಿಸಲಾಗಿದೆಯೇ, ಗ್ರಾಮಸ್ಥರಿಗೆ ಸವಲತ್ತು ತಲುಪಿಸಿರುವ ಬಗ್ಗೆ ಅಂಕಿ–ಅಂಶ ತಿಳಿಸಿ’ ಎಂದು ಪ್ರಶ್ನಿಸಿದರು.

ಕದರಹಳ್ಳಿಯಲ್ಲಿ ನರೇಗಾ ಅಡಿಯಲ್ಲಿ ಸ್ಮಶಾನ ನಿರ್ಮಿಸಲು ಜಾಗ ನೀಡಬೇಕು. ಕಮ್ಮಸಂದ್ರದಲ್ಲಿ ನರೇಗಾ ಯೋಜನೆಯಡಿ ಆವರಣ ಗೋಡೆ ನಿರ್ಮಿಸಲು ಕೂಡಲೇ ಕ್ರಮ ಕೈಗೊಳ್ಳಬೇಕು. ಹೆಚ್ಚುವರಿ ಶಾಲಾ ಕಟ್ಟಡ ನಿರ್ಮಾಣಕ್ಕೆ ಜಾಗ ಗುರುತಿಸಬೇಕು ಎಂದು ತಹಶೀಲ್ದಾರ್‌ಗೆ ಸೂಚನೆ ನೀಡಿದರು.

ಪಶು ಆಸ್ಪತ್ರೆ ನಿರ್ಮಾಣಕ್ಕೆ ಜಾಗ ಒದಗಿಸುವಂತೆ ಗ್ರಾಮಸ್ಥರು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ‘ಸೂಕ್ತ ಜಾಗ ಗುರುತಿಸಿ ಮಂಜೂರಾತಿಗೆ ಕ್ರಮ ಕೈಗೊಳ್ಳಬೇಕು’ ಎಂದು ತಿಳಿಸಿದರು.

‘ರೈತರು ತಮ್ಮ ತಾಕುಗಳ ಬಗ್ಗೆ ಫ್ರೂಟ್ಸ್ ಪೋರ್ಟಲ್‌ನಲ್ಲಿ ನೋಂದಾಯಿಸಲು ಆಧಾರ್ ಮತ್ತು ಬ್ಯಾಂಕ್ ಖಾತೆ ವಿವರ ಜೋಡಣೆ ಮಾಡಿಸಿಕೊಳ್ಳಬೇಕು. ಅದಕ್ಕೆ ಬೇಕಿರುವ ಎಲ್ಲಾ ನೆರವನ್ನೂ ನೀಡಬೇಕು’ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಗ್ರಾಮದ ಕೆಲವರಿಗೆ ಭಾಗ್ಯಲಕ್ಷ್ಮೀ ಬಾಂಡ್‌ಗಳನ್ನು ವಿತರಿಸಲಾಯಿತು.

ಯಲಹಂಕ ಶಾಸಕ ಎಸ್‌.ಆರ್‌. ವಿಶ್ವನಾಥ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಜಿ.ಎ. ಶ್ರೀನಿವಾಸ್, ಭೂದಾಖಲೆಗಳ ಉಪ ನಿರ್ದೇಶಕಿ ಕುಸುಮಾ, ಕೃಷಿ ಜಂಟಿ ನಿರ್ದೇಶಕ ಜಯಸ್ವಾಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ, ಉತ್ತರ ತಾಲ್ಲೂಕಿನ ತಹಸೀಲ್ದಾರ್ ಬಾಲಕೃಷ್ಣ ಇದ್ದರು.



ಕಮ್ಮಸಂದ್ರ ಗ್ರಾಮದಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದ ಜಿಲ್ಲಾಧಿಕಾರಿ ಜೆ.ಮಂಜುನಾಥ್

ಸಮಸ್ಯೆಗಳ ಪಟ್ಟಿ ನೀಡಿದ ಗ್ರಾಮಸ್ಥರು

ಯಲಹಂಕ: 60 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ ಭೂಮಿಗೆ ಪೋಡಿ ಆಗಿಲ್ಲ, ನೆನಗುದಿಗೆ ಬಿದ್ದಿರುವ ರೈಲ್ವೆ ಸುರಂಗ ಮಾರ್ಗ, ಇ-ಖಾತಾ ಬಾಕಿ ಸೇರಿ ಹಲವು ಸಮಸ್ಯೆಗಳ ಪಟ್ಟಿಯನ್ನು ಗ್ರಾಮಸ್ಥರು ಜಾಲಾ ಹೋಬಳಿ ಗಡೇನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ‘ಜಿಲ್ಲಾಧಿಕಾರಿಗಳ ನಡೆ-ಹಳ್ಳಿಯ ಕಡೆ’ ಕಾರ್ಯಕ್ರಮದಲ್ಲಿ ಅಧಿಕಾರಿಗಳಿಗೆ ನೀಡಿದರು.

ಸರ್ಕಾರಿ ಜಾಗದಲ್ಲಿ ಜೀವನೋಪಾಯಕ್ಕಾಗಿ ಉಳುಮೆ ಮಾಡಿಕೊಂಡಿದ್ದವರಿಗೆ ಸಾಗುವಳಿ ಚೀಟಿ, ಪಹಣಿ ನೀಡಿದ್ದು, ಪೋಡಿ ಮಾಡಿಕೊಡುವ ಬಗ್ಗೆ ದಾಖಲೆಗಳ ನೈಜತೆ ಪರಿಶೀಲಿಸಲು ಜಿಲ್ಲಾಧಿಕಾರಿಗಳ ಸಮಿತಿಗೆ ಸಲ್ಲಿಸಿ ವಿಲೇವಾರಿ ಮಾಡಲಾಗುವುದು ಎಂದು ಉಪವಿಭಾಗಾಧಿಕಾರಿ ಕೆ.ರಂಗನಾಥ್ ತಿಳಿಸಿದರು.

ಶಾಸಕ ಕೃಷ್ಣಬೈರೇಗೌಡ, ‘20 ವರ್ಷಗಳಿಂದ ಸರ್ಕಾರಿ ಜಾಗಗಳಲ್ಲಿ ಮನೆ ಕಟ್ಟಿಕೊಂಡಿರುವ ಬಡಜನರಿಗೆ ಹಕ್ಕುಪತ್ರ ಕೊಡುವುದನ್ನು ನಿಲ್ಲಿಸಲಾಗಿದೆ. ದುರುಪಯೋಗದ ಕಾರಣ ನೀಡಿ ಶೇ 90ರಷ್ಟು ಜನರಿಗೆ ಅನನುಕೂಲ ಮಾಡಲಾಗುತ್ತಿದೆ. ಹಣ ಕೊಟ್ಟವರಿಗೆ ಅಧಿಕಾರಿಗಳು ಹಕ್ಕುಪತ್ರ ನೀಡುತ್ತಿದ್ದಾರೆ’ ಎಂದು ದೂರಿದರು.

‘ಕೂಡಲೇ ಅನ್ಯಾಯ ತಡೆಯದಿದ್ದರೆ ಬೀದಿಗಿಳಿದು ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ತಹಶೀಲ್ದಾರ್ ಕೆ.ನರಸಿಂಹಮೂರ್ತಿ, ನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಮರಿಸ್ವಾಮಿ, ಸದಸ್ಯ ವೆಂಕಟೇಶ್, ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ ಹಂಸವೇಣಿ ಮಂಜುನಾಥ್, ಗ್ರಾಮ ಪಂಚಾಯಿತಿ ಅಧ್ಯಕ್ಷೆ ರಜನಿ ಪ್ರಕಾಶ್, ಉಪಾಧ್ಯಕ್ಷ ಕುದುರೆಗೆರೆ ಕೃಷ್ಣಮೂರ್ತಿ ಇದ್ದರು.

ಹಸಿರು ವಲಯದಲ್ಲಿ ನಿವೇಶನ: ತಡೆಯಲು ಸೂಚನೆ

‘ಹಸಿರು ವಲಯಕ್ಕೆ ಮೀಸಲಿಟ್ಟ ಜಾಗದಲ್ಲಿ ಅಕ್ರಮ ವಸತಿ ಬಡಾವಣೆಗಳನ್ನು ಅಭಿವೃದ್ಧಿಪಡಿಸಿ ಅಮಾಯಕರಿಗೆ ಮಾರಾಟ ಮಾಡಲಾಗುತ್ತಿದೆ ಎಂಬುದು ನನ್ನ ಗಮನಕ್ಕೆ ಬಂದಿದೆ. ಇದನ್ನು ತಡೆಯಲು ಕೈಗೊಂಡಿರುವ ಕ್ರಮಗಳೇನು’ ಎಂದು ಜಿಲ್ಲಾಧಿಕಾರಿ ಕೇಳಿದರು.

ಇದಕ್ಕೆ ಉತ್ತರಿಸಿದ ಅಧಿಕಾರಿಯೊಬ್ಬರು, ‘ಪೊಲೀಸ್ ಠಾಣೆಗೆ ದೂರು ನೀಡಲಾಗಿದೆ’ ಎಂದರು. ‘ದೂರು ಕೊಟ್ಟು ಸುಮ್ಮನಾದರೆ ಸಾಕೇ, ಈ ರೀತಿಯ ಉತ್ತರವನ್ನು ನಾನು ಸಹಿಸುವುದಿಲ್ಲ. ಅಮಾಯಕರಿಗೆ ಅನ್ಯಾಯವಾಗದಂತೆ ತಡೆಯಬೇಕು’ ಎಂದು ತಾಕೀತು ಮಾಡಿದರು.

ಲಕ್ಷ್ಮೀಪುರ ಗ್ರಾಮ ಪಂಚಾಯಿತಿ ಸುತ್ತಮುತ್ತ ಅಕ್ರಮ ಬಡಾವಣೆ ನಿರ್ಮಾಣಕ್ಕೆ ಕಡಿವಾಣ ಹಾಕಬೇಕು. ಇಡೀ ಜೀವಮಾನ ದುಡಿದು ಮಾಡಿರುವ ಉಳಿತಾಯವನ್ನು ಹೂಡಿ ಮೋಸ ಹೋಗುವುದನ್ನು ತಪ್ಪಿಸಬೇಕು. ಈ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು’ ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ಎಸಿಬಿ ತನಿಖೆ ರದ್ದುಪಡಿಸಲು ಹೈಕೋರ್ಟ್ ನಕಾರ

ಬೆಂಗಳೂರು: ಕೊಪ್ಪಳದ ಗ್ರಾಮೀಣ ಕುಡಿಯುವ ನೀರು ಯೋಜನೆ ಅಕ್ರಮಗಳ ಬಗ್ಗೆ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ನಡೆಸುತ್ತಿರುವ ತನಿಖೆ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಕೊಪ್ಪಳ ವಿಶೇಷ ನ್ಯಾಯಾಲಯ ನಡೆಸುತ್ತಿರುವ ವಿಚಾರಣೆ ಪ್ರಶ್ನಿಸಿ ಕೊಪ್ಪಳ ಜಿಲ್ಲಾ ಪಂಚಾಯಿತಿ ಎಂಜಿನಿಯರಿಂಗ್ ವಿಭಾಗದ ಎಂಜಿನಿಯರ್‌ಗಳು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

‘2013ರ ಸೆಪ್ಟೆಂಬರ್ 21ರಿಂದ 2014ರ ಫೆಬ್ರುವರಿ 6ರ ನಡುವೆ ಈ ಅಕ್ರಮ ನಡೆದಿದೆ. ಕಾಮಗಾರಿ ನಿರ್ವಹಿಸದೆ ಮತ್ತು ಪರಿಶೀಲನೆ ನಡೆಸದೆ ಬಿಲ್ ಪಾವತಿಸಲಾಗಿದೆ. ಅಳತೆ ಪುಸ್ತಕದಲ್ಲಿ ನಮೂದಾಗಿರುವುದಕ್ಕೂ ಕೆಲಸ ಆಗಿರುವುದಕ್ಕೂ ತಾಳೆ ಆಗುವುದಿಲ್ಲ. ಅಳತೆ ಪುಸ್ತಕದಲ್ಲಿ ಸುಳ್ಳು ನಮೂದಿಸಲಾಗಿದೆ. ಎಲ್ಲಾ ಪುಸ್ತಕದಲ್ಲೂ ಒಂದೇ ದಿನ ಅಳತೆ ನಮೂದಿಸಲಾಗಿದೆ’ ಎಂಬುದು ಎಂಜಿನಿಯರ್‌ಗಳ ಮೇಲಿರುವ ಆರೋಪ.

‘ಭ್ರಷ್ಟಾಚಾರ ತಡೆ(ಪಿ.ಸಿ) ಕಾಯ್ದೆ ಮತ್ತು ಐಪಿಸಿ ಅಡಿಯಲ್ಲಿ ಅರಿವಿನ ಅಪರಾಧ ಎಂದು ದೂರು ದಾಖಲಾಗಿರುವ ಕಾರಣ ತನಿಖೆ ರದ್ದುಗೊಳಿಸಲು ಆಗುವುದಿಲ್ಲ. ಸಾರ್ವಜನಿಕರ ಕೋಟ್ಯಾಂತರ ರೂಪಾಯಿ ವಂಚಿಸಲಾಗಿದೆ ಎಂಬ ಆರೋಪ ಇದ್ದು, ಸತ್ಯಾಂಶ ಹೊರಗೆ ಬರಬೇಕಾಗಿದೆ’ ಎಂದು ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರಿದ್ದ ಪೀಠ ಅಭಿಪ್ರಾಯಪಟ್ಟಿತು.



ಕಸಾಪ: ನಗರ ಜಿಲ್ಲೆಗೆ ಚುನಾವಣಾಧಿಕಾರಿ ನೇಮಕ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಬೆಂಗಳೂರು ನಗರ ಜಿಲ್ಲೆಯ ಘಟಕಕ್ಕೆ ಚುನಾವಣೆ ನಡೆಸುವ ಸಂಬಂಧ ಬೆಂಗಳೂರು ದಕ್ಷಿಣದ ಉಪವಿಭಾಗಾಧಿಕಾರಿ ಶಿವಣ್ಣ ಎಂ.ಜಿ ಅವರನ್ನು ಚುನಾವಣಾಧಿಕಾರಿಯನ್ನಾಗಿ ನೇಮಿಸಿ ಸರ್ಕಾರ ಆದೇಶ ಹೊರಡಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ, ಜಿಲ್ಲಾ ಘಟಕಗಳ ಅಧ್ಯಕ್ಷರು ಹಾಗೂ ಗಡಿನಾಡು ಘಟಕಗಳ ಅಧ್ಯಕ್ಷರ ಸ್ಥಾನಕ್ಕೆ ಮೇ 9ಕ್ಕೆ ಚುನಾವಣೆ ನಡೆಯಲಿದೆ. ಈ ಬಾರಿ ಬೆಂಗಳೂರು ನಗರ ಜಿಲ್ಲೆಗೆ ಸಂಬಂಧಿಸಿದಂತೆ 28 ವಿಧಾನಸಭೆ ಕ್ಷೇತ್ರಗಳಲ್ಲಿಯೂ ಪ್ರತ್ಯೇಕವಾಗಿ ಮತದಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ. ವಿಧಾನಸಭಾ ಕ್ಷೇತ್ರಗಳಿಗೆ ಕರಡು ಮತದಾರರ ಪಟ್ಟಿ ಪ್ರಕಟಿಸಲಾಗಿದ್ದು, ಅಂತಿಮ ಮತದಾರರ ಪಟ್ಟಿಯು ಮಾ.25ರಂದು ಸಿದ್ಧವಾಗಲಿದೆ.

ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ 36,491 ಮಂದಿ ಸದಸ್ಯರಿದ್ದಾರೆ. ಇವರಲ್ಲಿ 36,262 ಮಂದಿ ಕರಡು ಮತದಾರರಾಗಿದ್ದಾರೆ. ಮತದಾರರ ವಿಳಾಸ ಮತ್ತು ವಿವರಗಳನ್ನು ಸುಲಭವಾಗಿ ಪಡೆದುಕೊಳ್ಳಲು Election kasapa ಮೊಬೈಲ್ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಪರಿಷತ್ತಿನ ವೆಬ್ ಪೋರ್ಟಲ್ www.kasapa.inನಲ್ಲಿಯೂ ವಿವರಗಳು ದೊರೆಯಲಿವೆ. ಮತದಾರರ ಕರಡು ಪಟ್ಟಿಯನ್ನು ಕನ್ನಡ ವರ್ಣಮಾಲೆಯ ಅಕ್ಷರಗಳಿಗೆ ಅನುಗುಣವಾಗಿ ಮುದ್ರಿಸಲಾಗಿದೆ.

ಬಿಎಸ್‌ಎನ್‌ಎಲ್ ಕಂಬವನ್ನೂ ಸೇರಿಸಿ ಕಟ್ಟಡ ನಿರ್ಮಾಣ!



ಬೆಂಗಳೂರು: ರಸ್ತೆ ಬದಿ ಇದ್ದ ಬಿಎಸ್‌ಎನ್‌ಎಲ್ ಕಂಬವನ್ನೇ ಸೇರಿಸಿಕೊಂಡು ಕಟ್ಟಡವೊಂದನ್ನು ಕೆ.ಜಿ.ಹಳ್ಳಿಯಲ್ಲಿ ಕಟ್ಟಲಾಗಿದೆ.

ಸ್ಥಳೀಯರೊಬ್ಬರು ‘ಪ್ರಜಾವಾಣಿ’ಗೆ ಈ ಚಿತ್ರ ಕಳುಹಿಸಿದ್ದಾರೆ. ಅದರ ಪ್ರಕಾರ, ಗಾಂಧಿ ರಸ್ತೆಯಲ್ಲಿ ಬಿಎಸ್‌ಎನ್‌ಎಲ್ ಕೇಬಲ್‌ಗಳ ಅಳವಡಿಸಿರುವ ಕಂಬ ಇದೆ. ಹೊಸದಾಗಿ ಕಟ್ಟಡ ನಿರ್ಮಿಸಿದವರು ಕಂಬವನ್ನೇ ಕಟ್ಟಡದೊಳಕ್ಕೆ ಸೇರಿಕೊಂಡಿದ್ದಾರೆ.

‘ರಸ್ತೆ ಒತ್ತುವರಿ ಮಾಡಿರುವುದಲ್ಲದೇ ಸರ್ಕಾರ ಹಾಕಿರುವ ಕಂಬವನ್ನೇ ಮನೆಯೊಳಕ್ಕೆ ಸೇರಿಸಿಕೊಂಡಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ ತಿಳಿಸಿದರೂ ಕ್ರಮ ಕೈಗೊಂಡಿಲ್ಲ. ಶುಕ್ರವಾರ ಈ ಚಿತ್ರ ತೆಗೆಯಲಾಗಿತ್ತು. ಶನಿವಾರ ಬೆಳಿಗ್ಗೆ ಕಂಬವನ್ನೇ ಕಿತ್ತು ಹಾಕಲಾಗಿದೆ’ ಎಂದು ಸ್ಥಳೀಯರು ದೂರಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ವಾರ್ಡ್‌ನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಇಮ್ರಾನ್, ‘ಚಿತ್ರವನ್ನು ಸ್ಥಳೀಯರು ನಮಗೂ ಕಳಿಸಿದ್ದಾರೆ. ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಚಾಲನೆ : ಸಾಹಿತಿ ಡಾ.ಸಿ. ವೀರಣ್ಣ ಒತ್ತಾಯ

‘ಗಡಿ ವಿವಾದ ಮುಗಿದ ಅಧ್ಯಾಯವೆಂದು ಕೇಂದ್ರ ಘೋಷಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯಗಳ ಗಡಿ ವಿವಾದ ಮುಗಿದ ಅಧ್ಯಾಯ ಎಂದು ಕೇಂದ್ರ ಸರ್ಕಾರ ಘೋಷಣೆ ಮಾಡಬೇಕು’ ಎಂದು ಸಾಹಿತಿ ಡಾ.ಸಿ. ವೀರಣ್ಣ ಒತ್ತಾಯಿಸಿದರು.

ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹೆಬ್ಬಾಳದ ಪಶುವೈದ್ಯಕೀಯ ಮಹಾ ವಿದ್ಯಾಲಯದ ಆವರಣದಲ್ಲಿನ ಹಳೆ ವಿದ್ಯಾರ್ಥಿಗಳ ಸಂಘದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿರುವ ಎರಡು ದಿನಗಳ ನಗರ ಜಿಲ್ಲಾ 15ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

‘ಬೆಳಗಾವಿ ನಮ್ಮದು ಎಂದು ಮಹಾರಾಷ್ಟ್ರ ಪದೇ ಪದೇ ಹೇಳುವ ಮೂಲಕ ಜನರ ಭಾವನೆ ಕದಡುತ್ತಿದೆ. ಮಹಾರಾಷ್ಟ್ರದವರೇ ಆಗಿದ್ದ ಮಹಾಜನ್ ವರದಿಯನ್ನು ಕನ್ನಡಿಗರು ಒಪ್ಪಿಕೊಂಡಿದ್ದೇವೆ. ಮಹಾರಾಷ್ಟ್ರದವರು ಪದೇ ಪದೇ ತಗಾದೆ ತೆಗೆಯುವುದು ಸಲ್ಲ’ ಎಂದು ಹೇಳಿದರು.

‘ಹಾಗೆ ನೋಡಿದರೆ ಊಟಿ ಮತ್ತು ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು. ಹಾಗೆಂದು ದಿನ ನಿತ್ಯ ಜಗಳವಾಡಿಕೊಂಡು ಕೂರಲು ಸಾಧ್ಯವೇ? ಗಡಿ ವಿಚಾರದಲ್ಲಿ ಯಾವ ರಾಜ್ಯಗಳೂ ತಕರಾರು ಎತ್ತಕೂಡದು ಎಂಬ ಸಂದೇಶವನ್ನು ಕೇಂದ್ರ ಸರ್ಕಾರ ರವಾನಿಸಬೇಕು’ ಎಂದು ಸಲಹೆ ನೀಡಿದರು.

‘ಕನ್ನಡ ಮಾತೃಭಾಷೆಯಾಗಿದೆಯೇ ವಿನಃ ಅನ್ನದ ಭಾಷೆಯಾಗಿಲ್ಲ. ಹೀಗಾಗಿಯೇ, ಪೋಷಕರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಕಲಿಸುವ ವ್ಯಾಮೋಹದಲ್ಲಿ ಮುಳುಗಿದ್ದಾರೆ. ಕನ್ನಡ ಮಾಧ್ಯಮದಲ್ಲಿ ಕಲಿತರೆ ಉದ್ಯೋಗ ಸಿಗಲಿದೆ ಎಂಬ ಖಾತ್ರಿಯನ್ನು ಸರ್ಕಾರ ನೀಡಿದರೆ ಕನ್ನಡ ಶಾಲೆಗಳು ತಾನಾಗಿಯೇ ಉಳಿಯುತ್ತವೆ. ಆದರೆ, ಹೀಗೆ ಮಾಡುವ ಧೈರ್ಯ ಸರ್ಕಾರಕ್ಕೆ ಇಲ್ಲ. ಏಕೆಂದರೆ, ಇಂಗ್ಲಿಷ್ ಮಾಧ್ಯಮದ ಬಹುತೇಕ ಶಾಲೆಗಳು ರಾಜಕಾರಣಿಗಳಿಗೇ ಸೇರಿವೆ’ ಎಂದರು.

‘ಮೀಸಲಾತಿಗಾಗಿ ಮಠಾಧೀಶರು ಹಾದಿ–ಬೀದಿಗಳಲ್ಲಿ ರಂಪಾಟ ಮಾಡುತ್ತಿರುವುದು ಈ ದೇಶದ ದೌರ್ಭಾಗ್ಯ. ಮಾಡಬೇಕಾದ ಕೆಲಸ ಬಿಟ್ಟು ಮಾಡಬಾರದ ಕೆಲಸ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ರಾಜ್ಯದ ಜನರು ಗಂಭೀರವಾಗಿ ಚಿಂತನೆ ಮಾಡಬೇಕಿದೆ. ಎಲ್ಲಾ ಜಾತಿಯ ಬಡವರನ್ನು ಮೇಲೆತ್ತುವುದೇ ನಿಮ್ಮ ಉದ್ದೇಶವಾಗಿದ್ದರೆ, ಅದನ್ನು ಮಾಡಲು ನಿಮಗೆ ಅಡ್ಡಿಯಾಗಿರುವವರು ಯಾರು ಎಂದು ಸ್ಪಷ್ಟಪಡಿಸಬೇಕು. ಬಲ ಇದೆ ಎಂಬ ಕಾರಣಕ್ಕೆ ಗೋಡೆ ಗುದ್ದುವ ಕೆಲಸ ಮಾಡಬಾರದು’ ಎಂದರು.

‘ಶೇ 70ರಷ್ಟು ರೈತರನ್ನು ಹೊಂದಿರುವ ದೇಶ ನಮ್ಮದು. ಅವರನ್ನು ನೋಯಿಸುವ ಕೆಲಸವನ್ನು ಯಾರೂ ಮಾಡಬಾರದು. ಎಲ್ಲರ ಹಿತಾಸಕ್ತಿ ಕಾಪಾಡುವ ನಾಯಕತ್ವ ಈ ದೇಶಕ್ಕೆ ಅಗತ್ಯವಿದೆ’ ಎಂದು ಪ್ರತಿಪಾದಿಸಿದರು.

ಸೃಜನಶೀಲ ಅಧ್ಯಾಪನಾ ಕೇಂದ್ರದ ಅಧ್ಯಕ್ಷ ಡಾ. ಗುರುರಾಜ ಕರಜಗಿ, ‘ಟಿ.ವಿ ಧಾರಾವಾಹಿ ನೋಡುವುದರ ಬದಲು ಕನ್ನಡದ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಮಕ್ಕಳಲ್ಲಿ ಬೆಳೆಸಬೇಕು. ಆಗ ಮಾತ್ರ ಕನ್ನಡ ಸಾಹಿತ್ಯ ಮತ್ತು ಪರಂಪರೆಯನ್ನು ಮುಂದಿನ ಪೀಳಿಗೆ ಕಲಿಯಲಿದೆ’ ಎಂದು ಹೇಳಿದರು.



ಸಮ್ಮೇಳನವನ್ನು ಸಾಹಿತಿ ದೊಡ್ಡರಂಗೇಗೌಡ ಉದ್ಘಾಟಿಸಿದರು. ಸುಮಂಗಲಿ ಸೇವಾಶ್ರಮ ಸಂಸ್ಥಾಪಕಿ ಎಸ್‌.ಜಿ. ಸುಶೀಲಮ್ಮ ಕಸಾಪ ನಗರ ಜಿಲ್ಲಾ ಘಟಕದ ಅಧ್ಯಕ್ಷ ಮಾಯಣ್ಣ, ಸಮ್ಮೇಳನಾಧ್ಯಕ್ಷ ಸಿ. ವೀರಣ್ಣ, ಅಂಬೇಡ್ಕರ್ ಪ್ರಚಾರ ಸಮಿತಿ ಅಧ್ಯಕ್ಷ ಚಿ.ನಾ. ರಾಮು, ಡಾ. ಗುರುರಾಜ ಕರಜಗಿ, ಕೃಷಿ ವಿಶ್ವವಿದ್ಯಾಲಯದ ಸಹ ವಿಸ್ತರಣಾ ನಿರ್ದೇಶಕ ಡಾ.ಕೆ. ನಾರಾಯಣಗೌಡ ಇದ್ದಾರೆ – ಪ್ರಜಾವಾಣಿ ಚಿತ್ರ

ಮೆರವಣಿಗೆ ಮೊಟಕು

ಕೋವಿಡ್ ಕಾರಣಕ್ಕೆ ಸಮ್ಮೇಳನಾಧ್ಯಕ್ಷರ ಮೆರವಣಿಗೆ ಮೊಟಕುಗೊಳಿಸಲಾಗಿತ್ತು. ಕಾಲೇಜಿನ ಗೇಟಿನಿಂದ ಸಭಾಂಗಣದ ತನಕ ಮಾತ್ರ ಮೆರವಣಿಗೆ ಮಾಡಲಾಯಿತು. ಕೋವಿಡ್ ನಿಯಮಗಳನ್ನು ಉಲ್ಲಂಘಿಸಬಾರದು ಎಂಬ ಕಾರಣಕ್ಕೆ ಹೆಚ್ಚು ಜನರಿಗೆ ಆಹ್ವಾನವನ್ನೂ ನೀಡಲಿಲ್ಲ ಎಂದು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಾಯಣ್ಣ ಹೇಳಿದರು.

ಈಜಿಪ್ಟ್‌ನಲ್ಲಿ ಕನ್ನಡ ಶಾಸನ

ಕನ್ನಡ ಅತ್ಯಂತ ಪ್ರಾಚೀನ ಭಾಷೆ ಎಂಬುದಕ್ಕೆ ಈಜಿಪ್ಟ್‌ನಲ್ಲಿರುವ ಶಾಸನವೇ ಸಾಕ್ಷಿ ಎಂದು ಹಾವೇರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷ ಡಾ. ದೊಡ್ಡರಂಗೇಗೌಡ ಹೇಳಿದರು.

‘ಹಲ್ಮಿಡಿ ಶಾಸನವೇ ಮೊದಲ ಶಾಸನವೆಂದು ನಾವು ಭಾವಿಸಿಕೊಂಡಿದ್ದೇವೆ. ಈಜಿಪ್ಟಿನಲ್ಲಿ ಇದ್ದ ಎರಡು ಗ್ರಂಥಾಲಯಗಳಲ್ಲಿ ಎಲ್ಲಾ ಭಾಷೆಗಳ ತಾಳೆಗರಿಗಳಿದ್ದವು. ಅಲೆಕ್ಸಾಂಡರ್ ದಂಡಯಾತ್ರೆ ವೇಳೆ ಅವು ಬೆಂಕಿಗೆ ಆಹುತಿಯಾದವು. ಅಳುದಳಿದ ತಾಳೆಗರಿಯ ತುಣುಕುಗಳನ್ನು ಕಲ್ಲಿನಲ್ಲಿ ಕೆತ್ತಿಸಿ ಸಂರಕ್ಷಿಸಲಾಗಿದೆ. ಅದರಲ್ಲಿ ‘ಊರೊಳ್’ ಎಂಬ ಪದ ಇದೆ. ಇದರ ಕುರಿತು ಸಂಶೋಧನೆಗೆ ಸಾಕಷ್ಟು ಸಮಯ, ಹಣವನ್ನು ನಾನು ಖರ್ಚು ಮಾಡಿದ್ದೇನೆ’ ಎಂದು ವಿವರಿಸಿದರು.

‘ಕನ್ನಡಕ್ಕೆ ಪ್ರಾಚೀನ ಪರಂಪರೆ ಇದೆ. ಆದರೆ, ಈಗ ಕನ್ನಡ ನಾಡಿನಲ್ಲೇ ಭಾಷೆ ಅನಾಥವಾಗುತ್ತಿದೆ. ಸಂಪರ್ಕಕ್ಕಾಗಿ ಎಷ್ಟು ಭಾಷೆಯನ್ನಾದರೂ ಕಲಿಯಿರಿ. ಆದರೆ, ಕನ್ನಡಕ ನಮ್ಮ ಉಸಿರಾಗಿರಬೇಕು’ ಎಂದು ಅವರು ಹೇಳಿದರು.

ಭಿನ್ನ ಕೋಮಿನ ಯುವಕರು–ಯುವತಿ ಪ್ರಯಾಣಕ್ಕೆ ಅಡ್ಡಿ: ಆಕ್ರೋಶ

ಪ್ರಜಾವಾಣಿ ವಾರ್ತೆ

ಮಂಗಳೂರು: ಬೇರೆ ಧರ್ಮದ ಯುವತಿ ಹಾಗೂ ಇಬ್ಬರು ಯುವಕರು ಪ್ರಯಾಣಿಸುತ್ತಿದ್ದ ಬಸ್ ಅನ್ನು ಬಜರಂಗದಳದ ಕಾರ್ಯಕರ್ತರು ಬಂಟ್ವಾಳದಲ್ಲಿ ತಡೆದಿದ್ದು, ಸಾಮಾಜಿಕ ಜಾಲತಾಣದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಬುಧವಾರ ಈ ಘಟನೆ ನಡೆದಿದೆ. ರಾತ್ರಿ ಇಲ್ಲಿಂದ ಮೂವರು ಬೆಂಗಳೂರಿಗೆ ತೆರಳಲು ಬಸ್ ಏರಿದ್ದರು. ಈ ಬಗ್ಗೆ ಮಾಹಿತಿ ಪಡೆದ ಬಜರಂಗದಳದ ಕಾರ್ಯಕರ್ತರು, ಬಂಟ್ವಾಳ ಬಸ್ ನಿಲ್ದಾಣದ ಬಳಿ ಬಸ್ ಅನ್ನು ನಿಲ್ಲಿಸಿದ್ದಾರೆ. ಸ್ಥಳಕ್ಕೆ ಧಾವಿಸಿದ ಪೊಲೀಸರು, ಯುವತಿ ಹಾಗೂ ಇಬ್ಬರು ಯುವಕರನ್ನು ರಕ್ಷಿಸಿ, ಠಾಣೆಗೆ ಕರೆದುಕೊಂಡು ಹೋಗಿದ್ದರು.

ಈ ಬಗ್ಗೆ ಮಾಹಿತಿ ನೀಡಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಂ. ಲಕ್ಷ್ಮಿಪ್ರಸಾದ್, ‘ಕುಂದಾಪುರದ ಇಬ್ಬರು ಯುವಕರು ಹಾಗೂ ಕೇರಳದ ಯುವತಿ ಮದುವೆಗಾಗಿ ಬೆಂಗಳೂರಿಗೆ ತೆರಳುತ್ತಿದ್ದರು. ಬಂಟ್ವಾಳದಲ್ಲಿ ತಂಡವೊಂದು ಬಸ್ ತಡೆದಿತ್ತು. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು, ಮೂವರನ್ನು ರಕ್ಷಣೆ ಮಾಡಿದ್ದು, ನಂತರ ಸುರಕ್ಷಿತವಾಗಿ ಬೆಂಗಳೂರಿಗೆ ಕಳುಹಿಸಿಕೊಡಲಾಗಿದೆ’ ಎಂದು ತಿಳಿಸಿದ್ದಾರೆ.

‘ದೂರು ನೀಡಲು ಮೂವರು ನಿರಾಕರಿಸಿದ್ದು, ಯಾವುದೇ ಪ್ರಕರಣ ದಾಖಲಾಗಿಲ್ಲ. ಯುವಕರು ಹಾಗೂ ಯುವತಿಯ ಮೇಲೆ ದಾಳಿ ನಡೆದಿದ್ದರೆ, ಪೊಲೀಸರು ಸ್ವಯಂಪ್ರೇರಿತ ದೂರು ದಾಖಲಿಸಿಕೊಳ್ಳುತ್ತಿದ್ದರು. ಆದರೆ ಮೂವರ ಮೇಲೆ ಹಲ್ಲೆ ನಡೆದಿಲ್ಲ’ ಎಂದು ಸ್ಪಷ್ಟಪಡಿಸಿದ್ದಾರೆ.

ಕಂಬಳ: ಹೊಸ ದಾಖಲೆ ಬರೆದ ಶ್ರೀನಿವಾಸ ಗೌಡ



ಹೊಸ ದಾಖಲೆ
8.96 ಸೆಕೆಂಡ್‌ನಲ್ಲಿ
100 ಮೀಟರ್ ಕ್ರಮಿಸಿದ ಅಂತರ

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ವೇಣೂರು–ಪೆರ್ಮುಡದಲ್ಲಿ ಶನಿವಾರ ನಡೆದ ಸೂರ್ಯ–ಚಂದ್ರ ಜೋಡುಕರೆ ಕಂಬಳದಲ್ಲಿ ಮಿಜಾರು ಅಶ್ವತ್ಥಪುರ ಶ್ರೀನಿವಾಸ ಗೌಡ ಹೊಸ ದಾಖಲೆ ಬರೆದಿದ್ದಾರೆ. 8.96 ಸೆಕೆಂಡ್‌ನಲ್ಲಿ 100 ಮೀಟರ್ ಕ್ರಮಿಸುವ ಮೂಲಕ ಇದುವರೆಗಿನ ಎಲ್ಲ ದಾಖಲೆಗಳನ್ನು ಅಳಿಸಿ ಹಾಕಿದರು.

125 ಮೀಟರ್ ಉದ್ದದ ಕಂಬಳದ ಕರೆಯನ್ನು 11.21 ಸೆಕೆಂಡ್‌ನಲ್ಲಿ ಶ್ರೀನಿವಾಸ ಗೌಡ ತಲುಪಿದ್ದಾರೆ. ಇದನ್ನು 100 ಮೀಟರ್‌ಗೆ ಲೆಕ್ಕ ಹಾಕಿದಾಗ 8.96 ಸೆಕೆಂಡ್ ಸಮಯ ತೆಗೆದುಕೊಂಡಿದ್ದಾರೆ. ಕಂಬಳದ ನೇಗಿಲು ಹಿರಿಯ ವಿಭಾಗದಲ್ಲಿ ಇರುವೈಲ್ ಪಾಣಿಲ ಬಾಡ ಪೂಜಾರಿ ಅವರ ಕೋಣಗಳನ್ನು ಶ್ರೀನಿವಾಸ ಗೌಡ ಓಡಿಸಿದ್ದಾರೆ.

ಕಳೆದ ವರ್ಷ ಐಕಳದಲ್ಲಿ ನಡೆದ ಕಂಬಳದಲ್ಲಿ ಶ್ರೀನಿವಾಸ ಗೌಡ 100 ಮೀಟರ್ ಅನ್ನು 9.55 ಸೆಕೆಂಡ್‌ನಲ್ಲಿ ಕ್ರಮಿಸಿ ದಾಖಲೆಯೊಡನೆ ಗಮನಸೆಳೆದಿದ್ದರು. ನಂತರ, 2020ರಲ್ಲೇ ವೇಣೂರು ಕಂಬಳದಲ್ಲಿ ಈ ದಾಖಲೆ ಮುರಿದಿದ್ದ ಬಜಗೋಳಿ ನಿಶಾಂತ್ ಶೆಟ್ಟಿ 100 ಮೀಟರ್ ಅನ್ನು 9.52 ಸೆಕೆಂಡ್‌ನಲ್ಲಿ ಪೂರೈಸಿದ್ದರು. ಬೈಂದೂರು ವಿಶ್ವನಾಥ ದೇವಾಡಿಗ ಈ ವರ್ಷ ನಡೆದ ಐಕಳ ಕಂಬಳದಲ್ಲಿ 100 ಮೀಟರ್ ಅನ್ನು 9.15 ಸೆಕೆಂಡ್‌ನಲ್ಲಿ ಕ್ರಮಿಸಿ, ಹೊಸ ದಾಖಲೆ ಬರೆದಿದ್ದರು. ಈ ದಾಖಲೆಯನ್ನೂ ಈಗ ಮುರಿದಂತಾಗಿದೆ.

ಗಮನ ಬೇರೆಡೆ ಸೆಳೆದು ಕದಿಯುತ್ತಿದ್ದ ಗ್ಯಾಂಗ್

ಚಿನ್ನಾಭರಣ ಕದ್ದ ತಂಡದ ಸದಸ್ಯನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ಗಳು, ಒಡವೆ ಅಂಗಡಿಗಳ ಬಳಿ ಬರುವ ಜನರನ್ನು ಹಿಂಬಾಲಿಸಿ, ಅವರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಹಾಗೂ ಬ್ಯಾಗ್‌ಗಳನ್ನು ಕದಿಯುತ್ತಿದ್ದ ಆಂಧ್ರಪ್ರದೇಶದ ಕಳ್ಳರ ಗ್ಯಾಂಗ್‌ನಲ್ಲಿದ್ದ ಒಬ್ಬನನ್ನು ಸಂಪಿಗೆಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶದ ನೆಲ್ಲೂರು ಜಿಲ್ಲೆಯ ಚೆಲ್ಲಾ ಪ್ರಭುದಾಸ್ (27) ಬಂಧಿತ ಆರೋಪಿ. ತಂಡದಲ್ಲಿ ಈತನ ತಮ್ಮ ಅಲೆಗ್ಸಾಂಡರ್, ನಾಯಕ ಪೇಟಲ ಪ್ರತೀಷ್ ಸೇರಿ ಒಟ್ಟು ಏಳು ಮಂದಿ ಇರುವುದಾಗಿ ಮಾಹಿತಿ ಸಿಕ್ಕಿದೆ.

ಮಾ.19ರಂದು ಕೋಗಿಲು ಮುಖ್ಯರಸ್ತೆಯಲ್ಲಿದ್ದ ಆಭರಣದ ಅಂಗಡಿ ಬಳಿ ವ್ಯಕ್ತಿಯೊಬ್ಬರ ಕೈಯಲ್ಲಿದ್ದ ಬಾಕ್ಸ್‌ನಿಂದ ಆಭರಣ ತಪ್ಪಿ ಕೆಳಗೆ ಬಿದ್ದಿತ್ತು. ಅದನ್ನು ಆತ ಹೆಕ್ಕಿಕೊಂಡಿದ್ದನ್ನು ಆರೋಪಿಗಳು ಗಮನಿಸಿದ್ದರು. ವಾಹನದಲ್ಲಿ ತೆರಳುತ್ತಿದ್ದ ಆ ವ್ಯಕ್ತಿಯನ್ನು ಬೈಕ್‌ನಲ್ಲಿ ಹಿಂಬಾಲಿಸಿದ್ದರು. ಹೆಗಡೆ ನಗರದ ಬಳಿ ಮೂತ್ರವಿಸರ್ಜನೆಗೆಂದು ಆತ ತೆರಳಿದಾಗ ಆರೋಪಿಗಳು ಆಭರಣಗಳಿದ್ದ ಬಾಕ್ಸ್ ಕದ್ದಿದ್ದರು. ಬಳಿಕ ಆಂಧ್ರಪ್ರದೇಶಕ್ಕೆ ತೆರಳಿ ತಲೆಮರೆಸಿಕೊಂಡಿದ್ದರು.

‘ಆಭರಣದ ಮಾಲೀಕ ನೀಡಿದ್ದ ದೂರಿನನ್ವಯ ತನಿಖೆ ಕೈಗೆತ್ತಿಕೊಂಡಿದ್ದ ಪೊಲೀಸರು ಕೃತ್ಯ ನಡೆದ ಸ್ಥಳದಿಂದ ನೆಲ್ಲೂರುವರೆಗೆ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದರು. ಈ ವೇಳೆ ಆರೋಪಿಗಳು ಕೆ.ಆರ್‌.ಪುರ, ಹೊಸಕೋಟೆ, ಕೋಲಾರ ಮಾರ್ಗವಾಗಿ ಆಂಧ್ರಪ್ರದೇಶಕ್ಕೆ ಹೋಗಿರುವುದು ತಿಳಿಯಿತು’ ಎಂದು ಪೊಲೀಸರು ತಿಳಿಸಿದರು.

‘ಬಂಧಿತ ಆರೋಪಿಯಿಂದ ₹24 ಲಕ್ಷ ಬೆಲೆಬಾಳುವ ಚಿನ್ನಾಭರಣ ಹಾಗೂ ಕೃತ್ಯಕ್ಕೆ ಬಳಸಿದ್ದ ಮೂರು ಬೈಕ್‌ಗಳನ್ನು ಜಪ್ತಿ ಜಪ್ತಿ ಮಾಡಲಾಗಿದೆ. ಉಳಿದ ಆರೋಪಿಗಳಿಗಾಗಿ ಶೋಧ ಮುಂದುವರಿದಿದೆ’ ಎಂದೂ ಹೇಳಿದರು.

ಅಪರಾಧ ಸುದ್ದಿ

ಖಾರದ ಪುಡಿ ಎರಚಿ ಸರಗಳವು: ಸೆರೆ

ಬೆಂಗಳೂರು: ಮಹಿಳೆಯ ಕಣ್ಣಿಗೆ ಖಾರದ ಪುಡಿ ಎರಚಿ, ಚಿನ್ನದ ಸರ ಕಸಿದು ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಇರ್ಫಾನ್ (37) ಹಾಗೂ ನೂರುಲ್ಲಾ (30) ಬಂಧಿತರು.

ಮಾ.18ರ ರಾತ್ರಿ ಜಕ್ಕೂರು ಬಳಿ ಒಂಟಿಯಾಗಿ ನಡೆದುಕೊಂಡು ಹೋಗುತ್ತಿದ್ದ ರೇಖಾ ಅವರಿಗೆ ಆರೋಪಿಗಳು ಖಾರದ ಪುಡಿ ಎರಚಿ, ಚಿನ್ನದ ಸರ ಕದ್ದಿದ್ದರು. ಈ ಸಂಬಂಧ ಮಹಿಳೆ ಪೊಲೀಸರಿಗೆ ದೂರು ನೀಡಿದ್ದರು.

‘ಒಂಟಿಯಾಗಿ ಸಂಚರಿಸುವ ಮಹಿಳೆಯರನ್ನು ಹಿಂಬಾಲಿಸಿ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಆರೋಪಿಗಳ ವಿರುದ್ಧ ಸರ ಅಪಹರಣ ಪ್ರಕರಣ ದಾಖಲಾಗಿದೆ. ಆರೋಪಿಗಳಿಂದ ₹4 ಲಕ್ಷ ಬೆಲೆಬಾಳುವ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ನೇಪಾಳದ ಮೂವರ ಬಂಧನ: ಮನೆಯ ಬೀಗ ಮುರಿದು ಚಿನ್ನಾಭರಣ ಕದ್ದಿದ್ದ ಮೂವರು ಆರೋಪಿಗಳನ್ನು ಅಮೃತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ಪ್ರಕಾಶ ಶಾಹಿ (23), ಉದಯ್ ಕುಮಾರ್ (39) ಹಾಗೂ ರೋಷನ್ ಬಿಷ್ಟಾ (48) ಬಂಧಿತರು. ಆರೋಪಿಗಳಿಂದ ₹13 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ.

ಇವರು ಕಾವಲುಗಾರರಾಗಿ ನಗರದ ಹಲವೆಡೆ ಕೆಲಸ ಮಾಡಿಕೊಂಡಿದ್ದರು. ರಾತ್ರಿ ವೇಳೆ ಬೀಗ ಹಾಕಿರುವ ಮನೆಗಳಲ್ಲಿ ಬಾಗಿಲು ಮುರಿದು ಕಳ್ಳತನ ಮಾಡುತ್ತಿದ್ದರು. ಮಾ.13ರಂದು ಠಾಣಾ ವ್ಯಾಪ್ತಿಯ ಮನೆಯೊಂದರಲ್ಲಿ ಬೀಗ ಮುರಿದು 400 ಗ್ರಾಂಗಳಷ್ಟು ಚಿನ್ನಾಭರಣ ಕದ್ದಿದ್ದರು. ಈ ಸಂಬಂಧ ಮನೆಯ ಮಾಲೀಕರು ಪೊಲೀಸರಿಗೆ ದೂರು ನೀಡಿದ್ದರು.

ಡ್ರಗ್ ಪೆಡ್ಲರ್ ಸಹಚರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ಜೆ. ಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಉದ್ಯಮಿಗಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ವಿದೇಶಿ ಪ್ರಜೆಯನ್ನು ಗೋವಿಂದಪುರ ಪೊಲೀಸರು ಬಂಧಿಸಿದ್ದಾರೆ.

ಹೆಬ್ಬಾಳದ ಕೆಂಪಾಪುರ ಬಳಿಯ ಚಿರಂಜೀವಿ ಬಡಾವಣೆಯಲ್ಲಿ ವಾಸವಿದ್ದ ಜೇಮ್ಸ್ ಕೆಲ್ವಿನ್ (33) ಬಂಧಿತ ಆರೋಪಿ.

‘ಗೋವಿಂದಪುರ ರೈಲ್ವೆ ಗೇಟ್ ಬಳಿಯ ಶ್ಯಾಂಪುರ ಮುಖ್ಯರಸ್ತೆಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾಗ ಆರೋಪಿಯನ್ನು ಬಂಧಿಸಲಾಯಿತು. ಆತನಿಂದ ₹9 ಲಕ್ಷ ಬೆಲೆಬಾಳುವ 60 ಗ್ರಾಂ ತೂಕದ ಕೊಕೇನ್ ಹಾಗೂ ಕೃತ್ಯಕ್ಕೆ ಬಳಸಿದ್ದ ತೂಕದ ಯಂತ್ರ, ಐಫೋನ್, ಐಪ್ಯಾಡ್, ಕಾರು, ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ತಿಳಿಸಿದರು.

‘ಬಂಧಿತ ಆರೋಪಿಯು ಮಾದಕ ವಸ್ತುಗಳ ಮಾರಾಟ ಪ್ರಕರಣದಲ್ಲಿ ಈಗಾಗಲೇ ಬಂಧನದಲ್ಲಿರುವ ಜಾನ್ ಪೆಡ್ಲರ್ ಎಂಬಾತನ ಸಹಚರನೂ ಆಗಿದ್ದಾನೆ. ಮಾದಕ ವಸ್ತುಗಳ ಮಾರಾಟಕ್ಕೆ ಈತ ವಿದ್ಯಾರ್ಥಿಗಳೂ ಅಲ್ಲದೆ, ಇತರ ಗ್ರಾಹಕರನ್ನೂ ಹೊಂದಿದ್ದ. ಹಿಂದೊಮ್ಮೆ ಪೊಲೀಸರಿಗೆ ಸಿಕ್ಕಿಬೀಳುವವನಿದ್ದ, ಅಷ್ಟರಲ್ಲಿ ಮಾದಕ ವಸ್ತುಗಳನ್ನು ಶೌಚಾಲಯದಲ್ಲಿ ಹಾಕಿ ನಾಶ ಪಡಿಸಿ ತಪ್ಪಿಸಿಕೊಂಡಿದ್ದ’ ಎಂದೂ ಅವರು ಹೇಳಿದರು.

ಮೈಮುಲ್ ಮಾಜಿ ನಿರ್ದೇಶಕ ಬಲರಾಮ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರ ಆಪ್ತ ಹಾಗೂ ಮೈಸೂರು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ.ಸಿ.ಬಲರಾಮ್ (67) ಅವರು ಆತ್ಮಹತ್ಯೆಗೆ ಯತ್ನಿಸಿದ್ದು, ಚಿಕಿತ್ಸೆ ಫಲಿಸದೆ ನಗರದ ಖಾಸಗಿ ಆಸ್ಪತ್ರೆಯಲ್ಲಿ ಶನಿವಾರ ನಿಧನರಾದರು.

ಮೈಸೂರಿನ ಗರ್ಗೇಶ್ವರಿ ಬಳಿಯ ಕುಪ್ಯಾ ಗ್ರಾಮದವರಾದ ಇವರು ಮೈಸೂರು ಹಾಲು ಒಕ್ಕೂಟದ (ಮೈಮುಲ್) ನಿರ್ದೇಶಕರೂ ಆಗಿದ್ದರು. ಮಾ.16ರಂದು ನಡೆದ ಮೈಮುಲ್ ಚುನಾವಣೆಯಲ್ಲಿ ಸೋಲು ಕಂಡಿದ್ದರು. ಈ ವಿಚಾರವಾಗಿ ಅವರು ಮನನೊಂದಿದ್ದರು ಎಂದು ಮೂಲಗಳು ತಿಳಿಸಿವೆ.

ಉಪ್ಪಾರಪೇಟೆ ಠಾಣಾ ವ್ಯಾಪ್ತಿಯ ರಾಯಲ್ ಲಾಡ್ಜ್‌ನಲ್ಲಿ ಅವರು ಎರಡು ದಿನಗಳಿಂದ ತಂಗಿದ್ದರು. ಬೆಂಗಳೂರಿಗೆ ಬಂದಾಗ ಅವರು ಇದೇ ಲಾಡ್ಜ್‌ನಲ್ಲೇ ವಾಸ್ತವ್ಯ ಹೂಡುತ್ತಿದ್ದರು. ಶುಕ್ರವಾರ ಬೆಳಿಗ್ಗೆವರೆಗೆ ಕೋಣೆಯಿಂದ ಹೊರಬಾರದ್ದನ್ನು ಗಮನಿಸಿದ್ದ ಲಾಡ್ಜ್ ಸಿಬ್ಬಂದಿ ಪೊಲೀಸರ ಸಹಾಯದಿಂದ ಬಾಗಿಲು ತೆರೆಸಿದಾಗ ಅವರು ವಿಷ ಸೇವಿಸಿರುವುದು ತಿಳಿದಿದೆ.

‘ಕೋಣೆಯಲ್ಲಿ ಅವರು ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರು. ಕೂಡಲೇ ಅವರನ್ನು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕಳುಹಿಸಲಾಯಿತು. ಚಿಕಿತ್ಸೆ ಫಲಿಸದೆ ಅವರು ಶನಿವಾರ ನಿಧನರಾದರು. ಮೃತದೇಹವನ್ನು ಅವರ ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ’ ಎಂದು ಉಪ್ಪಾರಪೇಟೆ ಠಾಣೆಯ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಈ ಸಂಬಂಧ ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದೇವೆ’ ಎಂದೂ ಹೇಳಿದರು.

ಸಂಕ್ಷಿಪ್ತ ಸುದ್ದಿ

ಕಟ್ಟಡದಲ್ಲಿ ಅಗ್ನಿ ಅವಘಡ

ಬೆಂಗಳೂರು: ಕಾಟನ್ ಪೇಟೆಯಲ್ಲಿರುವ ಬಹು ಅಂತಸ್ತಿನ ಕಟ್ಟಡವೊಂದರಲ್ಲಿ ಬೆಂಕಿ ಅವಘಡ ಶನಿವಾರ ರಾತ್ರಿ ಸಂಭವಿಸಿದೆ.

ರಾಜ್ ಟವರ್ಸ್ ಕಟ್ಟಡದ ಎರಡನೇ ಮಹಡಿಯಲ್ಲಿ ಮೈಕೊ ಫಾರ್ಮ ಎಂಬ ಸಂಸ್ಥೆಗೆ ಸೇರಿದ್ದ ವೈದ್ಯಕೀಯ ಸಾಮಗ್ರಿಗಳನ್ನು ಸಂಗ್ರಹಿಸಿ ಇಟ್ಟಿದ್ದ ಗೋದಾಮಿಯಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಕೂಡಲೇ ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿ, ಕಟ್ಟಡದಲ್ಲಿದ್ದ 15ಕ್ಕೂ ಹೆಚ್ಚು ಜನರನ್ನು ರಕ್ಷಿಸಿ ಬೆಂಕಿ ನಂದಿಸಿದರು.

ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ ಎಂದು ಶಂಕಿಸಲಾಗಿದೆ.

ನಿವೃತ್ತ ಡಿವೈಎಸ್‌ಪಿಗೆ ಶಿಕ್ಷೆ

ತುಮಕೂರು: ಸೇವಾ ಅವಧಿಯಲ್ಲಿ ಮೂಲ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಸ್ತಿ ಹೊಂದಿದ್ದ ಆರೋಪದ ಮೇಲೆ ತುಮಕೂರು ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಡಿವೈಎಸ್‌ಪಿ ಟಿ.ಆರ್. ಕೃಷ್ಣಮೂರ್ತಿ (ಈಗ ನಿವೃತ್ತಿ) ಎಂಬುವರಿಗೆ 7ನೇ ಅಧಿಕ ಜಿಲ್ಲಾ ಸೆಷನ್ಸ್ ನ್ಯಾಯಾಲಯ ನಾಲ್ಕು ವರ್ಷ ಸಾದಾ ಸಜೆ ಹಾಗೂ ₹17 ಲಕ್ಷ ದಂಡ ವಿಧಿಸಿದೆ.

ಟಿ.ಆರ್.ಕೃಷ್ಣಮೂರ್ತಿ ಮೂಲ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಆಸ್ತಿಯನ್ನು ಹೊಂದಿರುವ ಬಗ್ಗೆ 2008ರಲ್ಲಿ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಲೋಕಾಯುಕ್ತ ಪೊಲೀಸ್ ಅಧಿಕಾರಿ ಮೇಗಣ್ಣನವರ್ ಪ್ರಕರಣದ ತನಿಖೆ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸುದೀರ್ಘ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಎಸ್.ಸುಧೀಂದ್ರನಾಥ್ ಅವರು ಶನಿವಾರ ಆದೇಶ ಪ್ರಕಟಿಸಿದ್ದಾರೆ. ಲೋಕಾಯುಕ್ತ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಆರ್.ಪಿ.ಪ್ರಕಾಶ್ ವಾದ ಮಂಡಿಸಿದರು.

40 ಕೆ.ಜಿ.ಗಾಂಜಾ ವಶ: ಡ್ರಗ್ಸ್ ಜಪ್ತಿ

ಬೆಂಗಳೂರು: ಗಾಂಜಾ ಮಾರಾಟ ಮಾಡುತ್ತಿದ್ದ ಐದು ಮಂದಿ ಆರೋಪಿಗಳನ್ನು ಚಿಕ್ಕಜಾಲ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಅಂಶು ಆನಂದ್ (26), ಕುಮಾರ್ ಪ್ರಭಾತ್ (35), ಜಾರ್ಖಂಡ್‌ನ ಗೋವಿಂದ್ ಕಂಡೆಯಂಗ್ (32), ಶಿಡ್ಲಘಟ್ಟ ತಾಲ್ಲೂಕಿನ ರಮೇಶ್ ಗೌಡ (26) ಹಾಗೂ ನಾಗೇಶ್ (24) ಬಂಧಿತರು.

ಆರೋಪಿಗಳು ಠಾಣಾ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿದ್ದ ಮಾಹಿತಿ ಪೊಲೀಸರಿಗೆ ಸಿಕ್ಕಿತ್ತು. ದಾಳಿ ನಡೆಸಿ ಐವರು ಆರೋಪಿಗಳನ್ನು ಬಂಧಿಸಿದ್ದು, ಅವರಿಂದ ₹ 7.5 ಲಕ್ಷ ಬೆಲೆಬಾಳುವ 40 ಕೆ.ಜಿ.ಗಾಂಜಾ ಸೊಪ್ಪನ್ನು ಜಪ್ತಿ ಮಾಡಿದ್ದಾರೆ.

ಆಫ್ರಿಕನ್ ಪ್ರಜೆಗಳ ಬಂಧನ: ಮಾದಕ ವಸ್ತುಗಳನ್ನು ಮಾರಾಟ ಮಾಡಲು ಸಜ್ಜಾಗಿದ್ದ ಇಬ್ಬರು ಆಫ್ರಿಕನ್ ಪ್ರಜೆಗಳನ್ನು ಕೊತ್ತನೂರು ಪೊಲೀಸರು ಬಂಧಿಸಿದ್ದಾರೆ.

ನೈಜೀರಿಯಾದ ಎಡೊಕಿ ಜೇಮ್ಸ್ (25) ಹಾಗೂ ಅಗುಂಟಾ ಚುಕ್ವೇಮೆಕಾ ಡೇನಿಯಲ್ (24) ಬಂಧಿತರು.

ಪ್ರತಿಭಟನೆ ಮುಂದುವರಿಸಲು ರೈತರ ತೀರ್ಮಾನ; ಮುಖ್ಯಮಂತ್ರಿ ಬಿಎಸ್‌ವೈ ಭೇಟಿಗೆ ನಿರ್ಧಾರ

ಸತ್ತಿದ್ದು ಅಪಾಯಕಾರಿ ಹುಲಿ: ಟೈಗರ್ ಸೆಲ್

ಪ್ರಜಾವಾಣಿ ವಾರ್ತೆ



ಕಾರ್ಯಾಚರಣೆ ವೇಳೆ ಅಳವಡಿಸಿದ್ದ ಕ್ಯಾಮೆರಾದಲ್ಲಿ ಸೆರೆ ಸಿಕ್ಕಿದ್ದ 'ಯು–285' ಸಂಖ್ಯೆ ಹುಲಿ

ಮಡಿಕೇರಿ: ಕೊಡಗು ಜಿಲ್ಲೆಯ ನಾಗರಹೊಳೆ ವನ್ಯಜೀವಿ ವಲಯದ ಅಕ್ಕಪಕ್ಕದ ಎಬಿಬಲ್ಲಿ, ಮತ್ತಿಗೋಡು ಸ್ಥಿತಿಯಲ್ಲಿ ಶುಕ್ರವಾರ ಪತ್ತೆಯಾಗಿದ್ದ ಹುಲಿ ಹಾಗೂ ಕಾರ್ಯಾಚರಣೆ ವೇಳೆ ಅಳವಡಿಸಿದ್ದ ಕ್ಯಾಮೆರಾದಲ್ಲಿ ಸೆರೆಯಾದ ಹುಲಿ ಎರಡರ ಚಿತ್ರಗಳನ್ನು ಪರಿಶೀಲಿಸಿರುವ ಬೆಂಗಳೂರಿನ ಟೈಗರ್ ಸೆಲ್ ತಜ್ಞರು, ಎರಡೂ ಚಿತ್ರಗಳಲ್ಲಿರುವ ಹುಲಿ ಒಂದೇ ಆಗಿದೆ ಎಂದು ದೃಢಪಡಿಸಿದ್ದಾರೆ.

ಹುಲಿಯ ಕಳೇಬರ ಪತ್ತೆಯಾದ ಮೇಲೆ, ಕೊಡಗು ಅರಣ್ಯಾಧಿಕಾರಿಗಳು, ಎರಡೂ ಛಾಯಾಚಿತ್ರಗಳನ್ನು 'ಟೈಗರ್ ಸೆಲ್'ಗೆ ಕಳುಹಿಸಿದ್ದರು.

ಲಕ್ಕುಂದದಲ್ಲಿ ಸಿಕ್ಕಿದ್ದು, ಮಾನವ ಪ್ರಾಣ ಹಾನಿ ಹಾಗೂ ಜಾನುವಾರುಗಳ ಸಾವಿಗೆ ಕಾರಣವಾದ ಹುಲಿಯ ಕಳೇಬರ (Tiger nagarahole 13-u285) ಎಂದು ವಿರಾಜಪೇಟೆ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ಪಷ್ಟಪಡಿಸಿದ್ದು, ಅಧಿಕೃತ ಪ್ರಕಟಣೆ ಹೊರಡಿಸಿದ್ದಾರೆ.

ಆತ್ಮರಕ್ಷಣೆಗೆ ಹಾರಿಸಿದ್ದ ಗುಂಡು: ಮೃತ ಹುಲಿಯ ಕುತ್ತಿಗೆ ಹಾಗೂ ಭುಜದ ಭಾಗದಲ್ಲಿ ಗುಂಡೇಟಿನ ಗುರುತುಗಳಿವೆ. ಹುಲಿ ಸೆರೆ ಕಾರ್ಯಾಚರಣೆ ವೇಳೆ ಇಲಾಖೆಯ ಸಿಬ್ಬಂದಿಯು ಆತ್ಮ ರಕ್ಷಣೆಗಾಗಿ ಸಿಡಿಸಿದ ಗುಂಡು ಎಂದು ಮರಣೋತ್ತರ ಪರೀಕ್ಷೆಯಲ್ಲಿ ದೃಢಪಟ್ಟಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಲಕ್ಕುಂದ ಎಂಬ ಪ್ರದೇಶವು, ಮಾನವ ಪ್ರಾಣ ಹಾನಿಯಾದ ಸ್ಥಳದ ಸಮೀಪವೇ ಇದೆ. ಮರಣೋತ್ತರ ಪರೀಕ್ಷೆಯಲ್ಲಿ ಸಂಗ್ರಹಿಸಿದ ಮಾದರಿಗಳನ್ನು, ವಿಧಿ ವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ. ವರದಿ ಬಂದ ಮೇಲೆ ಹುಲಿಯ ಸಾವಿಗೆ ನಿಖರ ಕಾರಣ ತಿಳಿಯಲಿದೆ' ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿಜಯಕುಮಾರ್ ಗೋಗಿ ತಿಳಿಸಿದ್ದಾರೆ.

ಶಿಬಿರ ತೆರವು: ಬೆಳ್ಳೂರು ಗ್ರಾಮದಲ್ಲಿ ಹುಲಿ ಸೆರೆ ಕಾರ್ಯಾಚರಣೆಗಾಗಿ ಸ್ಥಾಪಿಸಿದ್ದ ಶಿಬಿರವನ್ನು ಅರಣ್ಯ ಇಲಾಖೆ ತೆರವುಗೊಳಿಸಿದೆ.

ಪೊನ್ನಂಪೇಟೆ ತಾಲ್ಲೂಕಿನಲ್ಲಿ ಇನ್ನೂ ಹಲವು ಹುಲಿಗಳಿದ್ದು, ಸೆರೆ ಹಿಡಿಯುವಂತೆ ನಾಗರಿಕರು ಒತ್ತಾಯಿಸಿದ್ದಾರೆ.

> ಒಂದು ತಿಂಗಳು ನಿರಂತರವಾಗಿ ಕಾರ್ಯಾಚರಣೆ ನಡೆಸಿದ್ದರಿಂದ ಸಿಬ್ಬಂದಿಗೂ ವಿಶ್ರಾಂತಿ ಅಗತ್ಯವಿದೆ. ಆ ಬಳಿಕ ಕಾರ್ಯಾಚರಣೆ ಆರಂಭಿಸಬೇಕು
> **ಕಾಡ್ಯಮಾಡ ಮನು ಸೋಮಯ್ಯ**, ಜಿಲ್ಲಾ ಅಧ್ಯಕ್ಷ, ರೈತ ಸಂಘ



ಪೊನ್ನಂಪೇಟೆ ತಾಲ್ಲೂಕಿನ ಬೆಳ್ಳೂರಿನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿದರು

ತಣ್ಣಗಾಗದ ರೈತರ ಆಕ್ರೋಶ: ಮತ್ತೆರಡು ಹುಲಿಗಳ ದರ್ಶನ

ಜನರು ಹಾಗೂ ಜಾನುವಾರುಗಳ ಮೇಲೆ ದಾಳಿ ನಡೆಸಿ ಅಪಾಯಕಾರಿ ಎನ್ನಲಾದ ಹುಲಿಯ ಮೃತದೇಹ ಸಿಕ್ಕರೂ ರೈತರು ಹಾಗೂ ಕಾರ್ಮಿಕರ ಆಕ್ರೋಶ ತಣ್ಣಗಾಗಿಲ್ಲ. ಇನ್ನೂ ಕೆಲವು ದಿನಗಳ ಕಾಲ ಪೊನ್ನಂಪೇಟೆ ತಾಲ್ಲೂಕಿನ ಬೆಳ್ಳೂರಿನಲ್ಲಿ ಪ್ರತಿಭಟನೆ ಮುಂದುವರಿಸಲು ರೈತರು ಹಾಗೂ ಕಾರ್ಮಿಕರು ಶನಿವಾರ ನಿರ್ಧರಿಸಿದ್ದಾರೆ.

ಬೆಳ್ಳೂರಿನ ಪ್ರತಿಭಟನಾ ಸ್ಥಳದಲ್ಲಿ ರೈತ ಸಂಘದ ಕೊಡಗು ಜಿಲ್ಲಾ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿ, 'ಅಪಾಯಕಾರಿ ಹುಲಿಯು ಮೃತಪಟ್ಟಿದೆ ಎಂದು ಅರಣ್ಯಾಧಿಕಾರಿಗಳು ಹೇಳಿದ್ದಾರೆ. ಆದರೆ, ಸಾರ್ವಜನಿಕ ವಲಯದಲ್ಲಿ ಸಂಶಯವಿದೆ. ಅಧಿಕಾರಿಗಳು, ಈ ಸಂಶಯ ನಿವಾರಿಸಬೇಕು. ಉಳಿದ ಹುಲಿಗಳನ್ನೂ ಸೆರೆ ಹಿಡಿಯಬೇಕು' ಎಂದು ಕೋರಿದರು.

'ಮಾರ್ಚ್ 22ರಂದು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಅರಣ್ಯ ಸಚಿವ ಅರವಿಂದ ಲಿಂಬಾವಳಿ ಅವರನ್ನು ಭೇಟಿ ಮಾಡಿ, ಕೊಡಗು ರೈತರ ಸಮಸ್ಯೆ ಬಗ್ಗೆ ವಿವರಿಸಲಾಗುವುದು. ಅಲ್ಲಿಯ ತನಕ ಹೋರಾಟ ಮುಂದುವರಿಯಲಿದೆ' ಎಂದು ಪ್ರಕಟಿಸಿದರು. ಅದಕ್ಕೆ ಪ್ರತಿಭಟನಾಕಾರರು ಒಪ್ಪಿಗೆ ಸೂಚಿಸಿದರು.

ನಿರಂತರವಾಗಿ ಅಹೋರಾತ್ರಿ ಚಳವಳಿ ನಡೆಯುತ್ತಿದ್ದು, ಕೆಲವು ದಿನಗಳ ಮಟ್ಟಿಗೆ ಪ್ರತಿಭಟನೆ ಮುಂದುವರಿಸುವುದು ಅನಿವಾರ್ಯ ಎಂದು ಪುನರುಚ್ಚರಿಸಿದರು. ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಅಜ್ಜಮಾಡ ಕಟ್ಟಿ ಮಂದಯ್ಯ ಮಾತನಾಡಿ, ಹುಲಿ ಹಾವಳಿಯ ಬಗ್ಗೆ ನಿರಂತರ ಹೋರಾಟ ಮಾಡಿದ್ದರಿಂದ ಪರಿಹಾರ ಸಿಗಲು ಸಾಧ್ಯ. ಕೊಡಗು ಜನರ ತಾಳ್ಮೆ ಪರೀಕ್ಷಿಸದೆ ಬಿಸಿ, ರಾಜ್ಯ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ಹುಲಿಗಳ ದರ್ಶನ (ನಾಪೋಕ್ಲು ವರದಿ): ಸಮೀಪದ ಕುಂಜಿಲ ಗ್ರಾಮದಲ್ಲಿ ಎರಡು ಹುಲಿಗಳು ಕಾಣಿಸಿಕೊಂಡಿದ್ದು, ಗ್ರಾಮಸ್ಥರು ತಿಳಿಸಿದ್ದಾರೆ.

ಶನಿವಾರ ಬೆಳಿಗ್ಗೆ 6.45ರ ವೇಳೆಗೆ ಕಾಫಿ ತೋಟದಲ್ಲಿ ಹುಲಿಗಳನ್ನು ನೋಡಿರುವುದಾಗಿ, ಪುದಿಯ ಅಬೂಬಕರ್ ಎಂಬುವವರ ತೋಟದ ಮಾಲೀಕ ಪಕ್ಕಂಗಡ ಮೂಸ ಅವರಿಗೆ ತಿಳಿಸಿದ್ದಾರೆ. ವಿಷಯ ತಿಳಿದ ಅರಣ್ಯಾಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ.

'ಬೆಂಗಳೂರಿಗೂ ದಿಗ್ಬಂಧನ ಹಾಕಿ'

ಒಂದನೇ ಪುಟದಿಂದ

'ಅವರು ಒಟ್ಟಾಗಲು ಹಕ್ಕಿಲ್ಲ. ಅವರ ಪರವೂ ಧ್ವನಿ ಎತ್ತಬೇಕಿದೆ. ಯುವ ಜನರನ್ನು ಭೂಮಿಯ ಜತೆ ಬೆಸೆಯುವ ಕೆಲಸವಾಗಬೇಕು. ಯುವಪೀಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಒಳಗೊಳ್ಳಬೇಕು. ಇಲ್ಲದಿದ್ದರೆ ಹೋರಾಟಕ್ಕೆ ಭವಿಷ್ಯ ಇರುವುದಿಲ್ಲ. ಜೈರಾಮ್, ಜೈ ಭೀಮ್ ಘೋಷಣೆ ಒಟ್ಟಿಗೆ ಮೊಳಗದೆ ಆಂದೋಲನ ಯಶಸ್ವಿಯಾಗುವುದಿಲ್ಲ' ಎಂದರು.

ಡಾ.ದರ್ಶನ್ ಪಾಲ್, 'ಜನರು ಕೋವಿಡ್ ಸಂಕಷ್ಟದಲ್ಲಿ ಇದ್ದಾಗ ಸುಗ್ರಿವಾಜ್ಞೆ ಮೂಲಕ ರೈತ ವಿರೋಧಿ ಕೃಷಿ ಮಸೂದೆಗಳನ್ನು ಜಾರಿಗೆ ತರಲಾಗಿದೆ. ದೇಶದ ರೈತರಿಗೆ ಅನ್ಯಾಯ ಮಾಡುವ ಸರ್ಕಾರಗಳು ಭಸ್ಮವಾಗುತ್ತವೆ. ಪಂಜಾಬ್, ಹರಿಯಾಣ, ಉತ್ತರ ಪ್ರದೇಶದ ರೈತರು ನಿರಂತರ ಹೋರಾಟ ನಡೆಸುತ್ತಿದ್ದಾರೆ. ರೈತರ ಒಗ್ಗಟ್ಟಿನ ಹೋರಾಟ ಇದೇ ರೀತಿ ಮುಂದುವರಿದರೆ ಎನ್‌ಡಿಎ ಸರ್ಕಾರ ಪತನ ಕಾಣಲಿದೆ' ಎಂದು ಭವಿಷ್ಯ ನುಡಿದರು.

'ಪಂಜಾಬ್ ರೈತ ಮುಖಂಡರು ಭಿನ್ನಾಭಿಪ್ರಾಯ ಮರೆತ ಕಾರಣ ದೆಹಲಿ ಗಡಿ ತಲುಪಿದೆವು. ನೀವೂ ಒಗ್ಗಟ್ಟು ಪ್ರದರ್ಶಿಸಿದರೆ ಇನ್ನಷ್ಟು ಶಕ್ತಿ ಬರುತ್ತದೆ. ಗುರಿ ಮುಟ್ಟುವವರೆಗೂ ಹೋರಾಟ ನಿಲ್ಲದು. ಬಾಂಬ್‌ಗಳ ಸುರಿಮಳೆಗರೆದರೂ ಅಲ್ಲಿಂದ ಕದಲುವುದಿಲ್ಲ' ಎಂದು ಘೋಷಿಸಿದರು. ರೈತ ಮುಖಂಡರಾದ ಶೋಭಾ ಸುಂದರೇಶ್, ಚುಕ್ಕಿ ನಂಜುಂಡಸ್ವಾಮಿ, ಕೋಡಿಹಳ್ಳಿ ಚಂದ್ರ ಶೇಖರ್ ಉಪಸ್ಥಿತರಿದ್ದರು. ರೈತ ವಿರೋಧಿ ಕೃಷಿ ಕಾಯ್ದೆಗಳನ್ನು ವಾಪಸ್ ಪಡೆಯಬೇಕು ಹಾಗೂ ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕು ಎಂದು ನಿರ್ಣಯ ಅಂಗೀಕರಿಸಲಾಯಿತು.

ಡ್ಯಾನ್ಸರ್ ಮಹಿಳೆ ಗಾಯಗೊಂಡರೆ ಮೋದಿ ಟ್ವೀಟ್!: 'ಯಾರೋ ಡ್ಯಾನ್ಸರ್ ಮಹಿಳೆ ಗಾಯಗೊಂಡರೆ ಟ್ವೀಟ್ ಮಾಡುವ ಪ್ರಧಾನಿ ಮೋದಿ, ರೈತರು ಸತ್ತರೂ ಏಕೆ ಪ್ರತಿಕ್ರಿಯಿಸುವುದಿಲ್ಲ' ಎಂದು ಸಂಯುಕ್ತ ಕಿಸಾನ್ ಮೋರ್ಚಾ ಮುಖಂಡ ಯುದ್ಧ್‌ವೀರ್ ಸಿಂಗ್ ಪ್ರಶ್ನಿಸಿದರು.

ಸಿ.ಡಿ. ಪ್ರಕರಣ: ಗ್ರಾನೈಟ್ ಉದ್ಯಮಿ ಮನೆ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರದ್ದು ಎನ್ನಲಾದ ಸಿ.ಡಿ ಪ್ರಕರಣದಲ್ಲಿ ಭಾಗಿಯಾಗಿರುವ ಆರೋಪಿಗಳೊಂದಿಗೆ ಸಂಪರ್ಕದಲ್ಲಿದ್ದ ಆರೋಪದಡಿ ಜೆ.ಪಿ. ನಗರದಲ್ಲಿ ವಾಸವಿದ್ದ ಗ್ರಾನೈಟ್ ಉದ್ಯಮಿ ಶಿವಕುಮಾರ್ ಮನೆ ಮೇಲೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಶನಿವಾರ ದಾಳಿ ನಡೆಸಿದರು.

ಪ್ರಕರಣದ ಆರೋಪಿಗಳ ಜೊತೆಗೆ ಶಿವಕುಮಾರ್ ಸಂಪರ್ಕದಲ್ಲಿದ್ದರು ಹಾಗೂ ಸಿ.ಡಿ ಬಿಡುಗಡೆ ವಿಚಾರವಾಗಿ ಆರೋಪಿಗಳಿಗೆ ನೆರವು ನೀಡಿದ್ದಾಗಿ ಎಸ್‌ಐಟಿಗೆ ಮಾಹಿತಿ ಸಿಕ್ಕಿತ್ತು.

'ನ್ಯಾಯಾಲಯದಿಂದ ವಾರಂಟ್ ಪಡೆದು, ಶಿವಕುಮಾರ್ ಮನೆ ಮೇಲೆ ದಾಳಿ ನಡೆಸಲಾಯಿತು. ಈ ವೇಳೆ ಮನೆಯಲ್ಲಿ ಸಿಕ್ಕ ಕೆಲವು ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಲಾಗಿದೆ. ಬಳಿಕ ಶಿವಕುಮಾರ್ ಅವರನ್ನು ಆಡುಗೋಡಿಯಲ್ಲಿರುವ ತಾಂತ್ರಿಕ ಘಟಕದಲ್ಲಿ ವಿಚಾರಣೆ ನಡೆಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಕನಕಪುರದವರಾದ ಶಿವಕುಮಾರ್, ಹಲವಾರು ವರ್ಷಗಳಿಂದ ಗ್ರಾನೈಟ್ ಉದ್ಯಮ ನಡೆಸುತ್ತಿದ್ದಾರೆ. ಸಿ.ಡಿ ಬಿಡುಗಡೆಗೂ ಮುನ್ನ ಇವರು ಆರೋಪಿಗಳ ಜೊತೆ ಸಂಭಾಷಣೆ ನಡೆಸಿರುವ ಮಾಹಿತಿ ತನಿಖೆ ವೇಳೆ ಎಸ್‌ಐಟಿ ಅಧಿಕಾರಿಗಳಿಗೆ ಸಿಕ್ಕಿತ್ತು. ಪ್ರಕರಣದ ನಂತರ ಶಿವಕುಮಾರ್ ನಾಪತ್ತೆಯಾಗಿದ್ದರು. ಕೇರಳದಲ್ಲಿ ಕೊನೆಯದಾಗಿ ಅವರ ಮೊಬೈಲ್ ಸ್ವಿಚ್ ಆಫ್ ಆಗಿತ್ತು' ಎಂದೂ ಮೂಲಗಳು ಹೇಳಿವೆ.

ಯುವತಿಯ ಪೋಷಕರು ಸಿಗಲಿಲ್ಲ: ಮಾಹಿತಿ ಕಲೆ ಹಾಕಿದ ಎಸ್‌ಐಟಿ

ಬೆಳಗಾವಿ: ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ. ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಅಧಿಕಾರಿಗಳು, ಶನಿವಾರ ನಗರಕ್ಕೆ ಬಂದು ಮಾಹಿತಿ ಕಲೆ ಹಾಕಿದರು.

ಎಸ್‌ಐಟಿ ತಂಡದಲ್ಲಿರುವ ಸಿಸಿಬಿ ಡಿವೈಎಸ್ಪಿ ಎಸ್.ಎಂ. ನಾಗರಾಜ್ ಸೇರಿದಂತೆ ಐವರ ತಂಡ, ಸಿ.ಡಿ.ಯಲ್ಲಿರುವ ಯುವತಿಯ ಪೋಷಕರನ್ನು ಭೇಟಿಯಾಗಲು ನಡೆಸಿದ ಯತ್ನ ಫಲ ನೀಡಲಿಲ್ಲ. ಅವರು ವಾಸವಿದ್ದ ಬಾಡಿಗೆ ಮನೆಯ ಮಾಲೀಕರಿಂದ ಕೆಲ ಮಾಹಿತಿ ಪಡೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕೆಲವು ದಿನಗಳಿಂದ ಅವರು ಮನೆಯಲ್ಲಿಲ್ಲ. ಎಲ್ಲಿ ಹೋಗಿದ್ದಾರೆ ಎಂಬ ಮಾಹಿತಿ ಇಲ್ಲ. ಅವರು ಸಂಪರ್ಕಕ್ಕೆ ಬಂದರೆ ತಿಳಿಸಲಾಗುವುದು' ಎಂದು ಮನೆ ಮಾಲೀಕರು ತಿಳಿಸಿದ್ದಾರೆ ಎಂದು ಗೊತ್ತಾಗಿದೆ. ಯುವತಿಯ ಕುಟುಂಬದವರು ಅಜ್ಞಾತ ಸ್ಥಳಕ್ಕೆ ತೆರಳಿದ್ದಾರೆ ಎನ್ನಲಾಗುತ್ತಿದೆ.

'ಮಗಳನ್ನು ಅಪಹರಿಸಲಾಗಿದೆ' ಎಂದು ಯುವತಿಯ ತಂದೆ ಇಲ್ಲಿನ ಎಪಿಎಂಸಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪ್ರಕರಣವನ್ನು ಇಲ್ಲಿಂದ ಬೆಂಗಳೂರಿನ ಆರ್‌.ಟಿ. ನಗರ ಪೊಲೀಸ್ ಠಾಣೆಗೆ, ಬಳಿಕ ಎಸ್‌ಐಟಿಗೆ ವರ್ಗಾಯಿಸಲಾಗಿತ್ತು.

'ನಾಯಕ'ರ ಜತೆ ನಂಟು!

'ರಾಷ್ಟ್ರೀಯ ಪಕ್ಷವೊಂದರ ನಾಯಕರೊಬ್ಬರ ಜತೆಗೆ ಗ್ರಾನೈಟ್ ಉದ್ಯಮಿ ಶಿವಕುಮಾರ್ ಹಲವು ವರ್ಷಗಳಿಂದ ಒಡನಾಟ ಇಟ್ಟುಕೊಂಡಿರುವ ಮಾಹಿತಿ ಸಿಕ್ಕಿದೆ. ಈ ಬಗ್ಗೆ ವಿಚಾರಣೆ ವೇಳೆ ಮಾಹಿತಿ ಕಲೆ ಹಾಕಲಾಗುವುದು. ಅವರಿಂದ ಹೇಳಿಕೆ ಪಡೆದು, ತನಿಖೆ ಮುಂದುವರಿಸಲಾಗುವುದು. ಒಂದು ವೇಳೆ ಪ್ರಕರಣದಲ್ಲಿ ನಾಯಕರ ಪಾತ್ರವಿದ್ದಲ್ಲಿ, ಅವರ ವಿರುದ್ಧವೂ ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಅಪಹರಣ ಪ್ರಕರಣ ಎಸ್‌ಐಟಿಗೆ

'ಸಿ.ಡಿ ಪ್ರಕರಣದಲ್ಲಿ ಯುವತಿಯ ತಂದೆ ನೀಡಿರುವ ಅಪಹರಣ ಪ್ರಕರಣವನ್ನು ಎಸ್‌ಐಟಿಗೆ ವರ್ಗಾವಣೆ ಮಾಡಲಾಗಿದ್ದು, ಎಲ್ಲವೂ ತನಿಖಾ ಹಂತದಲ್ಲಿದೆ. ಹೆಚ್ಚಿನ ಮಾಹಿತಿ ಬಹಿರಂಗ ಪಡಿಸಲು ಸಾಧ್ಯವಿಲ್ಲ' ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ತಿಳಿಸಿದರು

ಮಸ್ಕಿ ಸಮಗ್ರ ಅಭಿವೃದ್ಧಿಗೆ ಒತ್ತು: ಸಿ.ಎಂ


ಮಸ್ಕಿ: 'ನೀರಾವರಿ ಯೋಜನೆ ಮಾಡಿಕೊಡುವುದೂ ಸೇರಿದಂತೆ ಮಸ್ಕಿ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡುವೆ' ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭರವಸೆ ನೀಡಿದರು.

ಮಸ್ಕಿಯಲ್ಲಿ ಶನಿವಾರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ಮಸ್ಕಿ ಕ್ಷೇತ್ರ ವ್ಯಾಪ್ತಿಯಲ್ಲಿನ 6 ಜಿಲ್ಲಾ ಪಂಚಾಯಿತಿ ಕ್ಷೇತ್ರಗಳಿಗೂ ನಾನು ಮತ್ತು ಸಚಿವರಾದ ಗೋವಿಂದ ಕಾರಜೋಳ, ಶ್ರೀರಾಮುಲು ಭೇಟಿ ನೀಡುತ್ತೇವೆ. ಎಲ್ಲರನ್ನೂ ಭೇಟಿಯಾಗಿ, ಅಹವಾಲು ಆಲಿಸಿ ಸಮಸ್ಯೆ ಪರಿಹರಿಸಲು ಪ್ರಯತ್ನಿಸುತ್ತೇವೆ' ಎಂದರು.



ಬಾಗಲಕೋಟೆಯ ಬಸವೇಶ್ವರ ಕಲಾ ವಿದ್ಯಾಲಯದಲ್ಲಿ ಕೆ.ಎಸ್‌.ನರಸಿಂಹಸ್ವಾಮಿ ಟ್ರಸ್ಟ್ ವತಿಯಿಂದ ಶನಿವಾರ ನಡೆದ ಸಮಾರಂಭದಲ್ಲಿ ಕವಯತ್ರಿ ಪ್ರೊ.ಮಲ್ಲಿಕಾ ಘಂಟಿ ಅವರಿಗೆ ಕೆ.ಎಸ್‌.ನರಸಿಂಹಸ್ವಾಮಿ ಕಾವ್ಯ ಪ್ರಶಸ್ತಿಯನ್ನು ರಾಜ್ಯ ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ಪ್ರದಾನ ಮಾಡಿದರು. ಕಾಲೇಜಿನ ಪ್ರಾಚಾರ್ಯ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಬಿ.ವಿ.ವಿ ಸಂಘದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಜಿ.ಎಸ್‌.ಸೂಳಿಭಾವಿ, ಸಂಘದ ಕಾರ್ಯದರ್ಶಿ ವೀರಣ್ಣ ಅಥಣಿ, ಕೆ.ಎಸ್‌.ನರಸಿಂಹಸ್ವಾಮಿ ಟ್ರಸ್ಟ್ ಅಧ್ಯಕ್ಷ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ, ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಡಾ. ಕಿಕ್ಕೇರಿ ಕೃಷ್ಣಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್‌.ಉದಯಕುಮಾರ, ಟ್ರಸ್ಟ್‌ನ ಸದಸ್ಯ ಸಂಚಾಲಕ ಡಾ.ವೆಂಕಟಗಿರಿ ದಳವಾಯಿ ಇದ್ದಾರೆ



ಬಣ್ಣ ಅಭಿನಯ ಶಾಲೆಯ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಕಲಾವಿದ ನಾಗರಾಜ ಕೋಟೆ ದಂಪತಿಯನ್ನು ಅಭಿನಂದಿಸಲಾಯಿತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್‌.ನಾಗಾಭರಣ, ಜೈನ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮಂಜುನಾಥ್ ಪಾಳ್ಯ, ಬಣ್ಣ ಅಭಿನಯ ಶಾಲೆಯ ವ್ಯವಸ್ಥಾಪಕ ದೇವರಾಜ್ ಹಾಗೂ ವಿದ್ಯಾರ್ಥಿಗಳು ಇದ್ದರು.

'ಲವ್ ಜಿಹಾದ್ ಸಹಿಸಲ್ಲ'

ಒಂದನೇ ಪುಟದಿಂದ

ಹುಡುಗಿಯರು ಹರಿದಿರುವ ಜೀನ್ಸ್ ಧರಿಸುವ ಬಗ್ಗೆ ಟೀಕಿಸಿ ಉತ್ತರಾಖಂಡ ಮುಖ್ಯಮಂತ್ರಿ ನೀಡಿರುವ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಹೊಸಬಾಳೆ, 'ಆರೆಸ್ಸೆಸ್‌ನಿಂದಾಗಿ ದೇಶದಲ್ಲಿ ಎಲ್ಲವೂ ನಡೆಯುತ್ತದೆ ಎಂದಲ್ಲ. ಎಲ್ಲ ಆರೋಪಗಳಿಗೆ ಆರೆಸ್ಸೆಸ್ ಅನ್ನು ದೂರಲು ಯಾವುದೇ ಸಕಾರಣ ಇಲ್ಲ. ಆರೆಸ್ಸೆಸ್ ಏನೇ ಮಾಡಿದರೂ ಎಲ್ಲರ ಅಭಿಪ್ರಾಯ ಪಡೆದು ಬಹಿರಂಗವಾಗಿ ಮಾಡುತ್ತದೆ' ಎಂದರು.

'ಉಡುಪಿಯ ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಅವರು ಇತ್ತೀಚೆಗೆ, ಬ್ರಾಹ್ಮಣ ಸಮುದಾಯದ ಯುವತಿಯರು ಬೇರೆ ಜಾತಿಗೆ ಸೇರಿದ ಯುವಕರನ್ನು ಮದುವೆ ಆಗಬಾರದು ಎಂದು ಹೇಳಿರುವ ಸಂದರ್ಭ ಮತ್ತು ಅದರ ಹಿನ್ನೆಲೆಯ ಬಗ್ಗೆ ನನಗೆ ಗೊತ್ತಿಲ್ಲ. ಆದರೆ, ಅಂತರಜಾತಿ ವಿವಾಹವನ್ನು ಆರೆಸ್ಸೆಸ್ ಎಂದೂ ವಿರೋಧಿಸುವುದಿಲ್ಲ. ಜಾತಿ, ಸಮುದಾಯ ಇತ್ಯಾದಿ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಸಮಾಜದ ಶ್ರೇಯಕ್ಕೆ ಕೆಲಸ ಮಾಡುತ್ತದೆ' ಎಂದರು.

'ಮೀಸಲಾತಿ ಮುಂದುವರಿಸಬೇಕೇ ಎಂಬ ಬಗ್ಗೆ ಆರೆಸ್ಸೆಸ್ ಈಗಾಗಲೇ ನಿಲುವು ಸ್ಪಷ್ಟಪಡಿಸಿದೆ. ಸಮಾಜದಲ್ಲಿ ಅಗತ್ಯವಿರುವವರೆಗೂ ಮೀಸಲಾತಿ ಅಸ್ತಿತ್ವದಲ್ಲಿರಬೇಕು. ಆರೆಸ್ಸೆಸ್ ಕೂಡ ಈ ಬಗ್ಗೆ ನಿರ್ಣಯ ಅಂಗೀಕರಿಸಿದೆ. ಸಮಾಜದಲ್ಲಿ ತಾರತಮ್ಯ ಇರುವವರೆಗೂ ಮೀಸಲಾತಿ ಅಗತ್ಯವೆಂದು ಸಂವಿಧಾನ ಹೇಳುತ್ತದೆ. ಅದಕ್ಕೆ ಆರೆಸ್ಸೆಸ್ ಕೂಡಾ ಬದ್ಧ' ಎಂದು ಸ್ಪಷ್ಟಪಡಿಸಿದರು. 'ಆರೆಸ್ಸೆಸ್ ಧಾರ್ಮಿಕ ಸಂಘಟನೆ ಯಲ್ಲ. ರಾಷ್ಟ್ರೀಯವಾದಿ ಸಂಘಟನೆ. ಹೀಗಾಗಿ, ಯುವಕರು ಹೆಚ್ಚಾಗಿ ಆರೆಸ್ಸೆಸ್ ಮತ್ತು ಅದರ ಸಾಮಾಜಿಕ ಕಾರ್ಯಗಳಿಗೆ ಆಕರ್ಷಿತರಾಗಿ ರಾಷ್ಟ್ರ ನಿರ್ಮಾಣ ಕಾರ್ಯಗಳಲ್ಲಿ ಕೈಜೋಡಿಸುತ್ತಿದ್ದಾರೆ' ಎಂದರು.

ಮುಂದಿನ ಯೋಜನೆ: '2025 ರಲ್ಲಿ ಆರೆಸ್ಸೆಸ್‌ಗೆ ನೂರನೇ ವರ್ಷ ತುಂಬುತ್ತಿರುವ ಸಮಯದಲ್ಲಿ ಭಾರತದಾದ್ಯಂತ ಸಂಘ ಕಾರ್ಯವನ್ನು ಪ್ರತಿ ಮಂಡಲದ ತನಕ ತಲುಪಿಸಲು ನಿರ್ಣಯಿಸಲಾಗಿದೆ. ಪರಿವಾರ ಪ್ರಬೋಧನ, ಗೋಸೇವಾ, ಪರಿಸರ ಸಂರಕ್ಷಣೆ, ಜಲಸಂರಕ್ಷಣೆ, ಸಮಾಜ ಸಾಮರಸ್ಯ, ಗ್ರಾಮ ವಿಕಾಸ ಇತ್ಯಾದಿ ಸಮಾಜ ಹಿತ ಕಾರ್ಯಗಳಲ್ಲಿ ಸಂಘ ತೊಡಗಿಸಿಕೊಳ್ಳಲಿದೆ. ಭಾರತೀಯ ವಿಚಾರಗಳನ್ನು ಸರಿಯಾದ ದೃಷ್ಟಿಕೋನದಲ್ಲಿ ವೈಚಾರಿಕವಾಗಿ ಮಂಡಿಸಲಾಗುವುದು. ಭಾರತದ ಕಲ್ಪನೆ ಏನು ಎಂದು ವಿಶ್ವದ ಮುಂದೆ ಮಂಡಿಸಲು ಅಭಿಯಾನವನ್ನು ಮುಂದಿನ ಮೂರು ವರ್ಷ ಹಮ್ಮಿಕೊಳ್ಳಲಾಗುವುದು' ಎಂದರು.

'ರಾಮ ಮಂದಿರ ನಿರ್ಮಾಣ; ಭಾರತದ ಶಕ್ತಿ ಪ್ರದರ್ಶನ ಮತ್ತು ಕೋವಿಡ್ ವಿರುದ್ಧ ಏಕತೆ ಪ್ರದರ್ಶನ ಎಂಬ ಎರಡು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ರಾಮಮಂದಿರ ನಿರ್ಮಾಣಕ್ಕೆ ನಿಧಿ ಸಂಗ್ರಹಕ್ಕೆ ಆರೆಸ್ಸೆಸ್ ಭಾಗಿಯಾಗಿದೆ. ಇದಕ್ಕೆ ಕೈ ಜೋಡಿಸಿದ ಎಲ್ಲರಿಗೂ ಅಭಿನಂದನೆ' ಎಂದರು.

ಸಂಘದ ಎರಡನೇ ಉನ್ನತ ಹುದ್ದೆಗೇರಿದ ಕನ್ನಡಿಗ

ಬೆಂಗಳೂರು: ಆರೆಸ್ಸೆಸ್‌ನ ನೂತನ ಸರಕಾರ್ಯವಾಹ ಆಗಿ ನೇಮಕಗೊಂಡಿರುವ ದತ್ತಾತ್ರೇಯ ಹೊಸಬಾಳೆ ಅವರು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಹೊಸಬಾಳೆ ಗ್ರಾಮದವರು. ದತ್ತಾಜಿ ಎಂದೇ ಆರೆಸ್ಸೆಸ್ ವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

1954ರ ಡಿ. 1ರಂದು ಜನಿಸಿದ ಅವರು ತಮ್ಮ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣವನ್ನು ಸಾಗರದಲ್ಲಿ ಪಡೆದಿದ್ದಾರೆ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಕಾಲೇಜು ಶಿಕ್ಷಣ ಪಡೆದರು. ಅಲ್ಲಿ ಎಚ್. ನರಸಿಂಹಯ್ಯ ಅವರ ಒಡನಾಟ ಮತ್ತು ಮಾರ್ಗದರ್ಶನ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಅವರು ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

1968ರಲ್ಲಿ ಅವರು ಆರೆಸ್ಸೆಸ್ ಪ್ರವೇಶಿಸಿದ್ದರು. 1972ರಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಸದಸ್ಯರಾಗಿ, ಬಳಿಕ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಯಾಗಿ 15 ವರ್ಷ ಕೆಲಸ ಮಾಡಿದ್ದಾರೆ. ತುರ್ತುಪರಿಸ್ಥಿತಿ ಸಂದರ್ಭದಲ್ಲಿ 'ಮೀಸಾ' (ಆಂತರಿಕ ಭದ್ರತೆ ಕಾಯ್ದೆಯ ನಿರ್ವಹಣೆ) ಅಡಿ ಬಂಧನಕ್ಕೆ ಒಳಗಾಗಿ 17 ತಿಂಗಳು ಸೆರೆವಾಸ ಅನುಭವಿಸಿದ್ದಾರೆ. ನಂತರದ ದಿನಗಳಲ್ಲಿ ಹೊ.ವೆ. ಶೇಷಾದ್ರಿ ಅವರ ಜತೆಯಲ್ಲಿ ತುರ್ತು ಪರಿಸ್ಥಿತಿ ಕುರಿತ 'ಭುಗಿಲು' ಪುಸ್ತಕದ ಸಂಪಾದನಾ ಕೆಲಸ ನಿರ್ವಹಿಸಿದ್ದಾರೆ.

ಸಂಘಟನೆ, ಸಾಮಾಜಿಕ ಸಾಮರಸ್ಯ, ಸಾಹಿತ್ಯ ಮತ್ತು ಕಲೆ ಹೊಸಬಾಳೆಯವರ ಆಸಕ್ತಿಯ ಕ್ಷೇತ್ರಗಳು. ಉತ್ತಮ ವಾಗ್ಮಿ, ಸಂಘಟನಾಕಾರರು ಆಗಿರುವ ಅವರು ಹಲವು ಲೇಖನಗಳನ್ನು ಬರೆದಿದ್ದಾರೆ. ಅವರು ಕನ್ನಡದ ಮಾಸ ಪತ್ರಿಕೆ 'ಅಸೀಮಾ'ದ ಸಂಸ್ಥಾಪಕರು.

2004ರಲ್ಲಿ ಮಾತೃ ಸಂಘಟನೆ ಆರೆಸ್ಸೆಸ್‌ಗೆ ಮರಳಿದ ಅವರು, ಅಖಿಲ ಭಾರತೀಯ ಸಹ ಬೌದ್ಧಿಕ ಪ್ರಮುಖ್ ಹೊಣೆ ಹೊತ್ತರು. ಬಳಿಕ ಸಹ ಸರಕಾರ್ಯವಾಹರಾಗಿ ನೇಮಕ ಆಗಿದ್ದರು.

ಹೊಸಬಾಳೆ ನೂತನ ಸರಕಾರ್ಯವಾಹ

ಒಂದನೇ ಪುಟದಿಂದ

2018ರಲ್ಲಿ ಸತತ ನಾಲ್ಕನೇ ಅವಧಿಗೆ ಆಯ್ಕೆಯಾಗಿದ್ದ ಭಯ್ಯಾಜಿ ಅವರ ಅವಧಿ ಮುಕ್ತಾಯವಾಗಿದೆ.

ಸರಕಾರ್ಯವಾಹ ಹುದ್ದೆಯಲ್ಲಿರುವವರು ಮಾರ್ಗದರ್ಶಕರಾಗಿ ಆರೆಸ್ಸೆಸ್‌ನ ದೈನಂದಿನ ಚಟುವಟಿಕೆಯನ್ನು ನಿರ್ವಹಿಸುತ್ತಾರೆ. ಈ ಹಿಂದೆ ಕರ್ನಾಟಕದ ಹೊ.ವೆ. ಶೇಷಾದ್ರಿ ಅವರು ಸರಕಾರ್ಯವಾಹ ಹುದ್ದೆಯಲ್ಲಿ ಹಲವು ವರ್ಷ ಕಾರ್ಯನಿರ್ವಹಿಸಿದ್ದರು.

ಕೋವಿಡ್: ಗುತ್ತಿಗೆ ನೌಕರರ ಅವಧಿ ವಿಸ್ತರಣೆ

ಬೆಂಗಳೂರು: ಕೋವಿಡ್ ಪ್ರಕರಣಗಳು ಏರಿಕೆಯಾಗುತ್ತಿರುವ ಕಾರಣ ಗುತ್ತಿಗೆ ಮತ್ತು ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿದ್ದ ವೈದ್ಯರು ಮತ್ತು ಆರೋಗ್ಯ ಸಿಬ್ಬಂದಿಯ ಕಾರ್ಯಾವಧಿಯನ್ನು 2021ರ ಸೆ.30ರವರೆಗೆ ವಿಸ್ತರಿಸಿ ಸರ್ಕಾರ ಆದೇಶ ಹೊರಡಿಸಿದೆ.

ಪ್ರತಿ ಜಿಲ್ಲೆಗೆ ತಾತ್ಕಾಲಿಕವಾಗಿ 45 ಹುದ್ದೆಗಳಂತೆ 18 ಜಿಲ್ಲೆಗಳಿಗೆ ಈ ಹಿಂದೆ ನೇಮಕ ಮಾಡಿಕೊಳ್ಳಲಾಗಿತ್ತು. ಇದರಲ್ಲಿ 10 ವೈದ್ಯರು, 20 ಶುಶ್ರೂಷಕರು, 5 ಪ್ರಯೋಗಶಾಲಾ ತಂತ್ರಜ್ಞರು ಹಾಗೂ 10 ಗ್ರೂಪ್ ಡಿ ಸಿಬ್ಬಂದಿ ಸೇರಿದ್ದಾರೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಯ ಒಟ್ಟು 12 ಆಸ್ಪತ್ರೆಗಳಿಗೆ ತಾತ್ಕಾಲಿಕವಾಗಿ 707 ವೈದ್ಯರು ಹಾಗೂ ಸಿಬ್ಬಂದಿಯನ್ನು ನೇರ ಸಂದರ್ಶನದ ಮೂಲಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿತ್ತು. ಪ್ರಯೋಗಾಲಯಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿದಂತೆ ವಿವಿಧೆಡೆ ಅಗತ್ಯ ಇರುವ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲಾಗಿತ್ತು. ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ 2,196 ಕಿರಿಯ ಮಹಿಳಾ ಸಹಾಯಕಿಯರ ಹುದ್ದೆಯನ್ನೂ ತಿಂಗಳಿಗೆ ₹ 15 ಸಾವಿರ ಸಂಚಿತ ವೇತನದಲ್ಲಿ 6 ತಿಂಗಳಿಗೆ ನೇಮಿಸಲಾಗಿತ್ತು.

ಉತ್ತರ ಕರ್ನಾಟಕದ ಬಹುತೇಕ ಶಾಲೆಗಳಲ್ಲಿ ಸಮರ್ಪಕ ಶೌಚಾಲಯಗಳಿಲ್ಲ

ಇಲ್ಲದ ನಿರ್ವಹಣೆ; ತಪ್ಪದ ಬವಣೆ

• ಎಂ.ಮಹೇಶ

ಬೆಳಗಾವಿ: ಶಾಲೆಗಳಲ್ಲಿ ಶೌಚಾಲಯ ಹಾಗೂ ನೀರಿನ ವ್ಯವಸ್ಥೆ ಸಮರ್ಪಕವಾಗಿ ಇಲ್ಲದಿರುವುದರಿಂದ ವಿದ್ಯಾರ್ಥಿಗಳು ಅದರಲ್ಲಿಯೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿನಿಯರು ಆರೋಗ್ಯ ಸಂಬಂಧಿ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅವರು ತಮ್ಮ ಮುಜುಗರ, ತುಮುಲವನ್ನು ಹೇಳಲೂ ಆಗದೆ, ಅನುಭವಿಸಲೂ ಆಗದ ಸ್ಥಿತಿ ಮುಂಬೈ ಹಾಗೂ ಕಲ್ಯಾಣ ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳ ಹಲವು ಸರ್ಕಾರಿ ಶಾಲೆಗಳಲ್ಲಿದೆ.

ಮೂತ್ರ ವಿಸರ್ಜನೆಗೆ ಗಿಡ–ಮರಗಳ 'ಮರೆ'ಯನ್ನು ಹುಡುಕಿಕೊಂಡು ಹೋಗಬೇಕು. ಇಲ್ಲವೇ ತಡೆದುಕೊಂಡು ಯಾತನೆ ಅನುಭವಿಸಬೇಕು ಅಥವಾ ಲಭ್ಯವಿರುವ ಗಲೀಜು ಶೌಚಾಲಯವನ್ನೇ ಬಳಸಬೇಕಾದ ಅನಿವಾರ್ಯತೆ ಅವರದ್ದು. ಇದರಿಂದಾಗಿ ಅವರು ಸೋಂಕಿಗೆ ಒಳಗಾಗುವುದು ಸಾಮಾನ್ಯವಾಗಿದೆ. ಇದು, ಅವರ ಕಲಿಕೆಯ ಮೇಲೂ ಪರಿಣಾಮ ಬೀರುತ್ತಿದೆ. ಶೌಚಾಲಯಕ್ಕೆ ಹೋಗುವ ಸ್ಥಿತಿ ಬರಬಾರದು ಎಂದು ಶಾಲಾ ಅವಧಿಯಲ್ಲಿ ನೀರನ್ನೇ ಕುಡಿಯದ ವಿದ್ಯಾರ್ಥಿನಿಯರೂ ಇದ್ದಾರೆ.

ವಿಜಯಪುರ ಜಿಲ್ಲೆಯಲ್ಲಿ ಎಲ್ಲ ಶಾಲೆಗಳಲ್ಲೂ ಶೌಚಾಲಯಗಳಿವೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆ ಮೂರು ವರ್ಷಗಳ ಹಿಂದೆಯೇ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ. ಆದರೆ, ವಾಸ್ತವ ಹಾಗಿಲ್ಲ. ನೀರಿಲ್ಲದಿರುವುದು ನಿರ್ವಹಣೆಗೆ ತೊಡಕಾಗಿದೆ. ಶೌಚಕ್ಕೆ ಬಯಲಿಗೆ ತೆರಳುವುದು ತಪ್ಪಿಲ್ಲ. ಮೂರು ವರ್ಷಗಳಿಂದ ಇದಕ್ಕಾಗಿ ನಯಾ ಪೈಸೆ ಅನುದಾನವೂ ಬಂದಿಲ್ಲ.



ಬೆಳಗಾವಿ ಜಿಲ್ಲೆ ಕಿತ್ತೂರಿನ 'ಮಾದರಿ' ಶಾಲೆಯ ಶೌಚಾಲಯದ ಸ್ಥಿತಿ ಇರುವುದು ಹೀಗೆ... ಪ್ರಜಾವಾಣಿ ಚಿತ್ರ

ಹಾವೇರಿ, ಧಾರವಾಡ, ಬಳ್ಳಾರಿ, ಗದಗ, ಕಲಬುರ್ಗಿ, ರಾಯಚೂರು, ಯಾದಗಿರಿ ಜಿಲ್ಲೆಗಳ ಬಹುತೇಕ ಶಾಲೆಗಳಲ್ಲಿ ಹೆಸರಿಗಷ್ಟೇ ಶೌಚಾಲಯಗಳಿವೆ. 'ಬಹುತೇಕ ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ; ಇನ್ನು ಶೌಚಾಲಯಕ್ಕೆ ನೀರು ಎಲ್ಲಿಂದ ಬರಬೇಕು' ಎಂದು ಪ್ರಶ್ನಿಸುತ್ತಾರೆ ಒಬ್ಬ ಶಿಕ್ಷಕಿ.

ಹೆಣ್ಣುಮಕ್ಕಳು ಋತುಸ್ರಾವದ ದಿನಗಳಲ್ಲಿ ಶಾಲೆಗೆ ಬರುವುದಿಲ್ಲ. ಶೌಚಾಲಯ ಇಲ್ಲದಿರುವುದೇ ಇದಕ್ಕೆ ಕಾರಣ. ಇದರೊಂದಿಗೆ ಸ್ಯಾನಿಟರಿ ಪ್ಯಾಡ್ ಸುಡುವ ಯಂತ್ರವೂ ಇಲ್ಲದಿರುವುದರಿಂದ ಆ ದಿನಗಳಲ್ಲಿ ಹೆಣ್ಣುಮಕ್ಕಳು ಗೈರಾಗುತ್ತಾರೆ.

ಸರ್ಕಾರಿ–ಖಾಸಗಿ ಶಾಲಾ, ಕಾಲೇಜುಗಳಲ್ಲಿ ಸ್ವಚ್ಛ ಶೌಚಾಲಯ ನಿರ್ಮಿಸಬೇಕು. ಹೆಣ್ಮಕ್ಕಳ ಆರೋಗ್ಯ ರಕ್ಷಣೆಯ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು

ಡಾ.ಭಾರತಿ ಬಿಜಾಪುರ, ಪ್ರಾಂಶುಪಾಲರು, ಅಥಣಿ

ಪಾಠವನ್ನೂ ತಪ್ಪಿಸಿಕೊಳ್ಳುತ್ತಾರೆ ಎನ್ನುತ್ತಾರೆ ಶಿಕ್ಷಕಿಯರು.

ಮುಜುಗರ, ತೊಂದರೆ: ಶಾಲೆಗಳಲ್ಲಿ ಶೌಚಾಲಯದ ವ್ಯವಸ್ಥೆ ಇಲ್ಲದೇ ಇರುವುದು, ಶುಚಿತ್ವ ಹಾಗೂ ನೀರಿನ ಕೊರತೆಯಿಂದಾಗಿ ವಿದ್ಯಾರ್ಥಿನಿಯರು ಆರೋಗ್ಯ ಸಂಬಂಧಿ ಸಮಸ್ಯೆ ಎದುರಿಸುತ್ತಾರೆ ಎನ್ನುತ್ತಾರೆ ಅಥಣಿಯ ಸಂತರಾಮ ಪಿಯು ಕಾಲೇಜಿನ ಪ್ರಾಚಾರ್ಯರಾದ ಡಾ.ಭಾರತಿ ಬಿಜಾಪುರ.

'ನಮ್ಮ ಭಾಗದ ಹಲವು ಹಳ್ಳಿಗಳ ವಿದ್ಯಾರ್ಥಿನಿಯರು ನಗರಕ್ಕೆ ಬರಲು ಬಸ್ ಹಿಡಿಯಬೇಕೆಂದರೆ 4–5 ಕಿಲೊಮೀಟರ್ ನಡೆಯಬೇಕು. ಇದಕ್ಕಾಗಿ ಮುಂಜಾನೆಯೇ ಮನೆ ಬಿಡುತ್ತಾರೆ. ಮೂತ್ರ ವಿಸರ್ಜನೆಗೆ ಅವಸರವಾದರೂ ತಡೆದುಕೊಳ್ಳುತ್ತಾರೆ. ಹೀಗಾಗಿ ಸಣ್ಣ ವಯಸ್ಸಿನಲ್ಲೇ ಅವರಿಗೆ ಹಲವು ಸಮಸ್ಯೆಗಳು ಪ್ರಾರಂಭವಾಗುತ್ತವೆ. ಅದರಲ್ಲೂ ಋತುಸ್ರಾವದ ದಿನಗಳಲ್ಲಿ ಅವರ ಕಷ್ಟ ಹೇಳತೀರದು. ಶೌಚಾಲಯವಿಲ್ಲ ಎನ್ನುವ ಕಾರಣದಿಂದ ಶಾಲೆ–ಕಾಲೇಜು ಬಿಡುವವರೂ ಇದ್ದಾರೆ' ಎಂದು ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಶೇ78ರಷ್ಟು ಮಾತ್ರ ಬಳಕೆ

ಕಲಬುರ್ಗಿ: ಕಲ್ಯಾಣ ಕರ್ನಾಟಕ ಭಾಗದ ಶೇ 98ರಷ್ಟು ಶಾಲೆಗಳಲ್ಲಿ ಶೌಚಾಲಯ ಹಾಗೂ ಶೇ 99ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇದೆ. ಆದರೆ, ಬಳಕೆಯಲ್ಲಿ ಇರುವುದು ಶೇ 78ರಷ್ಟು ಮಾತ್ರ.

ಇಲ್ಲಿ ಒಟ್ಟು 2,813 ಕಿರಿಯ ಪ್ರಾಥಮಿಕ ಶಾಲೆಗಳು, 3,820 ಹಿರಿಯ ಪ್ರಾಥಮಿಕ, 1,031 ಪ್ರೌಢಶಾಲೆ ಹಾಗೂ ಪದವಿಪೂರ್ವ ಕಾಲೇಜುಗಳು ಇವೆ. ಇವುಗಳಲ್ಲಿ ಶೇ 98ರಷ್ಟು ಕಿರಿಯ ಪ್ರಾಥಮಿಕ, ಶೇ 99ರಷ್ಟು ಹಿರಿಯ ಪ್ರಾಥಮಿಕ ಹಾಗೂ ಶೇ 99ರಷ್ಟು ಪ್ರೌಢಶಾಲೆಗಳಲ್ಲಿ ಶೌಚಾಲಯ ನಿರ್ಮಿಸಲಾಗಿದೆ. ಇನ್ನೂ 76 ಕಿರಿಯ ಪ್ರಾಥಮಿಕ, 51 ಹಿರಿಯ ಪ್ರಾಥಮಿಕ ಹಾಗೂ 11 ಪ್ರೌಢಶಾಲೆ–ಪದವಿಪೂರ್ವ ಕಾಲೇಜುಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕು ಎಂದು 'ಯುನೈಟೆಡ್ ಡಿಸ್ಟ್ರಿಕ್ಟ್ ಇನ್ಫರ್ಮೇಷನ್ ಸಿಸ್ಟಂ ಫಾರ್ ಎಜುಕೇಷನ್ (ಯುಡಿಐಎಸ್‌ಇ)' ನ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ (ಕೆಕೆಆರ್‌ಡಿಬಿ)ಯಿಂದಲೂ ಶಾಲೆಗಳ ಮೂಲಸೌಲಭ್ಯಕ್ಕೆ ಅನುದಾನ ಬಳಸಲಾಗುತ್ತಿದೆ. 2019ರವರೆಗೆ ಶೇ 36ರಷ್ಟು ಶಾಲೆಗಳಿಗೆ ಶೌಚಾಲಯ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಂಡಳಿ ಕಲ್ಪಿಸಿದೆ.

2020–21ನೇ ಸಾಲಿನಲ್ಲಿ ಮಂಡಳಿಯು ಒಟ್ಟು 661 ಕಾಮಗಾರಿಗಳ ಕ್ರಿಯಾ ಯೋಜನೆ ಸಿದ್ಧಪಡಿಸಿದ್ದು, ₹ 205 ಕೋಟಿ ವೆಚ್ಚವಾಗುತ್ತದೆ ಎಂದು ಅಂದಾಜಿಸಿದೆ. ಆದರೆ, ಕೊರೊನಾ ಕಾರಣದಿಂದಾಗಿ ಮಂಡಳಿಗೆ ಅನುದಾನ ಕಡಿತಗೊಂಡಿದ್ದರಿಂದ ಇದುವರೆಗೆ ಯಾವುದೇ ಕಾಮಗಾರಿಗೆ ಮಂಜೂರಾತಿ ಸಿಕ್ಕಿಲ್ಲ.

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುದಾನವಿಲ್ಲ: ಅನುದಾನಿತ ಅಥವಾ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಕೆಕೆಆರ್‌ಡಿಬಿ ನಿಧಿಯಲ್ಲಿ ಅನುದಾನ ನೀಡಲು ಅವಕಾಶವಿಲ್ಲ ಎಂಬುದು ಅಧಿಕಾರಿಗಳ ಹೇಳಿಕೆ. ಆದರೆ, ಇದುವರೆಗೆ ನೂರಾರು ಕೋಟಿ ಅನುದಾನವು ಮಂಡಳಿಯಲ್ಲಿ ಬಳಕೆ ಆಗದೇ ಉಳಿದಿದೆ. ಅದು ಮರಳಿ ಕೂಡ ಹೋಗುವುದಿಲ್ಲ. ಅದನ್ನು 'ಶೈಕ್ಷಣಿಕ ಕಲ್ಯಾಣ ನಿಧಿ'ಯಾಗಿ ಪರಿವರ್ತಿಸಿ ಅನುದಾನಿತ ಹಾಗೂ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಬಳಸಬೇಕು ಎಂಬ ಕೂಗು ಕೇಳಿಬರುತ್ತಿದೆ.

ಸಿಗದ ಎರಡು ಲೀಟರ್ ನೀರು

ಚಿತ್ರದುರ್ಗ ಜಿಲ್ಲೆಯಲ್ಲಿ ಬೇಸಿಗೆಯಲ್ಲಿ ಸರ್ಕಾರಿ ಶಾಲೆಯ ಪ್ರತಿ ವಿದ್ಯಾರ್ಥಿಗೆ ಎರಡು ಲೀಟರ್ ಶುದ್ಧ ಕುಡಿಯುವ ನೀರು ಒದಗಿಸುವ ಹೊಣೆಯನ್ನು ಗ್ರಾಮ ಪಂಚಾಯಿತಿ ಹಾಗೂ ಶಿಕ್ಷಕರಿಗೆ ನೀಡಲಾಗಿತ್ತು. ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರಿಗೂ ಉಂಟಾದ ತತ್ವಾರವನ್ನು ಗಮನಿಸಿದ ಜಿಲ್ಲಾ ಪಂಚಾಯಿತಿ, ಎರಡು ವರ್ಷದ ಹಿಂದೆ ಈ ನಿರ್ದೇಶನ ನೀಡಿತ್ತು. ಆದರೆ, ಇದು ಸಮರ್ಪಕವಾಗಿ ಅನುಷ್ಠಾನಕ್ಕೆ ಬರಲಿಲ್ಲ. ಬಿಸಿಯೂಟ ತಯಾರಿಕೆಗೆ ಅಗತ್ಯವಿರುವ ಶುದ್ಧನೀರು ಒದಗಿಸುವ ಹೊಣೆಯನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ (ಪಿಡಿಒ) ನೀಡಲಾಗಿತ್ತು.

ಚಳ್ಳಕೆರೆ, ಮೊಳಕಾಲ್ಮುರು ತಾಲ್ಲೂಕಿನ ಶಾಲೆಗಳಲ್ಲಿ ಕುಡಿಯುವ ನೀರಿಗೆ ತೊಂದರೆ ಹೆಚ್ಚು. ಕೊರೊನಾ ಸೋಂಕು ಕಾಣಿಸಿಕೊಂಡ ಬಳಿಕ ಅನೇಕ ಮಕ್ಕಳು ಮನೆಯಿಂದಲೇ ಕುಡಿಯುವ ನೀರು ತೆಗೆದುಕೊಂಡು ಹೋಗುತ್ತಿದ್ದಾರೆ.

ಚಾಮರಾಜನಗರ ಜಿಲ್ಲೆಯಲ್ಲಿ 136 ಶಾಲೆಗಳಲ್ಲಿ ಶಾಶ್ವತ ನೀರಿನ ವ್ಯವಸ್ಥೆ ಇಲ್ಲ ಎಂದು ಗುರುತಿಸಲಾಗಿದ್ದು, ಜಲಜೀವನ್ ಯೋಜನೆಯಡಿ ಪೈಪ್‌ಲೈನ್ ಸಂಪರ್ಕ ಕಲ್ಪಿಸಲು ಜಿಲ್ಲಾ ಪಂಚಾಯ್ತಿ ಯೋಜನೆ ರೂಪಿಸಿದೆ.

ಬಳಕೆಗಿಲ್ಲದ ಶೌಚಾಲಯ

ಒಂದನೇ ಪುಟದಿಂದ...

ಶಾಲೆಯೊಂದರ 25 ಬಾಲಕಿಯರಿಗೆ ಎರಡು ಮೂತ್ರಿ, ಒಂದು ಶೌಚಾಲಯವನ್ನೊಳಗೊಂಡ ಘಟಕವಿರಬೇಕು. 30 ಬಾಲಕರಿಗೆ ಇದೇ ಮಾದರಿಯ ಒಂದು ಘಟಕವಿರಬೇಕು. ಆಯಾ ಶಾಲೆಯಲ್ಲಿನ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶೌಚಾಲಯದ ಘಟಕಗಳಿರಬೇಕು ಎಂಬ ಮಾನದಂಡವಿದೆ. ಆದರೆ ಈ ಮಾನದಂಡದಡಿ ಶೌಚಾಲಯ ಇರುವುದು ವಿರಳ.

ಸ್ವಚ್ಛತೆಗಾಗಿ ಬೀಗ!

'ಶಾಲೆಗೆ ಅಧಿಕಾರಿಗಳು ಭೇಟಿ ನೀಡಿದಾಗ, ಶೌಚಾಲಯವನ್ನು ಕಡ್ಡಾಯವಾಗಿ ಪರಿಶೀಲಿಸುತ್ತಾರೆ. ಹೀಗಾಗಿ, ಅವರು ಬಂದಾಗ ತೋರಿಸಲಿಕ್ಕಾಗಿಯೇ ಬಹುತೇಕ ಶಾಲೆಗಳಲ್ಲಿ ಶೌಚಾಲಯಗಳಿಗೆ ಬೀಗ ಹಾಕುವ ರೂಢಿ ಇದೆ' ಎನ್ನುತ್ತಾರೆ ಸರ್ಕಾರಿ ಶಾಲೆಯೊಂದರ ಶಿಕ್ಷಕರು.

ಪಂಚ ಸೌಲಭ್ಯಗಳ (ಕುಡಿಯುವ ನೀರು, ಶೌಚಾಲಯ, ಶಾಲಾ ಕಟ್ಟಡ, ಕಾಂಪೌಂಡ್, ಡೆಸ್ಕ್) ನಿರ್ವಹಣೆಗಾಗಿ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಾರ್ಷಿಕ ₹ 6,790, ಕಿರಿಯ ಪ್ರಾಥಮಿಕ ಶಾಲೆಗಳಿಗೆ ₹ 4 ಸಾವಿರ ಅನುದಾನವನ್ನು ಶಿಕ್ಷಣ ಇಲಾಖೆ ಬಿಡುಗಡೆ ಮಾಡುತ್ತದೆ. ಆದರೆ, ಈ ಅನುದಾನವು ಸಾಕಾಗುವುದಿಲ್ಲ ಎಂಬ ಅಳಲು ಶಿಕ್ಷಕ ಸಮೂಹದ್ದು.

'ಒಂದು ಸಲ, ಶೌಚಾಲಯ ಸ್ವಚ್ಛಗೊಳಿಸಲು ಕಾರ್ಮಿಕರೊಬ್ಬರಿಗೆ ಕನಿಷ್ಠ ₹ 500 ನೀಡಬೇಕು. ಈ ಕೆಲಸ ವಾರಕ್ಕೊಮ್ಮೆ ಆಗದಿದ್ದರೂ ಕನಿಷ್ಠ ಪಕ್ಷ 15 ದಿನಗಳಿಗೊಮ್ಮೆಯಾದರೂ ಆಗಲೇಬೇಕು. ಆದರೆ, ಸ್ವಚ್ಛಗೊಳಿಸಿದ ಮೂರ್ನಾಲ್ಕು ದಿನಕ್ಕೆ ಅತ್ತ ಹೋಗಲು ಸಾಧ್ಯವಾಗದಂತಹ ಅಸಹ್ಯಕರ ವಾತಾವರಣ ಇರುತ್ತದೆ. ಬೀಗ ಹಾಕದೇ ಇನ್ನೇನು ಮಾಡುವುದು?' ಎಂದು ಅಸಹಾಯಕತೆ ಶಿಕ್ಷಕರದ್ದು.

ಇದೀಗ ಪ್ರತಿ ಶಾಲಾ ಶೌಚಾಲಯದಲ್ಲೂ ಸೋಪು, ಕೈ ಒರೆಸಿಕೊಳ್ಳಲು ಟವೆಲ್ ಇಡಬೇಕು ಎಂದು ಆದೇಶವಿದೆ. ಆದರೆ ಇದು ಬಹುತೇಕ ಕಡೆ ಪಾಲನೆಯಾಗುತ್ತಿಲ್ಲ. ಶಿಕ್ಷಕರನ್ನು ಕೇಳಿದರೆ, ಕದ್ದೊಯ್ಯುತ್ತಾರೆ ಎನ್ನುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯ ಮಲೆನಾಡು ಭಾಗದ ಬಹುತೇಕ ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳು ದೂರದಲ್ಲಿದ್ದರೆ, ಬಯಲುಸೀಮೆಯ ಸುಮಾರು 77 ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ.

ಸರ್ಕಾರಿ ಶಾಲೆಗಳ ಶೌಚಾಲಯವನ್ನು ಊರಿನ ಕಿಡಿಗೇಡಿಗಳೇ ಹಾಳು ಮಾಡಿರುವುದೂ ಇದೆ. ಶೌಚಾಲಯಕ್ಕೆ ಕಲ್ಲು ಹಾಕುವುದು, ನಲ್ಲಿ ಮುರಿಯುವುದು, ಸಿಂಟೆಕ್ಸ್ ಟ್ಯಾಂಕ್ ಕಳ್ಳತನ ಮಾಡುವುದು... ಇಂಥ ಕೃತ್ಯಗಳಿಂದಲೂ ಶೌಚಾಲಯ ನಿರ್ವಹಣೆ ಎಂಬುದು ಬಹುತೇಕ ಕಡೆ ಶಾಲಾ ಸಿಬ್ಬಂದಿಗೆ ಕಗ್ಗಂಟಾಗಿದೆ.

ಶಿಕ್ಷಕರ ನಿರ್ಲಕ್ಷ್ಯದಿಂದಲೂ ಒಂದಿಷ್ಟು ಕಡೆ ಶೌಚಾಲಯಗಳು ಬರೀ ಕಟ್ಟಡಗಳಾಗಿ ಉಳಿದಿದ್ದರೆ, ಇನ್ನೊಂದಿಷ್ಟು ಕಡೆ ಬಿಲ್ ಮಾಡಿಕೊಳ್ಳಲಿಕ್ಕಾಗಿಯಷ್ಟೇ ಹೊಸ ಶೌಚಾಲಯ ನಿರ್ಮಿಸಲಾಗಿದೆ ಎಂಬ ಆಪಾದನೆಗಳೂ ಇವೆ. ಇದಕ್ಕೆ ಅಪವಾದವೆಂಬಂತೆ ಬೆರಳೆಣಿಕೆಯಷ್ಟು ಶಿಕ್ಷಕರು, ಎಸ್‌ಡಿಎಂಸಿ, ದಾನಿಗಳ ಸಹಕಾರದಿಂದ ರಾಜ್ಯದ ಕೆಲವೆಡೆ ಸ್ವಚ್ಛ ಹಾಗೂ ಹೈಟೆಕ್ ಶೌಚಾಲಯ ನಿರ್ಮಾಣಗೊಂಡಿದ್ದು, ವಿದ್ಯಾರ್ಥಿಸ್ನೇಹಿಯಾಗಿವೆ.

ಮಹಡಿಯಲ್ಲಿ ಶೌಚಾಲಯ

ಹಳೇ ಹುಬ್ಬಳ್ಳಿಯ ಅಂಬೇಡ್ಕರ್ ಕಾಲೊನಿಯ ಮಂಟೂರ ರಸ್ತೆಯಲ್ಲಿರುವ ಸರ್ಕಾರಿ ಶಾಲೆಯ ಮಹಡಿಯಲ್ಲಿ ₹2 ಲಕ್ಷ ವೆಚ್ಚದಲ್ಲಿ ಶೌಚಾಲಯವೊಂದನ್ನು ನಿರ್ಮಿಸಲಾಗುತ್ತಿದೆ. ಇದು ಪೋಷಕರ ಆತಂಕಕ್ಕೂ ಕಾರಣವಾಗಿದೆ.

1ರಿಂದ 7ನೇ ತರಗತಿಯವರೆಗೆ ಇಲ್ಲಿ 180 ಮಕ್ಕಳಿದ್ದಾರೆ. ಸದ್ಯಕ್ಕೆ ಶಾಲೆಯಲ್ಲಿರುವ ಒಂದೇ ಶೌಚಾಲಯವನ್ನು 4ರಿಂದ 7ನೇ ತರಗತಿಯವರೆಗಿನ ಮಕ್ಕಳು ಬಳಸಿಕೊಳ್ಳುತ್ತಿದ್ದಾರೆ. ಉಳಿದ ತರಗತಿ ಮಕ್ಕಳು ಶಾಲೆಯ ಹಿಂಭಾಗದಲ್ಲಿರುವ ಸ್ಮಶಾನದ ಬಯಲಿಗೆ, ರಸ್ತೆ ಬದಿ ಮೂತ್ರ ವಿಸರ್ಜನೆಗೆ ಹೋಗುತ್ತಾರೆ.

ಶಾಲೆಯಲ್ಲಿ ಮೂಲ ಸೌಲಭ್ಯವಿಲ್ಲ ಎಂದು ಸ್ಥಳೀಯರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ದೂರು ದಾಖಲಾಗುತ್ತಿದ್ದಂತೆಯೇ ಎಚ್ಚೆತ್ತ ಇಲಾಖೆ, ಶೌಚಾಲಯ ನಿರ್ಮಾಣಕ್ಕಾಗಿ ₹ 2 ಲಕ್ಷ ಅನುದಾನ ಬಿಡುಗಡೆ ಮಾಡಿದೆ. 'ದುಡ್ಡು ಕೊಟ್ರೂ ಶೌಚಾಲಯವನ್ನು ಯಾಕ್ರೀ ಕಟ್ಟಿಸಿಕೊಂಡಿಲ್ಲ?' ಎಂದು ಅಧಿಕಾರಿಗಳು ದಬಾಯಿಸುತ್ತಾರೆ. ಆದರೆ, ಅನುದಾನ ಬಿಡುಗಡೆಗೊಂಡ ವಿಷಯ ಗುತ್ತಿಗೆದಾರ ಬಂದು ಹೇಳಿದಾಗಷ್ಟೇ ನಮಗೆ ಗೊತ್ತಾಗಿದ್ದು!' ಎಂದು ಶಾಲೆಯ ಶಿಕ್ಷಕರೊಬ್ಬರು ಅಸಹಾಯಕತೆ ವ್ಯಕ್ತಪಡಿಸಿದರು.



ಹಿರಿಯೂರು ತಾಲ್ಲೂಕಿನ ಹೊಸಯಳನಾಡು ಗ್ರಾಮದ ಸರ್ಕಾರಿ ಶಾಲೆಯಲ್ಲಿರುವ ಶೌಚಾಲಯ

ಸ್ವಚ್ಛ ಸುಸಜ್ಜಿತ ವ್ಯವಸ್ಥೆ ಕುಡಿಯಲು ಶುದ್ಧ ನೀರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಹಿರಿಯೂರು ತಾಲ್ಲೂಕಿನ ಹೊಸಯಳನಾಡು ಸರ್ಕಾರಿ ಶಾಲೆ ಮಾದರಿಯಾಗಿ ರೂಪುಗೊಂಡಿದೆ. ಶಾಲಾ ಮಕ್ಕಳಿಗಾಗಿ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಶೌಚಾಲಯ ನಿರ್ಮಿಸಲಾಗಿದೆ. ನಿರ್ವಹಣೆಯೂ ಅಚ್ಚುಕಟ್ಟಾಗಿದೆ.

ಗ್ರಾಮದವರೇ ಆಗಿರುವ ನಿವೃತ್ತ ಎಂಜಿನಿಯರ್ ನಾ. ತಿಪ್ಪೇಸ್ವಾಮಿ ಕಾಳಜಿಯಿಂದ ಸರ್ಕಾರಿ ಶಾಲೆಯೊಂದು ಖಾಸಗಿ ಶಾಲೆಗಳಿಗೆ ಸ್ಪರ್ಧೆ ನೀಡುವಂತೆ ಅಭಿವೃದ್ಧಿ ಹೊಂದಿದೆ. ಶಾಲೆಯ ಸುವರ್ಣ ಮಹೋತ್ಸವದ ಅಂಗವಾಗಿ ಆರು ವರ್ಷದ ಹಿಂದೆಯೇ 'ಎಲ್ ಆ್ಯಂಡ್ ಟಿ' ಸಂಸ್ಥೆ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಿದೆ. 500 ಲೀಟರ್ ಸಾಮರ್ಥ್ಯದ ಈ ಘಟಕದ ನೀರು, ಕುಡಿಯಲು ಹಾಗೂ ಬಿಸಿಯೂಟಕ್ಕೆ ಬಳಕೆಯಾಗುತ್ತಿದೆ.

500ಕ್ಕೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಯಲ್ಲಿ ಆರು ಶೌಚಾಲಯಗಳಿವೆ. ಸಮರ್ಪಕ ನಿರ್ವಹಣೆಯಿಂದ ಬಳಕೆಗೆ ಯೋಗ್ಯವಾಗಿ ಉಳಿದಿವೆ. ನೀರು ಪೂರೈಕೆಗೆ ಕೊಳವೆಬಾವಿ ಸೌಲಭ್ಯವಿದೆ. ಇನ್ಫೋಸಿಸ್ ಕೂಡ ಅನುದಾನ ನೀಡಿ ಶಾಲೆಯ ಅಭಿವೃದ್ಧಿಗೆ ನೆರವಾಗಿದೆ. ಮೂಲಸೌಲಭ್ಯಗಳಿರುವ ಕಾರಣಕ್ಕೆ ಇದೀಗ 'ಕರ್ನಾಟಕ ಪಬ್ಲಿಕ್ ಸ್ಕೂಲ್' ಆಗಿ ಪರಿವರ್ತನೆಯಾಗಿದೆ. ಕಳೆದ ವರ್ಷ ಪಿಯು ವಿದ್ಯಾರ್ಥಿಗಳಿಗೂ ಮಧ್ಯಾಹ್ನದ ಬಿಸಿಯೂಟ ನೀಡಲಾಗಿತ್ತು.

'ಮಾದರಿ' ಆನೆಗದ್ದೆ ಸರ್ಕಾರಿ ಶಾಲೆ

ಶಿವಮೊಗ್ಗ: ಹೊಸನಗರ ತಾಲ್ಲೂಕಿನ ಆನೆಗದ್ದೆ ರಸ್ತೆಯ ಸರ್ಕಾರಿ ಶಾಲೆಯನ್ನು ಅಲ್ಲಿನ ಶಿಕ್ಷಕ ಅವಿನಾಶ್ ಮತ್ತು ಅವರ ತಂಡ ಮಾದರಿಯನ್ನಾಗಿಸಿದೆ.

ದಾನಿಗಳ ನೆರವು ಪಡೆದು ಬಾಲಕ–ಬಾಲಕಿಯರಿಗೆ ಶೌಚಾಲಯ ನಿರ್ಮಿಸಲಾಗಿದೆ. ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ಮೂರು ಕಿಲೊಮೀಟರ್ ದೂರದ ಗ್ರಾಮ ಪಂಚಾಯಿತಿಯ ಟ್ಯಾಂಕ್‌ನಿಂದ ಪೈಪ್‌ಲೈನ್ ಹಾಕಿಸಿ ನೀರಿನ ಕೊರತೆ ನೀಗಿಸಲಾಗಿದೆ.

ಬಾಲಕಿಯರ ಸುರಕ್ಷತೆಗಾಗಿ ಮಲೆನಾಡಿನ ಶಾಲೆಗಳಿಗೆ ಶೌಚಾಲಯ ಅತ್ಯಗತ್ಯ. ಸರ್ಕಾರ ಕಡ್ಡಾಯಗೊಳಿಸುವ ಮೊದಲೇ ದಾನಿಗಳ ನೆರವಿನಲ್ಲಿ ಸುಸಜ್ಜಿತ ಶೌಚಾಲಯ ನಿರ್ಮಿಸಿದ್ದೇವು

ಅವಿನಾಶ್, ಮುಖ್ಯ ಶಿಕ್ಷಕ, ಆನೆಗದ್ದೆ ಸರ್ಕಾರಿ ಶಾಲೆ, ಹೊಸನಗರ

ಶುಚಿತ್ವ ಕಾಪಾಡಲು 4 ಸಿಬ್ಬಂದಿ




ಮಂಗಳೂರು: ವಿದ್ಯಾರ್ಥಿಗಳ ಕೊರತೆಯಿಂದ 2015-16ರಲ್ಲಿ ಮುಚ್ಚುವ ಭೀತಿ ಎದುರಿಸಿದ್ದ ಬಂಟ್ವಾಳ ತಾಲ್ಲೂಕಿನ ದಡ್ಡಲಕಾಡು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಈಗ ಪ್ರತಿ ಸೀಟಿಗೂ ಬೇಡಿಕೆ. ಅಲ್ಲಿನ ಶಾಲೆ ಮಾತ್ರವಲ್ಲ, ಶೌಚಾಲಯವೂ ಸ್ವಚ್ಛ–ಸುಂದರವಾಗಿದ್ದು, ಮಾದರಿಯಾಗಿದೆ.

ಶಾಲೆಯನ್ನು ಕರೆಂಕಿ ಶ್ರೀ ದುರ್ಗಾ ಫ್ರೆಂಡ್ಸ್ ಕ್ಲಬ್ ದತ್ತು ಸ್ವೀಕರಿಸಿದ್ದು, ದಾನಿಗಳ ನೆರವಿನಲ್ಲಿ ಅಭಿವೃದ್ಧಿ ಮಾಡಿದೆ. ಈ ಶಾಲೆಯಲ್ಲಿ ನೆಲ ಹಾಗೂ ಮೊದಲ ಮಹಡಿ ಇದ್ದು, ಎರಡೂ ಕಡೆಗಳಲ್ಲೂ ಪ್ರತ್ಯೇಕ ಶೌಚಾಲಯಗಳಿವೆ. ದಾನಿಗಳ ಮೂಲಕ ಸುಂದರ ಶೌಚಾಲಯ ನಿರ್ಮಿಸಿದ್ದು, ಸ್ವಚ್ಛತೆಗಾಗಿ ಇಬ್ಬರು ಹೆಚ್ಚುವರಿ ಆಯಾಗಳನ್ನು ಫ್ರೆಂಡ್ಸ್ ಕ್ಲಬ್ ನೇಮಕ ಮಾಡಿದೆ.

'ನಾವು ಸ್ವಚ್ಛತೆಗಾಗಿಯೇ ನಾಲ್ವರು ಸಿಬ್ಬಂದಿಯನ್ನು ನೇಮಿಸಿದ್ದೇವೆ. ಈ ಪೈಕಿ ಇಬ್ಬರಿಗೆ ಶೌಚಾಲಯದ ಜವಾಬ್ದಾರಿಯನ್ನು ನೀಡಲಾಗಿದೆ. ಅವರು ದಿನಕ್ಕೆ ನಾಲ್ಕು ಬಾರಿ ಪರಿಶೀಲಿಸಿ, ಸ್ವಚ್ಛತೆ ಕಾಪಾಡಬೇಕು' ಎನ್ನುತ್ತಾರೆ ದುರ್ಗಾ ಫ್ರೆಂಡ್ಸ್ ಕ್ಲಬ್ ಅಧ್ಯಕ್ಷರಾದ ಪ್ರಕಾಶ್ ಅಂಚನ್.

ಸರ್ಕಾರಿ ಪ್ರಾಥಮಿಕ–ಪ್ರೌಢಶಾಲೆಗಳಲ್ಲಿರುವ ಪಂಚ ಸೌಲಭ್ಯ ನಿರ್ವಹಣೆಗಾಗಿ ರಾಜ್ಯ ಸರ್ಕಾರ ಬಿಡುಗಡೆ ಮಾಡಿರುವ ಅನುದಾನ



• 2020–21ನೇ ಸಾಲಿನಲ್ಲಿ ಸ್ವಚ್ಛ ಭಾರತ್ ಯೋಜನೆಯಡಿ 662 ಶೌಚಾಲಯ ನಿರ್ಮಾಣ. 8 ಶೌಚಾಲಯದ ಕಾಮಗಾರಿ ಪ್ರಗತಿಯಲ್ಲಿ

• 1633 ಶೌಚಾಲಯ, 288 ಅಡಿಗೆ ಕೋಣೆಗಳಿಗೆ ಜಲಜೀವನ್ ಮಿಷನ್ ಯೋಜನೆಯಡಿ ನೀರಿನ ಸಂಪರ್ಕಕ್ಕೆ ಕ್ರಮ

ಆಧಾರ: ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ



ಜನರ ಸಹಕಾರದಿಂದ ಶೌಚಾಲಯ ನಿರ್ಮಿಸಿದ್ದೇವೆ. ನೀರು ಲಭ್ಯವಿದ್ದು, ಕೈತೊಳೆಯಲು ಸೋಪು ಒದಗಿಸಿದ್ದೇವೆ. ಮಕ್ಕಳು ಮನೆಯಿಂದಲೇ ಕುಡಿಯುವ ನೀರು ತರುತ್ತಿದ್ದಾರೆ

ಓಬಳೇಶ್, ಎಸ್‌ಡಿಎಂಸಿ ಅಧ್ಯಕ್ಷ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಾಯಕನಹಟ್ಟಿ



ಹಿರಿಯೂರು ತಾಲ್ಲೂಕಿನ ಹೊಸ ಯಳನಾಡು ಗ್ರಾಮದ ಸರ್ಕಾರಿ ಶಾಲೆಯಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕ

(ಪೂರಕ ಮಾಹಿತಿ: ಬಸವರಾಜ ಸಂಪಳ್ಳಿ, ಸಿದ್ದು ಆರ್‌.ಜಿ.ಹಳ್ಳಿ, ಮನೋಜ್‌ಕುಮಾರ್ ಗುದ್ದಿ, ಇ.ಎಸ್. ಸುಧೀಂದ್ರಪ್ರಸಾದ್, ಶಶಿಕಾಂತ ಶೆಂಬಳ್ಳಿ, ಸತೀಶ ಬೆಳ್ಳಕ್ಕಿ, ಸಂತೋಷ ಚಿನಗುಡಿ, ಕೆ.ಎಸ್‌.ಗಿರೀಶ್)

ಗುಂಡಣ್ಣ



50 ವರ್ಷಗಳ ಹಿಂದೆ

ಭಾನುವಾರ, 21-3-1971

• **ಸೋಮವಾರ ಸಂಜೆ ವೇಳೆಗೆ ಸರ್ಕಾರ ರಚನೆ ಬಗೆಗೆ ಹೈಕಮಾಂಡ್ ಆದೇಶ**

ಬೆಂಗಳೂರು, ಮಾ. 20– ರಾಜ್ಯದಲ್ಲಿ ಆಡಳಿತ ಕಾಂಗ್ರೆಸ್ ಪಕ್ಷ ಸರ್ಕಾರ ರಚಿಸುವ ಹೊಣೆಯನ್ನು ಒಪ್ಪಿಕೊಳ್ಳಬೇಕೆ ಬೇಡವೆ ಎಂಬ ಬಗ್ಗೆ ಹೈಕಮಾಂಡಿನ ಆದೇಶವನ್ನು ಮುಂದಿನ ಸೋಮವಾರ ಸಂಜೆಯ ಹೊತ್ತಿಗೆ ನಿರೀಕ್ಷಿಸಲಾಗಿದೆ.

ಸರ್ಕಾರ ರಚಿಸಿ, ಅನಂತರ ವಿಧಾನಸಭೆಯನ್ನು ವಿಸರ್ಜಿಸಬೇಕೆಂಬ ಅಭಿಪ್ರಾಯವನ್ನು ಆಡಳಿತ ಕಾಂಗ್ರೆಸ್ ಪಕ್ಷದ ಬಹುಮಂದಿ ಶಾಸಕರು ಹೈಕಮಾಂಡಿನ ಪ್ರತಿನಿಧಿ ಉಮಾಶಂಕರ ದೀಕ್ಷಿತ್ ಅವರಿಗೆ ತಿಳಿಸಿದ್ದಾರೆ.

• **23ರಿಂದ ಇಂಡಿಯನ್ ಏರ್‌ಲೈನ್ಸ್ ಕೆಲವು ವಿಮಾನ ಸಂಚಾರ ಆರಂಭ**

ಕಲ್ಕತ್ತ, ಮಾ.20– ಒಂದು ವಾರದಿಂದ ಲಾಕ್‌ಔಟ್ ಘೋಷಿಸಿರುವ ಇಂಡಿಯನ್ ಏರ್‌ಲೈನ್ಸ್ ಸಂಸ್ಥೆಯು ಮಂಗಳವಾರದಿಂದ ಕೆಲವು ಮಾರ್ಗಗಳಲ್ಲಿ ಕೆಲವು ವಿಮಾನ ಹಾರಾಟವನ್ನು ಅಧಿಕೃತವಾಗಿ ಪ್ರಕಟಿಸಿತು.

ಈ ಪೈಕಿ ದೆಹಲಿ ಮುಂಬೈ ನಡುವೆ ಒಂದು ಬೋಯಿಂಗ್, ದೆಹಲಿ ಮದ್ರಾಸ್ ಮಧ್ಯೆ ಮತ್ತೊಂದು ಬೋಯಿಂಗ್ ಹಾಗೂ ಮದ್ರಾಸ್–ಹೈದರಾಬಾದ್‌ಗಳ ಮಧ್ಯೆ 'ಎಚ್.ಎಸ್.748' ವಿಮಾನದ ಹಾರಾಟ ಮುಖ್ಯ.

ದಿನ ಭವಿಷ್ಯ

ಭಾನುವಾರ 21 ಮಾರ್ಚ್ 2021

ಶಾರ್ವರಿ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ಫಾಲ್ಗುಣ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಉತ್ತರಭಾದ್ರ ಅಷ್ಟಮೀ ಗಂ. 54-28 (ರಾ. 4-17) ಭಾನುವಾರ ನಿತ್ಯ ನಕ್ಷತ್ರ ಮೃಗಶಿರ ಗಂ. 22-18 (ಹ. 3-25) ಆಯುಃ ನಾಮ ಯೋಗ ಗಂ. 6-53 ಭದ್ರ ಕರಣ ಗಂ. 22-41 ವಿಷ ಗಂ. 44-54 ಅಮೃತ ಶೇಷ ಗಂ. 2-45 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-27 ಸೂರ್ಯಾಸ್ತ: 6-27 ಅದೃಷ್ಟ ಸಂಖ್ಯೆ 7

ಮೇಷ: ನೆನೆಗುದಿಗೆ ಬಿದ್ದ ವಿಷಯವೊಂದರ ಬಗ್ಗೆ ದೃಢ ನಿರ್ಧಾರವೊಂದನ್ನು ತೆಗೆದುಕೊಳ್ಳಲಿದ್ದೀರಿ. ಧೈರ್ಯದ ನಡೆ ನುಡಿಯಿಂದಾಗಿ ನೆಮ್ಮದಿ. ಸಂಗಾತಿಯೊಂದಿಗೆ ಪ್ರವಾಸ ಹೋಗುವ ಸಾಧ್ಯತೆ.

ವೃಷಭ: ದೂರಾಲೋಚನೆಯಿಂದ ಚಿಂತನೆ ನಡೆಸಿ ಕಾರ್ಯಗಳನ್ನು ಕೈಗೊಳ್ಳಲಿದ್ದೀರಿ. ಸಹಕಾರ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ. ಹಿರಿಯರ ಆರೋಗ್ಯದ ಬಗ್ಗೆ ವಿಶೇಷ ಕಾಳಜಿ ವಹಿಸಬೇಕಾದೀತು.

ಮಿಥುನ: ನ್ಯಾಯಾಂಗದ ಬಗೆಗಿನ ಕಾಳಜಿಯಿಂದಾಗಿ ಹಿಂದೆ ಸರಿಯದ ದೃಢ ನಿರ್ಧಾರ ಒಳಿತನ್ನು ತರಲಿದೆ. ಸ್ಪಷ್ಟ ನಿಲುವಿನಿಂದಾಗಿ ವಿಶೇಷ ಸಾಧನೆಯ ಗರಿಮೆ ನಿಮ್ಮದಾಗಲಿದೆ.

ಕರ್ಕಾಟಕ: ಪ್ರಾಮಾಣಿಕ ಪ್ರಯತ್ನದಿಂದಾಗಿ ಕೆಲಸ ಕಾರ್ಯಗಳಲ್ಲಿ ಯಶಸ್ಸು ಸಾಧಿಸಲಿದ್ದೀರಿ. ನಿವ್ಯಾ೯ಜ ಪರೋಪಕಾರದಿಂದಾಗಿ ಮಾನಸಿಕ ತೃಪ್ತಿ. ಮಹಿಳೆಯರಿಗೆ ಬಿಡುವಿಲ್ಲದ ಕೆಲಸ ಕಾರ್ಯಗಳು.

ಸಿಂಹ: ಕಷ್ಟದಲ್ಲಿರುವವರಿಗೆ ನೆರವು ನೀಡಬೇಕಾದ ಸುಸಂದರ್ಭ ದೊರಕಿ ಧನ್ಯತೆ. ವೈಯಕ್ತಿಕ ಸಮಸ್ಯೆಗಳು ಪರಿಹಾರವಾಗಿ ನೆಮ್ಮದಿ ಮೂಡುವುದು. ಸಮಾರಂಭಗಳಲ್ಲಿ ಭಾಗವಹಿಸಿ ಸಂಭ್ರಮಿಸುವ ಅವಕಾಶ ದೊರೆಯಲಿದೆ.

ಕನ್ಯಾ: ಉದ್ಯೋಗ ಕ್ಷೇತ್ರದಲ್ಲಿ ಒಲುಮೆಯಿಂದಲೇ ಗೆಲವುವನ್ನು ಸಾಧಿಸಲಿದ್ದೀರಿ. ಬದುಕಿಗೊಂದು ಹೊಸ ಬೆಳಕು ಮೂಡಿಬರಲಿದೆ. ಕಾರ್ಯಸಾಧನೆಯಿಂದಾಗಿ ನೆಮ್ಮದಿ. ಆರೋಗ್ಯದಲ್ಲಿ ಸುಧಾರಣೆ.

ತುಲಾ: ಬದುಕಿಗೊಂದು ನಿಶ್ಚಿತ ಆಸರೆ ಕಲ್ಪಿಸಿಕೊಳ್ಳಲಿದ್ದೀರಿ. ಆಶಾಕಿರಣ ಮೂಡಿಬರಲಿದೆ. ಉತ್ತಮ ಗುಣದಿಂದಾಗಿ ನೆರೆಹೊರೆಯವರೊಂದಿಗೆ ಉತ್ತಮ ಬಾಂಧವ್ಯ. ಕಲಾವಿದರಿಗೆ ಹೆಚ್ಚಿನ ಅನುಕೂಲವಾಗಲಿದೆ.

ವೃಶ್ಚಿಕ: ನೌಕರಿಯಲ್ಲಿರುವವರು ಹಿರಿಯ ಅಧಿಕಾರಿಗಳ ಸೂಚನೆಯ ಮೇರೆಗೆ ಹೆಚ್ಚಿನ ಜವಾಬ್ದಾರಿ ನಿಭಾಯಿಸಬೇಕಾದೀತು. ನೆರೆಹೊರೆಯವರೊಂದಿಗೆ ಹಿತವಾದ ಮಾತುಕತೆಗಳಿಂದಾಗಿ ಮನ ಗೆಲ್ಲಲಿದ್ದೀರಿ.

ಧನು: ಮಾಡಬೇಕಾದ ಕೆಲಸ ಕಾರ್ಯಗಳ ಬಗ್ಗೆ ಗಾಢ ಚಿಂತನೆ. ಸಾಮರಸ್ಯದ ದೃಢ ಹೆಜ್ಜೆ ಹಾಕುವಿರಿ. ಕೆಲಸ ಕಾರ್ಯಗಳಲ್ಲಿ ಕೌಶಲ್ಯ ಮೆರೆದು ಇತರರ ಪ್ರಶಂಸೆಗೆ ಪಾತ್ರರಾಗುವಿರಿ.

ಮಕರ: ಸ್ವಯಂ ಶಕ್ತಿ, ನಂಬಿಕೆ ವಿಶ್ವಾಸಗಳನ್ನು ನಂಬಿ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸುವಿರಿ. ಜಾಣ್ಮೆಯಿಂದಾಗಿ ಅಸಾಧ್ಯವಾದ ಸಾಧನೆ ಮಾಡಲಿದ್ದೀರಿ. ಮನೋಭಿಲಾಷೆಗಳು ಈಡೇರಲಿವೆ.

ಕುಂಭ: ದೃಢವಾದ ಸಂಕಲ್ಪದಿಂದ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು ಯಶಸ್ಸನ್ನು ಸಾಧಿಸಲಿದ್ದೀರಿ. ಸಮಾಜದ ಸರ್ವತೋಮುಖ ಪ್ರಗತಿಗಾಗಿ ಉತ್ತಮ ಮಾರ್ಗದರ್ಶನ ಮಾಡಿ ಪ್ರಶಂಸೆಗೆ ಪಾತ್ರರಾಗಲಿದ್ದೀರಿ.

ಮೀನ: ಒಳ್ಳೆಯ ಚಿಂತನೆಯಿಂದಾಗಿ ಉತ್ತಮ ಮನಃಸ್ಥಿತಿಯನ್ನು ಕಾಯ್ದುಕೊಳ್ಳುವಿರಿ. ಶಕ್ತ್ಯಾನುಸಾರ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಂಡು ನಿರಾಶರಾಗದೆ ಸಾಧಿಸಲಿದ್ದೀರಿ. ನ್ಯಾಯಕ್ಕಾಗಿ ನಡೆಸಿರುವ ಯತ್ನದಲ್ಲಿ ಸಾಫಲ್ಯ.


ನಿಮ್ಮ ಜನ್ಮದಿನ 21-ಮಾರ್ಚ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಕ್ರೀಡಾ ಮನೋಭಾವದಿಂದ ಸಮಸ್ಯೆಗಳನ್ನು ಎದುರಿಸುವುದರಿಂದ ಒತ್ತಡದ ಬದುಕಿನಿಂದ ದೂರಾಗಿ ನೆಮ್ಮದಿ ಹೊಂದುವಿರಿ. ವ್ಯಾಪಾರ ವ್ಯವಹಾರದಲ್ಲಿ ಸಾಮಾನ್ಯ ಪ್ರಗತಿಯಿಂದಾಗಿ ಜೀವನ ಮಟ್ಟವನ್ನು ಕಾಯ್ದುಕೊಳ್ಳಲಿದ್ದೀರಿ. ಆರೋಗ್ಯದಲ್ಲಿ ಸ್ಥಿರತೆಯಿಂದಾಗಿ ನೆಮ್ಮದಿ ನಿಮ್ಮದಾಗಲಿದೆ.

ಪದಬಂಧ 4543

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ತಂಭ ಇಲ್ಲಿದೆ (2)
3.ಆಯಾಳಿಗೆ ಆಗಿರುವ ಸುಸ್ತು! (3)
5.ವನದೊಳಗಿರುವ ಬಟ್ಟೆ ಕಾಣಿಸುತ್ತಿದೆಯೇ? (3)
7.ಕಣ್ಣ ಕೊನೆಯ ನೋಟ (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಹೀಗೆ ಕೋಪಗೊಳ್ಳು (3)
11.ಜೀರ್ಣೋದ್ಧಾರ ಮಾಡಿದುದು (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ಆ ಮುಖ ಇಲ್ಲಿ ಕಾಣುತ್ತಿದೆ! (3)
4.ಸರಕ್ಕನೆ ಹೋಗಿ ತಂದಿರುವ ಸಾಮಾನು (3)
6.ಸರ ಧರಿಸಿದವನ ಪಾಳಿ! (3)
8.ಪಾಲು ಮಾಡೆಂದು ಬರೆದ ಪತ್ರ! (3)
9.ವನದೊಳಗೆ ಮಾಡಿರುವ ಕ್ಷೌರ (3)
10.ಕಣದೊಳಗೆ ನಡೆದ ಮದುವೆ (3)
12.ಆಸಕ್ತನಾದವನು ಈ ತರ ಕಾಣುತ್ತಿದ್ದಾನೆ (3)
13.ಪುಸ್ತಕದ ಬಳಿಯಿರಿಸಿದ ತಲೆ (3)
14.ಕಕ್ಕಾವಿಕ್ಕಿಯಾಗಿ ನೋಡುತ್ತಿರುವ ಪೆದ್ದ! (3)



4542ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಜವಾಬ್ದಾರಿ 3.ಜಟಿಲ 4.ಪುರೋಹಿತ 6.ಜುಲುಮೆ 8.ಕಾರಣ 9.ಅಗುಳು 10.ಲಹರಿ 12.ಕಸರತ್ತು 14.ಕಮರಿ 15.ನವಿರೆಳೆ

ಮೇಲಿಂದ ಕೆಳಕ್ಕೆ: 1.ಜಲ 2.ರಿಪು 3.ಜಹಜು 5.ತಲ್ಲಣ 7.ಮೆದುಳು 8.ಕಾದಲ 9.ಅಳ್ಳಕ 11.ರಿಪೇರಿ 13.ತ್ತುನ 14.ಕಳೆ

ಸುಡೊಕು 4929

	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
2		4	1		9		3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4928 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಇನ್ನಷ್ಟು ‘ಉನ್ನತಿ’ ಸಾಧಿಸಲು ಬೇಕಿದೆ ಕಾಯಕಲ್ಪ

● ಪ್ರವೀಣ ಕುಮಾರ್ ಪಿ.ವಿ.

ಬೆಂಗಳೂರು: ನವೋದ್ಯಮಗಳಿಗೆ ಉತ್ತೇಜನ ನೀಡುವಲ್ಲಿ ಇನ್ನಷ್ಟು ‘ಉನ್ನತಿ’ ಸಾಧಿಸಬೇಕಾದರೆ ‘ಐಡಿಯಾ2ಪಿಒಸಿ’ ಸ್ಪರ್ಧೆಗಳಲ್ಲಿ ಸಾಕಷ್ಟು ಸುಧಾರಣೆಗಳನ್ನು ತರಬೇಕು. ಆಯ್ಕೆ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ನಡೆಸುವುದರ ಜೊತೆಗೆ ಈ ಸ್ಪರ್ಧೆಗೆ ಖಚಿತ ಚೌಕಟ್ಟು ರೂಪಿಸಬೇಕು ಎಂಬುದು ನವೋದ್ಯಮಿಗಳ ಒತ್ತಾಯ.

ನವೋದ್ಯಮಗಳನ್ನು ಸ್ಥಾಪಿಸಿ ಯಶಸ್ಸುಗಳಿಸುವುದಕ್ಕೆ ಕರ್ನಾಟಕದಲ್ಲಿ ಬೇರೆಲ್ಲ ರಾಜ್ಯಗಳಿಗಿಂತ ಉತ್ತಮ ಅವಕಾಶಗಳಿವೆ. ನವೋದ್ಯಮಗಳಿಗೆ ಉತ್ತೇಜನ ನೀಡಲು ರಾಜ್ಯ ಸರ್ಕಾರವು ಜಾರಿಗೊಳಿಸಿರುವ ‘ಕರ್ನಾಟಕ ನವೋದ್ಯಮ ಕಾರ್ಯನೀತಿ 2015 -2020’ ಹಾಗೂ ಎಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಕೈಗೊಂಡ ಉತ್ತೇಜನಾ ಚಟುವಟಿಕೆಗಳೂ ಇದಕ್ಕೆ ಕಾರಣ. ಇಲಾಖೆಯು 2016ರಿಂದ ನವೋದ್ಯಮಗಳಿಗೆ ಆರ್ಥಿಕ ನೆರವು ನೀಡುವ ಸಲುವಾಗಿ ಇದುವರೆಗೆ ₹ 117 ಕೋಟಿ ವೆಚ್ಚ ಮಾಡಿದೆ.

ಆಗಬೇಕಿರುವ ಸುಧಾರಣೆಗಳು

- ಸ್ಪರ್ಧಿಗಳು ಯಾವ ಹಂತದಲ್ಲಿ ಯಾವ ವರ್ಗದಲ್ಲಿ ಎಷ್ಟು ಅಂಕ ಗಳಿಸಿದ್ದಾರೆ ಎಂಬುದನ್ನು ಆಯಾ ಹಂತದಲ್ಲೇ ಬಹಿರಂಗಪಡಿಸಬೇಕು
- ನಿರ್ದಿಷ್ಟ ಮೊತ್ತದ ಆರ್ಥಿಕ ನೆರವು ಪಡೆಯಲು ಮಾನದಂಡಗಳೇನೆಂಬುದನ್ನು ಸ್ಪರ್ಧೆಗೆ ಮೊದಲೇ ಸ್ಪಷ್ಟಪಡಿಸಬೇಕು
- ಒಬ್ಬನೇ ಫಲಾನುಭವಿ ಬೇರೆ ಬೇರೆ ನವೋದ್ಯಮಗಳ ಮೂಲಕ ಒಂದಕ್ಕಿಂತ ಹೆಚ್ಚು ಬಾರಿ ಆರ್ಥಿಕ ನೆರವು ಪಡೆಯಲು ಅವಕಾಶ ನೀಡಬಾರದು
- ಕೆಲವು ಮೌಲ್ಯಮಾಪಕರು ಅಂಕಗಳನ್ನು ಈಗಲೂ ಪೆನ್ಸಿಲ್‌ನಲ್ಲಿ ಬರೆಯುತ್ತಾರೆ. ಇದು ಅಕ್ರಮಕ್ಕೆ ಅವಕಾಶ ಕಲ್ಪಿಸುತ್ತದೆ. ಮೌಲ್ಯಮಾಪನ ವ್ಯವಸ್ಥೆಯನ್ನು ವೈಜ್ಞಾನಿಕಗೊಳಿಸಬೇಕು.
- ಮೌಲ್ಯಮಾಪಕರ ಮತ್ತು ಫಲಾನುಭವಿಗಳ ಆಯ್ಕೆಯ ಈಗಿನ ಮಾದರಿ ಬದಲಾಯಿಸಬೇಕು. ಲೋಪಗಳಾದರೆ ಅವರನ್ನೂ ಹೊಣೆಗಾರರನ್ನಾಗಿ ಮಾಡುವ ನಿಯಮ ರೂಪಿಸಬೇಕು.

‘ರಾಜ್ಯದಲ್ಲಿ ನವೋದ್ಯಮಗಳಿಗೆ ಬೇರೆಲ್ಲ ಕಡೆಗಿಂತ ಹೆಚ್ಚು ಉತ್ತೇಜನ ಸಿಗುತ್ತಿದೆ ಎಂಬುದು ಎಷ್ಟು ಸತ್ಯವೋ, ಆರ್ಥಿಕ ನೆರವು ಒದಗಿಸುವ ಪ್ರಕ್ರಿಯೆಯಲ್ಲಿ ಲೋಪಗಳಿರುವುದೂ ಅಷ್ಟೇ ನಿಜ. ಈ ಲೋಪಗಳನ್ನು ಆರಂಭಿಕ ಹಂತದಲ್ಲೇ ಸರಿಪಡಿಸದಿದ್ದರೆ, ಈ ಸವಲತ್ತು ದುರ್ಬಳಕೆ ಮತ್ತಷ್ಟು ಹೆಚ್ಚಲಿದೆ. ನವೋದ್ಯಮಿಗಳ ಕನಸಿನ ತಾಣ ಎಂಬ ಶ್ರೇಯವನ್ನು ರಾಜ್ಯವು ಕಳೆದುಕೊಳ್ಳಬೇಕಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸುತ್ತಾರೆ ನವೋದ್ಯಮಿಗಳು.

‘ಈಗಿನ ವ್ಯವಸ್ಥೆಯಲ್ಲಿ ಐಡಿಯಾ 2 ಪಿಒಸಿ’ ಸ್ಪರ್ಧೆಗೆ ಅರ್ಜಿ ಆಹ್ವಾನಿಸುವುದಕ್ಕಿಂತ ಬೆರಳೆಣಿಕೆ ದಿನಗಳ ಮುಂಚೆ ನೋಂದಣಿಯಾದ ನವೋದ್ಯಮವೂ ಭಾಗವಹಿಸಲು ಅವಕಾಶ ಇದೆ. ಆರ್ಥಿಕ ನೆರವು ಪಡೆಯಲೆಂದೇ ನವೋದ್ಯಮಗಳು ಹುಟ್ಟಿಕೊಳ್ಳಲು ಇದು ಕಾರಣವಾಗುತ್ತಿದೆ. ಈ ಸ್ಪರ್ಧೆಯಲ್ಲಿ ಕನ್ನಡಿಗರು ಸ್ಥಾಪಿಸಿದ ಸಂಸ್ಥೆಗಳಿಗೆ ಆದ್ಯತೆ ಸಿಗುವುದನ್ನು ಖಚಿತಪಡಿಸುವ ನಿಯಮಾವಳಿಗಳೇ ಇಲ್ಲ. ಒಮ್ಮೆ ಆರ್ಥಿಕ ನೆರವು ಪಡೆದವರು ಮತ್ತೊಮ್ಮೆ ಈ ಸವಲತ್ತು ಪಡೆಯುವುದನ್ನು ತಡೆಯುವ ಕಟ್ಟುನಿಟ್ಟಿನ ವ್ಯವಸ್ಥೆಗಳಿಲ್ಲ. ಆರ್ಥಿಕ ನೆರವು ಪಡೆದವರು ನಿಜಕ್ಕೂ ನವೋದ್ಯಮ ಸ್ಥಾಪನೆ ಮಾಡಿದ್ದಾರೋ, ಆ ನವೋದ್ಯಮಕ್ಕೆ ನೀಡಿದ ಸವಲತ್ತಿನಿಂದ ಉಂಟಾದ ಸಾಮಾಜಿಕ ಮತ್ತು ಆರ್ಥಿಕಪರಿಣಾಮಗಳೇನು ಎಂಬುದನ್ನು ಪರಾಮರ್ಶೆಗೆ ಒಳಪಡಿಸುವುದಕ್ಕೂ ಮಾನದಂಡಗಳಿಲ್ಲ. ಆರ್ಥಿಕ ನೆರವು ಯೋಜನೆಯ ಸಂಪೂರ್ಣ ಪ್ರಯೋಜನ ನವೋದ್ಯಮಗಳಿಗೆ ಸಿಗಬೇಕಾದರೆ ಈ ವ್ಯವಸ್ಥೆಯಲ್ಲಿ ಮಹತ್ತರ ಬದಲಾವಣೆಗಳು ಆಗಬೇಕು’ ಎಂದು ಒತ್ತಾಯಿಸುತ್ತಾರೆ ನವೋದ್ಯಮಿ ಪ್ರತಾಪ್ ಪರಾಶರ.

ನವೋದ್ಯಮ 4

‘ತನಿಖೆ ನಡೆಸಿ’

‘ಫಲಾನುಭವಿಗಳ ಆಯ್ಕೆಗೆ ಸಂಬಂಧಿಸಿದ ಎಲ್ಲ ಕಡತಗಳನ್ನು ಮಾಹಿತಿ ತಂತ್ರಜ್ಞಾನ ಸಚಿವರು ಪರಿಶೀಲನೆ ನಡೆಸಿದರೆ ಅಕ್ರಮ ನಡೆದಿರುವುದು ಅವರಿಗೇ ಮನದಟ್ಟಾಗುತ್ತದೆ. ಇದುವರೆಗೆ ನಡೆದ ಎಲ್ಲ ‘ಐಡಿಯಾ 2 ಪಿಒಸಿ’ ಸ್ಪರ್ಧೆಗಳನ್ನೂ ಸರ್ಕಾರ ಸಮಗ್ರ ತನಿಖೆಗೆ ಒಳಪಡಿಸಬೇಕು. ಅಕ್ರಮವೆಸಗಿದವರ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವ ಮೂಲಕ, ಅನ್ಯಾಯಕ್ಕೊಳಗಾದ ನವೋದ್ಯಮಿಗಳಿಗೆ ನ್ಯಾಯ ಒದಗಿಸಬೇಕು’ ಎಂದು ಮೈಸೂರಿನ ಪ್ರವೀಣ್ ಕುಮಾರ್ ಎಂ.ಕೆ ಒತ್ತಾಯಿಸಿದರು.

‘ನಾವು ನವೋದ್ಯಮಗಳನ್ನು ಆಯ್ಕೆ ಮಾಡುವುದರಲ್ಲಿ ಇನ್ನಷ್ಟು ಸುಧಾರಣೆಗಳನ್ನು ತರಲು ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಅಂಕ ನೀಡುವ ಪದ್ಧತಿಯನ್ನೂ ಆನ್‌ಲೈನ್ ವ್ಯವಸ್ಥೆಯಲ್ಲಿ ಅಳವಡಿಸಿಕೊಳ್ಳುವ ಚಿಂತನೆ ಇದೆ’ ಎಂದು ಸ್ಟಾರ್ಟ್‌ಅಪ್ ಕರ್ನಾಟಕದ ಮುಖ್ಯಸ್ಥೆ ಚಂಪಾ ಇ. ತಿಳಿಸಿದರು.

‘ನವೋದ್ಯಮಗಳಿಗೆ ಆರ್ಥಿಕ ನೆರವನ್ನು ಒಂದೇ ಕಂತಿನಲ್ಲಿ ನೀಡುವುದಿಲ್ಲ. ಆರ್ಥಿಕ ನೆರವು ಪಡೆದು ನವೋದ್ಯಮ ಸ್ಥಾಪಿಸದೇ ಇದ್ದರೆ, ಅಂತಹವರಿಗೆ ಎರಡನೇ ಕಂತು ಸಿಗುವುದಿಲ್ಲ. ಎರಡನೇ ಕಂತಿನ ಹಣ ಪಡೆಯಲು ಮುಂದೆ ಬಾರದ ನವೋದ್ಯಮಗಳ ಬಗ್ಗೆ ಪರಿಶೀಲಿಸುತ್ತಿದ್ದೇವೆ. ಆರ್ಥಿಕ ನೆರವು ಪಡೆದ ಸಂಸ್ಥೆಗಳು ಅದನ್ನು ಸದ್ವಿನಿಯೋಗ ಮಾಡಿದ್ದಾವೆಯೇ ಇಲ್ಲವೇ ಎಂಬುದನ್ನೂ ಪರಿಶೀಲಿಸಲು ಕ್ರಮಕೈಗೊಳ್ಳುತ್ತಿದ್ದೇವೆ’ ಎಂದು ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಅರ್ಜಿ ಆಹ್ವಾನಿಸುವುದಕ್ಕೆ ಕೆಲವೇ ದಿನಗಳಿಗೆ ಮುನ್ನ ನೋಂದಣಿಯಾದ ನವೋದ್ಯಮಗಳನ್ನು ಆರ್ಥಿಕ ನೆರವು ಯೋಜನೆಗೆ ಆಯ್ಕೆ ಮಾಡಬಾರದು ಎಂದೇನಿಲ್ಲ. ಆ ನವೋದ್ಯಮಗಳ ಆಲೋಚನೆ ಚೆನ್ನಾಗಿದ್ದರೆ ಹಾಗೂ ಅವು ನಮ್ಮ ಮಾನದಂಡಗಳ ಪ್ರಕಾರ ಸವಲತ್ತಿಗೆ ಅರ್ಹವಾಗಿದ್ದರೆ ಮಾತ್ರ ಸ್ಪರ್ಧಿಸಲು ಅವಕಾಶ ಕಲ್ಪಿಸಲಾಗುತ್ತದೆ’ ಎಂದು ಅವರು ಸ್ಪಷ್ಟಪಡಿಸಿದರು.



ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಸ್ವಾಮಿ ವರ್ಧಂತಿ ಉತ್ಸವ ನಿಮಿತ್ತ ಮಠದ ಪ್ರಾಂಗಣದಲ್ಲಿ ಶನಿವಾರ ರಥೋತ್ಸವ ಜರುಗಿತು

ಸಂಭ್ರಮದ ರಾಯರ ವರ್ಧಂತಿ

ರಾಯಚೂರು: ಮಂತ್ರಾಲಯದಲ್ಲಿ ಶ್ರೀರಾಘವೇಂದ್ರ ಗುರು ವೈಭವೋತ್ಸವ ನಿಮಿತ್ತ ಸಪ್ತರಾತ್ರೋತ್ಸವ ಕಾರ್ಯಕ್ರಮಗಳ ಕೊನೆಯ ದಿನವಾದ ಶನಿವಾರ, ರಾಯರ 426ನೇ ವರ್ಧಂತಿ ಉತ್ಸವವು ಸಂಭ್ರಮದಿಂದ ನೆರವೇರಿತು.

ರಾಯರ ಜನ್ಮದಿನದಂದು ಸಂಪ್ರದಾಯದಂತೆ ತಿರುಪತಿ ತಿರುಮಲದ ವೆಂಕಟೇಶ್ವರ ದೇವಸ್ಥಾನದ ಆಡಳಿತಾಧಿಕಾರಿ, ವೆಂಕಟೇಶ್ವರ ಸ್ವಾಮಿಯ ಶೇಷವಸ್ತ್ರವನ್ನು ತೆಗೆದುಕೊಂಡು ಬಂದಿದ್ದರು. ಮಠದ ಪೀಠಾಧಿಪತಿ ಸುಬುಧೇಂದ್ರ ತೀರ್ಥರು ಶೇಷವಸ್ತ್ರ ಬರಮಾಡಿಕೊಂಡು, ತಲೆಮೇಲೆ ಹೊತ್ತು ಮೆರವಣಿಗೆ ಮೂಲಕ ರಾಯರ ಸನ್ನಿಧಿಗೆ ತಂದಿರಿಸಿದರು.

ಮೂಲವೃಂದಾವನಕ್ಕೆ ಪಂಚಾಮೃತ ಮಹಾಭಿಷೇಕ ನೆರವೇರಿಸಿದ ಸುಬುಧೇಂದ್ರ ತೀರ್ಥರು, ಶ್ರೀಗಂಧ ಲೇಪನಗೊಳಿಸಿ, ವೈವಿಧ್ಯಮಯ ಪುಷ್ಪಗಳಿಂದ ಅಲಂಕಾರ ಮಾಡಿ ಶೇಷವಸ್ತ್ರವನ್ನು ಸಮರ್ಪಿಸಿದರು. ಮಠದ ಪ್ರಾಂಗಣದಲ್ಲಿ ರಥೋತ್ಸವ ನಡೆಯಿತು.

ನಾದಹಾರ: ಚೆನ್ನೈನಿಂದ ಬಂದಿದ್ದ ಕಲಾವಿದರು ಸಾಮೂಹಿಕವಾಗಿ ವಾದ್ಯಗಳನ್ನು ನುಡಿಸಿದರು. ದಾಸರ ಪದಗಳನ್ನು ಹಾಡಿ ಗಮನ ಸೆಳೆದರು.

ಪಶ್ಚಿಮ ಬಂಗಾಳ ಪ್ರಚಾರ ಕಣದಲ್ಲಿ ತೀವ್ರಗೊಂಡ ವಾಕ್ಸಮರ • ಬಿಜೆಪಿ ಏಟಿಗೆ ಮುಖ್ಯಮಂತ್ರಿ ಮಮತಾ, ಅಭಿಷೇಕ್ ಬ್ಯಾನರ್ಜಿ ತಿರುಗೇಟು

ಟಿಎಂಸಿಯದ್ದು ವಸೂಲಿಬಾಜಿ: ಪ್ರಧಾನಿ ಮೋದಿ

ಖರಗಪುರ/ ಕೋಲ್ಕತ್ತ: (ಪಿಟಿಐ): 'ಮಮತಾ ಬ್ಯಾನರ್ಜಿ ಅವರು 10 ವರ್ಷಗಳಲ್ಲಿ ಕೇವಲ ಮತರಾಜಕಾರಣದ ಆಟವಾಡಿದ್ದಾರೆ. ರಾಜ್ಯದಲ್ಲಿ ಅಭಿವೃದ್ಧಿಯೇ ಆಗಿಲ್ಲ. ರಾಜ್ಯದಲ್ಲಿ ಕೇವಲ ವಸೂಲಿಬಾಜಿ ನಡೆಯುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ.

ಇಲ್ಲಿ ಬಿಜೆಪಿ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಮಮತಾ ಮತ್ತು ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ವಿರುದ್ಧ ಹರಿಹಾಯ್ದಿದ್ದಾರೆ. 'ಇಲ್ಲಿನ ಕೈಗಾರಿಕೆಗಳು ಬಾಗಿಲು ಮುಚ್ಚುತ್ತಿವೆ. ದೇಶದ ಎಲ್ಲೆಡೆ ಕೈಗಾರಿಕೆಗಳಿಗೆ ಸಂಬಂಧಿಸಿದ ಅನುಮತಿ ನೀಡಲು ಬಿಜೆಪಿಯು ಏಕಗವಾಕ್ಷಿ ವ್ಯವಸ್ಥೆ ಜಾರಿಗೆ ತಂದಿದೆ. ಆದರೆ ಬಂಗಾಳದಲ್ಲಿ ಬೇರೆಯದ್ದೇ ಆದ ಏಕಗವಾಕ್ಷಿ ವ್ಯವಸ್ಥೆ ಇದೆ. ಸೋದರಳಿಯ ಎಂಬ ಏಕಗವಾಕ್ಷಿ ವ್ಯವಸ್ಥೆಯನ್ನು ದಾಟದೇ, ಇಲ್ಲಿ ಯಾವ ಕೆಲಸವೂ ಆಗುವುದಿಲ್ಲ ಎಂದು ನರೇಂದ್ರ ಮೋದಿ ಟೀಕಿಸಿದ್ದಾರೆ.

'ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯ ಗೂಂಡಾಗಳ ಪ್ರತ್ಯೇಕ ವ್ಯವಸ್ಥೆಯೇ ಜಾರಿಯಲ್ಲಿದೆ. ಇವರದ್ದು ಜನರನ್ನು ಸುಲಿಗೆ ಮಾಡುವ ಕೆಲಸ. ಜನರಿಗೆ ಕಳಪೆಮಟ್ಟದ ಉತ್ಪನ್ನಗಳನ್ನು ಮಾರಾಟ ಮಾಡಿ, ವಂಚಿಸಲಾಗುತ್ತಿದೆ. ಇಲ್ಲಿ ಎಲ್ಲದಕ್ಕೂ 'ಕಮಿಷನ್' ನೀಡಲೇಬೇಕು. 55 ನಿಮಿಷ ಸಾಮಾಜಿಕ ಜಾಲತಾಣಗಳು ಸ್ಥಗಿತಗೊಂಡಿದ್ದಕ್ಕೆ ಮಮತಾ ದೀದಿ ಬೊಬ್ಬೆಹೊಡೆದರು. ಆದರೆ ಪಶ್ಚಿಮ ಬಂಗಾಳವು 55 ವರ್ಷಗಳಷ್ಟು ಹಿಂದೆ ಉಳಿದಿದೆ. ಕೇಂದ್ರ ಸರ್ಕಾರದ ಯೋಜನೆಗಳು ರಾಜ್ಯದ ಜನರನ್ನು ತಲುಪುವುದನ್ನು ಮಮತಾ ಬ್ಯಾನರ್ಜಿ ಅವರು ತಡೆಯುತ್ತಿದ್ದಾರೆ' ಎಂದು ಮೋದಿ ಆರೋಪಿಸಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ

'ಬಿಜೆಪಿ ಜಗತ್ತಿನ ದೊಡ್ಡ ಲೂಟಿಕೋರ'

'ಬಿಜೆಪಿ ಜಗತ್ತಿನಲ್ಲಿಯೇ ಅತ್ಯಂತ ದೊಡ್ಡ ಲೂಟಿಕೋರ. ಪಿಎಂ ಕೇರ್ಸ್ ನಿಧಿಯ ಅಡಿ ಅವರು ಎಷ್ಟು ಹಣ ಸಂಗ್ರಹಿಸಿದ್ದಾರೆ ಎಂಬುದನ್ನು ನೋಡಿ' ಎಂದು ಮಮತಾ ಬ್ಯಾನರ್ಜಿ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಆರೋಪಕ್ಕೆ ತಿರುಗೇಟು ನೀಡಿದ್ದಾರೆ.

ಹಲ್ದಿಯಾದಲ್ಲಿ ಟಿಎಂಸಿ ಅಭ್ಯರ್ಥಿಗಳ ಪರವಾಗಿ ಪ್ರಚಾರ ನಡೆಸಿದ ಮಮತಾ ಅವರು, ಮೋದಿ ಅವರ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡಿದ್ದಾರೆ. 'ಗಲಭೆಮುಕ್ತ ಮತ್ತು ಶಾಂತಿಯುತ ಬಂಗಾಳ ಬೇಕಿದ್ದರೆ, ನಿಮ್ಮೆದುರು ಇರುವ ಏಕೈಕ ಆಯ್ಕೆ ಟಿಎಂಸಿ' ಎಂದು ಅವರು ಹೇಳಿದ್ದಾರೆ.

'ಸುವೇಂದು ಅಧಿಕಾರಿ 2014ರಿಂದ ಬಿಜೆಪಿ ಸಂಪರ್ಕದಲ್ಲಿ ಇದ್ದೆ ಎಂಬುದನ್ನ ಒಪ್ಪಿಕೊಂಡಿದ್ದಾರೆ. ಇಂತಹ ವಂಚಕರೆಲ್ಲರೂ ಈಗ ಟಿಎಂಸಿ ತ್ಯಜಿಸಿದ್ದಾರೆ. ನಂದಿಗ್ರಾಮವನ್ನು ಈಗ ಹೇಗೆ ಅಭಿವೃದ್ಧಿಪಡಿಸುತ್ತೇವೆ ಎಂಬುದನ್ನು ನೋಡಿ' ಎಂದು ಅವರು ಹೇಳಿದ್ದಾರೆ.



ಮಮತಾ ಬ್ಯಾನರ್ಜಿ

'ಮೋದಿಯದ್ದು, ರೈತರನ್ನು ಕೊಲ್ಲುವ ಅಭಿವೃದ್ಧಿ'

'ಮೋದಿ ಅವರು ಸದಾ, 'ಮಮತಾ ಅವರು ಆಟ ಶುರುವಾಯಿತು ಅನ್ನುತ್ತಾರೆ. ನಾವು ಅಭಿವೃದ್ಧಿಯನ್ನು ಆರಂಭಿಸುತ್ತೇವೆ' ಎನ್ನುತ್ತಾರೆ. ಆದರೆ ರೈತರನ್ನು ಕೊಲ್ಲುವುದೇ ಮೋದಿ ಅವರ ಅಭಿವೃದ್ಧಿ. ₹ 15 ಲಕ್ಷ ನೀಡುತ್ತೇನೆ ಎಂದು ಅವರು ಭರವಸೆ ನೀಡಿದ್ದರು. ನಿಮಗೆ ₹ 15 ಲಕ್ಷ ದೊರೆಯಿತೇ' ಎಂದು ಟಿಎಂಸಿ ಸಂಸದ ಅಭಿಷೇಕ್ ಬ್ಯಾನರ್ಜಿ ಹೇಳಿದ್ದಾರೆ.

'ನೋಟು ರದ್ದತಿಯ ವೇಳೆ 50 ದಿನ ಕೊಡಿ ಸಾಕು ಎಲ್ಲವನ್ನೂ ಬದಲಿಸುತ್ತೇನೆ ಎಂದು ಹೇಳಿದ್ದರು. ವ್ಯವಸ್ಥೆ ಸರಿ ಆಗದಿದ್ದರೆ, ನನ್ನನ್ನು ನೇಣಿಗೆ ಹಾಕಿ ಎಂದೂ ಘೋಷಿಸಿದ್ದರು. ಆದರೆ, ಈಗ ಮತ್ತೆ ಐದು ವರ್ಷ ನೀಡಿ ಎಂದು ನಿಮ್ಮನ್ನು ಕೇಳುತ್ತಿದ್ದಾರೆ. ಮಾತು ಉಳಿಸಿಕೊಳ್ಳುವುದು ಮೋದಿಗೆ ಗೊತ್ತಿಲ್ಲ. ಮೋದಿ ಐದು ವರ್ಷ ಕೇಳುತ್ತಿದ್ದರೆ, ಕೊಟ್ಟ ಮಾತು ಈಡೇರಿಸಲು ಅವರಿಗೆ 500 ವರ್ಷ ಬೇಕು' ಎಂದು ಅಭಿಷೇಕ್ ಲೇವಡಿ ಮಾಡಿದ್ದಾರೆ.

'ಮಮತಾ ಬ್ಯಾನರ್ಜಿ ಅವರು ತಮ್ಮ 10 ವರ್ಷದ ಆಡಳಿತದ ರಿಪೋರ್ಟ್ ಕಾರ್ಡ್ ನೀಡುತ್ತಾರೆ. ಮೋದಿಯವರೇ ನಿಮ್ಮ ರಿಪೋರ್ಟ್ ಕಾರ್ಡ್ ಎಲ್ಲಿದೆ? ಈ ಬಗ್ಗೆ ಚರ್ಚೆಗೆ ಬರಲು ನಿಮಗೆ ಸವಾಲು ಹಾಕುತ್ತಿದ್ದೇನೆ. ಭಾಷಣದ ಪ್ರತಿ ಇಲ್ಲದೆ ಕೇವಲ 120 ಸೆಕೆಂಡ್ ಬಂಗಾಳದಲ್ಲಿ ಮಾತನಾಡಿ. ನಾನು 2 ಗಂಟೆ ಹಿಂದಿಯಲ್ಲಿ ಮಾತನಾಡುತ್ತೇನೆ. ನೀವೇ ಜಾಗವನ್ನು ಗೊತ್ತುಮಾಡಿ. ನಮ್ಮ ಸಾಧನೆಗಳ ಬಗ್ಗೆ ಚರ್ಚಿಸೋಣ' ಎಂದು ಅಭಿಷೇಕ್ ಸವಾಲು ಹಾಕಿದ್ದಾರೆ.


ಅಭಿಷೇಕ್ ಬ್ಯಾನರ್ಜಿ

ನುಡಿ-ಕಿಡಿ

70 ವರ್ಷಗಳಿಂದ ಕಾಂಗ್ರೆಸ್ ನಿಮ್ಮನ್ನು ಹಿಂಡಿಹಿಪ್ಪೆಮಾಡಿದೆ, ಎಡಪಕ್ಷಗಳು ನಿಮ್ಮನ್ನು ಹದಗೆಡೆಸಿವೆ, ಟಿಎಂಸಿ ನಿಮ್ಮ ಕನಸುಗಳನ್ನು ಅಪಹರಿಸಿದೆ. ಜನರನ್ನು ಲೂಟಿ ಮಾಡಿದೆ. ಬಿಜೆಪಿಗೆ ಕೇವಲ ಐದು ವರ್ಷ ನೀಡಿ. ಈ ಎಲ್ಲಾ ಪಕ್ಷಗಳು ಹಾಳುಮಾಡಿರುವುದನ್ನು ನಾವು ಸರಿಪಡಿಸುತ್ತೇವೆ. ಸುವರ್ಣ ಬಂಗಾಳವನ್ನು ಸೃಷ್ಟಿಸುತ್ತೇವೆ

ನರೇಂದ್ರ ಮೋದಿ, ಪ್ರಧಾನಿ

ಪಶ್ಚಿಮ ಬಂಗಾಳಕ್ಕೆ ಬಂದಾಗಲೆಲ್ಲಾ ಮೋದಿ ಅವರು ಸುವರ್ಣ ಬಂಗಾಳ ಮಾಡುತ್ತೇವೆ ಎಂದು ಘೋಷಿಸುತ್ತಾರೆ. ಅವರು ಭಾರತವನ್ನೇಕೆ ಸುವರ್ಣ ಭಾರತವನ್ನಾಗಿ ಮಾಡಿಲ್ಲ. ಅವರ ಸರ್ಕಾರವಿರುವ ತ್ರಿಪುರಾ ಏಕೆ ಇನ್ನೂ ಸುವರ್ಣ ತ್ರಿಪುರಾ ಆಗಿಲ್ಲ

ಅಭಿಷೇಕ್ ಬ್ಯಾನರ್ಜಿ, ಟಿಎಂಸಿ ಸಂಸದ

ಮೋದಿ ಅವರು ಅತ್ಯಂತ ದೊಡ್ಡ ದೊಡ್ಡ ಭರವಸೆಗಳನ್ನು ನೀಡುತ್ತಾರೆ. ಆದರೆ ಏಳು ವರ್ಷದಲ್ಲಿ ಏನು ಮಾಡಿದ್ದಾರೆ? ಈಗ ತಮ್ಮ ಹೆಸರಿನಲ್ಲಿ ಕ್ರೀಡಾಂಗಣ ನಿರ್ಮಿಸುತ್ತಿದ್ದಾರೆ. ಅಲ್ಲದೆ, ರವೀಂದ್ರನಾಥ್ ಟ್ಯಾಗೋರ್ ಆಗಲು ಯತ್ನಿಸುತ್ತಿದ್ದಾರೆ. ಮುಂದೊಂದು ದಿನ ದೇಶಕ್ಕೂ ತಮ್ಮದೇ ಹೆಸರು ಇಡುತ್ತಾರೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ

ಕೇರಳ: ಎನ್‌ಡಿಎ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತ

ತ್ರಿಶೂರ್ (ಪಿಟಿಐ): ಕೇರಳ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿದಿರುವ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದ ಮೂವರು ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾಗಿವೆ. ಇದರಿಂದ ಬಿಜೆಪಿಗೆ ಭಾರಿ ಹಿನ್ನಡೆಯಾಗಿದೆ.

ಏಪ್ರಿಲ್ 6ರಂದು ಮತದಾನ ನಡೆಯಲಿರುವ ತಲಶೇರಿ, ಗುರುವಾಯೂರು ಮತ್ತು ದೇವಿಕುಳಂ ವಿಧಾನಸಭಾ ಕ್ಷೇತ್ರಗಳಲ್ಲಿ ಎನ್‌ಡಿಎ ಅಭ್ಯರ್ಥಿಗಳ ನಾಮಪತ್ರ ತಿರಸ್ಕೃತವಾಗಿವೆ. ತಲಶೇರಿ ಮತ್ತು ಗುರುವಾಯೂರಿನಲ್ಲಿ ಬಿಜೆಪಿ ತನ್ನದೇ ಪಕ್ಷದ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿತ್ತು. ದೇವಿಕುಳಂನಲ್ಲಿ ಮಿತ್ರಪಕ್ಷ ಎಐಎಡಿಎಂಕೆಯ ಅಭ್ಯರ್ಥಿ ಕಣಕ್ಕೆ ಇಳಿದಿದ್ದರು.

'ಅಗತ್ಯ ದಾಖಲೆಪತ್ರಗಳನ್ನು ಸಲ್ಲಿಸದ ಕಾರಣ ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ' ಎಂದು ಚುನಾವಣಾ ಅಧಿಕಾರಿಗಳು ಹೇಳಿದ್ದಾರೆ. ಈ ಕ್ರಮದ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಹೋಗುತ್ತೇವೆ ಎಂದು ಬಿಜೆಪಿ ಕೇರಳ ಘಟಕ ಹೇಳಿದೆ. ತಲಶೇರಿಯಲ್ಲಿ ಬಿಜೆಪಿ ಕಣ್ಣೂರು ಘಟಕದ ಅಧ್ಯಕ್ಷ ಎನ್.ಹರಿದಾಸ್ ಹಾಗೂ ಗುರುವಾಯೂರಿನಲ್ಲಿ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ನಿವೇದಿತಾ ಅವರ ನಾಮಪತ್ರಗಳು ತಿರಸ್ಕೃತವಾಗಿವೆ.

ಯುಡಿಎಫ್ ಪ್ರಣಾಳಿಕೆ ಬಿಡುಗಡೆ

ಕೇರಳದಲ್ಲಿ ವಿರೋಧ ಪಕ್ಷಗಳ ಒಕ್ಕೂಟ ಯುಡಿಎಫ್, ಈ ಬಾರಿಯ ಚುನಾವಣೆಗೆ ತನ್ನ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ. ಪ್ರಣಾಳಿಕೆಯ ಪ್ರಮುಖ ಅಂಶಗಳು ಹೀಗಿವೆ

- 40-60 ವರ್ಷದ ಗೃಹಿಣಿಯರಿಗೆ ₹ 2,000 ಪಿಂಚಣಿ
- ಬಡವರಿಗೆ 'ನ್ಯಾಯ' ಯೋಜನೆ ಅಡಿ ವಾರ್ಷಿಕ ₹ 72,000
- ಬಡವರಿಗೆ 5 ಲಕ್ಷ ಮನೆ ನಿರ್ಮಿಸುವ ವಸತಿ ಯೋಜನೆ
- 100 ಯುನಿಟ್‌ವರೆಗೆ ಉಚಿತ ವಿದ್ಯುತ್
- ಮಹಿಳಾ ಉದ್ಯಮಿಗಳಿಗೆ ₹ 10 ಲಕ್ಷದವರೆಗೆ ಬಡ್ಡಿರಹಿತ ಸಾಲ
- ಅಂಗವಿಕಲ, ವಿಧವೆ, ವೃದ್ಧರ ಸಾಮಾಜಿಕ ಭದ್ರತಾ ಪಿಂಚಣಿಯನ್ನು ₹ 1,600ರಿಂದ ₹ 2,500ಕ್ಕೆ ಏರಿಕೆ

ಸಿಎಎ ರದ್ಧತಿ, ಉಚಿತ್ ವಿದ್ಯುತ್, 5 ಲಕ್ಷ ಉದ್ಯೋಗ: ಕಾಂಗ್ರೆಸ್ ಪ್ರಣಾಳಿಕೆ

'ಅಸ್ಸಾಂ ಸಂಸ್ಕೃತಿಯ ಮೇಲೆ ಬಿಜೆಪಿ ದಾಳಿ'

ಮರ್ಘೆರಿ/ಗೋಪುರ್ (ಅಸ್ಸಾಂ) (ಪಿಟಿಐ): 'ಬಿಜೆಪಿಯು ಅಸ್ಸಾಂನ ಸಂಸ್ಕೃತಿ, ಭಾಷೆ, ಪರಂಪರೆ ಮತ್ತು ಭ್ರಾತೃತ್ವದ ಮೇಲೆ ದಾಳಿ ನಡೆಸುತ್ತಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಇಂತಹ ದಾಳಿಗಳಿಂದ ಅಸ್ಸಾಂ ಅನ್ನು ರಕ್ಷಿಸಲಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಗಳಲ್ಲಿ ರಾಹುಲ್ ಗಾಂಧಿ ಬಿಜೆಪಿ ಮತ್ತು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಹರಿಹಾಯ್ದಿದ್ದಾರೆ.

ಅಸ್ಸಾಂ ಅನ್ನು ಈಗ ಹೊರಗಿನವರು ಆಳುತ್ತಿದ್ದಾರೆ. ನಾಗ್ಪುರದಲ್ಲಿರುವ ಆರ್‌ಎಸ್‌ಎಸ್ ಅಸ್ಸಾಂ ಅನ್ನು ಆಳಬೇಕೇ ಎಂದು ಪ್ರಶ್ನಿಸಿದ ಅವರು, ಬದ್ರುದ್ದೀನ್ ಅಜ್ಮಲ್ ಅವರ ಮೇಲೆ ಬಿಜೆಪಿ ದಾಳಿ ನಡೆಸುತ್ತಲೇ ಇದೆ. ಇದು ಅಸ್ಸಾಂ ಜನರ ಮೇಲೆ ನಡೆದ ದಾಳಿ ಎಂದು ಹೇಳಿದ್ದಾರೆ.

'ನಿಮ್ಮ ಹಣವನ್ನು ಬಳಸಿಕೊಂಡು ₹ 2,000 ಕೋಟಿ ವೆಚ್ಚದಲ್ಲಿ ಗುವಾಹಟಿ ವಿಮಾನ ನಿಲ್ದಾಣವನ್ನು ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಿತು. ಆನಂತರ, ಆ ವಿಮಾನ ನಿಲ್ದಾಣವನ್ನು ಮೋದಿ ಅವರು ತಮ್ಮ ಉದ್ಯಮಿ ಗೆಳೆಯ ಅದಾನಿ ಅವರಿಗೆ ನೀಡಿದರು. ಹೀಗೆ ದೇಶದಲ್ಲಿನ ಎಲ್ಲಾ ಸಂಪತ್ತನ್ನು ಮೋದಿ ಅವರು ತಮ್ಮ ಉದ್ಯಮಿ ಗೆಳೆಯರಿಗೆ ನೀಡುತ್ತಿದ್ದಾರೆ ಎಂದು ರಾಹುಲ್ ಟೀಕಿಸಿದ್ದಾರೆ.

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಪೌರತ್ವ ತಿದ್ದುಪಡಿ ಕಾಯ್ದೆಯನ್ನು ರದ್ದು ಮಾಡಲಾಗುವುದು. ರಾಜ್ಯದ 5 ಲಕ್ಷ ಯುವಕರಿಗೆ ಸರ್ಕಾರಿ ಉದ್ಯೋಗ ನೀಡಲಾಗುವುದು. ಎಲ್ಲಾ ಮನೆಗಳಿಗೆ 200 ಯುನಿಟ್‌ನಷ್ಟು ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುವುದು. ಪ್ರತಿ ಗೃಹಿಣಿಗೆ ಮಾಸಿಕ ₹ 2,000 ವೇತನ ನೀಡುತ್ತೇವೆ. ಚಹಾ ತೋಟದ ಕಾರ್ಮಿಕರ ಕನಿಷ್ಠ ಕೂಲಿಯನ್ನು ₹ 365ಕ್ಕೆ ಹೆಚ್ಚಿಸಲಾಗುವುದು ಎಂದು ರಾಹುಲ್ ಗಾಂಧಿ ಘೋಷಿಸಿದ್ದಾರೆ.

'ಕಾಂಗ್ರೆಸ್, ನೀಡಿರುವ ಭರವಸೆಗಳನ್ನು ಈಡೇರಿಸುತ್ತದೆ. ಮಹಾರಾಷ್ಟ್ರ, ರಾಜಸ್ಥಾನ, ಛತ್ತೀಸಗಡದಲ್ಲಿ ರೈತರ ಸಾಲಮನ್ನಾ ಮಾಡುವುದಾಗಿ ಹೇಳಿದ್ದೆವು. ಸರ್ಕಾರ ರಚನೆಯಾದ ಆರು ತಿಂಗಳಲ್ಲೇ ಸಾಲವನ್ನು ಮನ್ನಾ ಮಾಡಿದ್ದೇವೆ' ಎಂದು ರಾಹುಲ್ ಹೇಳಿದ್ದಾರೆ.



ಗುವಾಹಟಿಯ ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ರಾಹುಲ್ ಗಾಂಧಿ ಅವರು ಪಕ್ಷದ ಚುನಾವಣಾ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು ಪಿಟಿಐ ಚಿತ್ರ

'ಅಸ್ಸಾಂ ಚಹಾ ನಾಶಕ್ಕೆ ಕಾಂಗ್ರೆಸ್ ಬೆಂಬಲ'

ಛಾಬಾ (ಅಸ್ಸಾಂ) (ಪಿಟಿಐ): 'ಅಸ್ಸಾಂ ಚಹಾಕ್ಕೆ ಜಗತ್ತಿನಾದ್ಯಂತ ಒಳ್ಳೆಯ ಹೆಸರು ಇದೆ. ಆದರೆ ಈ ಚಹಾಕ್ಕೆ ಕೆಟ್ಟ ಹೆಸರು ತರಲು ಹೊರಟಿದ್ದವರನ್ನು ಕಾಂಗ್ರೆಸ್ ಬೆಂಬಲಿಸುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಆರೋಪಿಸಿದ್ದಾರೆ.

ಇಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು, 'ನೀವೆಲ್ಲರೂ ಟೂಲ್‌ಕಿಟ್ ಪ್ರಕರಣವನ್ನು ಕೇಳಿರಬಹುದು. ಅಸ್ಸಾಂ ಚಹಾದ ಹೆಸರಿಗೆ ಮಸಿ ಬಳಿಯಲು ಮತ್ತು ಚಹಾ ತೋಟಗಳನ್ನು ನಾಶ ಮಾಡಲು ಆ ದುಷ್ಟರು ಸಂಚು ರೂಪಿಸಿದ್ದರು. ಅಂಥವರಿಗೆ ಕಾಂಗ್ರೆಸ್ ಬೆಂಬಲ ನೀಡುತ್ತಿದೆ. ಆದರೆ, ಇಲ್ಲಿಗೆ ಬಂದು ಚಹಾ ಕಾರ್ಮಿಕರ ಬಳಿ ಮತ ಕೇಳುತ್ತಿದೆ' ಎಂದು ಪ್ರಧಾನಿ ಟೀಕಿಸಿದ್ದಾರೆ.

'ಚಹಾ ತೋಟದ ಕಾರ್ಮಿಕರ ಬವಣೆಗಳನ್ನು ಚಾಯ್‌ವಾಲಾ ಮಾತ್ರ ಚೆನ್ನಾಗಿ ಅರ್ಥಮಾಡಿಕೊಳ್ಳಬಲ್ಲ' ಎಂದು ಪ್ರಧಾನಿ ಹೇಳಿದ್ದಾರೆ.



ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ ಸದಸ್ಯರು ಶನಿವಾರ ಗುವಾಹಟಿಯಲ್ಲಿ ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ಬಿಜೆಪಿ ವಿರುದ್ಧ ಪ್ರತಿಭಟನಾ ಬೈಕ್ ರ‍್ಯಾಲಿ ನಡೆಸಿದರು ಪಿಟಿಐ ಚಿತ್ರ

ಎಂಎನ್‌ಎಂ ಖಜಾಂಚಿಗೆ ಸೇರಿದ ₹11.50 ಕೋಟಿ ವಶಕ್ಕೆ

ಚೆನ್ನೈ: ಕಮಲಹಾಸನ್ ಅವರ ಮಕ್ಕಳ್ ನೀಧಿ ಮಯ್ಯಂ (ಎಂಎನ್‌ಎಂ) ಪಕ್ಷದ ಖಜಾಂಚಿ ಎ. ಚಂದ್ರಶೇಖರನ್ ಅವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿರುವ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ₹11.50 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ. ಸುಮಾರು ₹80 ಕೋಟಿ ಲೆಕ್ಕಪತ್ರವಿಲ್ಲದ ಆದಾಯದ ದಾಖಲೆಗಳನ್ನು ಪತ್ತೆ ಮಾಡಿದ್ದಾರೆ.

ತಿರುಪ್ಪೂರ್‌ನ ಉದ್ಯಮಿ ಚಂದ್ರಶೇಖರ್ ಅವರಿಗೆ ಸೇರಿದ ತಿರುಪ್ಪೂರ್, ಧರ್ಮಪುರ, ಚೆನ್ನೈ ಮತ್ತು ಇತರ ಐದು ಸ್ಥಳಗಳಲ್ಲಿ ಗುರುವಾರ ಶೋಧ ನಡೆಸಲಾಗಿದೆ. ಚಂದ್ರಶೇಖರನ್ ಅವರ ಕಂಪೆನಿಯು ಖರೀದಿ ಮತ್ತು ವೆಚ್ಚಗಳನ್ನು ಉತ್ಪ್ರೇಕ್ಷಿಸಿ ಲಾಭದ ಮೊತ್ತವನ್ನು ಕಡಿಮೆ ಮಾಡಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಇಲಾಖೆಯ ಶೋಧ ಕ್ರಮವು ಕಮಲಹಾಸನ್ ಅವರನ್ನು ಕೆರಳಿಸಿದೆ. ಇದು ತಮ್ಮನ್ನು ಬೆದರಿಸುವ ತಂತ್ರ, ತಮ್ಮದು ಪ್ರಾಮಾಣಿಕವಾದ ಪಕ್ಷ ಎಂದು ಅವರು ಹೇಳಿದ್ದಾರೆ.

ಕಾನೂನು ಜಾರಿ ಅಧಿಕಾರಿಗಳು ತಮಿಳುನಾಡಿನಲ್ಲಿ ಭಾರಿ ಪ್ರಮಾಣದ ನಗದು ಮತ್ತು ಇತರ ವಸ್ತುಗಳನ್ನು ಈವರೆಗೆ ವಶಪಡಿಸಿಕೊಂಡಿದ್ದಾರೆ. ಫೆ. 26ರಂದು ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಬಳಿಕ ₹127 ಕೋಟಿ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ.

ಚುನಾವಣಾ ಕಣದಲ್ಲಿ...

- ಮಕ್ಕಳ್ ನೀತಿ ಮಯ್ಯಂ ಪಕ್ಷದ ಮುಖ್ಯಸ್ಥ ಕಮಲ್ ಹಾಸನ್ ಅವರು ವಾಯುವಿಹಾರಕ್ಕೆ ಬರುವ ಜನರೊಂದಿಗೆ ಸಂವಾದ ನಡೆಸುವ ಕಾರ್ಯಕ್ರಮ ಆರಂಭಿಸಿದ್ದಾರೆ. ಜೊತೆಗೆ ಮಾರುಕಟ್ಟೆಗಳಿಗೆ ಭೇಟಿ ನೀಡಿಯೂ ಜನರೊಂದಿಗೆ ಸಂವಾದ ನಡೆಸುತ್ತಿದ್ದಾರೆ
- ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 30ರಂದು ಪುದುಚೇರಿಯಲ್ಲಿ ಪ್ರಚಾರ ಸಭೆ ನಡೆಸಲಿದ್ದಾರೆ ಎಂದು ಬಿಜೆಪಿಯ ಪುದುಚೇರಿ ಘಟಕ ಘೋಷಿಸಿದೆ

ಮೂರೂ ಕ್ಷೇತ್ರಗಳಿಗೆ 'ಉಸ್ತುವಾರಿ' ನೇಮಕ • ಹಿರಿಯರಿಗೆ ಜವಾಬ್ದಾರಿ ಹಂಚಿಕೆ

ಉಪಚುನಾವಣೆ ಗೆಲುವಿಗೆ 'ಕೈ' ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏಪ್ರಿಲ್ 17ರಂದು ಉಪ ಚುನಾವಣೆ ನಡೆಯಲಿರುವ ಮಸ್ಕಿಯಲ್ಲಿ ಇದೇ 29ರಂದು ಹಾಗೂ ಬಸವಕಲ್ಯಾಣದಲ್ಲಿ 30ರಂದು ಪಕ್ಷದ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದಾರೆ. ಬೆಳಗಾವಿ ಲೋಕಸಭೆ ಕ್ಷೇತ್ರಕ್ಕೆ ಒಬ್ಬ ಅಭ್ಯರ್ಥಿ ಹೆಸರು ಕಳುಹಿಸಿಕೊಟ್ಟಿದ್ದೇವೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಉಪ ಚುನಾವಣೆ ಕಾರ್ಯತಂತ್ರದ ಕುರಿತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಪಕ್ಷದ ಹಿರಿಯ ಮುಖಂಡರ ಜೊತೆ ಚರ್ಚಿಸಿದ ಬಳಿಕ ಸುದ್ದಿಗಾರರರ ಜೊತೆ ಅವರು ಮಾತನಾಡಿದರು.

'ಆಯಾ ಕ್ಷೇತ್ರಗಳ ಸ್ಥಳೀಯ ನಾಯಕರ ಅಭಿಪ್ರಾಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿದ್ದೇವೆ. ಮೂರೂ ಕ್ಷೇತ್ರಗಳ ಉಪಚುನಾವಣೆಯ ಉಸ್ತುವಾರಿಯನ್ನು ಪಕ್ಷದ ನಾಯಕರಿಗೆ ವಹಿಸಲಾಗುವುದು. ಅಲ್ಲದೆ, ಜವಾಬ್ದಾರಿಯನ್ನು ಹಿರಿಯ ನಾಯಕರು ತೆಗೆದುಕೊಳ್ಳಬೇಕೆಂದು ತೀರ್ಮಾನಿಸಲಾಗಿದೆ. ಹೆಚ್ಚು ಬಹಿರಂಗ ಸಭೆ ಮಾಡದೆ, ಎರಡೆರಡು ಕಾರ್ಯಕ್ರಮಗಳನ್ನು ಮಾತ್ರ ಹಮ್ಮಿಕೊಳ್ಳಲು ನಿರ್ಧರಿಸಿದ್ದೇವೆ' ಎಂದರು.

'ಕೊರೊನಾ ಮಾರ್ಗಸೂಚಿ ಇನ್ನೂ ಗೊಂದಲದಲ್ಲಿದೆ. 500 ಜನರು ಮಾತ್ರ ಸೇರಿಬಹುದೆಂದು ಸರ್ಕಾರ ಹೇಳಿತ್ತು. ಹೀಗಾಗಿ, ಪಕ್ಷದಿಂದ ನಿಗದಿಯಾಗಿದ್ದ ಸಭೆಗಳನ್ನು ರದ್ದು ಮಾಡಿದ್ದೇವೆ. ಆದರೆ, ಚುನಾವಣೆ ಮತ್ತು ಕೊರೊನಾ ಮಾರ್ಗಸೂಚಿ ವಿಚಾರದಲ್ಲಿ ರಾಜ್ಯ ಸರ್ಕಾರ ಗೊಂದಲದಲ್ಲಿದೆ' ಎಂದರು.

'ಮೂರೂ ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸವಿದೆ. ಮತದಾರರ ಮೇಲೆ ಅಪಾರ ನಂಬಿಕೆ ಇಟ್ಟಿದ್ದೇವೆ. ಈ ರಾಜ್ಯದಲ್ಲಿ ಬದಲಾವಣೆ ಅಗತ್ಯವಿದೆ ಎಂದು ಮತದಾರ ತೀರ್ಮಾನಿಸಿದ್ದು, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅಭ್ಯರ್ಥಿಗಳನ್ನು ಗೆಲ್ಲಿಸಲು ಪ್ರಯತ್ನಿಸುತ್ತೇವೆ' ಎಂದೂ ಹೇಳಿದರು.

ಉಸ್ತುವಾರಿಗಳ ನೇಮಕ: ಬೆಳಗಾವಿಗೆ ಶಾಸಕ ಎಂ.ಬಿ.ಪಾಟೀಲ, ಕಾರ್ಯಾಧ್ಯಕ್ಷರಾದ ಈಶ್ವರ ಖಂಡ್ರೆ ಅವರನ್ನು ಬಸವಕಲ್ಯಾಣಕ್ಕೆ, ಆರ್. ಧ್ರುವನಾರಾಯಣ್ ಅವರನ್ನು ಮಸ್ಕಿಗೆ ಕಾಂಗ್ರೆಸ್ ಉಸ್ತುವಾರಿಗಳಾಗಿ ನಿಯೋಜಿಸಲಾಗಿದೆ. ಅವರು ಕ್ಷೇತ್ರದಲ್ಲಿಯೇ ವಾಸ್ತವ್ಯ ಹೂಡಲಿದ್ದಾರೆ. ಪಕ್ಷದ ಸ್ಥಳೀಯ ನಾಯಕರು, ಕಾರ್ಯಕರ್ತರ ಜೊತೆ ಸಂವಹನ ನಡೆಸಿ ಚುನಾವಣೆ ಗೆಲುವಿಗೆ ಶ್ರಮಿಸಲಿದ್ದಾರೆ ಎಂದರು.


ಸಭೆಯಲ್ಲಿ ಭಾಗವಹಿಸಿದ್ದ ಎಂ.ಬಿ. ಪಾಟೀಲ, ಎಚ್‌.ಕೆ. ಪಾಟೀಲ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್

ಸತೀಶ ಜಾರಕಿಹೊಳಿಗೆ ಬೆಳಗಾವಿ ಟಿಕೆಟ್?

ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಪಕ್ಷದ ಅಭ್ಯರ್ಥಿಯಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆಗಿರುವ ಶಾಸಕ ಸತೀಶ ಜಾರಕಿಹೊಳಿ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದ್ದು, ಹೈಕಮಾಂಡ್‌ಗೆ ಅವರ ಹೆಸರನ್ನು ಮಾತ್ರ ಶಿಫಾರಸು ಮಾಡಲಾಗಿದೆ ಎನ್ನಲಾಗಿದೆ.

'ಬೆಳಗಾವಿ ಕ್ಷೇತ್ರಕ್ಕೆ ಒಬ್ಬರ ಹೆಸರು ಮಾತ್ರ ಹೈಕಮಾಂಡ್‌ಗೆ ಶಿಫಾರಸು ಮಾಡಿದ್ದೇವೆ' ಎಂದಿರುವ ಡಿ.ಕೆ. ಶಿವಕುಮಾರ್ ಹೆಸರು ಬಹಿರಂಗಪಡಿಸಲಿಲ್ಲ. ಆದರೆ ಸತೀಶ ಜಾರಕಿಹೊಳಿ ಮಾತನಾಡಿ, 'ನನ್ನ ಜೊತೆ ಇನ್ನಿಬ್ಬರ ಹೆಸರನ್ನೂ ಕಳುಹಿಸಲಾಗಿದೆ. ನನಗಿಷ್ಟ ಇದೆಯೊ ಇಲ್ಲವೊ ಎನ್ನುವುದು ಮುಖ್ಯವಲ್ಲ. ಪಕ್ಷ ಬಯಸಿದರೆ ಸ್ಪರ್ಧೆ ಮಾಡಬೇಕಾಗುತ್ತದೆ. ನಾನು ಕೂಡ ಒಮ್ಮೆ ವರಿಷ್ಠರನ್ನು ಭೇಟಿ ಮಾಡುತ್ತೇನೆ. ನಂತರ ಚುನಾವಣೆಗೆ ಸ್ಪರ್ಧಿಸುವ ಬಗ್ಗೆ ನಿರ್ಧರಿಸುತ್ತೇನೆ. ಪ್ರಕಾಶ್ ಹುಕ್ಕೇರಿ ಹೆಸರನ್ನು ಕೂಡ ವರಿಷ್ಠರಿಗೆ ಕೆಪಿಸಿಸಿ ಕಳುಹಿಸಿದೆ' ಎಂದರು.

ಇನ್ನೊಬ್ಬ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, 'ಬೆಳಗಾವಿ ಕ್ಷೇತ್ರಕ್ಕೆ ಅಭ್ಯರ್ಥಿ ಆಯ್ಕೆ ಆಗಿದೆ. ಅವರ ಹೆಸರನ್ನು ಕಾಯ್ದಿರಿಸಲಾಗಿದೆ' ಎಂದರು.

'ಮತಗಳೇನು ಬಿಎಸ್‌ವೈ ಜೇಬಿನಲ್ಲಿವೆಯೇ?'

ಮೈಸೂರು: 'ಮತಗಳೇನು ಯಡಿಯೂರಪ್ಪನ ಜೇಬಿನಲ್ಲಿವೆಯೇ? ಚುನಾವಣೆಯಲ್ಲಿ ಜನರ ಆಶೀರ್ವಾದವೇ ಅಂತಿಮ. ಉಪಚುನಾವಣೆಯಲ್ಲೂ ಜನ ಸರಿಯಾದ ಉತ್ತರ ನೀಡಲಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಇಲ್ಲಿ ಹೇಳಿದರು.

ಉಪಚುನಾವಣೆಯಲ್ಲಿ ಬಿಜೆಪಿ ಗೆಲ್ಲುವುದಾಗಿ ಯಡಿಯೂರಪ್ಪ ನೀಡಿರುವ ಹೇಳಿಕೆಗೆ ತಿರುಗೇಟು ನೀಡಿದ ಅವರು, 'ಬಿಜೆಪಿ ಭ್ರಷ್ಟಾಚಾರದಲ್ಲಿ ಮುಳುಗಿದೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇದ್ದು, ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗುತ್ತಿದೆ. ಪ್ರತಾಪಗೌಡ ಪಾಟೀಲ ನಮ್ಮ ಪಕ್ಷ ಬಿಟ್ಟು ಹೋದವನು. ಆಪರೇಷನ್ ಕಮಲಕ್ಕೆ ಒಳಗಾಗಿರುವ ಆತನಿಗೆ ಇಮೇಜ್ ಇಲ್ಲ. ಇದು ಕಾಂಗ್ರೆಸ್‌ಗೆ ಅನುಕೂಲ' ಎಂದರು.

'ಉಪಚುನಾವಣೆಗೆ ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಿದೆ. ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಸತೀಶ್ ಜಾರಕಿಹೊಳಿ ಅವರನ್ನು ಕಣಕ್ಕಿಳಿಸಲು ಶಿಫಾರಸು ಮಾಡಿದ್ದೇವೆ. ಅವರ ಹೆಸರು ಅಂತಿಮವಾಗುವ ನಿರೀಕ್ಷೆ ಇದೆ' ಎಂದು ತಿಳಿಸಿದರು.

ಸಿಂದಗಿ ಕ್ಷೇತ್ರ: ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಬದಲಿಸಲು ಒತ್ತಾಯ

ಪ್ರಜಾವಾಣಿ ವಾರ್ತೆ

ಸಿಂದಗಿ(ವಿಜಯಪುರ): ಸಿಂದಗಿ ಉಪ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಅಭ್ಯರ್ಥಿ ಎಂದು ಈಗಾಗಲೇ ಘೋಷಣೆ ಮಾಡಿರುವ ವಲಸಿಗ ಅಶೋಕ ಮನಗೂಳಿ ಹೆಸರನ್ನು ಕೈಬಿಟ್ಟು, ಮೂಲ ಕಾಂಗ್ರೆಸ್ಸಿಗರಲ್ಲಿ ಯಾರಿಗಾದರೂ ಟಿಕೆಟ್ ನೀಡಬೇಕು ಎಂದು ಮಾಜಿ ಶಾಸಕ ಶರಣಪ್ಪ ಸುಣಗಾರ ಆಗ್ರಹಿಸಿದರು.

ಪಟ್ಟಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣೆಗೂ ಮುನ್ನವೇ ಅಭ್ಯರ್ಥಿಯ ಹೆಸರು ಘೋಷಣೆ ಮಾಡಿರುವುದು ಕಾಂಗ್ರೆಸ್ ಪಕ್ಷದ ಇತಿಹಾಸದಲ್ಲಿಯೇ ಕಂಡರಿಯದ ಪ್ರಸಂಗ. ಜಿಲ್ಲೆಯ ಕಾಂಗ್ರೆಸ್ ನಾಯಕರ ಗಮನಕ್ಕೂ ತಾರದೇ ರಾಜ್ಯದ ಇಬ್ಬರು ನಾಯಕರ ಒತ್ತಡದಿಂದ ಎಐಸಿಸಿಯಲ್ಲಿ ಹೆಸರು ಘೋಷಣೆ ಮಾಡಲಾಗಿದೆ ಎಂದು ದೂರಿದರು.

'25-30 ವರ್ಷಗಳಿಂದ ಕಾಂಗ್ರೆಸ್ ಪಕ್ಷವನ್ನು ಸಂಘಟಿಸಿ ಬಲಿಷ್ಠಗೊಳಿಸಿದ ಮೂಲ ಕಾಂಗ್ರೆಸ್ಸಿಗರನ್ನು ಕೈ ಬಿಟ್ಟು, ನಿನ್ನೆ-ಮೊನ್ನೆ ಪಕ್ಷಕ್ಕೆ ಸೇರ್ಪಡೆಗೊಂಡ ವಲಸಿಗರಿಗೆ ಟಿಕೆಟ್ ನೀಡುವುದು ನ್ಯಾಯವಲ್ಲ' ಎಂದು ವಿರೋಧ ವ್ಯಕ್ತಪಡಿಸಿದರು.


ಶರಣಪ್ಪ ಸುಣಗಾರ

'ಸಿಂದಗಿ ಮತಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಅಹಿಂದ ವರ್ಗಕ್ಕೆ ಮೀಸಲಿಡಬೇಕು ಎಂಬುದು ಕಾರ್ಯಕರ್ತರ ಒತ್ತಡವಾಗಿದೆ. ಹಾಲುಮತ, ಎಸ್.ಸಿ, ಮುಸ್ಲಿಂ, ತಳವಾರ ಯಾವುದೇ ಸಮುದಾಯದ ಮೂಲ ಕಾಂಗ್ರೆಸ್ಸಿಗರಿಗೆ ಟಿಕೆಟ್ ನೀಡಿದರೆ ಗೆಲ್ಲಿಸುವ ಜವಾಬ್ದಾರಿ ನಮ್ಮದು' ಎಂದರು.

'ಶೀಘ್ರದಲ್ಲಿಯೇ 35 ಸಾವಿರಕ್ಕೂ ಅಧಿಕ ಕಾರ್ಯಕರ್ತರ ಸಭೆ ಸೇರಿಸಿ, ಅಶೋಕ ಮನಗೂಳಿ ಹೆಸರನ್ನು ಕೈ ಬಿಡಬೇಕು ಎಂದು ಹೈಕಮಾಂಡ್ ಮೇಲೆ ಒತ್ತಡ ಹಾಕಲಾಗುವುದು. ಇಷ್ಟಾದರೂ ಅಭ್ಯರ್ಥಿ ಹೆಸರು ಬದಲಿಸದಿದ್ದರೆ ಕಾರ್ಯಕರ್ತರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ' ಎಂದು ಸುಣಗಾರ ಎಚ್ಚರಿಕೆ ನೀಡಿದರು.

ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳಿಗೆ ಯಾವ ಕಾರಣಕ್ಕೂ ತಾವು ಹೋಗುವುದಿಲ್ಲ. ಅಂಥ ಸಂದರ್ಭ ಬಂದರೆ ಕಾರ್ಯಕರ್ತರ ಒಪ್ಪಿಗೆ ಪಡೆದು ಮುಂದೆ ಹೆಜ್ಜೆ ಇಡಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು.

ಬಸವ ಕಲ್ಯಾಣ ಕ್ಷೇತ್ರ: ವಿಜಯೇಂದ್ರಗೆ ಟಿಕೆಟ್ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಚುನಾವಣೆ ನಡೆಯಲಿರುವ ಬಸವ ಕಲ್ಯಾಣ ವಿಧಾನಸಭೆ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮಗ, ಪಕ್ಷದ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸುವ ಬಗ್ಗೆ ಪ್ರಮುಖರ ಸಮಿತಿ ಸಭೆಯಲ್ಲಿ ಪ್ರಸ್ತಾಪವಾಗಿದೆ.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಬಿ.ಎಸ್. ಯಡಿಯೂರಪ್ಪ, ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಡಿ.ವಿ ಸದಾನಂದಗೌಡ, ಉಪ ಮುಖ್ಯಮಂತ್ರಿ ಗೋವಿಂದ ಕಾರಜೋಳ, ಸಚಿವ ಜಗದೀಶ ಶೆಟ್ಟರ್ ಸಮ್ಮುಖದಲ್ಲಿ ಪ್ರಮುಖರ ಸಮಿತಿ ಸಭೆ ಶನಿವಾರ ಬೆಳಿಗ್ಗೆ ನಡೆಯಿತು.

> **ಉಪಚುನಾವಣೆಯ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಚರ್ಚೆ ನಡೆಸಿ ದೆಹಲಿಗೆ ಪಟ್ಟಿ ಕಳುಹಿಸಲಾಗಿದೆ. ಭಾನುವಾರವೇ ಅಂತಿಮಪಟ್ಟಿ ಹೊರಬೀಳಲಿದೆ**
>
> **ಬಿ.ಎಸ್. ಯಡಿಯೂರಪ್ಪ,** ಮುಖ್ಯಮಂತ್ರಿ

'ಬಸವ ಕಲ್ಯಾಣ ಕ್ಷೇತ್ರದಲ್ಲಿ ಅನೇಕರು ಆಕಾಂಕ್ಷಿಗಳಿರುವ ಬಗ್ಗೆ ಚರ್ಚೆ ನಡೆಯಿತು. ಈ ಕ್ಷೇತ್ರ ಪ್ರತಿನಿಧಿಸುತ್ತಿದ್ದ ಕಾಂಗ್ರೆಸ್‌ನ ಇತ್ತೀಚೆಗೆ ನಿಧನರಾದ ಬಿ. ನಾರಾಯಣರಾವ್ ಅವರ ಪತ್ನಿ ಮಲ್ಲಮ್ಮ ಅವರನ್ನು ಅಭ್ಯರ್ಥಿ ಎಂದು ಕಾಂಗ್ರೆಸ್ ಘೋಷಿಸಿದೆ. ಅನುಕಂಪದ ಅಲೆಯನ್ನು ಎದುರಿಸಿ ಪಕ್ಷಕ್ಕೆ ಗೆಲುವು ತಂದುಕೊಡಬೇಕಾದರೆ ವಿಜಯೇಂದ್ರ ಅವರನ್ನು ಕಣಕ್ಕೆ ಇಳಿಸುವುದು ಸೂಕ್ತ ಎಂದು ಕೆಲವು ಸದಸ್ಯರು ಅಭಿಪ್ರಾಯ ಪಟ್ಟರು' ಎಂದು ಮೂಲಗಳು ಹೇಳಿವೆ.

'ಮರಾಠಾ ನಿಗಮ ರಚನೆ ಮಾಡಿದ್ದರಿಂದಾಗಿ ಕ್ಷೇತ್ರದಲ್ಲಿ ಪ್ರಮುಖವಾಗಿರುವ ಈ ಸಮುದಾಯದವರ ಮತಗಳ ಜತೆ, ವೀರಶೈವ–ಲಿಂಗಾಯತ ಮತಗಳು ಬಿಜೆಪಿಗೆ ಬೀಳಲಿವೆ. ಇಂತಹ ಸಂದರ್ಭದಲ್ಲಿ ವಿಜಯೇಂದ್ರ ಅವರನ್ನು ಅಭ್ಯರ್ಥಿಯಾಗಿಸಿದರೆ ಗೆಲುವು ಸುಲಭವಾಗಬಹುದು ಎಂಬ ಅಭಿಪ್ರಾಯಯವೂ ವ್ಯಕ್ತವಾಯಿತು' ಎಂದು ಮೂಲಗಳು ತಿಳಿಸಿವೆ.

ಮಸ್ಕಿ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿದ್ದ ಪ್ರತಾಪಗೌಡ ಪಾಟೀಲ ಅವರು ರಾಜೀನಾಮೆ ಕೊಟ್ಟು ಬಿಜೆಪಿಗೆ ಬಂದಿದ್ದಾರೆ. ನಂಬಿಕೊಂಡು ಬಂದ ಅವರಿಗೆ ಟಿಕೆಟ್ ನೀಡಬೇಕು ಎಂದು ಯಡಿಯೂರಪ್ಪ ಸಭೆಯಲ್ಲಿ ಪ್ರಸ್ತಾಪಿಸಿದರು. ಅದಕ್ಕೆ ಸಹಮತ ವ್ಯಕ್ತಪಡಿಸಿದ ಸಭೆ, ಈ ಕ್ಷೇತ್ರದಿಂದ ಒಂದೇ ಹೆಸರು ಕಳಿಸಬೇಕೆಂಬ ನಿರ್ಣಯಕ್ಕೆ ಸಭೆ ಬಂದಿತು ಎಂದು ಗೊತ್ತಾಗಿದೆ.

ಸಭೆ ಬಳಿಕ ಮಾತನಾಡಿದ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, 'ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಬಿಜೆಪಿಗೆ ಬಂದಿ ಪ್ರತಾಪಗೌಡ ಪಾಟೀಲರಿಗೆ ಸ್ವಾಭಾವಿಕವಾಗಿ ನ್ಯಾಯ ಕೊಡಬೇಕಾಗಿದೆ. ಎರಡು ವರ್ಷದ ಅವರ ಅಜ್ಞಾತವಾಸಕ್ಕೆ ಮುಕ್ತಿ ಕೊಡಬೇಕಿದೆ' ಎಂದು ಪ್ರತಿಪಾದಿಸಿದರು.

ಉಪ ಚುನಾವಣೆ ನಡೆಯಲಿರುವ ಎರಡು ವಿಧಾನಸಭೆ ಮತ್ತು ಒಂದು ಲೋಕಸಭೆ ಕ್ಷೇತ್ರಗಳ ಸಂಭವನೀಯ ಹಾಗೂ ಆಕಾಂಕ್ಷಿಗಳ ಬಗ್ಗೆ ಚರ್ಚೆ ನಡೆಯಿತು. ಪಕ್ಷದ ಸ್ಥಳೀಯ ನಾಯಕರು ಹಾಗೂ ಘಟಕಗಳ ಅಭಿಪ್ರಾಯ ಸಂಗ್ರಹಿಸಿ ಅಂತಿಮ ಪಟ್ಟಿಯನ್ನು ಕೇಂದ್ರ ಚುನಾವಣಾ ಸಮಿತಿಗೆ ಶಿಫಾರಸು ಮಾಡುವ ಹೊಣೆಯನ್ನು ನಳಿನ್ ಕುಮಾರ್ ಕಟೀಲ್ ಅವರಿಗೆ ವಹಿಸಲಾಗಿದೆ ಎಂದು ರವಿ ವಿವರಿಸಿದರು.

'ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಚುನಾವಣೆಗೆ ಕ್ಷೇತ್ರಗಳ ಮೀಸಲಾತಿ, ಚುನಾವಣೆಯಲ್ಲಿ ಗೆಲುವು ಸಾಧಿಸಲು ಕೈಗೊಳ್ಳಬೇಕಾದ ಕ್ರಮಗಳೇನು ಎಂಬ ಕುರಿತು ಚರ್ಚೆ ನಡೆಸಲಾಗಿದೆ' ಎಂದರು.

ಬೆಳಗಾವಿಗೆ ಶ್ರದ್ಧಾ ಶೆಟ್ಟರ್ ಹೆಸರು?

ದಿವಂಗತ ಸುರೇಶ ಅಂಗಡಿ ಪ್ರತಿನಿಧಿಸುತ್ತಿದ್ದ ಬೆಳಗಾವಿ ಲೋಕಸಭಾ ಕ್ಷೇತ್ರದಲ್ಲಿ ಅಂಗಡಿ ಮಗಳು ಶ್ರದ್ಧಾ ಶೆಟ್ಟರ್ (ಸಚಿವ ಜಗದೀಶ ಶೆಟ್ಟರ್ ಸೊಸೆ) ಅವರನ್ನು ಕಣಕ್ಕೆ ಇಳಿಸುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆದಿದೆ.

'ಅಂಗಡಿ ಕುಟುಂಬದವರಿಗೆ ಟಿಕೆಟ್ ಕೊಡಬೇಕೆಂಬ ಬೇಡಿಕೆ ಕುರಿತು ಸಭೆಯಲ್ಲಿ ಗಹನ ಚರ್ಚೆ ನಡೆಯಿತು. ಸ್ಥಳೀಯ ನಾಯಕರ ಜತೆ ಚರ್ಚಿಸಿ ಶ್ರದ್ಧಾ ಹೆಸರು ಸೇರಿದಂತೆ ಕೆಲವು ಹೆಸರುಗಳನ್ನು ಶಿಫಾರಸು ಮಾಡುವುದು. ಅಂಗಡಿ ಕುಟುಂಬವರಿಗೆ ನೀಡಬೇಕೇ ಬೇಡವೇ ಎಂಬ ತೀರ್ಮಾನವನ್ನು ವರಿಷ್ಠರ ವಿವೇಚನೆಗೆ ಬಿಡುವುದು ಸೂಕ್ತ ಎಂಬ ಸಲಹೆ ಸಭೆಯಲ್ಲಿ ಬಂದಿತು' ಎಂದು ತಿಳಿದು ಬಂದಿದೆ.

ಜಗದೀಶ ಶೆಟ್ಟರ್, ಸರ್ಕಾರದ ಮುಖ್ಯ ಸಚೇತಕ ಮಹಾಂತೇಶ ಕವಟಗಿಮಠ ಅವರ ಹೆಸರು ಶಿಫಾರಸು ಮಾಡುವ ಕುರಿತು ಚರ್ಚೆ ನಡೆಯುತು ಎಂದು ಗೊತ್ತಾಗಿದೆ.

ಜಪಾನ್: ಸುನಾಮಿ ಎಚ್ಚರಿಕೆ ಸೂಚನೆ ವಾಪಸು

ಟೋಕಿಯೊ(ಎಎಫ್‌ಪಿ) : ಜಪಾನ್‌ನ ಉತ್ತರ ಭಾಗದ ಸಮುದ್ರ ತೀರ ಪ್ರದೇಶದಲ್ಲಿ ಭೂಕಂಪ ಉಂಟಾಗಿದ್ದು, ಇದರ ತೀವ್ರತೆ ರಿಕ್ಟರ್ ಮಾಪಕದಲ್ಲಿ 6.9 ದಾಖಲಾಗಿತ್ತು. ಆದರೆ, ಇದರಿಂದ ತಕ್ಷಣದಲ್ಲಿ ಯಾವುದೇ ಹಾನಿ, ಅಪಾಯ ಕಂಡುಬರದ ಕಾರಣ ನೀಡಲಾಗಿದ್ದ ಸುನಾಮಿ ಎಚ್ಚರಿಕೆಯನ್ನು ಹವಾಮಾನ ಇಲಾಖೆ ಹಿಂತೆಗೆದುಕೊಂಡಿತು.

ಭೂಕಂಪನದ ತೀವ್ರತೆ ಮೊದಲು 7.2 ಇದ್ದು, ಮಿಯಾಗಿ ವಲಯದಲ್ಲಿ, 60 ಕಿ.ಮೀ ಆಳ ಪ್ರದೇಶದಲ್ಲಿ ಇದರ ಕೇಂದ್ರ ಸ್ಥಾನವಿತ್ತು ಎಂದು ಜಪಾನ್‌ನ ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಜಾಗ್ರತೆಯಾಗಿ ತೀರ ಭಾಗದ ಕುಟುಂಬಗಳಿಗೆ ಸುರಕ್ಷಿತ ಸ್ಥಳಕ್ಕೆ ಹೋಗಲು ತಿಳಿಸಿ, ಸುನಾಮಿ ಎಚ್ಚರಿಕೆ ನೀಡಲಾಗಿತ್ತು. ಹೈಸ್ಪೀಡ್ ಬುಲೆಟ್ ರೈಲು ಸೇರಿದಂತೆ ಸ್ಥಳೀಯ ರೈಲು ಸೇವೆಯನ್ನೂ ಸ್ಥಗಿತಗೊಳಿಸಲಾಗಿತ್ತು. ಅಣುಶಕ್ತಿ ಸ್ಥಾವರದಲ್ಲೂ ಯಾವುದೇ ಪ್ರತಿಕೂಲ ಬೆಳವಣಿಗೆಗಳು ಕಂಡುಬಂದಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದರು.

ರಾಜನಾಥ್ ಸಿಂಗ್– ಅಮೆರಿಕ ರಕ್ಷಣಾ ಕಾರ್ಯದರ್ಶಿ ಆಸ್ಟಿನ್ ಮಾತುಕತೆ

‘ರಕ್ಷಣಾ ಸಂಬಂಧ ವೃದ್ಧಿಗೆ ಒತ್ತು’

ನವದೆಹಲಿ (ಪಿಟಿಐ): ‘ಅಮೆರಿಕ–ಭಾರತ ರಕ್ಷಣಾ ಸಹಭಾಗಿತ್ವವನ್ನು ಬಲಪಡಿಸುವುದು ಜೋ ಬೈಡನ್ ನೇತೃತ್ವದ ಆಡಳಿತದ ಆದ್ಯತೆಯಾಗಿದೆ’ ಎಂದು ಅಮೆರಿಕ ರಕ್ಷಣಾ ಕಾರ್ಯದರ್ಶಿ ಜನರಲ್ ಲಾಯ್ಡ್ ಆಸ್ಟಿನ್ ಶನಿವಾರ ಹೇಳಿದ್ದಾರೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಜತೆ ಸಮಾಲೋಚನೆ ನಡೆಸಿದ ಬಳಿಕ ಮಾತನಾಡಿದ ಅವರು, ‘ಉಭಯ ದೇಶಗಳ ಸಂಬಂಧ ಬಲಿಷ್ಠವಾಗಿದೆ. ಭಾರತದ ಜತೆಗಿನ ಜತೆ ರಕ್ಷಣಾ ಒಪ್ಪಂದಗಳನ್ನು ಮುಂದುವರಿಸಲು ಬದ್ಧವಾಗಿದ್ದೇವೆ’ ಎಂದು ಹೇಳಿದ್ದಾರೆ.

ಶುಕ್ರವಾರ ಇಲ್ಲಿಗೆ ಆಗಮಿಸಿರುವ ಅವರು, ’ಜಗತ್ತು ಸಾಂಕ್ರಾಮಿಕ ಕಾಯಿಲೆಯಿಂದ ಹಲವು ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸುತ್ತಿದೆ. ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಪರಸ್ಪರ ಸಹಕಾರ ಅಗತ್ಯವಾಗಿದೆ. ಭವಿಷ್ಯದ ದೃಷ್ಟಿಯಿಂದ ಸಮಾನ ಮನಸ್ಕ ರಾಷ್ಟ್ರಗಳ ನಡುವಣ ಸ್ನೇಹ ಸಂಬಂಧ ವೃದ್ಧಿಸಬೇಕಾಗಿದೆ’ ಎಂದು ಅವರು ತಿಳಿಸಿದ್ದಾರೆ.

ಮುಸ್ಲಿಂ ಸಮುದಾಯದ ಜತೆ ತಾರತಮ್ಯ ಮಾಡಲಾಗುತ್ತಿದೆ ಎನ್ನುವ ಆರೋಪಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಪ್ರಸ್ತಾಪಿಸಲಾಗಿದೆಯೇ ಎನ್ನುವ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಈ ವಿಷಯದ ಬಗ್ಗೆ ಅವರ ಜತೆ ಚರ್ಚಿಸಲು ಅವಕಾಶ ದೊರೆಯಲಿಲ್ಲ. ಆದರೆ, ಕೇಂದ್ರ ಸಚಿವ ಸಂಪುಟದ ಸದಸ್ಯರೊಬ್ಬರ ಜತೆ ಚರ್ಚಿಸಿದ್ದೇನೆ’ ಎಂದು ಹೇಳಿದರು.

‘ಭಾರತದ ಜತೆ ನಾವು ಉತ್ತಮ ಸ್ನೇಹ ಹೊಂದಿದ್ದೇವೆ. ಈ ಸ್ನೇಹವನ್ನು ನಾವು ಗೌರವಿಸುತ್ತೇವೆ. ಹೀಗಾಗಿ, ಸ್ನೇಹಿತರು ಇಂತಹ ಯಾವುದೇ ವಿಷಯಗಳ ಬಗ್ಗೆಯೂ ಚರ್ಚಿಸಬಹುದು. ಅರ್ಥಪೂರ್ಣವಾಗಿ ಚರ್ಚೆ ನಡೆಸಿ ಪ್ರಗತಿ ಸಾಧಿಸಬಹುದು. ಪ್ರಜಾಪ್ರಭುತ್ವದಲ್ಲಿ ಮಾನವ ಹಕ್ಕುಗಳು ಮತ್ತು ಕಾನೂನು ಮಹತ್ವ ಪಡೆದಿವೆ’’ ಎಂದು ಪ್ರತಿಪಾದಿಸಿದರು.



ನವದೆಹಲಿಯಲ್ಲಿ ಶನಿವಾರ ಭಾರತದ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಅಮೆರಿಕದ ರಕ್ಷಣಾ ಕಾರ್ಯದರ್ಶಿ ಲಾಯ್ಡ್ ಆಸ್ಟಿನ್ ಭೇಟಿಯಾಗಿ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

ಅಮೆರಿಕ ನಿರ್ಬಂಧ ವಿಧಿಸುವ ಬೆದರಿಕೆಯ ನಡುವೆಯೂ ರಷ್ಯಾದಿಂದ ಎಸ್–400 ಕ್ಷಿಪಣಿಗಳನ್ನು ಭಾರತ ಖರೀದಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಆಸ್ಟಿನ್ ‘ಭಾರತಕ್ಕೆ ಇನ್ನೂ ಕ್ಷಿಪಣಿಗಳನ್ನು ವಿತರಿಸಿಲ್ಲ. ಹೀಗಾಗಿ, ನಿರ್ಬಂಧ ವಿಧಿಸುವ ಬಗ್ಗೆ ಯಾವುದೇ ರೀತಿ ಮಾತುಕತೆ ನಡೆಸಿಲ್ಲ. ಆದರೆ, ರಷ್ಯಾದಿಂದ ಉಪಕರಣಗಳನ್ನು ಖರೀದಿಸಬಾರದು ಎಂದು ನಮ್ಮ ಆಪ್ತ ರಾಷ್ಟ್ರಗಳನ್ನು ಒತ್ತಾಯಿಸುತ್ತೇವೆ’ ಎಂದು ಹೇಳಿದರು.

ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ಮತ್ತು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರನ್ನು ಆಸ್ಟಿನ್ ಭೇಟಿಯಾಗಿ ಮಾತುಕತೆ ನಡೆಸಿದ್ದರು.

ಭಾರತ ಪ್ರವಾಸ ಕೈಗೊಳ್ಳುವ ಮುನ್ನ ಜಪಾನ್ ಮತ್ತು ದಕ್ಷಿಣ ಕೊರಿಯಾಕ್ಕೆ ಆಸ್ಟಿನ್ ಭೇಟಿ ನೀಡಿದ್ದರು. ಇಂಡೊ–ಪೆಸಿಫಿಕ್ ಪ್ರದೇಶ ರಾಷ್ಟ್ರಗಳಲ್ಲಿನ ಆಪ್ತ ರಾಷ್ಟ್ರಗಳ ಜತೆಗಿನ ಸಂಬಂಧವನ್ನು ವೃದ್ಧಿಸುವ ನಿಟ್ಟಿನಲ್ಲಿ ಜೋ ಬೈಡನ್ ಆಡಳಿತ ಹಲವು ಕ್ರಮಗಳನ್ನು ಕೈಗೊಳ್ಳುತ್ತಿದೆ. ಹೀಗಾಗಿಯೇ ಆಸ್ಟಿನ್ ಅವರು ಈ ಮೂರು ರಾಷ್ಟ್ರಗಳ ಪ್ರವಾಸ ಕೈಗೊಂಡಿದ್ದಾರೆ.

‘ಗೃಹ ಸಚಿವರಿಂದ ಪ್ರತಿ ತಿಂಗಳು ₹100 ಕೋಟಿಗೆ ಬೇಡಿಕೆ’

ಹಿರಿಯ ಪೊಲೀಸ್ ಅಧಿಕಾರಿ ಪರಮ್ ಬೀರ್ ಸಿಂಗ್ ಆರೋಪ

ಪ್ರಜಾವಾಣಿ ವಾರ್ತೆ

ಮುಂಬೈ: ‘ಬಾರ್‌ಗಳು ಮತ್ತು ಹೊಟೇಲ್‌ಗಳಿಂದ ಪ್ರತಿ ತಿಂಗಳು ₹100 ಕೋಟಿ ಸಂಗ್ರಹಿಸುವಂತೆ ಮಹಾರಾಷ್ಟ್ರ ಗೃಹ ಸಚಿವ ಅನಿಲ್ ದೇಶಮುಖ್ ಅವರು ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ’ ಎಂದು ಮುಂಬೈ ಮಾಜಿ ಪೊಲೀಸ್ ಕಮಿಷನರ್ ಪರಮ್ ಬೀರ್ ಸಿಂಗ್ ಆರೋಪಿಸಿದ್ದಾರೆ.

‘ದೇಶಮುಖ್ ಅವರು ತಮ್ಮ ಅಧಿಕೃತ ನಿವಾಸಕ್ಕೆ ಪೊಲೀಸ್ ಅಧಿಕಾರಿಗಳನ್ನು ಕರೆಯಿಸಿಕೊಂಡು ಹಣ ಸಂಗ್ರಹಿಸಲು ಗುರಿ ನೀಡುತ್ತಿದ್ದರು’ ಎಂದು ದೂರಿದ್ದಾರೆ.

ಹಿರಿಯ ಐಪಿಎಸ್ ಅಧಿಕಾರಿಯಾಗಿರುವ ಪರಮ್ ಬೀರ್ ಸಿಂಗ್ ಅವರನ್ನು ಇತ್ತೀಚೆಗೆ ಮುಂಬೈ ಪೊಲೀಸ್ ಕಮಿಷನರ್ ಹುದ್ದೆಯಿಂದ ವರ್ಗಾವಣೆ ಮಾಡಿ ಮಹತ್ವದ್ದಲ್ಲದ ಗೃಹ ರಕ್ಷಕ ದಳದ ಕಮಾಂಡಂಟ್ ಜನರಲ್ ಹುದ್ದೆಗೆ ನೇಮಿಸಲಾಗಿತ್ತು.



ಪರಮ್ ಬೀರ್ ಸಿಂಗ್

‘ಉದ್ಯಮಿ ಮುಕೇಶ್ ಅಂಬಾನಿ ಮನೆ ಬಳಿ ಪತ್ತೆಯಾದ ಸ್ಫೋಟಕಗಳಿದ್ದ ವಾಹನದ ಪ್ರಕರಣದಲ್ಲಿ ನನ್ನನ್ನು ಬಲಿಪಶು ಮಾಡಲಾಗಿದೆ’ ಎಂದು ಹೇಳಿದ್ದಾರೆ.

ಈ ಬಗ್ಗೆ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹಾಗೂ ರಾಜ್ಯಪಾಲ ಭಗತ್ ಸಿಂಗ್ ಕೊಶಿಯಾರಿ ಅವರಿಗೆ ಎಂಟು ಪುಟಗಳ ಪತ್ರ ಬರೆದಿದ್ದಾರೆ.

‘ಮುಂಬೈ ನಗರದಲ್ಲಿ ಸುಮಾರು 1750 ಬಾರ್‌ಗಳು ಮತ್ತು ರೆಸ್ಟೊರೆಂಟ್‌ಗಳಿವೆ. ಪ್ರತಿಯೊಂದರಿಂದ ₹2ಲಕ್ಷದಿಂದ ₹3ಲಕ್ಷ ಸಂಗ್ರಹಿಸಿದರೂ ಕನಿಷ್ಠ ₹50 ಕೋಟಿ ಸಂಗ್ರಹವಾಗುತ್ತದೆ. ಉಳಿದ ಹಣವನ್ನು ಇತರ ಮೂಲಗಳಿಂದ ಸಂಗ್ರಹಿಸಬಹುದು ಎಂದು ಸದ್ಯ ಬಂಧಿತರಾಗಿರುವ ಪೊಲೀಸ್ ಅಧಿಕಾರಿ ಸಚಿನ್ ವಾಜೆಗೆ ಹೇಳಿದ್ದರು’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ದೇಶಮುಖ್, ‘ತಮ್ಮನ್ನು ರಕ್ಷಿಸಿಕೊಳ್ಳಲು ಸಿಂಗ್ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ’ ಎಂದು ಹೇಳಿದ್ದಾರೆ.

ರಾಜೀನಾಮೆಗೆ ಒತ್ತಾಯ: ಗೃಹ ಸಚಿವ ಅನಿಲ್ ದೇಶಮುಖ್ ತಕ್ಷಣವೇ ರಾಜೀನಾಮೆ ನೀಡಬೇಕು ಎಂದು ಬಿಜೆಪಿ ಒತ್ತಾಯಿಸಿದೆ.

‘ಇದು ಅತ್ಯಂತ ಗಂಭೀರವಾದ ವಿಷಯ. ಡಿಜಿಪಿ ಹುದ್ದೆಯ ಅಧಿಕಾರಿಯೊಬ್ಬರು ಗೃಹ ಸಚಿವರ ಮೇಲೆ ಆರೋಪ ಮಾಡಿದ್ದಾರೆ. ಮಹಾರಾಷ್ಟ್ರದಲ್ಲಿ ಇದೇ ಪ್ರಥಮ ಬಾರಿ ಇಂತಹ ಪ್ರಕರಣ ನಡೆದಿದ್ದು, ಅನಿಲ್ ದೇಶಮುಖ್ ರಾಜೀನಾಮೆ ನೀಡಬೇಕು’ ಎಂದು ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ದೇವೇಂದ್ರ ಫಡಣವೀಸ್ ಒತ್ತಾಯಿಸಿದ್ದಾರೆ.

‘ರಾಜಕೀಯ ಒತ್ತಡಕ್ಕೆ ಮೆಹ್ತಾ ರಾಜೀನಾಮೆ’

ಅಶೋಕ ವಿಶ್ವವಿದ್ಯಾಲಯದ ಟ್ರಸ್ಟಿಗಳಿಗೆ 150 ವಿ.ವಿ.ಗಳ ಶಿಕ್ಷಣ ತಜ್ಞರಿಂದ ಬಹಿರಂಗ ಪತ್ರ

ಪ್ರಜಾವಾಣಿ ವಾರ್ತೆ



ಪ್ರತಾಪ್ ಭಾನು ಮೆಹ್ತಾ

ನವದೆಹಲಿ: ಹರಿಯಾಣದ ಸೋನಿಪತ್‌ನ ಅಶೋಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಗೆ ಪ್ರತಾಪ್ ಭಾನು ಮೆಹ್ತಾ ಅವರು ರಾಜೀನಾಮೆ ನೀಡಿರುವುದಕ್ಕೆ ಜಗತ್ತಿನ ಹಲವು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಶಿಕ್ಷಣ ತಜ್ಞರು ಆಕ್ಷೇಪ ವ್ಯಕ್ತಪಡಿಸಿ ಬಹಿರಂಗ ಪತ್ರ ಬರೆದಿದ್ದಾರೆ.

ರಾಜಕೀಯ ಒತ್ತಡಗಳಿಗಾಗಿ ಮೆಹ್ತಾ ಅವರ ರಾಜೀನಾಮೆ ಪಡೆಯಲಾಗಿದೆ ಎಂದು ಉಲ್ಲೇಖಿಸಿ ಹಾರ್ವರ್ಡ್, ಯಾಲೆ, ಕೊಲಂಬಿಯಾ, ಎಂಐಟಿ, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್, ನ್ಯೂಯಾರ್ಕ್ ಯುನಿವರ್ಸಿಟಿ, ಯುನಿವರ್ಸಿಟಿ ಆಫ್ ಆಕ್ಸಫರ್ಡ್, ಸ್ಯಾನ್‌ಫೋರ್ಡ್ ಯುನಿವರ್ಸಿಟಿ ಸೇರಿದಂತೆ ಸುಮಾರು 150 ವಿಶ್ವವಿದ್ಯಾಲಯಗಳ ಶಿಕ್ಷಣ ತಜ್ಞರು ಅಶೋಕ ವಿಶ್ವವಿದ್ಯಾಲಯ ಟ್ರಸ್ಟಿಗಳಿಗೆ ಪತ್ರ ಬರೆದಿದ್ದಾರೆ.

‘ಅಕಾಡೆಮಿಕ್ ಸ್ವಾತಂತ್ರ್ಯದ ಮೇಲೆ ಅಪಾಯಕಾರಿ ದಾಳಿ’ ಎನ್ನುವ ಶೀರ್ಷಿಕೆ ಅಡಿಯಲ್ಲಿ ಈ ಪತ್ರ ಬರೆಯಲಾಗಿದೆ.

’ರಾಜಕೀಯ ಒತ್ತಡದ ಕಾರಣಗಳಿಗೆ ಅಶೋಕ ವಿಶ್ವವಿದ್ಯಾಲಯಕ್ಕೆ ಪ್ರತಾಪ್ ಭಾನು ಮೆಹ್ತಾ ಅವರು ರಾಜೀನಾಮೆ ನೀಡಿದ್ದಾರೆ. ಇದು ನೋವಿನ ಸಂಗತಿ. ಈಗಿನ ಭಾರತ ಸರ್ಕಾರದ ಪ್ರಮುಖ ಟೀಕಾಕಾರರಾಗಿದ್ದ ಮೆಹ್ತಾ ಅವರು ಮುಕ್ತ ಶೈಕ್ಷಣಿಕ ವಾತಾವರಣ ಪ್ರತಿಪಾದಿಸುತ್ತಿದ್ದರು. ಅಶೋಕ ವಿಶ್ವವಿದ್ಯಾಲಯದ ಟ್ರಸ್ಟಿಗಳು ಮೆಹ್ತಾ ಅವರನ್ನು ಸಮರ್ಥಿಸಿಕೊಳ್ಳುವ ಬದಲು ರಾಜೀನಾಮೆ ನೀಡುವಂತೆ ಒತ್ತಡ ಹೇರಿದ್ದಾರೆ’ ಎಂದು ಶಿಕ್ಷಣ ತಜ್ಞರು ಬಹಿರಂಗ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದನೆ ಮಾಡುವವರ ಮೇಲೆ ಈ ರೀತಿ ಪ್ರಹಾರ ಮಾಡುವುದು ನಾಚಿಕೆಗೇಡಿತನದ ಸಂಗತಿ. ಉನ್ನತ ಮೌಲ್ಯಗಳನ್ನು ಪ್ರತಿಪಾದಿಸುತ್ತಿರುವ ಮೆಹ್ತಾ ಅವರಿಗೆ ನಾವು ಬೆಂಬಲಿಸುತ್ತೇವೆ’ ಎಂದು ತಿಳಿಸಿದ್ದಾರೆ.

ರಾಜಕೀಯ ವಿಶ್ಲೇಷಕರೂ ಆಗಿರುವ ಮೆಹ್ತಾ ಅವರು ಎರಡು ವರ್ಷಗಳ ಹಿಂದೆ ಕುಲಪತಿ ಹುದ್ದೆಗೆ ರಾಜೀನಾಮೆ ನೀಡಿದ್ದರು. ನಂತರ, ಪ್ರಾಧ್ಯಾಪಕ ಹುದ್ದೆಗೆ ಇತ್ತೀಚೆಗೆ ರಾಜೀನಾಮೆ ನೀಡಿದ್ದರು. ಮೆಹ್ತಾ ಅವರಿಗೆ ಬೆಂಬಲ ಸೂಚಿಸಿ ನರೇಂದ್ರ ಮೋದಿ ಸರ್ಕಾರದ ಮಾಜಿ ಮುಖ್ಯ ಆರ್ಥಿಕ ಸಲಹೆಗಾರ ಅರವಿಂದ್ ಸುಬ್ರಮಣಿಯನ್ ಸಹ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹುದ್ದೆಗೆ ಎರಡು ದಿನಗಳ ಹಿಂದೆ ರಾಜೀನಾಮೆ ನೀಡಿದ್ದರು.

ಈ ಬೆಳವಣಿಗೆಗಳ ಬಗ್ಗೆ ಅಶೋಕ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಪ್ರತಿಭಟನೆ: ಮೆಹ್ತಾ ಅವರ ರಾಜೀನಾಮೆ ಬಗ್ಗೆ ವಿಶ್ವವಿದ್ಯಾಲಯ ಉತ್ತರ ನೀಡಬೇಕು ಎಂದು ಒತ್ತಾಯಿಸಿ ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು ಮತ್ತು ಪ್ರಾಧ್ಯಾಪಕರು ಪ್ರತಿಭಟನೆ ನಡೆಸುತ್ತಿದ್ದಾರೆ.

ಸರ್ಕಾರದ ನೀತಿಗಳನ್ನು ಟೀಕಿಸಿದ್ದಕ್ಕಾಗಿ ರಾಜೀನಾಮೆ ಪಡೆಯಲಾಗಿದೆಯೇ ಎನ್ನುವ ಬಗ್ಗೆ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಉತ್ತರ ನೀಡಬೇಕು ಎಂದು ಒತ್ತಾಯಿಸಿದ್ದಾರೆ.

‘ಭಾರತದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಅಪಾಯದಲ್ಲಿದೆ’

‘ಪ್ರತಾಪ್ ಭಾನು ಮೆಹ್ತಾ ಮತ್ತು ಸುಬ್ರಮಣಿಯನ್ ಅವರ ರಾಜೀನಾಮೆ ಪ್ರಕರಣಗಳು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಿರುವುದಕ್ಕೆ ಉದಾಹರಣೆಗಳಾಗಿವೆ. ಅಭಿವ್ಯಕ್ತಿ ಸ್ವಾತಂತ್ರ್ಯ ಶ್ರೇಷ್ಠ ವಿಶ್ವವಿದ್ಯಾಲಯದ ಆತ್ಮ. ಆದರೆ, ಸಂಸ್ಥಾಪಕರು ಈ ವಿಷಯದಲ್ಲಿ ರಾಜಿ ಮಾಡಿಕೊಳ್ಳುವ ಮೂಲಕ ವಿಶ್ವವಿದ್ಯಾಲಯದ ಆತ್ಮವನ್ನೇ ಬದಲಾಯಿಸಿಕೊಂಡಿದ್ದಾರೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಜಿ ಗವರ್ನರ್ ರಘುರಾಂ ರಾಜನ್ ಪ್ರತಿಕ್ರಿಯಿಸಿದ್ದಾರೆ.

‘ಪ್ರಾಧ್ಯಾಪಕ ಮೆಹ್ತಾ ಆಡಳಿತ ಮಂಡಳಿಗೆ ಮುಳ್ಳಾಗಿದ್ದು ವಾಸ್ತವ ಸಂಗತಿ. ಸರ್ಕಾರದಲ್ಲಿನ ಮತ್ತು ಸುಪ್ರೀಂ ಕೋರ್ಟ್‌ನಂತಹ ಉನ್ನತ ಸಂಸ್ಥೆಗಳಲ್ಲಿರುವವರನ್ನು ಮೆಹ್ತಾ ಪರಿಣಾಮಕಾರಿಯಾಗಿ ಟೀಕಿಸುತ್ತಿದ್ದರು’ ಎಂದು ಹೇಳಿದ್ದಾರೆ.

ಸುಬ್ರಮಣಿಯನ್ ಅವರ ರಾಜೀನಾಮೆ ಪತ್ರದಲ್ಲಿ ಕೆಲವು ಸಾಲುಗಳನ್ನು ಉಲ್ಲೇಖಿಸಿರುವ ಅವರು, ‘ಖಾಸಗಿ ಸ್ಥಾನಮಾನ ಮತ್ತು ಖಾಸಗಿ ಬಂಡವಾಳ ಹೊಂದಿರುವ ಅಶೋಕ ವಿಶ್ವವಿದ್ಯಾಲಯ ಸಹ ಮುಕ್ತ ಶೈಕ್ಷಣಿಕ ವಾತಾವರಣಕ್ಕೆ ಮತ್ತು ಅಭಿಪ್ರಾಯಗಳನ್ನು ಹಂಚಿಕೊಳ್ಳಲು ಅವಕಾಶ ಒದಗಿಸದಿರುವುದು ನಿಜಕ್ಕೂ ವಿಷಾದಕರ’ ಎಂದು ಹೇಳಿದ್ದಾರೆ.

‘ಮೆಹ್ತಾ ಅವರು ವಿರೋಧ ಪಕ್ಷಗಳ ಪರವಾಗಿಯೂ ಇರಲಿಲ್ಲ. ನಿಜವಾದ ಅಕಾಡೆಮಿಕ್ ಆಗಿದ್ದ ಅವರು, ತಪ್ಪು ನೀತಿಗಳು ಮತ್ತು ನಿರ್ಧಾರಗಳನ್ನು ಕೈಗೊಳ್ಳುವ ಎಲ್ಲರನ್ನೂ ಸಮಾನವಾಗಿ ಟೀಕಿಸುತ್ತಿದ್ದರು’ ಎಂದು ಹೇಳಿದ್ದಾರೆ.

ಸ್ಫೋಟಕಗಳಿದ್ದ ವಾಹನ ಮಾಲೀಕನ ಸಾವು ಪ್ರಕರಣ

ಶಂಕಾಸ್ಪದ ಸಾವು: ಎನ್‌ಐಎ ತನಿಖೆ

ಪ್ರಜಾವಾಣಿ ವಾರ್ತೆ

ಮುಂಬೈ: ಉದ್ಯಮಿ ಮುಖೇಶ್ ಅಂಬಾನಿ ಅವರ ಇಲ್ಲಿನ ನಿವಾಸದ ಬಳಿ ಪತ್ತೆಯಾಗಿದ್ದ, ಸ್ಫೋಟಕಗಳಿದ್ದ ವಾಹನದ ಮಾಲೀಕ ಮನ್‌ಸುಖ್ ಹಿರೇನ್ ಅವರ ಶಂಕಾಸ್ಪದ ಸಾವಿನ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಹಿಸಿಕೊಂಡಿದೆ.

ಕೇಂದ್ರ ಗೃಹ ಸಚಿವಾಲಯ ಈ ಕುರಿತು ಎನ್‌ಐಎಗೆ ಸೂಚನೆ ನೀಡಿದೆ. ಇದುವರೆಗೂ ಪ್ರಕರಣದ ತನಿಖೆಯನ್ನು ಮುಂಬೈ ಪೊಲೀಸ್‌ನ ಅಪರಾಧ ನಿಗ್ರಹ ಘಟಕ (ಎಟಿಎಸ್) ನಡೆಸುತ್ತಿತ್ತು. ಎನ್‌ಐಎ ಅಧಿಕಾರಿಗಳು ಈಗಾಗಲೇ ಎಟಿಎಸ್ ಅಧಿಕಾರಿಗಳನ್ನು ಸಂಪರ್ಕಿಸಿ ಪ್ರಕರಣದ ವಿವರವನ್ನೂ ಪಡೆದುಕೊಂಡಿದ್ದಾರೆ.

ಪುಣೆಯಲ್ಲಿ ಕಾರು ಬಿಡಿಭಾಗಗಳ ಮಾರಾಟದ ವ್ಯವಹಾರ ನಡೆಸುವ ಹಿರೇನ್ (48) ಮಾರ್ಚ್ 4ರಿಂದ ನಾಪತ್ತೆಯಾಗಿದ್ದರು. ಅವರ ಶವವು ನಂತರ ಶಂಕಾಸ್ಪದ ರೀತಿಯಲ್ಲಿ ಠಾಣೆಯ ಮುಂಬೈ-ಕಾಲ್ವಾದಲ್ಲಿ ರೇಟಿ ಬಂದರ್ ಸಮೀಪ ಪತ್ತೆಯಾಗಿತ್ತು.

ಬಿಜೆಪಿ ಒತ್ತಾಯದ ಹಿನ್ನೆಲೆಯಲ್ಲಿ ಈ ಪ್ರಕರಣದ ತನಿಖೆಯನ್ನು ಮಹಾರಾಷ್ಟ್ರ ಸರ್ಕಾರ ಎಟಿಎಸ್‌ಗೆ ವಹಿಸಿತ್ತು. ಮೃತ ಹಿರೇನ್ ಪತ್ನಿ ವಿಮಲಾ ಅವರು ದೂರು ನೀಡಿದ್ದು, ನನ್ನ ಪತಿ ಶಂಕಿತ ವಾಹನವನ್ನು ಬಳಸುತ್ತಿದ್ದರು ಎಂಬುದು ಎಸಿಪಿ ವಾಜೆ ಅವರಿಗೆ ತಿಳಿದಿದ್ದು, ಅವರೇ ಪತಿ ಸಾವಿಗೆ ಕಾರಣರಾಗಿದ್ದಾರೆ ಎಂದು ಆರೋಪಿಸಿದ್ದರು.

ಪ್ರಕರಣದ ಮರುಸೃಷ್ಟಿ: ಈ ಮಧ್ಯೆ, ಪ್ರಕರಣದ ತನಿಖೆ ಕೈಗೊಂಡಿರುವ ಎನ್‌ಐಎ ಅಧಿಕಾರಿಗಳು ಶನಿವಾರ, ಮುಖೇಶ್ ಅಂಬಾನಿ ನಿವಾಸದ ಬಳಿ ವಾಹನ ಪತ್ತೆಯಾಗಿದ್ದ ಸ್ಥಳದಲ್ಲಿ ಪ್ರಕರಣದ ಮರುಸೃಷ್ಟಿ ನಡೆಸಿದರು.

’ಜಿಲೆಟಿನ್ ಕಡ್ಡಿ ಕಡಿಮೆ ತೀವ್ರತೆಯದ್ದು‘: ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಪತ್ತೆಯಾಗಿದ್ದ ವಾಹನದಲ್ಲಿ ಕಂಡುಬಂದಿದ್ದ ಜಿಲೆಟಿನ್ ಕಡ್ಡಿಗಳು ಸ್ಫೋಟದ ಕಡಿಮೆ ತೀವ್ರತೆ ಹೊಂದಿದ್ದವಾಗಿದ್ದು, ದೊಡ್ಡ ಹಾನಿ ಉಂಟು ಮಾಡುವ ಸಾಧ್ಯತೆ ಕಡಿಮೆ ಇತ್ತು ಎಂದು ಪ್ರಯೋಗಾಲಯ ಪರೀಕ್ಷೆಯಿಂದ ದೃಢಪಟ್ಟಿದೆ. ಅಧಿಕಾರಿಗಳು ಇದನ್ನು ದೃಢಪಡಿಸಿದ್ದಾರೆ. ಮುಂಬೈನ ಕಲಿನಾದಲ್ಲಿ ಇರುವ ಪ್ರಯೋಗಾಲಯವು, 20 ಜಿಲೆಟಿನ್ ಕಡ್ಡಿಗಳು ಕಂಡುಬಂದಿದ್ದ ವಾಹನವನ್ನು ತಪಾಸಣೆ ನಡೆಸುತ್ತಿದೆ. ವಾಹನದ ಚಾರ್ಸಿ ಸಂಖ್ಯೆ ಬದಲಿಸಲಾಗಿದೆಯೇ ಎಂಬುದರ ಪತ್ತೆಗೆ ರಾಸಾಯನಿಕ ಪರಿಣತರ ನೆರವು ಪಡೆಯಲಾಗಿದೆ. ಇದು, ವಾಹನದ ಅಸಲಿ ಮಾಲೀಕನ ಪತ್ತೆಗೆ ನೆರವಾಗಲಿದೆ ಎಂದಿದ್ದಾರೆ.

‘ಮಹಾರಾಷ್ಟ್ರ ಎಟಿಎಸ್‌ಗೆ ಆದ ಹಿನ್ನಡೆಯಲ್ಲ’



ನವದೆಹಲಿ(ಪಿಟಿಐ): ಠಾಣೆ ಮೂಲದ ಉದ್ಯಮಿ ಮನ್‌ಸುಖ್ ಹಿರೇನ್ ಅವರ ಶಂಕಾಸ್ಪದ ಸಾವಿನ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸುತ್ತಿರುವುದು ಮುಂಬೈ ಪೊಲೀಸ್‌ನ ಅಪರಾಧ ನಿಗ್ರಹ ಘಟಕಕ್ಕೆ (ಎಟಿಎಸ್) ಆದ ಹಿನ್ನಡೆಯಲ್ಲ ಎಂದು ಶಿವಸೇನೆಯ ನಾಯಕ ಸಂಜಯ್ ರಾವುತ್ ಶನಿವಾರ ಪ್ರತಿಪಾದಿಸಿದರು.

ನಾಸಿಕ್‌ನಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ಎನ್‌ಐಎ ಇದರ ತನಿಖೆ ವಹಿಸಿಕೊಳ್ಳುವ ಅಗತ್ಯ ಇರಲಿಲ್ಲ. ಇದನ್ನು ನಡೆಸಲು ಮುಂಬೈ ಎಟಿಎಸ್ ಸಮರ್ಥವಾಗಿತ್ತು ಎಂದು ಹೇಳಿದರು.


ಆದರೆ, ರಾಜ್ಯದಲ್ಲಿ ಮಹಾವಿಕಾಸ ಆಘಾಡಿ (ಎಂವಿಎ) ಸರ್ಕಾರವನ್ನು ಹೇಗೆ ಸಂಕಷ್ಟಕ್ಕೆ ಸಿಲುಕಿಸಬಹುದು ಎಂದು ಕೇಂದ್ರ ಸರ್ಕಾರ ಅವಕಾಶವನ್ನು ಎದುರು ನೋಡುತ್ತಿದೆ. ನೀವು ಸಿಐಎ ತನ್ನಿ ಅಥವಾ ಕೆಜಿಬಿ ತನ್ನಿ, ಅದರಿಂದ ಏನೂ ಬದಲಾವಣೆ ಆಗದು ಎಂದು ಹೇಳಿದರು.




ವಿಶ್ವ ಪ್ರಜ್ಞೆಯೇ ಸನ್ಯಾಸದ ಲಕ್ಷಣ 11



ಕಥನದ ಜಾಡು ಹಿಡಿದು... 12



ಬತ್ತೀಸ್ ರಾಗ ಮತ್ತು 80 ಪ್ರಮಾದ 13



ಕಲೆ: ರಾಮಕೃಷ್ಣ ಸಿದ್ರಪಾಲ

ಜನರೆದೆಯಲ್ಲಿ ಅಕ್ಷರದ ಬೀಜ ಬಿತ್ತುತ್ತಾ ತ್ರಿವಿಧ ದಾಸೋಹಕ್ಕೆ ಹೆಸರಾಗಿದ್ದ ಮಠಗಳು ಈಗ ಜಾತಿಯ ವಿಷಬೀಜಕ್ಕೆ ನೀರೆರೆಯುತ್ತಿವೆ. ರಾಜಕಾರಣದ ಕೇಂದ್ರಗಳಾಗಿರುವ ಮಠಗಳ ನೈತಿಕತೆ ದಿವಾಳಿ ಎದ್ದಿದೆ. ಇದಕ್ಕೆಲ್ಲ ಯಾರು ಹೊಣೆ? ಜನರೇ? ರಾಜಕಾರಣಿಗಳೇ? ಮಠದ ಸ್ವಾಮಿಗಳೇ?

ಗುರುವೇ ನಮಃ ಗುರುವೇನು ಮಹಾ!

ಅವರೆಲ್ಲ ಜನತೆಯ ಸಂತರು

ರಹಮತ್ ತರೀಕೆರೆ

ತೊಗಲ ನಾಲಗೆ ನಿಜವ ನುಡಿಯಲೆಣಿಸಿದರೆ
ತಾನಂಗೈಲಿ ಪ್ರಾಣಗಳ ಹಿಡಿಯಬೇಕು.
ಇಲ್ಲದಿರೆ ನೀರಿನೊಲು ತಣ್ಣಗಿದ್ದವನದನು
ಉರಿಯ ನಾಲಗೆಯಿಂದ ನುಡಿಯಬೇಕು
-ಬೇಂದ್ರೆ



ಸಿದ್ಧಾರೂಢರು, ಶಿಶುನಾಳರು, ಗರಗದ ಮಡಿವಾಳಪ್ಪ, ನವಲಗುಂದದ ನಾಗಲಿಂಗಪ್ಪ ಅವರು ಒಟ್ಟಿಗೆ ಕೂತಿರುವ ಚಿತ್ರಪಟ

ಸಮಾಜಗಳು ಗೊಂದಲ-ಬಿಕ್ಕಟ್ಟುಗಳಲ್ಲಿ ಹಾಯುವಾಗ ಪರಿಹಾರಕ್ಕಾಗಿ ಹಲವು ಹೊರದಾರಿಗಳನ್ನೂ ತಡಕಾಡುತ್ತಿರುತ್ತವೆ. ಅದರಲ್ಲೂ ವಿನಾಶಕಾರಿ ಯುದ್ಧಗಳ ಹೊತ್ತಲ್ಲಿ, ಮತಧರ್ಮ ಭಾಷೆಗಳು ಜನರನ್ನು ಸೀಳುವಾಗ, ಪ್ರಭುತ್ವಗಳು ಸರ್ವಾಧಿಕಾರದತ್ತ ಚಲಿಸುವಾಗ, ಧರ್ಮಗಳು ಅಧಃಪತನಗೊಂಡಾಗ, ಆರ್ಥಿಕ ಅಸಮಾನತೆ ಅತಿಯಾಗಿದ್ದಾಗ, ಇಂತಹ ತಡಕಾಟ ತೀವ್ರವಾಗುತ್ತದೆ. ಆಗ ನೊಂದವರ ಪರವಾಗಿ ನಿಲ್ಲಬಲ್ಲ, ಎಲ್ಲರನ್ನೂ ಒಳಗೊಂಡು ನಾಡನ್ನು ಕಟ್ಟಬಲ್ಲ, ಕಹಿಯಾದ ಸತ್ಯವನ್ನು ಹಿಂಜರಿಯದೆ ಹೇಳಬಲ್ಲ, ಅಧಿಕಾರಸ್ಥರ ಜತೆ ನಿಷ್ಠುರ ಕಟ್ಟಿಕೊಳ್ಳಬಲ್ಲ ದನಿಗಳು ಹುಟ್ಟಿಕೊಳ್ಳುತ್ತವೆ. ಸಮಾಜಗಳು ಒಂದೇ ಸತ್ಯದತ್ತ ಮುಖ ಮಾಡಿದ್ದಾಗ, ಭಿನ್ನಸತ್ಯದ ಕಡೆ ಮುಖ ಮಾಡಿಸಬಲ್ಲ ವ್ಯಕ್ತಿತ್ವ ಅಥವಾ ತತ್ವಗಳು ಸೃಷ್ಟಿಯಾಗುತ್ತವೆ. ಹೀಗೆ ಭಿನ್ನಮತೀಯ ಸತ್ಯ ದಿಟ್ಟವಾಗಿ ಹೇಳುವ ಪರಂಪರೆಯನ್ನು ಆರಂಭಿಸಿದ್ದು ಬುದ್ಧಗುರು. ಅವನ ಜಾಡಿನಲ್ಲಿ ಗೋರಖನಾಥ, ಅಲ್ಲಮ, ತುಕಾರಾಮ್, ಕಬೀರ, ಲಲ್ಲಾದೇವಿ, ಸೂಫಿ ಸರ್ಮದ್, ಕಡಕೋಳ ಮಡಿವಾಳಪ್ಪ, ಕೈವಾರ ನಾರೇಯಣ, ಬಿಜಾಪುರದ ಅಮೀನುದ್ದೀನ್ ಚಿಸ್ತಿ, ಸಿದ್ಧಾರೂಢರು, ರಾಮಕೃಷ್ಣ ಪರಮಹಂಸ, ಗುಡೇಕಲ್ ಅಲ್ಲಿಪೀರಾ, ಮುಕಂದೂರುಸ್ವಾಮಿ, ಸಾಲಗುಂದಿ ಗುರುಪೀರಾ ಖಾದ್ರಿ, ಹಂಪಿಯ ಸದಾಶಿವಯೋಗಿ-ಮುಂತಾದ ಗುರುಗಳು ಬಂದರು. ಭಾರತದಲ್ಲಿ ಈ ಗುರು ಪರಂಪರೆಯು ಸಮಾಜದ ಅಂತಃಸಾಕ್ಷಿಯನ್ನು ತನ್ನದೇ ಪರಿಯಲ್ಲಿ ಜೀವಂತವಾಗಿರಿಸುವ ಕೆಲಸವನ್ನು ಉದ್ದಕ್ಕೂ ನಿಭಾಯಿಸಿಕೊಂಡು ಬಂದಿದೆ.

ಸಾಮಾನ್ಯವಾಗಿ ನಾವು ನಮ್ಮ ವೈಚಾರಿಕ ಪ್ರಜ್ಞೆಯ ಪರಂಪರೆಯನ್ನು ಕಟ್ಟಿಕೊಳ್ಳುವಾಗ ಮೂರು ಮೂಲಗಳಿಗೆ ಹೋಗುತ್ತೇವೆ. ಒಂದು- ಮಾರ್ಕ್ಸ್, ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದ ಆಧುನಿಕ ಸಿದ್ಧಾಂತಿಗಳ ಚಿಂತನೆ ಮತ್ತು ಕ್ರಿಯಾಶೀಲತೆಗಳು. ಎರಡು- ಪಶ್ಚಿಮದಿಂದ ಬಂದ ಆಧುನಿಕತೆ, ಆಧುನಿಕ ಶಿಕ್ಷಣ, ವಿಚಾರವಾದ, ವಿಜ್ಞಾನ, ತಂತ್ರಜ್ಞಾನಗಳು. ಮೂರು- ಟ್ಯಾಗೋರ್, ಕುವೆಂಪು, ಕಾರಂತ, ತೇಜಸ್ವಿ, ಲಂಕೇಶ್ ಮುಂತಾದ ಆಧುನಿಕ ಲೇಖಕರು. ಆದರೆ ದಾರ್ಶನಿಕರೂ ಅನುಭಾವಿಗಳೂ ಆಧ್ಯಾತ್ಮಿಕ ಚಿಂತಕರೂ ಇರುವ ಸ್ಥಳೀಯ ಗುರುಪರಂಪರೆಯತ್ತ ಅಷ್ಟಾಗಿ ಹೋಗುವುದಿಲ್ಲ. ವಾಸ್ತವವಾಗಿ ಈ ಗುರುಪರಂಪರೆಯು ಆಧುನಿಕ ಶಿಕ್ಷಣ, ಚಳವಳಿ, ಸಿದ್ಧಾಂತಗಳ ನಿಲುಕಿನಾಚೆಗಿರುವ ವಿಶಾಲ ಸಮುದಾಯಗಳ ವೈಚಾರಿಕತೆಯ ಬುನಾದಿಯಾಗಿದೆ.

ಇಲ್ಲಿ ಗುರುಗಳು ಎಂದರೆ ಜಾತಿ ಹಿತಾಸಕ್ತಿಗಾಗಿ ತುಡಿವ, ಆಳುವ ಪ್ರಭುತ್ವದ ಭಾಗವಾಗುವ, ಉಳ್ಳವರ ನೆಮ್ಮದಿಗಾಗಿ ತವಕಿಸುವ ಧಾರ್ಮಿಕ ನಾಯಕರಲ್ಲ; ಧ್ಯಾನ, ಸಾಧನೆ, ಜ್ಞಾನಾರ್ಜನೆ ಮತ್ತು ಸಮಾಜ ಸುಧಾರಣೆಗಳ ನೆಲೆಯಲ್ಲಿ ಸಾಮಾನ್ಯ ಜನರ ಭಾಗವಾಗಿದ್ದ ಬೀದಿಸಂತರು. ನೆಮ್ಮದಿಯ ಸಮಾಜ ಕಟ್ಟುವ ಆಶಯವುಳ್ಳ ಇವರು ಜಾತಿ ಉಪಜಾತಿ ಮತಧರ್ಮಗಳಿಗೆ ಸೀಮಿತಗೊಂಡವರಲ್ಲ; ಸಾಂಸ್ಥಿಕ ಧರ್ಮಗಳಿಗೂ ಸೇರಿದವರಲ್ಲ; ವಿಶ್ವಮಾನವ ತತ್ವದವರು. ಇವರ ದಾರ್ಶನಿಕ ತತ್ವಗಳು ಸಾಂಸ್ಥಿಕ ಧರ್ಮಗಳ ಎದುರಾಳಿತನದಲ್ಲೇ ರೂಪುಗೊಂಡವು. ಸಾಂಸ್ಥಿಕ ಧರ್ಮಗಳು ತಮ್ಮ ಆಧ್ಯಾತ್ಮಿಕ ಆಯಾಮ ಕಳೆದುಕೊಂಡಾಗ, ಆಳುವವರ ಕಾಲೊರಸೊ ಕರವಸ್ತ್ರಗಳೊ ಆಗಿಬಿಡುತ್ತವೆ. ಆಗ ಅವುಗಳ ಭಾಗವಾಗಿರುವ ದರ್ಶನಗಳೂ ಸಂಕುಚಿತಗೊಳ್ಳುತ್ತವೆ. ಪ್ರಭುತ್ವಗಳು ಸಮತೋಲನ ಕಳೆದುಕೊಂಡಾಗ ಧರ್ಮ ಮತ್ತು ದರ್ಶನಗಳು ತಮ್ಮಲ್ಲಿರುವ ಸಾತ್ವಿಕ ಕಸುವಿನಿಂದ ಅದನ್ನು ತಿದ್ದಬೇಕು. ಆದರೆ ಈ ಇವು ಸ್ವತಃ ಅಧಿಕಾರಸ್ಥ ರಾಜಕಾರಣದ ಪಂಕದಲ್ಲಿ ಸಿಲುಕಿರುತ್ತವೆ.


ಇಂತಹ ಸನ್ನಿವೇಶದಲ್ಲೆಲ್ಲ ಜನತೆಯ ಸಂತರು, ತಮ್ಮ ದಾರ್ಶನಿಕ ತತ್ವಗಳನ್ನು ಕಾದುಕೊಂಡಿದ್ದಾರೆ; ದೀಕ್ಷೆ, ಸಾಧನೆ ಮತ್ತು ಜ್ಞಾನಗಳು ಮತಧರ್ಮದ ಶುಷ್ಕ ಆಚರಣೆಗಳಾಗದಂತೆ ಎಚ್ಚರವಹಿಸಿ, ಅವು ತಿಳಿವನ್ನರಸಿ ಬರುವ ಎಲ್ಲರಿಗೂ ದಕ್ಕುವಂತೆ ಮುಕ್ತವಾಗಿಡಲು ಯತ್ನಿಸಿದ್ದಾರೆ. ಅವರ ಈ ಜಾತ್ಯತೀತ ನಿಲುವೇ ಸಾಂಸ್ಥಿಕ ಧರ್ಮಗಳನ್ನು ಮತ್ತು ಅಲ್ಲಿರುವ ಯಾಂತ್ರಿಕ ಕಂದಾಚಾರಗಳನ್ನು ತೀಕ್ಷ್ಣವಾಗಿ ವಿಮರ್ಶಿಸಲು ಕಸುವನ್ನು ಒದಗಿಸಿದೆ.

ಮುಂದಿನ ಪುಟಕ್ಕೆ...

ಇವರೆಲ್ಲ ಹೊಣೆ ಮರೆತವರು

ಎಸ್.ಜಿ.ಸಿದ್ದರಾಮಯ್ಯ

ಕಂಥೆ ತೊಟ್ಟವ ಗುರುವಲ್ಲ, ಕಾವಿ ಹೊತ್ತವ ಜಂಗಮನಲ್ಲ
ಶೀಲ ಕಟ್ಟಿದವ ಶಿವಭಕ್ತನಲ್ಲ
ನೀರು ತೀರ್ಥವಲ್ಲ, ಕೂಳು ಪ್ರಸಾದವಲ್ಲ
ಹೌದೆಂಬವನ ಬಾಯ ಮೇಲೆ
ಅರ್ಥಮಣದ ಪಾದರಕ್ಷೆಯ ತೆಗೆದುಕೊಂಡು
ಮಾಸಿ ಕಡಿಮೆಯಿಲ್ಲದೇ ತೂಗಿ ತೂಗಿ ಟೊಕಟೊಕನೆ ಹೊಡಿ
ಎಂದಾತ ನಮ್ಮ ಅಂಬಿಗರ ಚೌಡಯ್ಯ



ಸತ್ಯ ಶುದ್ಧ ಕಾಯಕಜೀವಿ ಶಿವಶರಣ ಅಂಬಿಗರ ಚೌಡಯ್ಯನ ಈ ವಚನವನ್ನು ಓದಿದಾಗ ಯಾರಿಗಾದರೂ ಸಹಜವಾಗಿ ಇಂದಿನ ಮಠ ಸಂಸ್ಕೃತಿಯಲ್ಲಿನ ಕೆಲವರು ಸ್ವಾಮೀಜಿಗಳು ನೆನಪಾಗಬಹುದು. ಅದರಲ್ಲೂ ತಮ್ಮ ತಮ್ಮ ಜಾತಿಗಳ ಪರವಾಗಿ ಬೀದಿಗಿಳಿದು ಹೋರಾಟದ ಹಾರಾಟದಲ್ಲಿ ತೊಡಗಿರುವ ಹಲವು ಸ್ವಾಮೀಜಿಗಳು ಕಾಡಿಸಬಹುದು.

ನಾನು ವಚನಧರ್ಮದ ವಿದ್ಯಾರ್ಥಿ. ವಚನಧರ್ಮವನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಬೇರೆ ಯಾವುದೇ ಅನ್ಯ ಆಕರಗಳನ್ನು ಪೂರ್ಣವಾಗಿ ಆಶ್ರಯಿಸದೆ ವಚನಗಳನ್ನೇ ಪಠ್ಯ ಪ್ರಮಾಣವನ್ನಾಗಿ ಗಣಿಸಿದವನು. ಏಕೆಂದರೆ ವಚನಗಳು ವಚನಧರ್ಮದ ಉಪ ಉತ್ಪನ್ನಗಳಂತೆ ಮೂಡಿಬಂದವು. ಅವು ಪ್ರಜಾಪ್ರಭುತ್ವವಾದಿ ನೆಲೆಯಲ್ಲಿ ವಿಚಾರಮಂಥನ ಮಾಡಿದಂತೆ ಮೂಡಿದ ಅನುಭಾವಿಕ ಅಭಿಪ್ರಾಯಗಳು. ಅವು ಲಿಂಗಾಯತದ ನಿಜ ಪಠ್ಯಗಳು. ಇಂಥ ಪಠ್ಯಗಳಲ್ಲಿ ಎಲ್ಲೂ ಸನ್ಯಾಸತ್ವವನ್ನು ಪುರಸ್ಕರಿಸಿದ ಮಾತಿಲ್ಲ. ಮರ್ತ್ಯಲೋಕವನ್ನು ಕರ್ತಾರನ ಕಮ್ಮಟ ಎಂದೂ ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ ಎಂದೂ ಇಹದ ಬಾಳುವೆಯಲ್ಲಿ ಸಂಸಾರದ ಸಂಪದವನ್ನು ಗೌರವಿಸಿದ ಧರ್ಮ ಇದು.

ಶಿವಶರಣರ ಕಾಲದಲ್ಲಿ ಅನುಭವ ಮಂಟಪ ಇತ್ತೇ ಹೊರತು ಮಠ ಸಂಸ್ಕೃತಿ ಇರಲಿಲ್ಲ. ಆ ನಂತರದ ಕಾಲಮಾನದಲ್ಲಿ ಮಠ ಸಂಸ್ಕೃತಿ ಬಂತು. ಮಠ ಸಂಸ್ಕೃತಿ, ಪೀಠ ಸಂಸ್ಕೃತಿ ಎಂಬುದು ವೈದಿಕ ಮೂಲದ್ದು. ಅದು ಅವರ ಧರ್ಮ ರಕ್ಷಣೆಗೆ, ವರ್ಣ ರಕ್ಷಣೆಗೆ ಕಟ್ಟಿಕೊಂಡಂಥದ್ದು. ಅವೈದಿಕ ಸಮುದಾಯಗಳಲ್ಲಿ ಅರ್ಥಾತ್ ಕಾಯಕಜೀವಿ ಸಮುದಾಯಗಳಲ್ಲಿ ಈ ಮಠ, ಪೀಠ ಸಂಸ್ಕೃತಿ ಶರಣ ಚಳವಳಿಯ ನಂತರದಲ್ಲಿ ಬಂದಿರುವುದು. ಹೀಗೆ ಬಂದ ಮಠಗಳು ಓದೋ ಮಠಗಳಾಗಿ ಸಾಲಿ ಮಠಗಳಾಗಿ ಅಕ್ಷರ ಜಗತ್ತಿಗೆ ಸಮುದಾಯಗಳನ್ನು ತೊಡಗಿಸುವ ಜನೋಪಯೋಗಿ ಕಾರ್ಯದಲ್ಲಿ ತೊಡಗಿರುವುದು ಚಾರಿತ್ರಿಕ ಮಹತ್ವದ ಸಂಗತಿಯೇ ಸರಿ. ಇಂಥ ಮಠಗಳು ತ್ರಿವಿಧ ದಾಸೋಹದ ಮೂಲಕ ಜನಸೇವೆ ಮಾಡಿದ್ದು ಒಂದು ಶ್ಲಾಘನೀಯ ಹೆಜ್ಜೆ.

ಕೆಲವು ಮಠಗಳು ಸ್ಥಾಪಿತವಾದ ಧರ್ಮದ ಮಿತಿಯನ್ನೂ ದಾಟದಂತೆ ಸರ್ವಜನಾಂಗವನ್ನು ಒಳಗೊಳ್ಳುತ್ತಾ ತಮ್ಮ ಮಿತಿಯಲ್ಲಿ ಈ ಕೈಂಕರ್ಯವನ್ನು ಮುನ್ನಡೆಸಿಕೊಂಡು ಬಂದಿವೆ. ಅಂಥ ಮಠಗಳಲ್ಲಿ ಅಕ್ಷರದ ಬೆಳಕಿಗೆ ತೆರೆದುಕೊಂಡ ಎಷ್ಟೋ ಜನ ಇಂದು ಜಗತ್ತಿನ ಮೂಲೆ ಮೂಲೆಗಳಲ್ಲಿ ಉನ್ನತ ಹುದ್ದೆ ಅಲಂಕರಿಸಿ ಬಾಳು ಕಟ್ಟಿಕೊಂಡಿದ್ದಾರೆ. ಬೀದಿಗೆ ಬಿದ್ದ ಎಷ್ಟೋ ಮಕ್ಕಳಿಗೆ ಆಸರೆ ನೀಡಿದ ಮಠಗಳು, ಮಠದ ಸ್ವಾಮಿಗಳು ತಮ್ಮ ಧರ್ಮ ಬೋಧನೆಯನ್ನು ಕೇವಲ ಬಾಯಿಯ ಬೊಗಳೆಯಾಗಿಸದೇ ಬದುಕಿನ ಬೆಳಕಾಗಿಸಿದ್ದಾರೆ. ಈ ಪರಂಪರೆ ನಿನ್ನೆ ಮೊನ್ನೆವರೆಗೂ ಸದ್ದುಗದ್ದಲ ಇಲ್ಲದೇ ನಡೆದುಕೊಂಡು ಬಂದ ಕ್ರಿಯೆ ಆಗಿತ್ತು.

ಇಂಥ ಮಠಗಳಲ್ಲಿ ಇಲಿಗಳೂ ಇದ್ದವು. ಇಲಿಗಳನ್ನು ಕೊಂದು ತಿನ್ನುವ ಮಾರ್ಜಾಲಗಳೂ ಇದ್ದವು. ಮಠ, ಪೀಠದ ಸುತ್ತಲಿನ ಇಂಥ ಕಥೆಗಳು ಕತ್ತಲಿನಲ್ಲಿ ಕರಗಿ ಹೋಗುತ್ತಿದ್ದವು. ಕಾರಣ ಆ ಮಠಗಳು ನಡೆಸುತ್ತಿದ್ದ ತ್ರಿವಿಧ ದಾಸೋಹ, ಜನೋಪಯೋಗಿ ಕಾರ್ಯ ಚಟುವಟಿಕೆಗಳು ಅದರಲ್ಲೂ ಶಿಕ್ಷಣ ಕ್ಷೇತ್ರಕ್ಕೆ ಮಠಗಳು ನೀಡಿದ ಕೊಡುಗೆ ಅಪಾರವಾದದ್ದು. ಇದು ಆಗಿನ ಮಾತು. ಆದರೆ ಇಂದು ಮಠಗಳು ರಾಜಕಾರಣದ ಕೇಂದ್ರವಾಗಿವೆ. ಜಾತಿ ಭಾವನೆಗಳನ್ನು ಹುಟ್ಟುಹಾಕುವ, ಜಾತಿಯ ವಿಷಬೀಜಗಳನ್ನು ಜನರೆದೆಯಲ್ಲಿ ಬಿತ್ತಿ ಬೆಳೆಯುವ ಜಾತಿ ಕೇಂದ್ರಗಳಾಗಿವೆ. ಅವು, ಇವು ಎನ್ನದೇ ಬಹುತೇಕ ಎಲ್ಲ ಮಠಗಳೂ ಧರ್ಮಕ್ಕಿಂತ ಜಾತಿ ಕರ್ಮಕ್ಕಂಟಿದ ಕೇಂದ್ರಗಳಾಗಿವೆ. ಮಠಗಳು ಹೀಗಾಗಲು ಯಾರು ಕಾರಣ? ಜನರೇ? ರಾಜಕಾರಣಿಗಳೇ? ಮಠದ ಸ್ವಾಮಿಗಳೇ? ಈ ಪ್ರಶ್ನೆಯನ್ನು ನಿಷ್ಠುರವಾಗಿ ಕೇಳಿಕೊಳ್ಳಬೇಕಾದ ಅಗತ್ಯವಿದೆ. ಇದಕ್ಕೆ ಉತ್ತರದಾಯಿತ್ವವಾಗಿ ಮೂವರನ್ನು ಗುರಿಪಡಿಸಿದರೂ ಅದರಲ್ಲಿ ಮುಖ್ಯವಾಗಿ ಇದರ ನೈತಿಕ ಹೊಣೆ ಸ್ವಾಮಿಗಳಿಗೇ ಸೇರಿದ್ದಾಗುತ್ತದೆ.

ಕೆಲವು ರಾಜಕಾರಣಿಗಳಿಗೆ ತಮ್ಮ ಬೇಳೆ ಬೇಯಿಸಿಕೊಳ್ಳಲು ತತ್ವರಹಿತ ಕೊಳಕು ರಾಜಕಾರಣವೇ ನಡೆ ಆಗಿರುತ್ತದೆ. ಅದಕ್ಕಾಗಿ ಮಠಗಳು ಅವರಿಗೆ ಒಳ್ಳೆಯ ಹುಲ್ಲುಗಾವಲು ಇದ್ದಂತೆ. ಹೀಗಾಗಿಯೇ ಸಿದ್ಧಾಂತರಹಿತ ಅಪ್ರಜಾಸತ್ತಾತ್ಮಕವಾದ ರಾಜಕಾರಣ ಸದಾ ಮಠಗಳನ್ನು, ಮಠದ ಸ್ವಾಮಿಗಳನ್ನು ಓಲೈಸುವ ಕಾರ್ಯಗಳನ್ನು ಮಾಡುತ್ತದೆ. ಮಠಗಳನ್ನು ಎದುರುಹಾಕಿಕೊಂಡರೆ ಚುನಾವಣೆಯಲ್ಲಿ ಗೆಲ್ಲುವುದು ಕಷ್ಟ ಎಂಬ ಭೀತಿ ಕಾರಣದಲ್ಲಿ ಈ ನಡೆ ರಾಜಕಾರಣಿಗಳಿಗೆ ಅನಿವಾರ್ಯ ಎನ್ನಿಸಿದೆ.

ಯಾವಾಗ ಮಠಗಳ ಓಲೈಕೆಗಾಗಿ ರಾಜ್ಯದ ಬಜೆಟ್‌ನಲ್ಲಿ ಇಂತಿಂಥ ಜಾತಿ ಮಠಗಳಿಗೆ ಇಷ್ಟಿಷ್ಟು ಕೋಟಿ ಎಂದು ಹಣವನ್ನು ಅನುದಾನದ ರೀತಿಯಲ್ಲಿ ಕೊಡುವ ಕೆಟ್ಟ ಸಂಪ್ರದಾಯ ಆರಂಭವಾಯಿತೋ ಅಂದೇ ರಾಜ್ಯ ಬಜೆಟ್‌ನ ಪಾವಿತ್ರ್ಯ ಹಾಳಾಯಿತು. ಮಠಗಳ ನೈತಿಕತೆ ದಿವಾಳಿ ಆಯಿತು. ಈ ಪರಿಯ ಅನುದಾನವನ್ನು ತಿರಸ್ಕರಿಸುವ ನೈತಿಕ ತಾಕತ್ತನ್ನು ಶ್ರೀ ಸಿದ್ದೇಶ್ವರ ಸ್ವಾಮೀಜಿ ಬಿಟ್ಟರೆ ಬೇರೆ ಯಾವ ಮಠದ ಸ್ವಾಮಿಗಳೂ ತೋರಲಿಲ್ಲ. ಬಾಯಿ ಮಾತಿನಲ್ಲಿ ಬೇಡಿಕೆ ಹೇಳುವ ಗಾಂಭೀರ್ಯವನ್ನು ಕೆಲವು ಮಠದವರು ತೋರಿದರೆ ಇನ್ನು ಕೆಲವು ಮಠದವರು ಕೋರಿಕೆಯ ಮನವಿ ಪತ್ರಗಳನ್ನು ಸಲ್ಲಿಸಿದವರಾದರು. ಈ ಅನುದಾನ ಹಂಚಿಕೆ ಎಂಬುದು ರಾಜಕಾರಣದ ಕೊಳಕನ್ನು ಮಠಗಳಿಗೆ ಅಂಟಿಸಿದ್ದೇ ಆಯಿತು.

ಮುಂದಿನ ಪುಟಕ್ಕೆ...

26 ಶಸ್ತ್ರಚಿಕಿತ್ಸೆ, ಆದರೂ ಮಿಂಚಿನ ಓಟ!

ಪ್ರಮೋದ

ಆ ಹುಡುಗನ ತಂದೆ ಹಾಕಿ ಆಟಗಾರರಾಗಿದ್ದರು. ರಾಜ್ಯ ಹಾಗೂ ರಾಷ್ಟ್ರೀಯ ಮಟ್ಟದ ಟೂರ್ನಿಗಳಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. ವೃತ್ತಿ ಹಾಗೂ ವೈಯಕ್ತಿಕ ಬದುಕು ಕಟ್ಟಿಕೊಳ್ಳಲು ನೌಕರಿ ಅರಸಿ ಮುಂಬೈಗೆ ಹೋದರು. ಅಲ್ಲಿ ಪಶ್ಚಿಮ ರೈಲ್ವೆಯಲ್ಲಿ ನೌಕರಿ ಸಿಕ್ಕಿತಲ್ಲದೆ ತಮ್ಮ ಕ್ರೀಡಾ ಬದುಕು ರೂಪಿಸಿದ್ದ ಹಾಕಿಯಲ್ಲಿ ರೈಲ್ವೆ ಮಹಿಳಾ ತಂಡದ ಕೋಚ್ ಆಗಿ ಕೆಲಸ ಮಾಡುವ ಅವಕಾಶವೂ ಲಭಿಸಿತು.

ತಮ್ಮಂತೆ ತಮ್ಮ ಮಗ ಸಿದ್ಧಾರ್ಥನನ್ನು ಹಾಕಿ ಆಟಗಾರನನ್ನಾಗಿ ರೂಪಿಸುವ ಗುರಿಯೊಂದಿಗೆ ಮಂಜುನಾಥ ಬಳ್ಳಾರಿ ತರಬೇತಿ ಆರಂಭಿಸಿದರು. ತಮ್ಮೂರು ಹುಬ್ಬಳ್ಳಿಗೆ ಆಗಾಗ ಬಂದು ಹೋಗುತ್ತಿದ್ದರು. 2018ರ ನವೆಂಬರ್‌ನಲ್ಲಿ ಹುಬ್ಬಳ್ಳಿಗೆ ಬಂದಿದ್ದಾಗ 11 ಸಾವಿರ ಕೆ.ವಿ. ವೋಲ್ಟೇಜ್‌ನ ವಿದ್ಯುತ್ ತಂತಿ ಮಗನ ದೇಹಕ್ಕೆ ಆಕಸ್ಮಿಕವಾಗಿ ತಗುಲಿ ಹೊಟ್ಟೆಯ ಕೆಳಭಾಗವೆಲ್ಲ ಸುಟ್ಟು ಹೋಯಿತು. ಕೈ, ಕಾಲುಗಳಂತೂ ಸುಟ್ಟ ಹಪ್ಪಳದಂತಾಗಿದ್ದವು. ತೊಡೆಯ ಭಾಗದ ಮಾಂಸ ಛಿದ್ರವಾಗಿತ್ತು. ಸಿದ್ಧಾರ್ಥ್‌ಗೆ ಆಗ 13 ವರ್ಷ!

ಹಾಕಿ ಕ್ರೀಡೆಯಲ್ಲಿ ಎತ್ತರದ ಸಾಧನೆ ಮಾಡುವ ಆಸೆ ಹೊಂದಿದ್ದ ಸಿದ್ಧಾರ್ಥ್ ಪಾಲಿಗೆ ಬದುಕು ಮುಗಿದೇ ಹೋಯಿತು ಎನಿಸಿತು. ಇನ್ನೆಂದೂ ತನ್ನ ನೆಚ್ಚಿನ ಸ್ಟಿಕ್ ಹಿಡಿಯಲು ಸಾಧ್ಯವೇ ಇಲ್ಲ ಎನ್ನುವ ನೋವು ಇನ್ನೂ ಕಾಡಿತು. ಬದುಕಿದರೆ ಸಾಕು, ಕೊನೆಯವರೆಗೂ ಮಗನನ್ನು ಹೂವಿನಂತೆ ನೋಡಿಕೊಳ್ಳುತ್ತೇವೆ ಎನ್ನುವ ಪ್ರಾರ್ಥನೆ ಕುಟುಂಬದವರದ್ದಾಗಿತ್ತು. ಘಟನೆ ನಡೆದಾಗ ಸಿದ್ಧಾರ್ಥನನ್ನು ನೋಡಿದವರು 'ಇದ್ದಷ್ಟು ದಿನ ಇರಲಿಬಿಡಿ' ಎನ್ನುವ ಮಾತುಗಳನ್ನಾಡಿದ್ದರು.

ಸಿದ್ಧಾರ್ಥನ ದೇಹದ ಒಂದೊಂದೇ ಅಂಗವನ್ನು ಸರಿಪಡಿಸಲು ಇದುವರೆಗೆ 26 ಬಾರಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ. ದೇಹದ ಬೇರೆ, ಬೇರೆ ಭಾಗಗಳಿಂದ ಚರ್ಮ ತೆಗೆದು ಸುಟ್ಟ ಭಾಗಕ್ಕೆ ಹಾಕಲಾಗಿದೆ. ಇನ್ನು ನಾಲ್ಕು ಶಸ್ತ್ರಚಿಕಿತ್ಸೆಗಳು ಬಾಕಿಯಿವೆ. ಚೆಂಡಿನೊಂದಿಗೆ ಚಿನ್ನಾಟವಾಡಿ ಹಾಕಿ ಅಂಗಳದಲ್ಲಿ ಓಡಾಡುತ್ತಿದ್ದ ಕಾಲುಗಳಲ್ಲಿ ಶಕ್ತಿ ಇಲ್ಲವೆನ್ನುವ ಸತ್ಯ ಗೊತ್ತಾಗುವ ಹೊತ್ತಿಗೆ ಸಿದ್ಧಾರ್ಥ್‌ಗೆ 16 ಶಸ್ತ್ರಚಿಕಿತ್ಸೆಗಳು ಪೂರ್ಣಗೊಂಡಿದ್ದವು. ಘಟನೆ ನಡೆದ ಐದು ತಿಂಗಳ ತನಕ ಸಿದ್ಧಾರ್ಥ್ ಬದುಕುವ ಬಗ್ಗೆ ವೈದ್ಯರು ಖಚಿತವಾಗಿ ಏನನ್ನೂ ಹೇಳಿರಲಿಲ್ಲ.

ಘಟನೆ ನಡೆದು ಈಗ ಎರಡು ವರ್ಷಗಳೇ ಕಳೆದಿವೆ. ಬದುಕಿದರೆ ಸಾಕು ಎನ್ನುವ ಆಸೆಯಲ್ಲಿದ್ದ ತಂದೆ, ಮಗನನ್ನು ನಿತ್ಯ ಹುಬ್ಬಳ್ಳಿಯಲ್ಲಿ ಫಿಟ್‌ನೆಸ್‌ಗಾಗಿ ರೈಲ್ವೆ ಮೈದಾನಕ್ಕೆ ಕರೆದುಕೊಂಡು ಬರುತ್ತಾರೆ. ನಿಧಾನವಾಗಿ ನಡೆಯುತ್ತ, ಕೆಲ ದಿನಗಳಲ್ಲಿ ಓಡುವುದನ್ನು ಸಿದ್ಧಾರ್ಥ್ ರೂಢಿಸಿಕೊಂಡಿದ್ದಾನೆ. ಕಾಲುಗಳಲ್ಲಿ ಕಳೆದು ಹೋಗಿದ್ದ ಶಕ್ತಿ ಮರಳಿ ಬಂದಿದೆ. ದೇಹದ ಎಲ್ಲ ಅಂಗಗಳು ಸರಿಯಿರುವ ಮಕ್ಕಳ ಜೊತೆ ಸ್ಪರ್ಧೆ ಎದುರಿಸುತ್ತಾನೆ.

ಎಡಗೈ ಕತ್ತರಿಸಲಾಗಿದ್ದು, ಬಲಗೈ ಇದ್ದರೂ ಸ್ವಾಧೀನವಿಲ್ಲ. ಹತ್ತನೇ ತರಗತಿ ಓದುತ್ತಿರುವ ಸಿದ್ಧಾರ್ಥ್, ಪರೀಕ್ಷೆ ಬರೆಯಲು ಬೇರೆಯವರನ್ನು ಅವಲಂಬಿಸಬೇಕಿದೆ. ಸ್ಪರ್ಧೆಗಳಲ್ಲಿ ಪಾಲ್ಗೊಂಡರೆ ಬದುಕು ಇನ್ನಷ್ಟು ಬದಲಾಗಬಹುದು ಎನ್ನುವ ಆಸೆಯಿಂದ ಸಿದ್ಧಾರ್ಥ್ ಇತ್ತೀಚೆಗೆ ಮೈಸೂರಿನಲ್ಲಿ ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆ ಆಯೋಜಿಸಿದ್ದ ರಾಜ್ಯ ಪ್ಯಾರಾ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ 100 ಹಾಗೂ 200 ಮೀಟರ್ ಓಟದ ಸ್ಪರ್ಧೆಯಲ್ಲಿ ಬೆಳ್ಳಿ ಪದಕಗಳನ್ನು ಗೆದ್ದುಕೊಂಡಿದ್ದಾನೆ.

ಮಂಜುನಾಥ ಬಳ್ಳಾರಿ ಹಾಕಿ ಆಟಗಾರರಿಗೆ ತರಬೇತಿ ನೀಡುವ ಅವಧಿಯಲ್ಲಿ ಗಾಯಗೊಂಡ ಅನೇಕ ಕ್ರೀಡಾಪಟುಗಳನ್ನು ನೋಡಿದ್ದಾರೆ. ಅಂಗಳಕ್ಕೆ ಯಾವತ್ತೂ ಮರಳಲು ಸಾಧ್ಯವೇ ಇಲ್ಲ ಎನ್ನುವ ಗಂಭೀರ ಗಾಯವಾದಾಗಲೂ ವಿಧಿಗೆ ಸಡ್ಡು ಹೊಡೆದು ಮತ್ತೆ ಕ್ರೀಡೆಯಲ್ಲಿ ಮಿಂಚಿದ ಕ್ರೀಡಾಪಟುಗಳ 'ಪವಾಡ'ಗಳನ್ನು ಕಂಡಿದ್ದಾರೆ. ಎರಡೂ ಕಾಲು ಇಲ್ಲದಿದ್ದರೂ ಸ್ಫೂರ್ತಿಯ ಮಾತುಗಳನ್ನಾಡುವ ಈಜುಪಟು ಆಸ್ಟ್ರೇಲಿಯಾದ ನಿಕ್ ಜಾನ್, ನೋವಿನಲ್ಲಿಯೂ ಜಗತ್ತೇ ಮೆಚ್ಚುವ ಸಾಧನೆ ಮಾಡಿದ ಮಿಲ್ಖಾ ಸಿಂಗ್ ಅವರ ಸಾಧನೆಯ ಗಾಥೆಯನ್ನು ಕೇಳಿದ್ದಾರೆ; ಮಗನಿಗೂ ಕೇಳಿಸಿದ್ದಾರೆ. ತಾವು ಕಂಡ ಹಾಗೂ ತಮ್ಮ ಜೀವನದಲ್ಲಿ ಎದುರಿಸಿದ ಸವಾಲುಗಳನ್ನು ಮಗನ ಜೊತೆ ಹಂಚಿಕೊಂಡು 'ಮತ್ತೆ ಮೊದಲಿನಂತೆಯೇ ಬದುಕಲು ಸಾಧ್ಯ' ಎನ್ನುವ ಭರವಸೆ ತುಂಬಿದ್ದಾರೆ. ಆ ಮಾತುಗಳೇ ಸಿದ್ಧಾರ್ಥನಿಗೆ ಮರುಜನ್ಮ ನೀಡಿ, ಮೊಗದಲ್ಲಿ ಮತ್ತೆ ನಗು ಅರಳಿಸಿವೆ.

ಸಂದರ್ಶನದ ಪೂರ್ಣ ವಿಡಿಯೊ 'ಪ್ರಜಾವಾಣಿ' ಯೂಟ್ಯೂಬ್ ಚಾನೆಲ್‌ನಲ್ಲಿ ನೋಡಲು ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

'ಸಿದ್ಧಾರ್ಥ್ ಸ್ಫೂರ್ತಿಯ ನಾಯಕ'

ಬದುಕಿನಲ್ಲಿ ಸಣ್ಣ ಘಟನೆ ನಡೆದರೆ ನಮ್ಮಿಂದ ಏನೂ ಸಾಧ್ಯವೇ ಇಲ್ಲ ಎನ್ನುವ ನಿರಾಶೆಯ ಮನಸ್ಥಿತಿ ಉಳ್ಳವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ದೇಹದ ಬಹುತೇಕ ಭಾಗ ಸುಟ್ಟರೂ ಮತ್ತೆ ಸಾಧನೆಯ ಛಲ ಹೊಂದಿರುವ ಸಿದ್ಧಾರ್ಥ್ ಸ್ಫೂರ್ತಿಯ ನಾಯಕ ಎಂದು ಕ್ರೀಡಾ ಕೋಚ್ ಸಂತೋಷ ಹೊಸಮನಿ ಮೆಚ್ಚುಗೆ ವ್ಯಕ್ತಪಡಿಸಿದರು.

'ನಿತ್ಯ ಬೆಳಿಗ್ಗೆ 5.30ಕ್ಕೆ ಮೈದಾನಕ್ಕೆ ತಪ್ಪದೇ ಅಭ್ಯಾಸಕ್ಕೆ ಬರುತ್ತಾನೆ. ಫಿಟ್‌ನೆಸ್‌ಗಾಗಿ ಎಲ್ಲರೊಂದಿಗೆ ಅಭ್ಯಾಸ ಮಾಡಿ, ಅವರೊಂದಿಗೆ ಸ್ಪರ್ಧೆ ಎದುರಿಸುತ್ತಾನೆ. ಅವನಲ್ಲಿ ಏನಾದರೂ ದೊಡ್ಡ ಸಾಧನೆ ಮಾಡಬೇಕೆನ್ನುವ ಛಲವಿದೆ. ಎರಡೂ ಕೈಗಳು ಹಾಗೂ ಕಾಲುಗಳ ಇಲ್ಲದ ಅದೆಷ್ಟೋ ಜನ ಸಾಧನೆ ಮಾಡಿದ್ದಾರೆ. ಅವರಂತೆ ಆಗಬೇಕೆನ್ನುವ ಗುರಿ ಅವನಲ್ಲಿದೆ' ಎಂದರು.



ಛಲದ ಓಟದಲ್ಲಿ ಸಿದ್ಧಾರ್ಥ್ ಬಳ್ಳಾರಿ – ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಮುನ್ನೋಟ 21-03-2021 ರಿಂದ 27-03-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — **ಅಶ್ವಿನಿ, ಭರಣಿ, ಕೃತ್ತಿಕಾ 1**
ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಏರುಪೇರಾದರೂ ದೈವಾನುಗ್ರಹದಿಂದ ನಿಶ್ಚಿತ ಆದಾಯಕ್ಕೆ ತೊಂದರೆ ಇರುವುದಿಲ್ಲ. ಸಂಪನ್ಮೂಲಗಳ ಅಭಿವೃದ್ಧಿಗಾಗಿ ನೀವು ಹೂಡಿದ ಯೋಜನೆಗಳು ಈಗ ಫಲ ಕೊಡುತ್ತವೆ. ಮಹತ್ತರವಾದ ಒಂದು ಯೋಜನೆ ಕೈಗೂಡಿ ನಿಮ್ಮ ಬಂಧುಗಳೆಲ್ಲರೂ ನಿಮ್ಮತ್ತ ತಿರುಗಿ ನೋಡುವರು. ಮಕ್ಕಳ ವಿಷಯದಲ್ಲಿ ಸ್ವಲ್ಪ ಬೇಸರ ಮೂಡಬಹುದು. ಹಣದ ವಿಷಯದಲ್ಲಿ ದುಡುಕಿನ ಮಾತುಗಳು ಬೇಡವೇ ಬೇಡ.

ವೃಷಭ — **ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2**
ಅವಿವಾಹಿತರಿಗೆ ಕಂಕಣ ಬಲ ಕೂಡಿಬರುವ ಸಾಧ್ಯತೆ ಇದೆ. ಸಾಮಾಜಿಕ ಕೆಲಸಗಳನ್ನು ಮಾಡುವವರಿಗೆ ಜನಮನ್ನಣೆ ಒದಗಿಬರುತ್ತದೆ. ನಿಮ್ಮ ನೇರ ನುಡಿಗಳು ಬಂಧುಗಳಲ್ಲಿ ಅಸಮಾಧಾನ ತರಬಹುದು. ಆದರೆ ಸತ್ಯದ ಅರಿವಾದಾಗ ನಿಮಗೆ ಗೌರವ ಕೊಡುವರು. ಚಿನ್ನದ ಆಭರಣಗಳನ್ನು ಕೊಳ್ಳುವ ಯೋಗವಿದೆ. ಅಂದುಕೊಂಡ ಕಾರ್ಯಗಳನ್ನು ಸಾಧಿಸಲು ಹಲವು ಮಾರ್ಗಗಳನ್ನು ಹುಡುಕಾಟ ಮಾಡುವಿರಿ.

ಮಿಥುನ — **ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3**
ಹಿರಿಯ ಉದ್ಯೋಗಸ್ಥರಿಗೆ ಹೊಸ ರೀತಿಯ ಸ್ಥಾನಮಾನಗಳು ದೊರೆಯುವ ಸಾಧ್ಯತೆಗಳಿವೆ. ಹಣದ ಒಳಹರಿವು ತೃಪ್ತಿಕರವಾಗಿರುತ್ತದೆ. ವೃತ್ತಿರಂಗದಲ್ಲಿ ಸೂಕ್ತ ಬೆಳವಣಿಗೆಯನ್ನು ಕಾಣಬಹುದು. ಕೆಲವು ರಾಜಕಾರಣಿಗಳಿಗೆ ಸ್ಥಾನಮಾನ ಅನಿರೀಕ್ಷಿತವಾಗಿ ದೊರೆಯುತ್ತದೆ. ಗುತ್ತಿಗೆ ವ್ಯವಹಾರವನ್ನು ಮಾಡುವ ಗುತ್ತಿಗೆದಾರರಿಗೆ ವ್ಯವಹಾರದಲ್ಲಿ ಮುನ್ನಡೆ ಇರುತ್ತದೆ.

ಕಟಕ — **ಪುನರ್ವಸು 4 ಪುಷ್ಯ, ಆಶ್ಲೇಷ**
ವಿದ್ಯಾರ್ಥಿಗಳಿಗೆ ಹೊಸ ರೀತಿಯ ಉತ್ಸಾಹ ಮೂಡಿ ಅಧ್ಯಯನದಲ್ಲಿ ತೊಡಗುವರು. ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣತರ ಹತ್ತಿರ ವಿಚಾರ ಮಾಡುವಿರಿ. ಸಂಗೀತ ಮತ್ತು ಇತರೆ ಲಲಿತಕಲೆಗಳಲ್ಲಿ ಇರುವವರಿಗೆ ಮನ್ನಣೆ ದೊರೆತು ಸಂತಸವಾಗುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿಬರುವ ಅವಕಾಶಗಳಿವೆ. ಬೇರೆಯವರ ಹಣಕಾಸಿನ ವಿಚಾರದಲ್ಲಿ ಮಧ್ಯಸ್ಥಿಕೆ ಮಾಡಬೇಡಿ.

ಸಿಂಹ — **ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1**
ಯಾವುದೇ ಕೆಲಸವನ್ನು ಧಾವಂತದಿಂದ ಮಾಡಬೇಡಿ. ಶುಭಕಾರ್ಯಗಳಿಗಾಗಿ ದೂರ ಪ್ರಯಾಣದ ಸಾಧ್ಯತೆಗಳಿವೆ. ಉದ್ಯೋಗದಲ್ಲಿ ಪ್ರಗತಿಯನ್ನು ಕಾಣಬಹುದು. ಹಿರಿಯರ ಸಲಹೆಗಳಿಂದ, ಬರಲಿದ್ದ ಗಂಡಾಂತರಗಳಿಂದ ಪಾರಾಗುವಿರಿ. ಗೃಹ ನವೀಕರಣ ಕಾರ್ಯಗಳನ್ನು ಕೈಗೆತ್ತಿಕೊಳ್ಳುವಿರಿ. ಹಳೆವಾಹನವನ್ನು ನವೀಕರಣಗೊಳಿಸುವಿರಿ. ಶತ್ರುಗಳನ್ನು ಜಾಣ್ಮೆಯಿಂದ ಗೆಲ್ಲುವಿರಿ.

ಕನ್ಯಾ — **ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2**
ಭಿನ್ನಾಭಿಪ್ರಾಯದಿಂದಾಗಿ ನಿಂತುಹೋಗಿದ್ದ ಕೆಲಸಗಳು ಒಮ್ಮತದ ಅಭಿಪ್ರಾಯದಿಂದ ಸಾಧಿಸಲ್ಪಡುತ್ತವೆ. ವಿದ್ಯಾರ್ಥಿಗಳಿಗೆ ಓದಿನಲ್ಲಿ ಪ್ರಗತಿ ಇರುತ್ತದೆ. ಸಂಪತ್ತಿನಲ್ಲಿ ವೃದ್ಧಿಯನ್ನು ಕಾಣಬಹುದು. ಜಲ ಸಂಬಂಧಿ ಉದ್ಯೋಗದಲ್ಲಿರುವವರಿಗೆ ಅಭಿವೃದ್ಧಿ ಇರುತ್ತದೆ. ರಾಜಕೀಯ ವ್ಯಕ್ತಿಗಳಿಂದ ಕಿರಿಕಿರಿ ಆಗಬಹುದು. ನಿಮ್ಮ ಅಭಿವೃದ್ಧಿಗೆ ಪೂರಕವಾದ ಕೆಲವು ಅವಕಾಶಗಳು ಒದಗಿಬರುತ್ತವೆ.

ತುಲಾ — **ಚಿತ್ತಾ 3,4 ಸ್ವಾತಿ, ವಿಶಾಖೆ 1,2,3**
ನಿಮ್ಮ ಕೆಲವು ನಿಲುವುಗಳಲ್ಲಿ ಆಕಸ್ಮಿಕ ಬದಲಾವಣೆಗಳನ್ನು ಮಾಡಿ ಜನರ ಕೆಂಗಣ್ಣಿಗೆ ಗುರಿಯಾಗುವ ಸಾಧ್ಯತೆಗಳಿವೆ. ಔಷಧ ಸಂಶೋಧನೆಯಲ್ಲಿರುವವರಿಗೆ ಉತ್ತಮ ಫಲಿತಾಂಶಗಳು ದೊರೆಯುತ್ತವೆ. ವ್ಯಕ್ತಿಯಲ್ಲಿ ಹೆಚ್ಚಿನ ಒತ್ತಡಗಳು ಇರುವುದಿಲ್ಲ. ಕೆಲಸಕಾರ್ಯಗಳಲ್ಲಿ ಸ್ವಲ್ಪ ಹಿನ್ನಡೆ ಕಾಣಬಹುದು. ವ್ಯವಹಾರಗಳಲ್ಲಿ ಅನಿರೀಕ್ಷಿತ ಲಾಭ ಕಾಣಬಹುದು. ಬೆಳೆದ ಬೆಳೆಗೆ ಕೃಷಿಕರಿಗೆ ಹೆಚ್ಚಿನ ಲಾಭ ದೊರೆಯುತ್ತದೆ.

ವೃಶ್ಚಿಕ — **ವಿಶಾಖೆ 4 ಅನೂರಾಧ, ಜ್ಯೇಷ್ಠ**
ಕೆಲಸಕಾರ್ಯಗಳಲ್ಲಿ ಪ್ರಗತಿ ಇರುತ್ತದೆ. ಸಾಂಸಾರಿಕ ಜೀವನದಲ್ಲಿ ಸಾಕಷ್ಟು ಹೊಂದಾಣಿಕೆಯನ್ನು ಕಾಣುವ ಸಾಧ್ಯತೆಗಳಿವೆ. ಆರ್ಥಿಕ ಸ್ಥಿತಿಯಲ್ಲಿ ಸ್ವಲ್ಪ ಚೇತರಿಕೆಯನ್ನು ಕಾಣಬಹುದು. ನಿಕಟವರ್ತಿಗಳಿಂದ ಸಹಾಯ ದೊರೆತು ಆತ್ಮಸ್ಥೈರ್ಯ ಹೆಚ್ಚುವುದು. ಕೃಷಿಯಿಂದ ಆದಾಯ ಹೆಚ್ಚುತ್ತದೆ.


ಧನುಸ್ಸು — **ಮೂಲ, ಪೂರ್ವಾಷಾಢ, ಉತ್ತರಾಷಾಢ 1**
ಕುಟುಂಬದಲ್ಲಿ ಹೊಂದಾಣಿಕೆಯಿಂದ ಎಲ್ಲರ ಬೆಂಬಲಗಳಿಸುವಿರಿ. ವಿದ್ಯಾರ್ಥಿಗಳಿಗೆ ಮಂದಗತಿಯ ಪ್ರಗತಿ ಇರುತ್ತದೆ. ಸರ್ಕಾರಿ ಉದ್ಯೋಗಿಗಳಿಗೆ ಸ್ಥಾನ ಪಲ್ಲಟವಾಗುವ ಸಾಧ್ಯತೆ ಇದೆ. ನಿಮ್ಮ ಜೀವನ ಶೈಲಿಯನ್ನು ಬದಲಾವಣೆ ಮಾಡಿಕೊಳ್ಳಲು ಈಗ ಸಕಾಲ. ನಿರೀಕ್ಷಿತ ಮೂಲಗಳಿಂದ ಆದಾಯವಿರುತ್ತದೆ. ಶುಭಕಾರ್ಯಗಳನ್ನು ಮಾಡುವ ಉತ್ಸಾಹ ಬರುತ್ತದೆ.

ಮಕರ — **ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2**
ವಿಶಾಲ ಮನೋಭಾವದಿಂದ ನಿಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಿರಿ. ಕ್ಲಿಷ್ಟವಾದ ಕೆಲಸಗಳನ್ನು ಅಚ್ಚುಕಟ್ಟಾದ ರೀತಿಯಲ್ಲಿ ಸಾಧಿಸಿ ಪ್ರಶಂಸೆಗೆ ಒಳಗಾಗುವಿರಿ. ರಾಜಕೀಯ ಕ್ಷೇತ್ರದಲ್ಲಿ ಸೂತ್ರಧಾರರಾಗಿ ಕೆಲಸ ಮಾಡುವವರಿಗೆ ಬೇಡಿಕೆ ಇರುತ್ತದೆ. ಆದಾಯ ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ. ನಿಮ್ಮ ಒಂದು ಹವ್ಯಾಸ ವೃತ್ತಿಯಾಗಿ ಬದಲಾಗಬಹುದು.

ಕುಂಭ — **ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3**
ಚಿನ್ನದ ಸಗಟು ಆಭರಣ ತಯಾರಕರಿಗೆ ಲಾಭವಿರುತ್ತದೆ. ಆದಾಯ ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹೆಚ್ಚಿನ ಅನುಕೂಲವಾಗುತ್ತದೆ. ಸರ್ಕಾರಿ ನೌಕರರಿಗೆ ವೃತ್ತಿಯಲ್ಲಿ ಅಕಾಲಿಕ ಪ್ರಯಾಣದಿಂದ ಕಿರಿಕಿರಿಯಾಗುತ್ತದೆ ಮತ್ತು ವ್ಯರ್ಥ ಖರ್ಚಾಗುತ್ತದೆ. ಯುವಕರಿಗೆ ವೃತ್ತಿಯಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ.

ಮೀನ — **ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ**
ಸ್ನೇಹಿತರೊಂದಿಗೆ ಮುಕ್ತವಾಗಿ ಮಾತನಾಡುವುದರಿಂದ ಮನಸ್ಸಿನಲ್ಲಿ ಇದ್ದ ತಪ್ಪು ಕಲ್ಪನೆಗಳು ದೂರವಾಗಿ ಸಂಬಂಧಗಳು ಗಟ್ಟಿಯಾಗುತ್ತವೆ. ವ್ಯವಹಾರದಲ್ಲಿನ ಅಭಿವೃದ್ಧಿಯಿಂದ ಆದಾಯದಲ್ಲಿ ಹೆಚ್ಚಳವನ್ನು ಕಾಣಬಹುದು. ವೃತ್ತಿಯಲ್ಲಿ ಅನಿವಾರ್ಯ ಒತ್ತಡಗಳನ್ನು ತಾಳಿಕೊಳ್ಳಬೇಕಾಗಬಹುದು. ಧನದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಪದಬಂಧ 2679



ಮೇಲಿನಿಂದ ಕೆಳಕ್ಕೆ
1. ಅಗಲಿಕೆಯ ನೋವನ್ನು ಅನುಭವಿಸುತ್ತಿರುವ ಪ್ರೇಯಸಿ ಪ್ರಿಯತಮರ ಹಾಡು 5
2. ಮಂತ್ರದ ಜೊತೆ ಧ್ಯಾನ 4
3. ತಮಿಳರ ಆರನೆ ದಿನ ಇದೀಗ ಐಷಾರಾಮಿ ಕಾರು 2
5. ಮೇಲಿಂದ ಬಿದ್ದರೆ ಹನಿಯ ಸದ್ದು, ಕೆಳಗಿನಿಂದ ಮೇಲೇರಿದರೆ ಹಾರುವ ವಸ್ತ್ರ 2
6. ಮರ್ಯಾದೆಯಿಂದ ಇಳಿದು ಬಂದ ಮನುಷ್ಯ ಗುಣ 3
8. ಮಕ್ಕಳನ್ನು ಹೆದರಿಸಲು ಧ್ವನಿ ಎತ್ತು 3
10. ಗೋ ಪಾಲ 4
12. ಪ್ರತಿದಿನ ಆರಾಮ ಜೀವನ 4
14. ಒಂದಕ್ಕೊಂದು ಜೋಡಿಸು 3
15. ನಮ್ಮ ಇಡೀ ಮನಸ್ಸನ್ನೇ ಸೂರೆಗೊಳ್ಳುವವ 5
16. ಕೊನೆಯಲ್ಲಿ ಗಡುವಾಗುವ ರೇಕು 3
18. ಮನಸ್ಸನ್ನು ಕೇಂದ್ರೀಕರಿಸಿ ದೃಷ್ಟಿ ಹರಿಸು 4
20. ಅಲ್ಪಪ್ರಾಣದಿಂದ ಹಗುರವಾದದ್ದು 2
21. ಅತ್ತೆಗೆ ತಕ್ಕನಾದ ಮಗನ ಹೆಂಡತಿ 2

ಎಡದಿಂದ ಬಲಕ್ಕೆ
1. ವಿಶೇಷವಾದ ರಾಜ ಪ್ರಕಾಶಮಾನವಾಗಿ ಬೆಳಗಬಹುದು 3
3. ಸ್ಥೂಲ ರೂಪ ಕೊಡುವ ಎರಡನೆ ಸ್ವರ 3
4. ಅಸ್ತವ್ಯಸ್ತವಾಗಿ ಸ್ಥಳ ಬದಲು 3
6. ಕೆಂಪೇಗೌಡನ ಊರಲ್ಲಿ ರಂಗನಾಥನ ಗಡಿ 3
7. ದುಂಬಿ ಮುತ್ತಿಕ್ಕುವ ಹೂವಿನೊಳಗಣ ಕುಸುಮ 3
9. ಗೀಯ ಗೀಯ ಎನ್ನುವ ಜಾನಪದ ಹಾಡು 4
11. ಝಾಂಸಿ ರಾಣಿ, ಓಬವ್ವರಂತೆ ಹೋರಾಡಿದ ಪರಾಕ್ರಮಿ ಮಹಿಳೆ 5
13. ಕೆ. ಎಸ್. ನರಸಿಂಹಸ್ವಾಮಿಯವರ ಕವನದಲ್ಲಿ ಚೆಲುವೆಯ ಚೆಂದದ ಊರು 4
14. ಭರವಸೆ ಮೂಡಿಸುವ ಬಂಗಾರದಂತಹ ಸ್ವಪ್ನ 4
15. ಹೆಗ್ಗಳಿಕೆಯ ಪವಾಡ ಪುರುಷ 5
17. ಹಕ್ಕಿಗಳ ಉಲಿ ಹಾಡಾಗಿ. . . 4
19. ಮಾಡಿದ ಕೆಲಸಕ್ಕೆ ಸಿಗುವ ಒಳ್ಳೆಯ ಹಣ್ಣು 3
21. ಜೀವಂತಿಕೆಯ ಅಸ್ತಿತ್ವ ಬೀರುವ ಪರಿಮಳ 3
22. ಹಿಂದಿಯವನಿಗೆ ಬಂದ ಅನುಮಾನ 3
23. ಸಕಾರ ಪಡೆದ ಭಗ್ನವಾದ ಆಶೆ 3
24. ಒಳ್ಳೆಯ ಮನಸ್ಸಿನ ಹೂವಿನಂತಹ ಬಾಲೆ 3

ಪದಬಂಧ ಉತ್ತರ -2678

ಮೇಲಿಂದ ಕೆಳಕ್ಕೆ
1.ಶಿಖರ 2.ತ್ರಿಕಾಲ 3.ನೆಗೆತ 4.ದಿವಾನಿ 6.ಮದನಿ 8.ಮಾನಸಿ 10.ಪರಾಕು 11.ಸ್ಥಾನ 12.ಕತ್ರಿ 13.ತುಡಿತ 14.ವಸಡು 16.ಶಂಕರೀ 17ತಿಮಿರ 19.ಹಿರಿಯ 20.ಕರ 21.ಗೌಣ 22.ಶಿಕಾರಿ 24.ಮನನ 25.ಪಗಾರ 26.ನಯನ 27.ಕುಲುಕು 28.ದೆಹಲಿ

ಎಡದಿಂದ ಬಲಕ್ಕೆ
1.ಶಿವರಾತ್ರಿ 3.ನೆನೆಗುದಿ 5.ಕಾಡುಮಲ್ಲಿಗೆ 7.ರತ್ನಮಾಲ 9.ತಪಮುನಿ 11.ಸ್ಥಾನಿಕ 13.ತುಳಸಿವನ 15.ತ್ರಿಶಂಕುಸ್ಥಿತಿ 18.ತಲೆಹಿಡುಕ 21.ಗೌರೀಶಿಖರ 23.ರಮಣ 25.ಪಲಾಯನ 27.ಕುರಿಮಂದೆ 29.ಯಮನಸೋಲು 30.ರಕ್ತದಾನ 31.ಕುಣಿನಲಿ

ವಿಶ್ವ ಪ್ರಜ್ಞೆಯೇ ಸನ್ಯಾಸದ ಲಕ್ಷಣ

ಡಾ.ಕೆ.ಎಸ್. ನಾಗಪತಿ ಹೆಗಡೆ

ಹಿಂದಿನ ಕಾಲದಿಂದಲೂ ವ್ಯಕ್ತಿಯನ್ನು ಹಾಗೂ ಸಮಾಜವನ್ನು ಧರ್ಮದ ದಾರಿಯಲ್ಲಿ ನಡೆಸಿಕೊಂಡು ಹೋಗುವ ಜವಾಬ್ದಾರಿಯನ್ನು ಧಾರ್ಮಿಕ ಮುಖಂಡರು ಹೊತ್ತಿದ್ದಾರೆ. ವೇದಗಳಲ್ಲಿ ಸನ್ಯಾಸಧರ್ಮದ ಬಗ್ಗೆ ಸ್ಪಷ್ಟ ಚಿತ್ರಣವನ್ನು ಕೊಡಲಾಗಿದೆ. ಭಗವಂತನೇ ಸತ್ಯ, ಪ್ರಪಂಚವೆಲ್ಲವೂ ಮಿಥ್ಯ, ಅದೊಂದನ್ನೇ ಅನುಭವಿಸಬೇಕು ಎಂಬುದು ಸನ್ಯಾಸಿಯ ಆದರ್ಶವಾಗಿರಬೇಕು ಎಂಬ ಪರಿಕಲ್ಪನೆ ಈ ಸನ್ಯಾಸಧರ್ಮದ ಮೂಲಮಂತ್ರ. ನಮ್ಮ ಪ್ರಾಚೀನ ಸಂತರು ಹಾಗೂ ದಾರ್ಶನಿಕರು ಕಂಡುಕೊಂಡ ಆಧ್ಯಾತ್ಮಿಕ ಸತ್ಯವೇ ಇದಕ್ಕೆ ಪ್ರೇರಣೆ. ವೇದ, ಉಪನಿಷತ್ತು ಮತ್ತು ವೇದಾಂತ ರೂಪಿಸಿದ ತತ್ವಗಳು ಈ ಪ್ರಪಂಚವನ್ನು ಮೀರಿದ, ಆದರೆ ಅದರಲ್ಲಿಯೇ ಓತಪ್ರೋತವಾಗಿರುವ, ನಿತ್ಯವೂ, ಶಾಶ್ವತವೂ ಮತ್ತು ಪರಿಪೂರ್ಣವೂ ಆಗಿರುವ ತತ್ವವನ್ನು 'ಬ್ರಹ್ಮ' ಎಂದು ಕರೆದಿದ್ದಾರೆ. ಈ ಬ್ರಹ್ಮನಲ್ಲಿಯೇ ಲೀನವಾಗುವ ಉದ್ದೇಶದಿಂದ, ಅತಿ ದೃಢಮನಸ್ಸುಳ್ಳವರು ಈ ಮಾರ್ಗವನ್ನು ಅನುಸರಿಸಬೇಕೆಂಬುದು ಅಂದಿನ ದಾರ್ಶನಿಕರ ಇಚ್ಛೆಯಾಗಿತ್ತು. ಇದು ಅತ್ಯಂತ ಕಠಿಣ ಆಶ್ರಮ. ಭಾರತೀಯ ಸಂಸ್ಕೃತಿಯಲ್ಲಿ ಮನುಷ್ಯನ ಅಂತಿಮ ಗುರಿ ಮೋಕ್ಷ. ವೇದಾಂತ ವಿಜ್ಞಾನ

ಸುನಿಶ್ಚಿತಾರ್ಥಾಃಸಂನ್ಯಾಸಯೋಗಾದ್ಯತಯಃಶುದ್ಧಸತ್ವಾಃ /
ತೇ ಬ್ರಹ್ಮಲೋಕೇಷು ಪರಾಂತಕಾಲೇ
ಪರಾಮೃತಾತ್ಪರಿಮುಚ್ಯಂತಿ ಸರ್ವೇ //
(ಮಹಾನಾರಾಯಣೋಪನಿಷತ್)

ಸನ್ಯಾಸಿ ಆದವನು ವೇದಾಂತ ವಿಜ್ಞಾನದಿಂದ ಪರಬ್ರಹ್ಮ ವಸ್ತುವಿನಲ್ಲಿ ಸಂಪೂರ್ಣ ನಂಬಿಕೆ ಇಟ್ಟು ಪ್ರಪಂಚದ ಸಕಲ ಭೋಗವಸ್ತುಗಳನ್ನು ತ್ಯಾಗ ಮಾಡಿ ಇಂದ್ರಿಯ ನಿಗ್ರಹ ಮಾಡಿಕೊಂಡು ರಜೋ ಗುಣ ಮತ್ತು ತಮೋ ಗುಣದಿಂದ ದೂರವಾಗಿ ಸತ್ವ ಗುಣ ಅಳವಡಿಸಿಕೊಳ್ಳಬೇಕು. ಅಂತಹ ಸನ್ಯಾಸಿಗಳು ತಮ್ಮ ಜೀವನದ ಅಂತ್ಯದಲ್ಲಿ ಪರಮಾತ್ಮನಲ್ಲಿ ಲೀನರಾಗುತ್ತಾರೆ ಎಂಬುದು ಉಪನಿಷತ್ತಿನ ಸ್ಪಷ್ಟ ಅಭಿಪ್ರಾಯ. ಇಲ್ಲಿ ಧರ್ಮಗಳ ಜೊತೆಗೆ ಅರಿಷಡ್ವರ್ಗಗಳನ್ನು ತ್ಯಾಗ ಮಾಡುವುದಾಗಿದೆ. ಅವನು ಧರಿಸುವ ಕಾವಿಬಟ್ಟೆ ಕೂಡ ತ್ಯಾಗದ ಸಂಕೇತವಾಗಿರುತ್ತದೆ. ಭೋಗ ಸಂಸ್ಕೃತಿಯಿಂದ ಸಿಗುವ ಸಂತೋಷ, ಸುಖ ಹಾಗೂ ಆನಂದ ಕ್ಷಣಿಕವಾದದ್ದು. ಅದರ ಹಿಂದೆ ಅಪಾರ ದುಃಖ ಇರುತ್ತದೆ ಎನ್ನುವ ಪ್ರಜ್ಞೆ ಇರಬೇಕು. ಸನ್ಯಾಸಿ ಯೋಚನೆ ವ್ಯಕ್ತಿ ಪ್ರಜ್ಞೆಯಿಂದ ವಿಶ್ವ ಪ್ರಜ್ಞೆಯತ್ತ ಸಾಗಬೇಕು. 'ವಸುಧೈವ ಕುಟುಂಬಕಂ' ಎನ್ನುವುದು ಸನ್ಯಾಸಿಯ ಆದರ್ಶವಾಗಬೇಕು.

ವೇದ ಕಾಲದಲ್ಲಿ ಜಾತಿ ವ್ಯವಸ್ಥೆ ಇರಲಿಲ್ಲ. ಭಾರತದ ಸಮಾಜವನ್ನು ಒಡೆದು ಆಳುವ ನೀತಿಯ ಭಾಗವಾಗಿ ಮುಂದೆ ಜಾತಿ ವ್ಯವಸ್ಥೆ ಹುಟ್ಟಿಸಿದರು ಜಾರಿಗೆ ಬಂದಿದೆ. ಸಮಾಜದ ಮೇಲ್ಜಾತಿ ಎನಿಸಿಕೊಂಡವರು ಮಠವನ್ನು ಕಟ್ಟಿಕೊಂಡು ಮಠಾಧೀಶರ ನೇಮಿಸುವ ವ್ಯವಸ್ಥೆ ಜಾರಿಗೆ ಬಂತು. ಸ್ವಾತಂತ್ರ್ಯಾನಂತರದಲ್ಲಿ ಎಲ್ಲ ಸಮುದಾಯದವರು ತಮ್ಮ ತಮ್ಮ ಜಾತಿಯ ಮಠವನ್ನು ಸ್ಥಾಪಿಸಿದರು. ಈ ಮಠಗಳು ಆಯಾ ಸಮಾಜದ ಧಾರ್ಮಿಕ ವಿಧಿ ವಿಧಾನಗಳಿಗೆ ಸೀಮಿತವಾಗಿರುವಂತೆ ನಡೆದುಕೊಂಡರೆ ಅದಕ್ಕೆ ಆಕ್ಷೇಪ ಇರಲಾರದು. ಆದರೆ ಈ ಮಠದ ಸ್ವಾಮಿಗಳೆನಿಸಿಕೊಂಡವರು ಕೇವಲ ಕಾವಿಬಟ್ಟೆಯನ್ನು ಹಾಕಿಕೊಂಡರೆ ಸನ್ಯಾಸಿ ಎಂಬ ಭ್ರಮೆಯಲ್ಲಿ ಇರುವಂತೆ ಕಾಣುತ್ತದೆ. ಸನ್ಯಾಸಧರ್ಮದ ಮೂಲಮಂತ್ರಗಳನ್ನು ಮರೆತಂತೆ ಕಾಣುತ್ತದೆ. ಆರ್ಥಿಕ ಹಾಗೂ ರಾಜಕೀಯ ಅಧಿಕಾರ, ಅತಿ ಸಂಪತ್ತು ಕೂಡಿಸಿಕೊಂಡು ಭೋಗ ಜೀವನದ ದಾರಿಯನ್ನು ಹಿಡಿದಿರುವುದನ್ನು ನಾವು ಇಂದು ನೋಡುತ್ತಿದ್ದೇವೆ. ಅಂತಸ್ತು ಮತ್ತು ಅಧಿಕಾರದ ಬಗ್ಗೆ ಈ ಮಠಗಳ ಮಧ್ಯೆ ತೀವ್ರ ಸ್ಪರ್ಧೆ ಹುಟ್ಟಿಕೊಂಡಿರುವುದು ಕಂಡುಬರುತ್ತದೆ.

ಇತ್ತೀಚಿನ ದಿನಗಳಲ್ಲಿ ಇದರ ವ್ಯಾಪ್ತಿ ಸಮಾಜವನ್ನು ಕೂಡಿಸಿ ಶಾಂತಿ ಸಹಬಾಳ್ವೆ ಜೀವನ ಹೇಳುವ ಬದಲಿಗೆ ಸಮಾಜವನ್ನು ಒಡೆಯುವ ದಾರಿಯನ್ನು ಹಿಡಿದಂತೆ ಕಾಣುತ್ತಿದೆ. ಇಂದು ನಮ್ಮ ಜಾತಿಗೆ ಇಷ್ಟು ಮಂತ್ರಿಗಿರಿ ಬೇಕು, ಸರ್ಕಾರಿ ನೌಕರಿಯಲ್ಲಿ ಇಷ್ಟು ಪ್ರತಿಶತ ಮೀಸಲಾತಿ ಇರಬೇಕು, ಇಂತಹ ವ್ಯಕ್ತಿಯನ್ನು ಮಂತ್ರಿ ಮಾಡದೆ ಇದ್ದರೆ ನಮ್ಮ ಜಾತಿಯ ಎಲ್ಲ ಶಾಸಕರು ಒಟ್ಟಾಗಿ ಸರ್ಕಾರಕ್ಕೆ ಕೊಟ್ಟ ಬೆಂಬಲವನ್ನು ವಾಪಸು ಪಡೆಯುತ್ತಾರೆ ಎನ್ನುವ ಹೇಳಿಕೆಗಳು ಮಠಾಧೀಶರಿಂದ ಬರುತ್ತಿವೆ. ಮಠಾಧೀಶರು ಭಕ್ತರಿಗೆ ಮಾರ್ಗದರ್ಶನ ಮಾಡುವ ಬದಲಾಗಿ, ಸ್ವಾರ್ಥಕ್ಕಾಗಿ ತಾವೇ ಬೀದಿಗಿಳಿದು ಹೋರಾಟದ ಹಾದಿಯನ್ನು ಹಿಡಿದಿರುವುದನ್ನು ಕಾಣುತ್ತಿದ್ದೇವೆ. ಇದು ಬಹಳ ಅಪಾಯಕಾರಿ ಬೆಳವಣಿಗೆ. ಇದು ಸಮಾಜದಲ್ಲಿ ಅಶಾಂತಿಗೆ ಕಾರಣವಾಗುತ್ತದೆ. ಜಾತಿ, ಧರ್ಮ ಮತ್ತು ಭಾಷೆ ಇವು ಅತಿ ಸೂಕ್ಷ್ಮ ವಿಚಾರಗಳು. ಬೇರೆಯವರು ಇದರಲ್ಲಿ ತಲೆಹಾಕಿದರೆ ಭಾವನಾತ್ಮಕವಾಗಿ ಪ್ರತಿಕ್ರಿಯೆ ಪ್ರಾರಂಭವಾಗುತ್ತದೆ. ಹೀಗಾಗಿ, ಈ ಬೆಳವಣಿಗೆ ಎಷ್ಟರ ಮಟ್ಟಿಗೆ ಸರಿ ಎಂದು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ ಇದಾಗಿದೆ ಎಂದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯ.

ಬದಲಾದ ಭಾರತ: ವೇದಕಾಲದ ಸನ್ಯಾಸಧರ್ಮವನ್ನು ಈಗ ಆಚರಣೆ ಮಾಡುವುದು ಅಸಾಧ್ಯದ ಮಾತು. ಆದರೂ ಸನ್ಯಾಸಧರ್ಮದ ಅಡಿಪಾಯವನ್ನೇ ಬಿಟ್ಟು ಸಾಮಾಜಿಕ ಹೋರಾಟದ ಹೆಸರಿನಲ್ಲಿ ಸಮಾಜದ ಶಾಂತಿ ಹಾಗೂ ನೆಮ್ಮದಿಗೆ ಭಂಗ ತರುತ್ತಿರುವುದನ್ನು ಕಾಣುತ್ತಿದ್ದೇವೆ. ಆಯಾ ಜಾತಿಯ ಎಲ್ಲ ಮಠಾಧೀಶರು ಹಾಗೂ ಹಿರಿಯ ಪ್ರಜ್ಞಾವಂತ ನಾಗರಿಕರು ತಮ್ಮ ಸಮಾಜದ ಹಿತ ಕಾಯುವ ಜೊತೆಗೆ ಸಮಷ್ಟಿಯ ಹಿತವನ್ನೂ ಕಾಯುವ ಕೆಲಸ ಮಾಡಬೇಕು. ಈ ನಿಟ್ಟಿನಲ್ಲಿ ಆಯಾಯ ಸಮಾಜದವರು ಚಿಂತನ-ಮಂಥನ ಮಾಡಬೇಕು. ಒಂದು ಲಕ್ಷ್ಮಣ ರೇಖೆಯನ್ನು ಸ್ವಯಂ ಹಾಕಿಕೊಂಡು ಇತರರಿಗೆ ಮಾರ್ಗದರ್ಶನ ಮಾಡುತ್ತಾ ಸಮಾಜದಲ್ಲಿ ಸದ್ಭಾವನೆ ಸಹಬಾಳ್ವೆ ಶಾಂತಿ ಹಾಗೂ ನೆಮ್ಮದಿಯನ್ನು ತರುವ ಪ್ರಯತ್ನ ಮಾಡಬೇಕಿದೆ.



ಕಲೆ: ಸಂಜೀವ ಕಾಳೆ

ಅವರೆಲ್ಲ ಜನತೆಯ ಸಂತರು

ಹಿಂದಿನ ಪುಟದಿಂದ...

ಧರ್ಮಗಳ ನಡುವಣ ದ್ವೇಷಾಸೂಯೆಗಳನ್ನು ವ್ಯರ್ಥವೆಂದು ಹೇಳುವ ಎಚ್ಚರ ಕೊಟ್ಟಿತು. ದೀಕ್ಷೆ, ಸಾಧನೆ, ಜ್ಞಾನಗಳ ಅಧಿಕಾರವು ಎಲ್ಲ ಮನುಷ್ಯರಿಗೂ ಇದೆಯೆಂದು ಘೋಷಿಸಿದ ಕೂಡಲೇ ಮೊದಲು ನಿರಾಕರಣೆಗೊಳ್ಳುವುದು ಜಾತಿ, ವರ್ಗ ಹಾಗೂ ಧರ್ಮದ ತರತಮಗಳು. ಎಂತಲೇ ಈ ಜನತೆಯ ಸಂತರಿಗೆ ಎಲ್ಲ ಜಾತಿ ಮತ ವರ್ಗಗಳಿಂದ ಬಂದ ಶಿಷ್ಯರಿದ್ದಾರೆ. ಈ ಒಳಗೊಳ್ಳುವ ತತ್ವದ ಇನ್ನೊಂದು ಮುಖವೇ ನಿರ್ದಿಷ್ಟ ಜಾತಿಯವರು ಮಾತ್ರ ಜ್ಞಾನದ ಮೇಲೆ ಹಕ್ಕು ಸ್ಥಾಪನೆ ಮಾಡುವುದನ್ನು ಒಪ್ಪದಿರುವುದು. ಸಿದ್ಧಾರೂಢರು ಉಪನಿಷತ್ತುಗಳ ವ್ಯಾಖ್ಯಾನಕ್ಕೆ ಎಲ್ಲ ಜಾತಿಯವರಿಗೂ ಅಧಿಕಾರವುಂಟು ಎಂದು ಪ್ರತಿಪಾದಿಸುವ ಪ್ರಸಂಗಗಳನ್ನು ಗಮನಿಸಬೇಕು. ಜಾತಿಮತಗಳಿಂದ ಜನರನ್ನೂ ಅರಿವನ್ನೂ ಒಟ್ಟಿಗೆ ಬಿಡುಗಡೆಗೊಳಿಸುವ ಉಪಕ್ರಮವಿದು. ಈ ಹಿನ್ನೆಲೆಯಲ್ಲಿ ಕೆಲವು ಮಠಗಳು ದಲಿತರನ್ನು ಉತ್ತರಾಧಿಕಾರಿಯಾಗಿ ಪಡೆದುಕೊಂಡಿರುವುದನ್ನು ಇಲ್ಲಿ ಉಲ್ಲೇಖಿಸಬೇಕು.


ಪ್ರಭುತ್ವದ ಜತೆ ಸಂತರು ಇರಿಸಿಕೊಳ್ಳುವ ನಂಟುಗಳು ಯಾವಾಗಲೂ ನಿರ್ಣಾಯಕ. ದೊರೆತನದೊಟ್ಟಿಗೆ ಅದು ತಬ್ಬಲಿಗಳ ಪರವಾಗಿದ್ದಾಗ ಅದರೊಟ್ಟಿಗೆ ನಿಲ್ಲುವುದಕ್ಕೂ, ದಮನಕಾರಿಯಾಗಿದ್ದಾಗ ನಿಲ್ಲುವುದಕ್ಕೂ ಫರಕಿದೆ. ಪ್ರಭುತ್ವ ಪ್ರಜಾಪೀಡಕವಾಗಿದ್ದಾಗ ರಾಜಗುರು ಆಗುವುದೆಂದರೆ, ಅದರ ದೌಷ್ಟ್ಯದ ಹೊಣೆಯನ್ನು ತಾನೂ ಹೊತ್ತುಕೊಳ್ಳುವುದೇ ಆಗಿದೆ. ಪ್ರಭುತ್ವದ ಭಾಗವಾಗುವ ಧರ್ಮ ಮತ್ತು ದರ್ಶನಗಳಿಗೆ ಮಲಿನಗೊಳ್ಳುವ ಸಾಧ್ಯತೆ ಹೆಚ್ಚು. ಅನೇಕ ಸಂತರು ಪ್ರಭುತ್ವ ಕೊಡಮಾಡುವ ಪದವಿ ಮತ್ತು ದತ್ತಿದಾನಗಳನ್ನು ನಿರಾಕರಿಸಿದ್ದನ್ನು ಇಲ್ಲಿ ಕಾಣಿಸಬೇಕು.

ಬಾಲಲೀಲಾ ಮಹಾಂತಯೋಗಿಗಳು, ಸಿದ್ಧೇಶ್ವರ ಸ್ವಾಮಿಗಳು ಇಂತಹವರು. ಆದಿಲಶಾಹಿ ಆಳ್ವಿಕೆಯಲ್ಲಿ ಕೆಲವು ಸೂಫಿಗಳು ರಾಜಗುರುಗಳಾಗಿ ಮೆರೆಯುತ್ತಿರುವಾಗ, ಪ್ರಭುತ್ವದ ಸಹವಾಸವೇ ಬೇಡವೆಂದು ಅರಮನೆಯಿಂದ ದೂರ ಉಳಿದವರಲ್ಲಿ ಅಮೀನುದ್ದೀನ್ ಚಿಸ್ತಿ ಒಬ್ಬರು. ಬಹಮನಿಗಳ ಕಾಲದಲ್ಲಿ ಜ್ಯಾನುದ್ದೀನ್ ಚಿಸ್ತಿ, ರಾಜ್ಯದಲ್ಲಿ ಮದ್ಯಪಾನ ನಿಷೇಧಿಸುವವರೆಗೆ ಆಸ್ಥಾನಕ್ಕೆ ಬರುವುದಿಲ್ಲ ಎಂದು ಸುಲ್ತಾನನ ಆಹ್ವಾನವನ್ನು ತಿರಸ್ಕರಿಸುವುದುಂಟು. ಜಿಡ್ಡು ಕೃಷ್ಣಮೂರ್ತಿಯವರು ಕೂಡ ತಮ್ಮ ನಿಷ್ಠುರವಾದ ತಾತ್ವಿಕ ಭಿನ್ನಮತಗಳನ್ನು ಪ್ರಧಾನಿ ನೆಹರೂ ಅವರೊಂದಿಗೆ ಹಂಚಿಕೊಳ್ಳುತ್ತಿದ್ದರು.

ಜನತೆಯ ಸಂತರು, ತಮ್ಮನ್ನು ವೈಯಕ್ತಿಕ ವಿಮೋಚನೆಯ ಧ್ಯಾನ ಸಾಧನೆಗಳಿಗೆ ಸೀಮಿತ ಮಾಡಿಕೊಂಡವರಲ್ಲ. ಜರೂರಿ ಬಿದ್ದಾಗ ಸಾರ್ವಜನಿಕ ಆಂದೋಲನಗಳಲ್ಲೂ ಧುಮುಕಿದವರು. ಬ್ರಿಟಿಷರ ವಿರುದ್ಧದ ಹೋರಾಟದಲ್ಲಿ ಸೂಫಿಗಳನ್ನು ಒಳಗೊಂಡಂತೆ ಭಾರತದ ಅನೇಕ ಸಂತರು ಭಾಗವಹಿಸಿದರು. ಕರ್ನಾಟಕದ ಏಕೀಕರಣ, ಧಾರ್ಮಿಕ ಸಾಮರಸ್ಯದ ಹೋರಾಟ, ಭಾಷಾ ಚಳವಳಿಗಳಲ್ಲಿ ಕೂಡ, ಅನೇಕ ಗುರುಮಠಗಳು ಪಾಲುಗೊಂಡವು. ಗಾಂಧಿಯವರಿಂದ ಗಾಢವಾಗಿ ಪ್ರಭಾವಿತರಾಗಿದ್ದ ಇಂಚಗೇರಿ ಪರಂಪರೆಯ ಮುರಗೋಡ ಮಹದೇವಪ್ಪನವರು ಎಷ್ಟೋ ವರ್ಷ ಸೆರೆವಾಸ ಅನುಭವಿಸಿದರು. ದಲಿತರಿಗೆ ಭೂಮಿ ದೊರಕಿಸಲು ಭೂಮಾಲೀಕರ ಎದುರು ನಿಂತರು. ನಮ್ಮ ತಲೆಮಾರು ಕಂಡಂತೆ, ಗದುಗಿನ ತೋಂಟದಾರ್ಯರು ಕನ್ನಡಪರ, ಕೋಮುಸಾಮರಸ್ಯ ಹಾಗೂ ಪೋಸ್ಕೊ ವಿರೋಧಿ ಚಳವಳಿಗಳಲ್ಲಿ ಭಾಗವಹಿಸಿದರು. ಪ್ರಜಾಪ್ರಭುತ್ವವು ಕಾಲಕಾಲಕ್ಕೆ ನಡೆಯುವ ಚುನಾವಣೆಗಳಿಂದಲ್ಲ, ಪ್ರಜೆಗಳ ಸಾತ್ವಿಕ ಪ್ರತಿರೋಧದಿಂದ ರೂಪುಗೊಳ್ಳುತ್ತದೆ. ಜನರು ಮಾಡುವ ನ್ಯಾಯಬದ್ಧ ಹೋರಾಟಗಳಿಗೆ ಆಧ್ಯಾತ್ಮಿಕ ಗುರುಗಳು-ಧಾರ್ಮಿಕ ನಾಯಕರು, ತಮ್ಮ ದನಿಗಳನ್ನು ಜೋಡಿಸಿರುವರು.

ಭಾರತದ ವಿಶಿಷ್ಟತೆ ಇರುವುದೇ ಹಲವು ವಿಚಾರಧಾರೆ ಧರ್ಮ ಭಾಷೆ ಹಾಗೂ ಸಂಸ್ಕೃತಿಗಳನ್ನು ಇಟ್ಟುಕೊಂಡು ಬದುಕುತ್ತಿರುವುದರಲ್ಲಿ. ಈ ವೈವಿಧ್ಯವೇ ವಿವೇಕದ ನಿಭಾವಣೆಯಿಲ್ಲದೆ ಆತ್ಮಘಾತುಕ ಘರ್ಷಣೆಗಳಿಗೂ ಕಾರಣವಾಗುತ್ತ ಬಂದಿದೆ. ಇಂತಹ ತಿಕ್ಕಾಟಗಳು ಏರ್ಪಟ್ಟಾಗ 'ಪರವಿಚಾರಮುಮಂ ಧರ್ಮಮುಮಂ' ಸಹಿಸುವ ನೀತಿ ಅನುಸರಿಸಬೇಕೆಂದು 'ಕವಿರಾಜಮಾರ್ಗ'ವು ಶತಮಾನಗಳ ಹಿಂದೆಯೇ ಷರಾ ಬರೆದಿದೆ. ವಿಭಿನ್ನ ಧರ್ಮ ಮತ್ತು ದಾರ್ಶನಿಕ ಧಾರೆಗಳು ತಮ್ಮ ಭಿನ್ನಮತಗಳ ಜತೆ ಪರಸ್ಪರ ಸಂವಾದಿಸುವ ಮತ್ತು ಕಲಿವ ಗುಣ ಮಹತ್ವದ್ದು. ಈ ಗುಣವು ಮೂಲಭೂತವಾದದ ಸೋಂಕಿನ ಮತ್ತು ರಾಜಕೀಯಕರಣಗೊಂಡ ಸಾಂಸ್ಥಿಕ ಧರ್ಮಗಳಲ್ಲಿ ಕಡಿಮೆ. ಈ ಹಿನ್ನೆಲೆಯಲ್ಲಿ ವಿಭಿನ್ನ ದಾರ್ಶನಿಕ ಹಿನ್ನೆಲೆಯಿಂದ ಬಂದ ಸಿದ್ಧಾರೂಢರೂ, ಶಿಶುನಾಳರೂ ಗರಗದ ಮಡಿವಾಳಪ್ಪನವರೂ ನವಲಗುಂದದ ನಾಗಲಿಂಗಪ್ಪನವರೂ ಒಟ್ಟಿಗೆ ಕೂತಿರುವ ಜನಪ್ರಿಯ ಚಿತ್ರಪಟವು ಒಂದು ಪ್ರತೀಕದಂತೆ ತೋರುತ್ತದೆ. ಸೂಫಿಗಳು ಹಾಗೂ ರಮಣ ಮಹರ್ಷಿಗಳು 'ಅನ್ಯವೆಂಬುದು ವಾಸ್ತವದಲ್ಲಿ ಇಲ್ಲ, ಇದ್ದರೆ ಅದು ನಮ್ಮ ಸೃಷ್ಟಿ' ಎನ್ನುತ್ತಿದ್ದರು. ಇದೇ ತತ್ವವು 'ತನ್ನಂತೆ ಸರ್ವಜೀವರ ಮನ್ನಿಸಿ ಮೂಕಾದ ಬಳಿಕ ಇನ್ನೇನಿನ್ನೇನೂ' ಎಂಬ ಕಡಕೋಳದ ಮಡಿವಾಳಪ್ಪನವರ ಹೇಳಿಕೆಯು ಪ್ರತಿಫಲಿಸುತ್ತದೆ. ಆಧ್ಯಾತ್ಮಿಕ ಸಾಧನೆಯಲ್ಲಿ ವಿಶಿಷ್ಟ ಅರ್ಥವುಳ್ಳ ಈ ಹೇಳಿಕೆಗೆ, ಭಾರತದಲ್ಲಿ ಧರ್ಮ ಜಾತಿ ಭಾಷೆಯ ಹೆಸರಲ್ಲಿ ಅನ್ಯವನ್ನು ಸೃಷ್ಟಿಸಿಕೊಳ್ಳುವುದು ತಪ್ಪೆಂಬ ಸಾಮಾಜಿಕ ದನಿಯೂ ಇದೆ. ಸಾಂಪ್ರದಾಯಿಕ ಮತಧರ್ಮಗಳ ಸಮಸ್ಯೆಯೆಂದರೆ, ಅನ್ಯವನ್ನು ವ್ಯಾಖ್ಯಾನಿಸುವ ಮೂಲಕವೇ ತಮ್ಮ ಅಸ್ಮಿತೆಯನ್ನು ಕಟ್ಟಿಕೊಳ್ಳುವುದು. ಈ ನತದೃಷ್ಟ ವಿಧಾನವು ಜನರನ್ನು ವಿಂಗಡಿಸುವ ದೂರೀಕರಿಸುವ ಮತ್ತು ದ್ವೇಷಿಸುವ ಮನೋಧರ್ಮಕ್ಕೆ ಪೀಠಿಕೆ ಹಾಕುತ್ತದೆ. ಒಂದು ವ್ಯವಸ್ಥಿತ ಸಿದ್ಧಾಂತವಾಗಿ ರಾಜಕಾರಣವನ್ನು ಪ್ರವೇಶಿಸುತ್ತದೆ. ಇದರ ಫಲವಾಗಿ ಸಮಾಜಗಳು ರಣಭೂಮಿಗಳಾಗುತ್ತವೆ. ದೇಶ ಹಿಂದುಳಿಯುತ್ತದೆ.

ಚರಿತ್ರೆಯಲ್ಲಿ ಅರಿವು, ಪ್ರೀತಿ, ಮೈತ್ರಿ, ಆಹಾರ, ನೀರು, ಸೂರು, ಸಂಪತ್ತುಗಳನ್ನು ಎಲ್ಲರ ಜತೆ ಹಂಚಿಕೊಂಡು ಬದುಕುವ ತತ್ವವನ್ನು ಸಮಾಜದಲ್ಲಿ ನೆಲೆಗೊಳಿಸುವ ಕೆಲಸವನ್ನು ಕೇವಲ ಜನತೆಯ ಗುರುಪರಂಪರೆಗಳು ಮಾಡಲಿಲ್ಲ. ರಾಜಕಾರಣ, ಚಳವಳಿ, ಸಮಾಜಸುಧಾರಣೆ ಹಾಗೂ ಕಲೆಯ ಕ್ಷೇತ್ರಗಳಲ್ಲಿ ಮೂಡಿದ ಇತರೆ ಧೀಮಂತರೂ ಕೈಗೊಂಡರು. ಪ್ರಭುತ್ವಕ್ಕೆ ನಿಷ್ಠುರ ಸತ್ಯಗಳನ್ನು ಹೇಳಬಲ್ಲವರಾಗಿದ್ದ ಗಾಂಧಿ ಮೂಲತಃ ರಾಜಕೀಯ ಕಾರ್ಯಕರ್ತರಾಗಿದ್ದರು. ಸಮಾಜಕ್ಕೆ ಉರಿಯ ನಾಲಗೆಯಿಂದ ಕಹಿಸತ್ಯ ಹೇಳಬಲ್ಲವರಾಗಿದ್ದ ಅಂಬೇಡ್ಕರ್, ಚಳವಳಿಗಾರ ಮತ್ತು ಪ್ರಖರ ವಿದ್ವಾಂಸ ಆಗಿದ್ದರು. ಇಂಗ್ಲೆಂಡಿನ ಪದವೀಧರರೂ ವಕೀಲರೂ ಆಗಿದ್ದ ಗಾಂಧಿ, ತಮ್ಮ ಜೀವಿತ ಕಾಲದಲ್ಲಿ 'ಸಬರಮತಿಯ ಸಂತ'ರಾಗಿ ರೂಪಾಂತರಗೊಂಡರು. ಅಮೆರಿಕ-ಇಂಗ್ಲೆಂಡುಗಳಲ್ಲಿ ಅಭ್ಯಾಸ ಮಾಡಿದ್ದ ಅಂಬೇಡ್ಕರ್, ಧಮ್ಮದೀಕ್ಷೆ ಪಡೆದ ಬಳಿಕ ಸ್ವತಃ ಭಿಕ್ಷುವಾದರು. ಇವರಂತೆಯೇ, ದಲಿತರ ಏಳಿಗೆಗಾಗಿ ತನ್ನ ಜಾತ್ಯಸ್ಥರಿಂದ ಬಹಿಷ್ಕಾರಕ್ಕೆ ಒಳಗಾದ ಕುದ್ಮುಲ್ ರಂಗರಾಯರು; ಅಪಮಾನಿತ ಸಮುದಾಯವನ್ನು ಆಧ್ಯಾತ್ಮಿಕ ಮತ್ತು ಸಮಾಜಸುಧಾರಣೆಯ ಪಥದಲ್ಲಿ ಕರೆದುಕೊಂಡು ಹೋದ ನಾರಾಯಣ ಗುರುಗಳು ನಮ್ಮ ಕಾಲದ ಜನತೆಯ ಸಂತರು.



ಜನತೆಯ ಸಂತರ ಲಕ್ಷಣವೆಂದರೆ, ಸಮಾಜವು ಕಷ್ಟದಲ್ಲಿ ಗೊಂದಲದಲ್ಲಿ ಸಿಲುಕಿಕೊಂಡಾಗ ತಳಮಳಿಸುವುದು. ಜನರನ್ನು ಅರ್ಥಪೂರ್ಣ ಪ್ರತಿರೋಧಕ್ಕೆ ಪ್ರೇರಿಸುವುದು. ಶಾಸಕರಾಗಿದ್ದ ಶಾಂತವೇರಿ ಗೋಪಾಲಗೌಡರು ಸದನದಲ್ಲಿ ಮಾಡಿರುವ ಭಾಷಣಗಳು, ರಾಜಕೀಯ ಪ್ರಜ್ಞೆಯ ಸಂತನ ವಾಣಿಗಳಂತೆ ತೋರುತ್ತವೆ. ಅವರನ್ನು ಕುರಿತ ಅಡಿಗರ ಕವನದ ಹೆಸರು 'ಶಾಂತವೇರಿಯ ಅಶಾಂತಸಂತ' ಎಂದಿರುವುದು ಮಾರ್ಮಿಕ. ಸಾರ್ವಜನಿಕ ಪಾರ್ಕುಗಳನ್ನು ಸೈಟುಗಳಾಗಿ ಮಾಡಬೇಕೆಂದು ಪ್ರಸ್ತಾವವನ್ನು ತಂದ ತಮ್ಮ ಸಹೋದ್ಯೋಗಿಗೆ, ತಾಳ್ಮೆ ಕಳೆದುಕೊಂಡ ದೇವರಾಜ ಅರಸರು ಕೋಲು ತೆಗೆದುಕೊಂಡು ಹೊಡೆಯುವ ಸನ್ನಿವೇಶವೊಂದಿದೆ. ಅದು ನನಗೆ ರಾಜಕಾರಣಿಯೊಳಗಿನ ಸಂತನ ಸಾತ್ವಿಕ ಸಿಟ್ಟಿನ ರೂಪಕವಾಗಿ ಕಂಡಿದೆ.

ಯಾವುದೇ ದುರಿತ ಕಾಲದಲ್ಲಿ, ಪ್ರಜ್ಞಾವಂತ ನಾಗರಿಕ ಸಮಾಜವು ತನ್ನನ್ನು ಉದ್ಧರಿಸುವ ಸಂತರ, ನಾಯಕರ ತತ್ವ ಮತ್ತು ನಾಯಕತ್ವಗಳಿಗೆ ಕಾಯುತ್ತ ಕೂರುವುದಿಲ್ಲ. ಅದು ತನಗೆ ಬೇಕಾದ ನಾಯಕತ್ವ ಮತ್ತು ಬಿಡುಗಡೆಯ ತತ್ವಗಳನ್ನು ಸ್ವತಃ ಹುಟ್ಟಿಸಿಕೊಳ್ಳುವ ಪ್ರಬುದ್ಧತೆಯನ್ನೂ ಪ್ರಕಟಿಸುತ್ತಿರುತ್ತದೆ. ಇದು ಸಮಾಜವೇ ಸಂತತನ ಮತ್ತು ನಾಯಕತ್ವವನ್ನು ಪಡೆಯುವ ಪ್ರಕ್ರಿಯೆ. ಇದುವೇ ನಾವು ಕಟ್ಟಿಕೊಂಡಿರುವ ಧರ್ಮದರ್ಶನ, ಪ್ರಜಾಪ್ರಭುತ್ವ, ಕುಟುಂಬ ಚಳವಳಿಗಳಿಗೆ ಇತ್ಯಾದಿ ಸಂಸ್ಥೆಗಳಿಗೆ ಮನುಷ್ಯತ್ವವನ್ನು ಊಡಬಲ್ಲದು. ❖

ಇವರೆಲ್ಲ ಹೊಣೆ ಮರೆತವರು

ಹಿಂದಿನ ಪುಟದಿಂದ...

ಇದರ ಬೆಳವಣಿಗೆಯೇ ಇಂದಿನ ಮಠದ ಸ್ವಾಮಿಗಳು ಮೆರೆಯುತ್ತಿರುವ ಬೀದಿ ರಾಜಕಾರಣವಾಗಿದೆ. ಧರ್ಮದ ಜಗದ್ಗುರುಗಳು ಜಾತಿಯ ಜಗದ್ಗುರುಗಳಾಗಿ ಧರ್ಮಬೋಧಕ ಸ್ವಾಮಿಗಳು ಜಾತಿ ಪ್ರೇರಕ ಸ್ವಾಮಿಗಳಾಗಿ ಕುಬ್ಜರಾಗುತ್ತಿದ್ದಾರೆ. ಜಗತ್ತಿಗೆ ಬುದ್ಧಿ ಹೇಳಬೇಕಾದವರು ಮಾತಿನ ಮೈಲಿಗೆಯಲ್ಲಿ ಮಾತು ಸೋತವರಾಗಿದ್ದಾರೆ. ಬೀದಿಗಿಳಿದು ಬೆತ್ತಲಾಗಿದ್ದಾರೆ.

ನಾಲ್ಕಾರು ದಶಕಗಳ ಹಿಂದೆ ಈ ಮಠಗಳು ಕೇವಲ ಪ್ರಬಲ ಜಾತಿಗಳಲ್ಲಿ ಬೇರೂರಿ ಬೆಳೆದ ಪೀಠಗಳಾಗಿದ್ದವು. ಜನಾಂಗದ ಒಗ್ಗಟ್ಟಿಗೆ ಹಾಗೂ ರಾಜಕೀಯದ ಬಲಸಂವರ್ಧನೆಗೆ ಪರೋಕ್ಷವಾಗಿ ಕಾರಣವಾದ ಶಕ್ತಿ ಕೇಂದ್ರಗಳಾಗಿದ್ದವು. ಒಬ್ಬ ಸ್ವಾಮಿ, ಎಲ್ಲ ಜಾತಿಗಳಿಗೂ ಜಗದ್ಗುರುಗಳ ಅಗತ್ಯವನ್ನು ಮನಗಂಡವರಂತೆ ಜಾತಿಗೊಬ್ಬೊಬ್ಬರಿಗೆ ದೀಕ್ಷೆ ಕೊಟ್ಟು ಜಾತಿ ಜಗದ್ಗುರುಗಳ ನಿರ್ಮಾಣಕಾರರಾದರು. ಇದರಿಂದ ಜಾತಿಗೊಂದು ಮಠ ಸೃಷ್ಟಿಯಾಯಿತು.

ಶಿಕ್ಷಣ, ಸಂಘಟನೆ, ಹೋರಾಟ ಎಂಬ ಅಂಬೇಡ್ಕರ್ ಅವರ ಚಿಂತನೆಗೆ ವಿರುದ್ಧವಾದ ನಡೆ ಇದು. ಶೋಷಣೆಗೆ ಒಳಗಾಗಿದ್ದ ಸಮುದಾಯಗಳು ಅಂಬೇಡ್ಕರ್ ಅವರ ಚಿಂತನೆಯ ಹಾದಿಯಲ್ಲಿ ಸಂಘಟಿತವಾಗಿ ಸಾಗಿದ್ದರೆ ಈ ದೇಶದ ಪ್ರಜಾಪ್ರಭುತ್ವನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ದ ಯಶಸ್ಸು ಈ ಸಮುದಾಯಗಳಿಗೆ ಸೇರುತ್ತಿತ್ತು. ಅದಕ್ಕೆ ವಿರುದ್ಧವಾಗಿ ಈ ಮಠ ಸಂಸ್ಕೃತಿಯ ಹಾದಿ ತುಳಿದು ಇಡೀ ಸಮುದಾಯಗಳನ್ನು ಮತೀಯ ಮೌಢ್ಯ, ಕಂದಾಚಾರದ ಕೂಪಕ್ಕೆ, ಸಂಸ್ಕೃತೀಕರಣದ ಸಾಂಸ್ಕೃತಿಕ ಜೀತಕ್ಕೆ ದೂಡಿದಂತಾಯಿತು. ದೇಶದ ಚರಿತ್ರೆಯ ಗಂಧಗಾಳಿ ಗೊತ್ತಿಲ್ಲದ ಹಲವರು ಪೀಠಾರೋಹಣ ಮಾಡಿದ್ದೇ ತಮ್ಮನ್ನು ದೈವಾಂಶ ಸಂಭೂತರೆಂದು ಭ್ರಮಿಸಿಕೊಂಡು ಜಾತಿ ಜಗದ್ಗುರುಗಳಾಗಿ ಆದೇಶ ಹೊರಡಿಸತೊಡಗಿದರು. ಇವರನ್ನು ದಾಳವಾಗಿ ಬಳಸಿಕೊಂಡು ಪಕ್ಷ ರಾಜಕಾರಣದ ಸೂತ್ರಧಾರರು ಸಾಂಸ್ಕೃತಿಕ ರಾಜಕಾರಣದ ದಾಳಗಳನ್ನು ಉರುಳಿಸತೊಡಗಿದರು. ಇದರ ಪರಿಣಾಮ ಇಂದು ಶಿಕ್ಷಣ, ಸಂಘಟನೆ ಹೋರಾಟದ ಹಾದಿ ತುಳಿಯಬೇಕಾಗಿದ್ದ ಅಲ್ಪಸಂಖ್ಯಾತ, ದಲಿತ, ಶೋಷಿತ, ವಂಚಿತ ಸಮುದಾಯಗಳು ತಮ್ಮತಮ್ಮಲ್ಲೇ ಕಿತ್ತಾಡಿಕೊಂಡು ಹರಿದು ಹಂಚಿಹೋಗಿವೆ.

ದೇವರಾಜ ಅರಸು ಅವರ ಕಾಲದಲ್ಲಿ ದನಿ ಇಲ್ಲದವರಿಗೆ ದನಿ ಬಂತು. ಅದರಿಂದಾಗಿ ಎಷ್ಟೋ ಅನಾಮಿಕ ಸಮುದಾಯ ಮೂಲದವರು ಶಿಕ್ಷಣಕ್ಕೆ ತೆರೆದುಕೊಂಡರು. ಸರ್ಕಾರದ ಉದ್ಯೋಗಾವಕಾಶಗಳ ಅನುಭೋಗಿಗಳಾದರು.

ಆದರೆ, ಇಂದು ಉಳ್ಳವರಿಗೆ ಉನ್ನತ ಶಿಕ್ಷಣ ಎಂಬಂತಾಗಿದೆ. ಶಿಕ್ಷಣದ ಖಾಸಗೀಕರಣದಿಂದ ಬಡವರು ಶಿಕ್ಷಣ ವಂಚಿತರಾಗುತ್ತಿದ್ದಾರೆ. ಸರ್ಕಾರದ ಉದ್ಯೋಗವಕಾಶಗಳು ಹೇಳಹೆಸರಿಲ್ಲದಂತೆ ಕರಗಿ ಹೋಗುತ್ತಿವೆ. ಸರ್ಕಾರದ ಬಹುತೇಕ ಕ್ಷೇತ್ರಗಳು ಖಾಸಗಿಯವರಿಗೆ ಮಾರಾಟವಾಗುತ್ತಿವೆ. ಇದರ ಪರಿಣಾಮ ಮೇಲ್ಜಾತಿಗಳಿಗೆ ಉದ್ಯೋಗ, ಉದ್ಯಮಪತಿಗಳಿಗೆ ದೇಶದ ಸಂಪತ್ತು ಎಂಬಂತಹ ದುರಂತದ ಕಡೆಗೆ ಪ್ರಜಾಪ್ರಭುತ್ವ ಸಾಗುತ್ತಿದೆ. ಇಂಥ ರಾಜಕೀಯ ನಡೆಯ ಸೂತ್ರಧಾರಿಗಳಿಗೆ ಕೈಗೊಂಬೆಗಳಾದಂತೆ ಕೆಲವು ಜಾತಿಯ ಸ್ವಾಮಿಗಳು ತಮ್ಮ ತಮ್ಮ ಸಮುದಾಯಗಳನ್ನು ರಾಜಕೀಯಕ್ಕೆ ದಾಳವಾಗಿಸುತ್ತಿದ್ದಾರೆ. ಮೀಸಲಾತಿ ಎಂಬುದರ ಬಗೆಗೆ ಸಾಂವಿಧಾನಿಕ ತಿಳಿವಳಿಕೆ ಇಲ್ಲದವರಾಗಿ ವರ್ತಿಸುತ್ತಿರುವ ಇವರ ನಡೆ ಅಪ್ರಜಾಸತ್ತಾತ್ಮಕವಾಗಿದೆ. ಕೊಡಲಿಯ ಕಾವು ಮರಕ್ಕೆ ಮೃತ್ಯು ಎಂಬಂತೆ ಇದು ತಳಸಮುದಾಯಗಳಿಗೆ ಮೃತ್ಯುಪ್ರಾಯವಾಗಿದೆ.

ಆಮರಣಾಂತ ಉಪವಾಸದ ಬೆದರಿಕೆ ಒಡ್ಡುವ, ಕಾಲ್ನಡಿಗೆ ಜಾಥಾ ಮಾಡಿ ಜಾತಿ ಸಮಾವೇಶಗಳ ಬಲ ಪ್ರದರ್ಶನ ಮಾಡುವ ಜಾತಿ ದುರಂಧರ ಪೀಠಾಧಿವೀರ ಸ್ವಾಮಿಗಳು ಹಲವರಾಗಿದ್ದಾರೆ. ಇದು ನೈತಿಕ ಬಲ ಕಳೆದುಕೊಳ್ಳುವ ನಡೆಯಲ್ಲದೆ ಬೇರೇನೂ ಅಲ್ಲ. ಈ ಮಧ್ಯೆ ಒಂದಿನಿತೂ ದನಿಯೆತ್ತದೆ ಶೇ 10ರ ಮೀಸಲಾತಿಯನ್ನು ಕೇಂದ್ರದಲ್ಲಿ ಘೋಷಿಸಿಕೊಂಡವರ ಬಗ್ಗೆ ಇವರಿಗೆ ತಿಳಿವಳಿಕೆಯೇ ಇಲ್ಲವಾಗಿದೆ.

ವಿಚಿತ್ರವೆಂದರೆ ಸರ್ಕಾರಿ ಸ್ವಾಮ್ಯದ ಮುಜರಾಯಿ ದೇವಸ್ಥಾನಗಳನ್ನು ಮಠಕ್ಕೆ ಖಾಸಗೀಕರಣ ಮಾಡಿಸಿಕೊಳ್ಳುವ ರಾಜಕೀಯ ಪ್ರವೀಣ ಸ್ವಾಮಿಗಳು ತಮ್ಮ ಸುತ್ತ ಮೆತ್ತಿಕೊಳ್ಳುವ ಗೈದಪರಾಧಂಗಳ ಆರೋಪಗಳಿಂದ ಮುಕ್ತರಾಗುವ ಪ್ರಭಾವಶಾಲಿಗಳಾಗಿದ್ದಾರೆ. ಇಂಥವರ ಕೇಸುಗಳು ನ್ಯಾಯಪೀಠದ ಮುಂದೆ ಬಂದಾಗ ಜವಾಬ್ದಾರಿಯಿಂದ ಹಿಂದೆ ಸರಿದ ನ್ಯಾಯಮೂರ್ತಿಗಳ ನಡೆ ಸಾರ್ವಜನಿಕರ ಚರ್ಚೆಗೆ ಒಳಗಾಗಿದ್ದು ಈಗ ಇತಿಹಾಸ. ಇನ್ನು ಕೆಲವು ಸ್ವಾಮಿಗಳು ಮಹಿಳೆಯ ವಾಟ್ಸ್ಆ್ಯಪ್‌ಗೆ ಅಶ್ಲೀಲ ಸಂದೇಶಗಳನ್ನು ಕಳುಹಿಸಿದ್ದು, ಅದು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದನ್ನೂ ಜನ ಮರೆತಿಲ್ಲ.

ಹಿಂದೆ ಉತ್ತರ ಕರ್ನಾಟಕ ಭಾಗದ ಒಬ್ಬ ಶ್ರೀಗಳು ಮಠದ ಮೂಲಪೀಠವನ್ನು ತಮಗೇ ಕೊಡಬೇಕೆಂದು ಹಟ ಹಿಡಿದು, ಕೊರಳಿಗೆ ಪಾದುಕೆಯ ಹಾರ ಹಾಕಿಕೊಂಡು ಧರಣಿ ಕುಳಿತಿದ್ದರು. ಕಡೆಗೆ ಸಂಬಂಧಿಸಿದ ಜಾತಿಯ ಪ್ರಮುಖರು ಹೋಗಿ ಹಾರ ತೆಗೆಸಿದ್ದು ಪ್ರಹಸನದ ಮುಂದುವರಿದ ಭಾಗ.

ಕರಾವಳಿ ಭಾಗದ ಶ್ರೀಗಳೊಬ್ಬರು ತಮ್ಮ ಸುಸಂಸ್ಕೃತ ಸಮಾಜ ಬಿಟ್ಟು ಬೇರೆ ಜಾತಿ ಧರ್ಮಗಳ ಯುವಕರನ್ನು ತಮ್ಮ ಜಾತಿಯ ಹೆಣ್ಣುಗಳು ಮದುವೆಯಾಗುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸುತ್ತ ಅಂತರ್ಜಾತಿ ವಿವಾಹ ತಡೆಗೆ ಮಾತೃಮಂಡಳಿ ರಚಿಸುವ ಬಗ್ಗೆ ಮಾತನಾಡಿದ್ದಾರೆ. ಇದು ಸಂವಿಧಾನವಿರೋಧಿ ಮಾತು ಅಂತ ಅವರಿಗೆ ಅನ್ನಿಸಲೇ ಇಲ್ಲವೇ? ಸ್ವಾಮೀಜಿಗಳಾದಾಕ್ಷಣಕ್ಕೆ ಜಾತಿಯ ಎಲ್ಲ ಹೆಣ್ಣು-ಗಂಡುಗಳ ಬದುಕಿನ ನಿರ್ಧಾರಕಶಕ್ತಿ ಕೇಂದ್ರಗಳೇ ಇವರು? ಮೊನ್ನೆ ತಾನೆ ಇನ್ನೊಬ್ಬ ಶ್ರೀಗಳು ತಮ್ಮ ಜಾತಿಯ ಪ್ರತಿಯೊಬ್ಬ ಮಹಿಳೆ ಕನಿಷ್ಠ ಐದು ಮಕ್ಕಳನ್ನು ಹೆರಬೇಕು ಎಂದು ಫರ್ಮಾನು ಹೊರಡಿಸಿದ್ದಾರೆ!

ಇಂಥ ವಾತಾವರಣದಿಂದಾಗಿ ಮಠ ಮಾನ್ಯಗಳ ಮೇಲೆ ಇಟ್ಟಿರುವ ನಂಬಿಕೆ ನಶಿಸಿಹೋಗುತ್ತಿರುವುದು ವಾಸ್ತವ. ದೀಕ್ಷೆ ಕೊಟ್ಟ ಗುರುಸ್ವಾಮಿಯ ನಡೆಯನ್ನು ದೀಕ್ಷೆ ಪಡೆದ ಶಿಷ್ಯಸ್ವಾಮಿಯ ವರ್ತನೆಯನ್ನು ಕುರಿತು ಆಗಲೇ ಅಂಬಿಗರ ಚೌಡಯ್ಯ ಶರಣರು ತಮ್ಮದೊಂದು ವಚನದಲ್ಲಿ

ಎರಡು ಗ್ರಾಮಗಳ ನಡುವೆ ಕಡೆದ ಕಲ್ಲು
ಅದ ಕಟ್ಟಿದಾತ ಗುರುವಲ್ಲ, ಕಟ್ಟಿಸಿಕೊಂಡಾತ ಶಿಷ್ಯನಲ್ಲ
ಆದಿಯನರಿಯದ ಗುರುವು, ಭೇದಿಸಲರಿಯದ ಶಿಷ್ಯ
ಇವರಿಬ್ಬರೂ ಉಭಯಭ್ರಷ್ಟರೆಂದಾತನಂಬಿಗರ ಚೌಡಯ್ಯ
ಎಂದಿದ್ದಾರೆ.

ಇತ್ತೀಚೆಗೆ ಮಠಗಳ ವ್ಯವಹಾರಗಳು ಬೀದಿಗೆ ಬಿದ್ದ ಸಂಗತಿಗಳಾಗುತ್ತಿವೆ. ಈ ನಡುವೆ ರಕ್ಷಣೆಗೆ ಧರ್ಮದ ಸ್ವಯಂ ಸೇನೆಗಳನ್ನು ಕಟ್ಟುವ ಸ್ವಾಮಿಗಳು ಹೆಚ್ಚಾಗುತ್ತಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿನ ಪಠ್ಯ ಪುಸ್ತಕಗಳಲ್ಲಿ ಈ ಧರ್ಮ ಇರಲಿ, ಆ ಧರ್ಮ ಬೇಡ ಎಂದು ಮೂಗು ತೂರಿಸುವ ಸ್ವಾಮಿಗಳ ಹಾವಳಿಯೂ ಅಧಿಕವಾಗುತ್ತಿದೆ. ಸಕಲರಿಗೂ ಲೇಸನ್ನೇ ಬಯಸಬೇಕಾಗಿದ್ದ ಮಠಗಳು ಯಾವ ದಾರಿಯಲ್ಲಿ ಸಾಗುತ್ತಿವೆ? ಸಮಾಜ, ರಾಜಕಾರಣವನ್ನು ಯಾವ ದುರಂತದ ಕಡೆಗೆ ಕೊಂಡೊಯ್ಯುತ್ತಿವೆ? ಈ ನಡೆಯ ಶ್ರೀಶ್ರೀ ಶ್ರೀಗಳೆಲ್ಲರೂ ಒಮ್ಮೆ ತಮ್ಮ ಆತ್ಮಸಾಕ್ಷಿಯನ್ನು ಎಚ್ಚರಿಸಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ತುರ್ತು ಅಗತ್ಯವಿದೆ. ಇದರಿಂದ ದೇಶದ ಸಂವಿಧಾನ ಉಳಿಯುತ್ತದೆ. ಪ್ರಜಾಪ್ರಭುತ್ವ ಉಳಿಯುತ್ತದೆ. ಬಹುತ್ವ ಭಾರತ ಬಲಿಷ್ಠ ಭಾರತವಾಗಿ ಪ್ರಗತಿಯ ಪಥದಲ್ಲಿ ನಡೆಯುತ್ತದೆ.

ಉದಯಮುಖದಲ್ಲಿ ಪೂಜಿಸಹೋದರೆ
ಹೃದಯಮುಖದಲ್ಲಿ ಕತ್ತಲೆಯಾಯಿತ್ತು
ಹಾರಿ ಹೋಯಿತ್ತು ಪ್ರಾಣಲಿಂಗ, ಹರಿದು ಬಿದ್ದಿತ್ತು ಸೆಜ್ಜೆ
ಕಟ್ಟುವ ಬಿಡುವ ಸಂಬಂಧಿಗಳ ಕಷ್ಟವ ನೋಡಾ ಗುಹೇಶ್ವರಾ
❖

ಆರ್ಥಿಕ ದಾರ್ಶನಿಕನ ಅರ್ಥವತ್ತಾದ ಬದುಕು

ಪ್ರವೀಣ ಕುಲಕರ್ಣಿ

ಯಾಗಾ ವೇಣುಗೋಪಾಲ್ (ವೈ.ವಿ.) ರೆಡ್ಡಿ – ಭಾರತೀಯ ಅರ್ಥ ಜಗತ್ತಿನಲ್ಲಿ ಬಹುದೊಡ್ಡ ಹೆಸರು. ಕೇಂದ್ರ ಸರ್ಕಾರದ ವಿತ್ತ ಅಧಿಕಾರಿಯಾಗಿ, ಭಾರತೀಯ ರಿಸರ್ವ್ ಬ್ಯಾಂಕಿನ ಉಪ ಗವರ್ನರ್, ಗವರ್ನರ್ ಆಗಿ, 14ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿ ದೇಶದ ಆರ್ಥಿಕ ನೀತಿಗಳ ನಿರೂಪಣೆಯಲ್ಲಿ ಅವರ ಪಾತ್ರ ಬಲು ಹಿರಿದು. ಜನಸಾಮಾನ್ಯರ ಒಳಿತನ್ನೇ ತಮ್ಮ ಧ್ಯೇಯವನ್ನಾಗಿ ಹೊಂದಿ ಕೆಲಸ ಮಾಡಿದವರು ಅವರು.

ದೇಶವನ್ನು 1991ರ ಆರ್ಥಿಕ ಬಿಕ್ಕಟ್ಟಿನಿಂದ ಪಾರು ಮಾಡಿದ ತೆರೆಯ ಹಿಂದಿನ ಸೂತ್ರಧಾರರಲ್ಲಿ ರೆಡ್ಡಿ ಪ್ರಮುಖರು. ಹಾಗೆಯೇ 2008ರಲ್ಲಿ ಜಗತ್ತನ್ನೇ ಕಾಡಿದ ಆರ್ಥಿಕ ಬಿಕ್ಕಟ್ಟು ಭಾರತಕ್ಕೆ ತಟ್ಟದಂತೆ ತಡೆಯುವಲ್ಲಿ ಚಾಣಾಕ್ಷ ತಂತ್ರಗಳನ್ನು ಹೆಣೆದವರು ಕೂಡ ಅವರೇ. ಇಂತಹ ಶ್ರೇಷ್ಠ ಕೇಂದ್ರೀಯ ಬ್ಯಾಂಕರ್, ಅಸಾಮಾನ್ಯ ಆರ್ಥಿಕ ತಜ್ಞನ ಆತ್ಮಕಥೆ 'ಭಿನ್ನ ಅಭಿಪ್ರಾಯ'.

ರೆಡ್ಡಿಯವರು ತೆಲುಗಿನಲ್ಲಿ 'ನಾ ಜ್ಞಾಪಕಾಲು' (ನನ್ನ ನೆನಪುಗಳು) ಎಂದೂ ಇಂಗ್ಲಿಷ್‌ನಲ್ಲಿ 'Advice and Dissent' ಎಂದೂ ತಮ್ಮ ಆತ್ಮಕಥೆಯನ್ನು ಪ್ರಕಟಿಸಿದ್ದಾರೆ. ತೆಲುಗಿನ ಕೃತಿ, ಸಾರ್ವಜನಿಕ ನೀತಿಯಲ್ಲಿ ದೀರ್ಘಕಾಲ ಸಾಗಿದ ಅವರ ಜೀವನದ ಅನುಭವ ಸಾರವನ್ನು ಗ್ರಹಿಸಿದರೆ, ಇಂಗ್ಲಿಷ್ ಕೃತಿ, ಆರ್ಥಿಕ ತಜ್ಞನಾಗಿ ಅವರು ಮಾಡಿದ ಕೆಲಸಗಳ ಕುರಿತು ಹೆಚ್ಚು ಮಾತನಾಡುತ್ತದೆ. ಅವರ ಆತ್ಮಕಥೆಯನ್ನು ಕನ್ನಡದಲ್ಲಿ ನಿರೂಪಿಸುವಾಗ ಎಂ.ಎಸ್. ಶ್ರೀರಾಮ್ ಅವರು ಎರಡೂ ಕೃತಿಗಳ ಅಪರೂಪದ ಎಲ್ಲ ವಿವರಗಳನ್ನೂ ಹೆಕ್ಕಿ ತಂದಿದ್ದಾರೆ. ಹೀಗಾಗಿ ಇದು ಕನ್ನಡದ್ದೇ ಹೊಸ ಕೃತಿಯಾಗಿದೆ.

ಮೂರು ಮುಖ್ಯ ಆಯಾಮಗಳಲ್ಲಿ ಇಲ್ಲಿನ ವಿವರಗಳನ್ನು ನೋಡಬಹುದು. ಅವುಗಳೆಂದರೆ – ಐಎಎಸ್ ಅಧಿಕಾರಿಯಾಗಿ ಆಂಧ್ರ ಪ್ರದೇಶದಲ್ಲಿ ರೆಡ್ಡಿಯವರು ಜನರಿಗಾಗಿ ಮಾಡಿದ ಕೆಲಸ, ವೃತ್ತಿ ಬದುಕು ಶುರುವಾದ ಮೇಲೂ ಅಧ್ಯಯನಕ್ಕೆ ಅವರು ಕೊಟ್ಟ ಮಹತ್ವ ಹಾಗೂ ಆರ್ಥಿಕ ತಜ್ಞನಾಗಿ ಅವರು ದೇಶಕ್ಕೆ ನೀಡಿದ ಕೊಡುಗೆ.

ರಾಯಲಸೀಮೆಗೆ ಸೇರಿದ ಕಡಪ ಜಿಲ್ಲೆಯ ಪಾಟೂರು ಎಂಬ ಪುಟ್ಟ ಗ್ರಾಮದಲ್ಲಿ ಜನಿಸಿದ ಹುಡುಗ, ಜಗತ್ತಿನ ಶ್ರೇಷ್ಠ ಅರ್ಥಶಾಸ್ತ್ರಜ್ಞರಲ್ಲಿ ಒಬ್ಬರಾಗಿ ಬೆಳೆದ ಕಥೆ ಅನನ್ಯವಾದುದು. ಹಿಂದುಳಿದ ಪ್ರದೇಶದ, ಅದರಲ್ಲೂ ಬಡತನದ ಬಿಸಿ ಅನುಭವಿಸಿದವರಿಗೆಲ್ಲ ಪ್ರೇರಣೆ ನೀಡುವಂಥದ್ದು.

ಭಾಷಾವಾರು ರಾಜ್ಯಗಳು ರಚನೆಯಾದ ಹೊಸತರಲ್ಲಿ ಐಎಎಸ್ ಅಧಿಕಾರಿಯಾದ ರೆಡ್ಡಿಯವರು ಆಂಧ್ರದ ಯೋಜನಾ ಆಯೋಗದ ಕಾರ್ಯದರ್ಶಿಯಾಗಿ ಸಿದ್ಧಪಡಿಸಿದ ಯೋಜನೆಗಳು ಜನರ ಕಣ್ಣೀರನ್ನು ಒರೆಸಲು ನೆರವಾದವು. ಅವರು ರೂಪಿಸಿದ ಯೋಜನೆ 'ರಾಯಲಸೀಮೆ ಮಾಡೆಲ್' ಎಂದು ಹೆಸರಾಗಿ, ವಿಶ್ವಬ್ಯಾಂಕ್ ಕೂಡ ಈ ಮಾದರಿಯನ್ನು ಅಧ್ಯಯನ ಮಾಡಿ, ಜಗತ್ತಿನ ಹಲವೆಡೆ ಅನುಷ್ಠಾನಕ್ಕೆ ತರಲು ಶಿಫಾರಸು ಮಾಡಿತು.

ನೆರೆಯನ್ನೂ ಬರವನ್ನೂ ಬಡತನವನ್ನೂ ಹತ್ತಿರದಿಂದ ಕಂಡವರು ಅವರು. ನೆರೆ, ಬರದಿಂದ ನೊಂದವರ ನೋವು ಕಡಿಮೆ ಮಾಡಲು ಈ ಅಧಿಕಾರಿ ಮಾತೃ ಹೃದಯದಿಂದ ಕೆಲಸ ಮಾಡಿದ್ದು ಈಗ ಇತಿಹಾಸ.

ಎನ್.ಟಿ. ರಾಮರಾವ್ ಅವರ ವಿಲಕ್ಷಣ ವ್ಯಕ್ತಿತ್ವದ ಕುರಿತು ಕಥಾನಾಯಕನೊಂದಿಗೆ ಕಾರ್ಯ ನಿರ್ವಹಣೆ ಎಂಬ ಅಧ್ಯಾಯವನ್ನೇ ರೆಡ್ಡಿಯವರು ಬರೆದಿದ್ದಾರೆ. 'ನಾನೊಬ್ಬ ಅದ್ಭುತ ವ್ಯಕ್ತಿಯಲ್ಲವೇ' ಎಂದು ಪದೇ ಪದೇ ಕೇಳುತ್ತಿದ್ದ, ಇಂದಿರಾ ಗಾಂಧಿ ಅವರ ವಿರೋಧ ಕಟ್ಟಿಕೊಂಡಿದ್ದ ಎನ್‌ಟಿಆರ್ ಕಾರ್ಯವೈಖರಿ ಕುರಿತು ಅವರು ಸುದೀರ್ಘವಾಗಿ ಚರ್ಚಿಸಿದ್ದಾರೆ.

ಕೃತಿಯುದ್ದಕ್ಕೂ ಎದ್ದು ಕಾಣುವುದು ರೆಡ್ಡಿಯವರ ಜ್ಞಾನದ ಹಸಿವು. ತಂದೆಯ ಒತ್ತಾಸೆಗೆ ಕಟ್ಟುಬಿದ್ದು ಐಎಎಸ್ ಮಾಡುವ ಅವರು, ಐಎಎಸ್ ಅಧಿಕಾರಿಯಾದ ಮೇಲೂ ಅಧ್ಯಯನಕ್ಕೆ ಮರಳಿ ತಮ್ಮ ಪ್ರೀತಿಯ ಅರ್ಥಶಾಸ್ತ್ರದ ವಿಷಯದಲ್ಲಿ ಪಿಎಚ್.ಡಿ ಮಾಡುತ್ತಾರೆ. ನೆದರ್ಲೆಂಡ್ಸ್‌ನ ಇನ್‌ಸ್ಟಿಟ್ಯೂಟ್ ಆಫ್



ಭಿನ್ನ ಅಭಿಪ್ರಾಯ
ಲೇ: ವೈ.ವಿ. ರೆಡ್ಡಿ
ಪ್ರ: ಕನ್ನಡ ನಿರೂಪಣೆ: ಎಂ.ಎಸ್. ಶ್ರೀರಾಮ್
ಪ್ರ: ಅಕ್ಷರ ಪ್ರಕಾಶನ
ಸಂ: 08183-295645
ಪು: 288 ₹270

ಸೋಶಿಯಲ್ ಸ್ಟಡೀಸ್‌ನಲ್ಲಿ ಉನ್ನತ ಅಧ್ಯಯನಕ್ಕೂ ತೆರಳುತ್ತಾರೆ. ಅಲ್ಲಿ ಅವರಿಗೆ ಗುರುಗಳಾಗಿ ಸಿಕ್ಕವರು ಅರ್ಥಶಾಸ್ತ್ರದಲ್ಲಿ ಮೊದಲ ನೊಬೆಲ್ ಬಹುಮಾನ ಪಡೆದ ಜಾನ್ ಟಿನ್‌ಬರ್ಗನ್.

ವೃತ್ತಿ ಮಧ್ಯೆ ಬಿಡುವು ಪಡೆದು ಉಸ್ಮಾನಿಯಾ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕರಾಗಿ ಅವರು ಕೆಲಸ ಮಾಡುತ್ತಾರೆ. ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್ ಆ್ಯಂಡ್ ಪೊಲಿಟಿಕಲ್ ಸೈನ್ಸ್‌ನಲ್ಲಿ ಓದಬೇಕೆಂಬ ಆಸೆಯನ್ನೂ ಅವರು ಈಡೇರಿಸಿಕೊಳ್ಳುತ್ತಾರೆ. ಆರ್‌ಬಿಐ ಗವರ್ನರ್ ಆಗಿದ್ದಾಗ ಅಧ್ಯಯನದ ಸಣ್ಣ ಅವಕಾಶವನ್ನೂ ಅವರು ಬಿಟ್ಟುಕೊಡುವುದಿಲ್ಲ. ಜತೆಗಿದ್ದವರನ್ನೂ ಅವರು ಅಧ್ಯಯನದಲ್ಲಿ ತೊಡಗುವಂತೆ ಹುರಿದುಂಬಿಸುತ್ತಾರೆ. ಗವರ್ನರ್ ಹುದ್ದೆಯಿಂದ ಅವರು ನಿರ್ಗಮಿಸುವಾಗ ಡಾಕ್ಟರೇಟ್ ಪಡೆದ 64 ಹಾಗೂ ಎಂಬಿಎ ಪದವಿ ಪೂರೈಸಿದ 171 ಸಿಬ್ಬಂದಿ ಆರ್‌ಬಿಐನಲ್ಲಿದ್ದರು!

ತುರ್ತು ಪರಿಸ್ಥಿತಿ ಸಮಯದಲ್ಲಿ ಹೈದರಾಬಾದ್ ಜಿಲ್ಲಾಧಿಕಾರಿಯಾಗಿದ್ದ ರೆಡ್ಡಿಯವರು, ಯಾವುದೇ ಸಾಂವಿಧಾನಿಕ ಹುದ್ದೆಯಲ್ಲಿಲ್ಲದ ಸಂಜಯ್ ಗಾಂಧಿ ಅವರನ್ನು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಬೇಕು ಎಂಬ ಪ್ರೋಟೋಕಾಲ್ ಸಂದೇಶ ಬಂದಾಗ ರಜೆ ಮೇಲೆ ತೆರಳುತ್ತಾರೆ.

ಕೇಂದ್ರ ಸರ್ಕಾರದ ಸೇವೆಗೆ ತೆರಳಿದ ಮೇಲೆ ಅವರು ದೇಶಕ್ಕೆ ನೀಡಿದ ಸೇವೆ ಅನುಪಮವಾದುದು. ಹಲವು ಪ್ರಧಾನಿಗಳು ಹಾಗೂ ವಿತ್ತ ಸಚಿವರ ಜತೆ ನಿಕಟವಾಗಿ ಕೆಲಸ ಮಾಡಿದವರು ಅವರು. ಇಂದಿರಾ, ರಾಜೀವ್ ಗಾಂಧಿ, ಪಿ.ವಿ. ನರಸಿಂಹರಾವ್, ಮನಮೋಹನ್ ಸಿಂಗ್, ಅಟಲ್ ಬಿಹಾರಿ ವಾಜಪೇಯಿ ಅಂಥವರಲ್ಲಿ ಪ್ರಮುಖರು.

ಒಳನೋಟ

ಪಿವಿಎನ್ ಕಾರ್ಯವೈಖರಿ ಕುರಿತು ರೆಡ್ಡಿಯವರ ವಿವರಣೆ ನಗೆ ಉಕ್ಕಿಸುತ್ತದೆ. 'ಅವರತ್ತ ಹೋದ ಯಾವ ಕಡತವೂ ವಾಪಸ್ ಬರುವುದಿಲ್ಲ. ಯಾವುದರ ಮೇಲೂ ಹಸ್ತಾಕ್ಷರ ಹಾಕುವುದಿಲ್ಲ ಎಂಬ ಮಾತಿತ್ತು. ಒಂದು ಕಡತದಲ್ಲಿ ಒಮ್ಮೆ ಪ್ರಸ್ತಾವದ ಪರವಾಗಿ ಒಂದು ಪ್ಯಾರಾ, ವಿರುದ್ಧವಾಗಿ ಒಂದು ಪ್ಯಾರಾ ಬರೆದು ಅರ್ಧ ದಸ್ಕತ್ತು ಹಾಕಿದ್ದರು. ಅದನ್ನೇನು ಮಾಡಬೇಕೆಂದು ತಿಳಿಯದೇ ಕೂದಲು ಕಿತ್ತುಕೊಳ್ಳಬೇಕಾಯಿತು!'

ವಿ.ಪಿ. ಸಿಂಗ್ ಪ್ರಧಾನಿಯಾಗಿದ್ದಾಗ 67 ಟನ್ ಚಿನ್ನವನ್ನು ಲಂಡನ್ ಬ್ಯಾಂಕುಗಳಲ್ಲಿ ಕಾಪಿಟ್ಟು, 407 ದಶಲಕ್ಷ ಡಾಲರ್ ಸಾಲವನ್ನು ತರುವ ಹೊಣೆಯನ್ನು ಇವರೇ ಹೊರಬೇಕಾಗಿತ್ತು. ನಡುರಾತ್ರಿಯಲ್ಲಿ ಗುಟ್ಟಾಗಿ ವಿಮಾನ ನಿಲ್ದಾಣಕ್ಕೆ ಟ್ರಕ್ ಮೂಲಕ ಚಿನ್ನ ಸಾಗಿಸುತ್ತಿದ್ದಾಗ ಟೈರು ಪಂಕ್ಚರ್ ಆಗಿ, ಭದ್ರತಾ ಪಡೆಗಳು ಟ್ರಕ್ ಸುತ್ತ ನಿಂತಿದ್ದರಿಂದ ವಿಷಯ ಜಗಜ್ಜಾಹೀರಾಯಿತು. ಹಾಗೆ ದೇಶದ ಜನತೆಗೆ ಸಂಕಷ್ಟದ ವಿಷಯ ಗೊತ್ತಾಗಿದ್ದು ಒಳ್ಳೆಯದೇ ಆಯಿತು. ಅವರಿಂದ ಆರ್ಥಿಕ ಸುಧಾರಣೆಗೆ ಬೆಂಬಲ ಸಿಕ್ಕಿತು ಎನ್ನುತ್ತಾರೆ ರೆಡ್ಡಿ.

ಕೃತಿಗೇಕೆ 'ಭಿನ್ನ ಅಭಿಪ್ರಾಯ' ಎಂಬ ಹೆಸರು ಕಾಡುವುದಲ್ಲವೇ? ರೆಡ್ಡಿಯವರು ವೃತ್ತಿಜೀವನದುದ್ದಕ್ಕೂ ನೀತಿ ನಿರೂಪಿಸುವಾಗ ಯಾರ ಮರ್ಜಿಗೂ ಒಳಗಾಗದೆ ಜನಸಾಮಾನ್ಯರ ಒಳಿತನ್ನೇ ಪ್ರತಿಪಾದಿಸುತ್ತಾ ಬಂದವರು. ಸರ್ಕಾರದ ಧೋರಣೆಗಳು ಬೇರೆಯಿದ್ದಾಗ ತಮ್ಮ ಭಿನ್ನ ಅಭಿಪ್ರಾಯಗಳನ್ನು ಮಂಡಿಸುತ್ತಲೇ ಹೋದವರು. ಆರ್‌ಬಿಐ ಗವರ್ನರ್ ಆಗಿದ್ದಾಗ ವಿತ್ತ ಸಚಿವರ ಜತೆ, ಅದರಲ್ಲೂ ಚಿದಂಬರಂ ಅವರೊಡನೆ ನಡೆದ ತಿಕ್ಕಾಟಗಳಿಗೆ ಲೆಕ್ಕವೇ ಇಲ್ಲ. ಅಂತಹ ತಮ್ಮ ಸೃಜನಾತ್ಮಕ ತಲ್ಲಣಗಳನ್ನೂ ಅವರು ದಾಖಲಿಸಿದ್ದಾರೆ.

ಕೇಂದ್ರೀಯ ಬ್ಯಾಂಕ್ ಆಗಿರುವ ಆರ್‌ಬಿಐ ಕುರಿತು ಜನಸಾಮಾನ್ಯರಿಗೆ ಅಷ್ಟಾಗಿ ಗೊತ್ತಿಲ್ಲ. ಏಕೆಂದರೆ, ನಿತ್ಯದ ವ್ಯವಹಾರಗಳಿಗೆ ಅವರ ಒಡನಾಟದ ಬ್ಯಾಂಕುಗಳೇ ಬೇರೆ. ದೇಶದ ಎಲ್ಲ ಬ್ಯಾಂಕ್‌ಗಳ ಮೇಲೆ ಆರ್‌ಬಿಐ ನಿಯಂತ್ರಣ ಹೊಂದಿದೆ. ಸಮತೋಲನದ ಜತೆ ಬೆಲೆಗಳನ್ನು ಹದ್ದುಬಸ್ತಿನಲ್ಲಿಟ್ಟು, ದುಡ್ಡಿನ ಮೌಲ್ಯ ಕುಸಿಯದಂತೆ ಕಾಪಾಡುವುದು, ಅರ್ಥವ್ಯವಸ್ಥೆಗೆ ತಕ್ಕಂತೆ ದುಡ್ಡಿನ ಸರಬರಾಜು ಆಗುವಂತೆ ನೋಡಿಕೊಂಡು ಉದ್ಯೋಗ ಸೃಷ್ಟಿಗೆ ಕಾರಣವಾಗುವುದು ಆರ್‌ಬಿಐನ ಬಹುಮುಖ್ಯವಾದ ಕೆಲಸ. ಅದನ್ನು ಯಶಸ್ವಿಯಾಗಿ ಮಾಡಿದವರು ಗವರ್ನರ್ ರೆಡ್ಡಿ.

ಗೃಹಸಾಲಗಳಿಗೆ ರೆಡ್ಡಿಯವರು ಕಠಿಣ ಷರತ್ತುಗಳನ್ನು ಜಾರಿಗೆ ತಂದಾಗ ವಿರೋಧಿಸಿದವರೇ ಎಲ್ಲ. ಆದರೆ, 2008ರಲ್ಲಿ ಗೃಹಸಾಲಗಳಿಂದ ಅಮೆರಿಕ ಬ್ಯಾಂಕ್‌ಗಳು ದಿವಾಳಿ ಎದ್ದಾಗ ಭಾರತೀಯ ಬ್ಯಾಂಕರ್‌ಗಳೆಲ್ಲ ರೆಡ್ಡಿಯವರ ದೂರದರ್ಶಿತ್ವವನ್ನು ಕೊಂಡಾಡಿದ್ದರು. 'ನನ್ನ ದೇಶ ದೊಡ್ಡದು. ನಮ್ಮಲ್ಲಿ ಆರ್ಥಿಕ ಬಿಕ್ಕಟ್ಟಾದರೆ ಭೌಗೋಳಿಕ ಹಾಗೂ ರಾಜಕೀಯವಾಗಿ ನಮ್ಮನ್ನು ಕಾಪಾಡಲು ಯಾರೂ ಬರುವುದಿಲ್ಲ' ಎಂಬ ಎಚ್ಚರಿಕೆ ಅವರ ಎಲ್ಲ ನೀತಿಗಳ ಹಿಂದೆ ಕೆಲಸ ಮಾಡುತ್ತಿತ್ತು.

ಈ ಕೃತಿ ಓದುವುದೆಂದರೆ ಸ್ವಾತಂತ್ರ್ಯೋತ್ತರ ಭಾರತದ ಆರ್ಥಿಕ ಚರಿತ್ರೆಯನ್ನೂ ಪ್ರಧಾನಿಗಳ ಪ್ರಮುಖ ಕಾರ್ಯವಿಧಾನವನ್ನೂ ವಿತ್ತ ಸಚಿವರ ಆದ್ಯತೆಗಳನ್ನೂ ಅಧಿಕಾರಿಗಳ ಮನೋಧರ್ಮವನ್ನೂ ಒಟ್ಟಾಗಿ ಅಧ್ಯಯನ ಮಾಡಿದಂತೆ. ದೇಶದ ಆರ್ಥಿಕ ಏರಿಳಿತದ ಎಲ್ಲ ಪ್ರಮುಖ ಘಟ್ಟಗಳೂ ಇಲ್ಲಿ ದಾಖಲಾಗಿವೆ. ಮುನ್ನೂರು ವರ್ಷಗಳ ಹಿಂದೆ ಪ್ರಪಂಚದ ಆದಾಯದಲ್ಲಿ ನಮ್ಮ ದೇಶದ ಪಾಲು ಶೇ 25ರಷ್ಟು ಇರುತ್ತಿತ್ತು. ಅದೇ ಇನ್ನೂರು ವರ್ಷಗಳ ಹಿಂದೆ ಶೇ 5ಕ್ಕಿಂತ ಕಡಿಮೆಗೆ ಕುಸಿಯಿತು. ಅಂದರೆ ಎರಡು ಶತಮಾನಗಳಲ್ಲಿ ಜಗತ್ತು ಬೆಳೆಯುತ್ತಾ ಹೋದರೆ, ನಾವು ಹಿಂದಡಿ ಇಟ್ಟೆವು. 1900ರಿಂದ ಹೆಚ್ಚು-ಕಡಿಮೆ ತೊಂಬತ್ತು ವರ್ಷ ಹೆಚ್ಚಿನ ಬೆಳವಣಿಗೆ ಕಾಣದ ಭಾರತ, ನಂತರ ಅಭಿವೃದ್ಧಿಯ ಹಾದಿ ಹಿಡಿದಿದೆ. ಅದರಲ್ಲಿ ರೆಡ್ಡಿ, ರಂಗರಾಜನ್ ಅವರಂತಹ ಆರ್ಥಿಕ ತಜ್ಞರ ಪಾತ್ರ ತುಂಬಾ ದೊಡ್ಡದಿದೆ.

ಘನವಾದ ವ್ಯಕ್ತಿತ್ವದ ರೆಡ್ಡಿ ಅವರದು ಸಂಯಮದ ನಡೆ. ವೃತ್ತಿಯ ಸವಾಲುಗಳನ್ನು ಹೇಳುವ ಆಸೆಯೇ ಹೊರತು ತೆರೆಮರೆಯ ರಾಮಾಯಣವನ್ನಲ್ಲ. ಯಾರಿಗೂ ನೋವುಂಟು ಮಾಡಬಾರದು ಎಂಬ ಉದ್ದೇಶದಿಂದ ಕೆಲವು ಕುತೂಹಲದ ಅಂಶಗಳನ್ನು ಬಿಟ್ಟಿದ್ದೇನೆ, ಇನ್ನು ಸರ್ಕಾರದ ಗುಪ್ತ ವಿಷಯಗಳನ್ನು ಬಹಿರಂಗಗೊಳಿಸುವುದು ಸಾಧ್ಯವೇ ಇಲ್ಲ ಎನ್ನುವ ರೆಡ್ಡಿ, ಬರೆಯದೇ ಉಳಿದಿರುವ ವಿಷಯಗಳ ಕುರಿತು ಕುತೂಹಲವನ್ನು ಹೆಚ್ಚಿಸುತ್ತಾರೆ. ನೋಟುಬಂದಿ ಹಾಗೂ ಜಿಎಸ್‌ಟಿ ಜಾರಿಯಂತಹ ಕಾಲದಲ್ಲಿ ಅವರು ಅಧಿಕಾರದಲ್ಲಿದ್ದಿದ್ದರೆ ಏನಾಗುತ್ತಿತ್ತು ಎಂಬ ಪ್ರಶ್ನೆಯೂ ಹಾಗೇ ಉಳಿಯುತ್ತದೆ.

ಕ್ಲಿಷ್ಟವಾದ ಆರ್ಥಿಕ ವಿಚಾರಗಳ ಚರ್ಚೆಯೇ ಈ ಕೃತಿಯ ಜೀವಾಳವಾದರೂ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಆರ್ಥಿಕ ವಿದ್ಯಾರ್ಥಿಗಳಿಗೆ, ಆಡಳಿತದ ಹೊಣೆಹೊತ್ತ ಅಧಿಕಾರಿಗಳಿಗೆ, ಬ್ಯಾಂಕರ್‌ಗಳಿಗೆ ಇದು ಉತ್ತಮ ಪಠ್ಯ. ಕನ್ನಡದಲ್ಲಿ ಇರಲೇಬೇಕಾದ ಇಂತಹ ಅಪರೂಪದ ಕೃತಿಯನ್ನು ಕನ್ನಡಿಗರಿಗೆ ಕೊಟ್ಟ ಶ್ರೀರಾಮ್ ಅವರಿಗೆ ಅಭಿನಂದನೆಗಳು ಸಲ್ಲಲೇಬೇಕು. ❖

ತುಳು ಸಂಸ್ಕೃತಿಯ ಅನನ್ಯ ದರ್ಶನ


ಪುರುಷೋತ್ತಮ ಬಿಳಿಮಲೆ

ಕಡಲ ತಡಿಯಲ್ಲಿರುವ ತುಳುಭಾಷಾ ಪ್ರದೇಶಕ್ಕೆ ಅದರ ಭೌಗೋಳಿಕ ಕಾರಣದಿಂದಾಗಿ ಕಡಲಾಚೆಯ ಸಂಪರ್ಕ ಹಲವು ಶತಮಾನಗಳಿಂದಲೂ ಇತ್ತು. ಟಿಪ್ಪುವಿನ ಪತನದ (1799) ನಂತರ ಅದು ಕ್ಷಿಪ್ರವಾಗಿ ವಸಾಹತೀಕರಣಕ್ಕೆ ಒಳಪಟ್ಟಿತು. ಇದು ಉಂಟುಮಾಡಿದ ಅನೇಕ ಪರಿಣಾಮಗಳಲ್ಲಿ ತುಳು ಅಧ್ಯಯನಗಳಿಗೆ ಸಿಕ್ಕ ಅಂತರರಾಷ್ಟ್ರೀಯ ಮನ್ನಣೆಯೂ ಒಂದು. ಪ್ರಸ್ತುತ ಅನುವಾದಿತ ಕೃತಿ 'ತುಳುವ ದರ್ಶನ' ಅದಕ್ಕೊಂದು ಒಳ್ಳೆಯ ಉದಾಹರಣೆ.

ಈ ಪುಸ್ತಕದ 14 ಲೇಖನಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಬರೆದ ಪ್ರೊ. ಪೀಟರ್ ಜೆ ಕ್ಲಾಸ್ ಅವರು ಅಮೆರಿಕದ ಕ್ಯಾಲಿಫೋರ್ನಿಯಾ ಸ್ಟೇಟ್ ಯೂನಿವರ್ಸಿಟಿಯ ಮಾನವಶಾಸ್ತ್ರದ ಪ್ರಾಧ್ಯಾಪಕರು ಹಾಗೂ ಜಾನಪದ ವಿದ್ವಾಂಸರು. ಎ.ಕೆ. ರಾಮಾನುಜನ್ ಅವರ ಪ್ರೇರಣೆಯಿಂದ 1967ರಷ್ಟು ಹಿಂದೆ ತುಳುನಾಡಿಗೆ ಬಂದ ಪೀಟರ್, ಸುಮಾರು 35 ವರ್ಷಗಳ ಕಾಲ ತುಳು ಭಾಷೆ ಮತ್ತು ಸಂಸ್ಕೃತಿಯೊಡನೆ ನಿರಂತರವಾಗಿ ಸಂವಾದಿಸುತ್ತ, ಅದರ ಸೂಕ್ಷ್ಮಗಳನ್ನು ಮತ್ತು ಅನನ್ಯತೆಯನ್ನು ವಿದ್ವತ್ ಲೋಕಕ್ಕೆ ಪರಿಚಯಿಸುತ್ತಲೇ ಹೋದರು.

ತುಳುವಿನ ಬಗೆಗೆ ಅವರು ಬರೆದ ಲೇಖನಗಳ ಒಟ್ಟು ಸಂಖ್ಯೆ ಐವತ್ತನ್ನು ಮೀರಬಹುದು ಎಂದು ಊಹಿಸಲಾಗಿದೆ. ಆದರೆ, ಆ ಎಲ್ಲಾ ಲೇಖನಗಳುಳ್ಳ ಪುಸ್ತಕವೊಂದನ್ನು ಅವರೂ ಪ್ರಕಟಿಸಲಿಲ್ಲ, ಇತರರೂ ಪ್ರಕಟಿಸುವ ಉತ್ಸಾಹ ತೋರಿಸಲಿಲ್ಲ. ಈ ಕೊರತೆಯನ್ನು ಹಿರಿಯ ವಿದ್ವಾಂಸ ಪ್ರೊ. ಎ.ವಿ. ನಾವಡರು ಇದೀಗ ನೀಗಿಸಿದ್ದಾರೆ. ಅವರು ತುಂಬ ಶ್ರಮವಹಿಸಿ, ಎಲ್ಲೆಲ್ಲೋ ಹರಡಿಹೋಗಿದ್ದ ಮೂಲ ಲೇಖನಗಳನ್ನು ಸಂಗ್ರಹಿಸಿ, ಅವುಗಳಲ್ಲಿ ಮುಖ್ಯವಾದವುಗಳನ್ನು ಆಯ್ದು, ಸುಲಲಿತವಾಗಿ ಕನ್ನಡಕ್ಕೆ ಅನುವಾದಿಸಿ ಪ್ರಸ್ತುತ ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಅವರ ಪರಿಶ್ರಮದಿಂದಾಗಿ ನಮಗಿವತ್ತು ಪೀಟರ್ ಅವರ ಪ್ರಮುಖ ಲೇಖನಗಳು ಒಂದೆಡೆ ಸಿಗುವಂತಾಗಿದೆ. ಅವರ ಮೂಲ ಲೇಖನಗಳೂ ಒಂದು ಸಂಪುಟವಾಗಿ ಬರಬೇಕಾದ್ದು ಕೂಡ ಬಹಳ ಅವಶ್ಯಕ.

ಅವಲೋಕನ



ತುಳುವ ದರ್ಶನ
ಲೇ: ಪೀಟರ್ ಜೆ ಕ್ಲಾಸ್
ಕನ್ನಡಕ್ಕೆ : ಪ್ರೊ ಎ.ವಿ. ನಾವಡ, ಪ್ರೊ. ಸುಭಾಶ್ಚಂದ್ರ
ಪ್ರ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳಗಂಗೋತ್ರಿ
ಪು: 496 ₹400

ತುಳು ಸಂಸ್ಕೃತಿಯ ಅನೇಕ ಮುಖಗಳಲ್ಲಿ ಪೀಟರ್ ಅವರಿಗಿದ್ದ ಆಸಕ್ತಿ ಪಾಡ್ದನಗಳ ಕುರಿತಾದುದು. ಮಾನವಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಅವರು ತುಳು ಜಾನಪದದ ವಿಷಯಕ್ಕೆ ಬಂದಾಗ ರಾಚನಿಕ ಶಾಸ್ತ್ರದಿಂದ ಪ್ರೇರಣೆ ಪಡೆಯುತ್ತಾರೆಯಾದರೂ 'ತುಳುವ ಸಂಶೋಧನೆಯು ಮುಂದಿನ ದಿನಗಳಲ್ಲಿ ಮಾನವ ಶಾಸ್ತ್ರೀಯ ಹಿನ್ನೆಲೆಯಲ್ಲಿ ಸಾಗುವುದು ಅವಶ್ಯವೆಂದು ನಾನು ಭಾವಿಸುತ್ತೇನೆ' (ಪುಟ: 287) ಎಂದೇ ಹೇಳುತ್ತಾರೆ. ಈ ಮಾತಿನ ಔಚಿತ್ಯ ಮತ್ತು ಉಪಯುಕ್ತತೆಯನ್ನು ಸಾರುವಂತೆ ಇಲ್ಲಿನ ಲೇಖನಗಳನ್ನು ಅವರು ಬರೆದಿದ್ದಾರೆ. ಮಾನವ ಕುಲ ವಿವರಣ ಶಾಸ್ತ್ರವು (ಎತ್ನೋಗ್ರಫಿ) ಜಾನಪದ ಅಧ್ಯಯನಕಾರರಿಗೆ ಎಷ್ಟೊಂದು ಒಳನೋಟಗಳನ್ನು ಕೊಡಬಲ್ಲುದು ಎಂಬುದು ಸ್ಪಷ್ಟವಾಗಬೇಕಾದರೆ ಸಂಶೋಧಕರು ಇಲ್ಲಿನ ಲೇಖನಗಳನ್ನು ಓದಬೇಕು. ದೈವಾವೇಶ, ದೈವ ಪಾತ್ರಿತ್ವ, ದೈವ ಮಾಧ್ಯಮ, ಮತಾಚರಣೆ, ಅರಸು ಆರಾಧನೆ, ಜೋಗ (ಲೌಕಿಕ), ಮಾಯ (ಅಲೌಕಿಕ), ವೀರತ್ವ, ದೈವಗಳ ಶಿಕ್ಷಕ-ರಕ್ಷಕ ಗುಣಗಳು, ತುಳು ಪುರಾಣಗಳು, ತುಳು ಬಂಧುತ್ವ, ಭಿನ್ನ ಪಥ್ಯಗಳ ಪರಿಕಲ್ಪನೆ ಮತ್ತಿತರ ವಿಷಯಗಳ ಕುರಿತು ಇಲ್ಲಿ ಆಳವಾದ ಮತ್ತು ಗಂಭೀರವಾದ ವಿಶ್ಲೇಷಣೆಗಳಿವೆ.

ಜೊತೆಗೆ ಮೈಂದಲ, ಸಿರಿ, ಪರ್ಮಲೆ ಬಲ್ಲಾಳ, ಬಿರ್ಮೆರ್ ಮೊದಲಾದ ತುಳು ದೈವಗಳ ಕುರಿತು ಅಪೂರ್ವ ಮಾಹಿತಿಗಳಿವೆ. ಪೀಟರ್ ಅವರಿಗೆ ಈ ಮಾಹಿತಿಗಳ ಅನನ್ಯತೆಯನ್ನು ಭಾರತದ ಮಾರ್ಗ ಪರಂಪರೆಯ ಜೊತೆಗೂ, ಜಗತ್ತಿನ ಇತರೆಡೆಯ ಮೌಖಿಕ ಪರಂಪರೆಗಳ ಜೊತೆಗೂ ತೌಲನಿಕವಾಗಿ ಪರಿಶೀಲಿಸಲು ಸಾಧ್ಯವಾಗಿರುವುದರಿಂದ ತುಳು ಸಂಸ್ಕೃತಿಯ ಅನನ್ಯತೆಯ ಬಗೆಗೆ ನಮಗೆ ಅನೇಕ ಒಳನೋಟಗಳು ಸಿಗುತ್ತವೆ.

ಇವತ್ತು ತುಳು ಸಂಸ್ಕೃತಿ ವೇಗವಾಗಿ ಬದಲಾಗುತ್ತಿದೆ. ಸಂಶೋಧನೆಗಳು ಕಳೆಗುಂದುತ್ತಿವೆ. ಇಂಥ ಸಂದರ್ಭದಲ್ಲಿ 'ತುಳುವ ದರ್ಶನ'ದಂತಹ ಕೃತಿಯನ್ನು ಓದುವುದು ಬಹಳ ಉಪಯುಕ್ತ. ❖

ಜನಪದ ಲೋಕ ಭಿತ್ತಿಯ ಕತೆಗಳು

ಸುರೇಶ ನಾಗಲಮಡಿಕೆ


ಜಿ.ವಿ. ಆನಂದಮೂರ್ತಿಯವರು ತಮ್ಮ ಇದುವರೆಗಿನ ಕತೆಗಳನ್ನು 'ಗುಣಸಾಗರಿ ಮತ್ತು ಇತರ ಕತೆಗಳು' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದಾರೆ. ಇಲ್ಲಿನ ಕತೆಗಳಲ್ಲಿ ಎರಡು ಮಾದರಿಗಳನ್ನು ಕಾಣಲು ಸಾಧ್ಯ. ಒಂದು, ಗ್ರಾಮ ಬದುಕಿನ ಅತಿಯಾದ ಪಲ್ಲಟಗಳು. ಇದರಲ್ಲಿ ಕಳೆದುಹೋಗುತ್ತಿರುವ ಕೂಡೊಟ್ಟಿನ ಜೀವನಕ್ರಮಗಳಿವೆ, ಜೊತೆಗೆ ಸಂಘರ್ಷ ಒಡ್ಡುತ್ತಿರುವ ಶಕ್ತಿಗಳೂ ಇವೆ. ಮತ್ತೊಂದು, ಸದ್ಯದ ಆತಂಕಗಳನ್ನು ಮೌಖಿಕ ಕಥನಗಳ ದಾರಿಗಳಿಂದ ಸಾಗಿ ಲೋಕಗ್ರಹಿಕೆಗಳನ್ನು ಕಲಾತ್ಮಕವಾಗಿ ಹಿಡಿದು ಅದನ್ನು ಸಂಕರಗೊಳಿಸುವ ಬಲವಾದ ಪ್ರಯತ್ನ. ಆನಂದಮೂರ್ತಿಯವರು ಹೆಚ್ಚು ಯಶಸ್ಸು ಕಾಣುವುದು ಈ ಮಾದರಿಯಲ್ಲೇ.

ಈ ದಾರಿಯನ್ನು ಕೇಶವ ಮಳಗಿ, ಚನ್ನಪ್ಪ ಕಟ್ಟಿ, ಲೋಕೇಶ ಅಗಸನಕಟ್ಟೆಯವರ ಕೆಲ ಕತೆಗಳಲ್ಲಿ ನೋಡಬಹುದು. ಸ್ಥಳೀಯ ಜ್ಞಾನಪರಂಪರೆಗಳ ಕೇಂದ್ರಗಳನ್ನು ಬಳಸಿಕೊಂಡು ಲೋಕವನ್ನು ಗ್ರಹಿಸುವುದು ಬಹಳ ಕಷ್ಟದ ಕೆಲಸ. ಏಕೆಂದರೆ, ಇರುವ ಮೌಖಿಕ ಕಥನದೊಳಗಡೆ ಮತ್ತೊಂದು ಹೊಸಬಗೆಯ ಕಥನವನ್ನು ಜೋಡಿಸುವುದು ಮತ್ತು ಅದರ ಕಲೆಗಾರಿಕೆಯನ್ನು ಅಂದಗೆಡದಂತೆ ಅಭಿವ್ಯಕ್ತಿಸುವುದು ಸುಲಭವಲ್ಲ.

ಆನಂದಮೂರ್ತಿಯವರ ಮತ್ತೊಂದು ಕಥನ ಪ್ರಯೋಗವೆಂದರೆ 'ಸ್ವಗತ' ಕ್ರಮದಲ್ಲೇ ಇಡೀ ಕತೆ ನಿರೂಪಿತಗೊಳ್ಳುವುದು. ಇದರಲ್ಲಿ ಪಾತ್ರಗಳು ತಮ್ಮನ್ನು ತಾವು ಕಂಡುಕೊಳ್ಳುವ ದಾರಿ ಒಂದಿದ್ದರೆ, ಮಗದೊಂದು ತನ್ನ ಮೂಲಕ ಲೋಕ ನಿರ್ಮಿಸಿಕೊಳ್ಳಬಹುದಾದ ದಾರಿಗಳು. ಇವೆರಡಕ್ಕೂ ಕತೆಗಳು ಇಂಬು ನೀಡಬಲ್ಲವು. ಏಕಕಾಲಕ್ಕೆ 'ಜಲತತ್ವ'ವನ್ನು ಮತ್ತು 'ಲೋಕಸತ್ಯ'ಗಳನ್ನು ಅನಾವರಣ ಮಾಡುವ 'ಗುಣಸಾಗರಿ', 'ದಯಾ ಎಂಬ ನದಿಯ ಮಾತು' ಎರಡೂ ಕತೆಗಳು ಭಿನ್ನವಾದ ಹಾದಿಗಳನ್ನು ತುಳಿದರೂ ನೀಡುವ ದರ್ಶನವೊಂದೇ. ಗುಣಸಾಗರಿಯಲ್ಲಿ ಕೆರೆಗಳು ಮಾತನಾಡಿದರೆ, ದಯಾನದಿಯಲ್ಲಿ ನದಿಯು ಮಾತನಾಡುತ್ತದೆ. ಅವಿವೇಕದಿಂದ ವರ್ತಿಸುವ ಮನುಷ್ಯ ಮತ್ತು ದಯೆಯಿಂದ ಸೃಷ್ಟಿಯಾಗಿರುವ ನಿಸರ್ಗತತ್ವಗಳು ಇಲ್ಲಿ ಅನೇಕ ಒಳಾರ್ಥಗಳನ್ನು ನೀಡುತ್ತವೆ.

ಗುಣಸಾಗರಿ ಮತ್ತು ದಯಾ ಇಬ್ಬರೂ ಹೆಣ್ಣು ಜೀವಗಳಾಗಿ ಕಾಣಿಸಿಕೊಳ್ಳುವುದು ಕೂಡ ಒಂದು ತಂತ್ರವೇ. ಗುಣಸಾಗರಿ, ಹೊನ್ನಮ್ಮ ಮುಂತಾದವರು ತಮ್ಮ ತಮ್ಮಲ್ಲೇ ಮಾತನಾಡಿಕೊಳ್ಳುವ ವಿಧಾನಗಳು ತೀರ ಹೊಸ ಮಾದರಿಯಲ್ಲವಾದರೂ ಒಂದು ಪ್ರಾದೇಶಿಕ ಜನಪದ ಸತ್ವವನ್ನು ವರ್ತಮಾನದ ಅಸಂಗತ ಬದುಕಿಗೆ ತಾಕಿಸುವ ಪ್ರಯತ್ನ ಇಲ್ಲಿ ಪ್ರಧಾನವಾಗಿದೆ.

ದಯಾನದಿ ಕಳಿಂಗಯುದ್ಧಕ್ಕೆ ಸಾಕ್ಷಿಯಾಗಿದ್ದು ತಿಳಿದ ಸಂಗತಿ. ಬುದ್ಧತತ್ವಗಳನ್ನು ಅಶೋಕ ಅನುಸರಿಸುವುದಕ್ಕೆ ಬಹುದೊಡ್ಡ ನಿದರ್ಶನವಾಗಿ ಕಳಿಂಗಯುದ್ಧ ಕಾಣುತ್ತದೆ. ಯುದ್ಧದ ನಶ್ವರತೆಯ ಕುರಿತು ನಮ್ಮಲ್ಲಿ ಅನೇಕ ಸೃಜನಶೀಲ ಸಾಮಗ್ರಿಗಳು ಸಿಗುತ್ತವೆ. ಅಹಿಂಸೆ ಮತ್ತು ದಯೆ ಎರಡೂ ಅಂಶಗಳು ಪರಸ್ಪರ ಪೂರಕವೇ. ದಯೆ ಇಲ್ಲದಿದ್ದರೆ ಅಹಿಂಸೆ ಹುಟ್ಟಲಾರದು. ದಯೆಯ ಹೆಸರಿನಲ್ಲೇ ಇರುವಂತೆ ಕಾಣುವ 'ದಯಾ'ನದಿ ಯುದ್ಧದ ಅಪಾರ ಹಿಂಸೆಯನ್ನು ಕಂಡ ಮೇಲೆ ಅಂತಿಮವಾಗಿ ಅಹಿಂಸೆಯ ರೂಪವನ್ನು ಬಿಕ್ಕುವಾದ ಉಪಗುಪ್ತನ ಮೂಲಕವೂ ನೋಡುತ್ತದೆ. ಮೇಲುನೋಟಕ್ಕೆ ಇತಿಹಾಸ ಸಂಬಂಧಿ ಘಟನೆಯಾದರೂ ಕತೆಯಲ್ಲಿ ಜನಪದ ತಂತ್ರ, ನಿಸರ್ಗತತ್ವ, ನಿಜಧರ್ಮದ ಅಂಶಗಳು ಮುಪ್ಪುರಿಗೊಂಡಿವೆ. ಇನ್ನಿತರ ಕೆಲ ಕತೆಗಳಲ್ಲೂ ಮೌಖಿಕ ತಂತ್ರ ವಿಧಾನಗಳೇ ಮುನ್ನೆಲೆಗೆ ಬಂದಿವೆ.




ಗುಣಸಾಗರಿ ಮತ್ತು ಇತರ ಕತೆಗಳು
ಲೇ: ಜಿ.ವಿ. ಆನಂದಮೂರ್ತಿ
ಪ್ರ: ಪ್ರೀತಿ ಪುಸ್ತಕ
ಸಂ: 98457 00747
ಪು: 104 ₹150

ವಿಮರ್ಶೆ

ಇಲ್ಲಿನ ಆಶಯಗಳು ಧರಿಸುವ ಬಹುಬಗೆಯ ಒಳಾರ್ಥಗಳಿಂದ ಸಮಕಾಲೀನ ಲೋಕಗ್ರಹಿಕೆಗಳ ಸಂಕಟಗಳನ್ನು ಮತ್ತು ಮುಚ್ಚಿಡಲಾರದ ಜಾತಿ ವ್ಯವಸ್ಥೆಯ ಹಿಂಸೆಗಳನ್ನು ಕಾಣಲು ಸಾಧ್ಯ. 'ಸಂಕಲವ್ವ' ಕತೆಯಲ್ಲಿ ಮೌಖಿಕ ಸಂವಾದದ ಮೂಲಕ ಕಂಬಾಲಪಲ್ಲಿಯ ದುರಂತ ಕತೆಯನ್ನು 'ಹೇಳಲಾಗಿದೆ'. ಹೀಗೆ 'ಹೇಳುವಾಗ' ವಿವರ ಮತ್ತು ಘಟನೆಗಳು ಹದ ತಪ್ಪಿದರೆ ಕತೆಯ ನೇಯ್ಗೆಗೆ ಅಡ್ಡಿಯಾಗಬಹುದಾದ ಎಲ್ಲ ರೀತಿಯ ತೊಂದರೆಗಳನ್ನು ಎದುರಿಸಬೇಕಾಗುತ್ತದೆ. ಆದರೆ, ಇಲ್ಲಿನ ಕಂಬಾಲಪಲ್ಲಿಯ ಕರಕಲಾದ ವ್ಯಕ್ತಿಗಳು 'ಜೀವಾತ್ಮ'ಗಳಾಗಿ ಬಂದು ಅದೇ ದುರಂತವನ್ನು ಎದುರಿಸಿದ ಕೊರಚರ ದೊಡ್ಡಸಿದ್ದನ ಹೆಂಡತಿ ಸಂಕಲವ್ವನ ಜೊತೆ ಕನಸಿನಲ್ಲಿ ಮಾತುಕತೆ ನಡೆಸುವುದು ಕತೆಗೆ ವಿಚಿತ್ರ ತಿರುವನ್ನು ನೀಡಿದೆ. ಮೇಲುನೋಟಕ್ಕೆ 'ಕುಸುಮಬಾಲೆ' ಕಾದಂಬರಿಯ ಜ್ಯೋತಮ್ಮಂದಿರು ನೆನಪಿಗೆ ಬಂದರೂ ತಟಕ್ಕನೆ ತನ್ನ ಜಾಡನ್ನು ಬದಲಿಸಿಕೊಳ್ಳುತ್ತದೆ.

ಒಂದು ವರದಿಯನ್ನೋ ಅಥವಾ ಕೇಳಿದ ಘಟನೆಯನ್ನೋ ಕಲೆಯಾಗಿ ಕೆತ್ತಿ ಭಾಷೆಯಲ್ಲಿ ಹಿಡಿದಿಡುವುದು ಸುಲಭವಲ್ಲ. 'ಚಿತ್ತಯ್ಯ'ನ ಕತೆಯಲ್ಲೂ ಹೀಗೆ ಆಗುತ್ತದೆ. ಕ್ಷೇತ್ರಕಾರ್ಯದ ವಿವರಗಳಿಂದ ಕೂಡಿದ ಕಥನಕ್ರಮವಾದರೂ ಮುಂದೆ ಸಾಗುತ್ತಾ ಚಿತ್ತಯ್ಯನ ಮೂಲಕ ಮೌಖಿಕ ಕಥನವನ್ನು ಹಾಗೂ ಅದರ ಗರ್ಭದ ಮುಖೇನ ಜನಪದ ನಂಬಿಕೆ, ದುಗಡಗಳನ್ನು ಗಟ್ಟಿಯಾಗಿ ನಿರೂಪಿಸುವುದರ ಮೂಲಕ ಯಶಸ್ಸು ಕಂಡಿದೆ.

ಇದೇ ಬಗೆಯ ನಂಬಿಕೆಗಳು 'ಮೊಗ್ಗು'ಕತೆಯಲ್ಲೂ ಬರುತ್ತವೆ. ಆನಂದಮೂರ್ತಿಯವರ ಕತೆಗಳ ತಳಹದಿ ಗಟ್ಟಿಯಾಗಿದ್ದರೂ ಕೆಲ ಕತೆಗಳಲ್ಲಿ ಅವರು ಸೇರಿಸುವ ಪ್ರಶ್ನೆಗಳು ಕತೆಯ ನಿರೂಪಕನ ಮೂಲಕ ಬಂದರೆ ಯಾವ ಬಗೆಯ ವೈಚಾರಿಕತೆಯನ್ನು ತೋರಿಸಬಲ್ಲವು, ಪಾತ್ರಗಳ ಮೂಲಕ ಬಂದರೆ ಆ ದಾರಿಗಳು ಯಾವ ತಿರುವನ್ನು ಪಡೆದುಕೊಳ್ಳಬಲ್ಲವು ಎಂಬುದನ್ನು ನಾವೇ ಯೋಚಿಸಬೇಕಾಗುತ್ತದೆ. ಇವೆಲ್ಲವನ್ನೂ ಮೀರಿ ಅವರ ಕತೆಗಳ ರೂಪಕಾತ್ಮಕ ಭಾಷಿಕ ನುಡಿಗಟ್ಟು, ಅದಕ್ಕೆ ತಕ್ಕಂತೆ ಅವರು ನಿರ್ಮಿಸಿಕೊಂಡಿರುವ ಆಶಯದ ಕೇಂದ್ರಗಳು ಗಮನಸೆಳೆಯುತ್ತವೆ. ❖



ಕಥನದ ಜಾಡು ಹಿಡಿದು...

ಶ್ರೀಧರ್ ಎಸ್. ಸಿದ್ದಾಪುರ

ಅಂದು ಆಕೆ ಒಂಬತ್ತು ನದಿಗಳನ್ನು ದಾಟಿ ವಾಸುದೇವನನ್ನು ನಡೆಸಿಕೊಂಡು ತನ್ನ ಆರು ತಿಂಗಳ ಕೂಸು ದೇವಕಿಯನ್ನು ಸೊಂಟಕ್ಕೆ ಕಟ್ಟಿಕೊಂಡು ಸತತ ಹತ್ತು ದಿನಗಳ ಕಾಲ ನಡೆಯದೇ ಹೋಗಿದ್ದರೆ, ಮೊಗೆಕಾಯಿ ತೆಳ್ಳೇವು, ಜೋನಿ ಬೆಲ್ಲದ ಆಸೆಗೆ ಬಲಿಯಾಗದೇ ಶಿವಾನಂದ ಕಳವೆಯವರು ಪಟ್ಟಣ ಸೇರಿದ್ದರೆ ಈ ಅತ್ಯಪೂರ್ವ ಕಥನದ ಹಾದಿ ತುಳಿಯುವ ಅಗತ್ಯ ಬರುತ್ತಲೇ ಇರುತ್ತಿರಲಿಲ್ಲ. ಈ ಅಭೂತಪೂರ್ವ ಘಟನಾವಳಿ ಈಗ ನಮ್ಮನ್ನು ಹಾಗೂ ನಿಮ್ಮನ್ನು ಬೆಸೆದಿದ್ದು.

ಶಿರಸಿ ಸೀಮೆಯ ಪುಟಾಣಿ ಹಳ್ಳಿಯ ಕಥನವೇ ಮಧ್ಯಘಟ್ಟದ ಹೂರಣ. ಕಾದಂಬರಿಯ ಹೂರಣವನ್ನು ಹೊಂದಿದ ಜನ-ಜೀವನದ ದಸ್ತಾವೇಜು. ಶಿರಸಿಯಿಂದ 37 ಕಿ. ಮೀ ದೂರದ ಮತ್ತಿಘಟ್ಟವೆಂಬ ಘಟ್ಟದ ಮಧ್ಯ ಭಾಗದಲ್ಲಿ ನಡೆವ ಕಥನ. ಇಲ್ಲಿನ ಕಷ್ಟ ಕಾರ್ಪಣ್ಯಗಳು, ಹಬ್ಬಗಳು, ಬಳಸುವ ಔಷಧೀಯ ಮೂಲಿಕೆಗಳು, ತಂಬುಳಿಗೆ ಬೇಕಾಗುವ ಚಿಗುರು ಕುಡಿಗಳ ವಿವರಗಳು, ಆಹಾರ ಸಂಸ್ಕೃತಿ, ಇಲ್ಲಿನ ಪಲ್ಲಟಗಳನ್ನು ನವಿರಾಗಿ ಚಿತ್ರಿಸಿದ ಕಾದಂಬರಿ. ಈ ಕಾದಂಬರಿಯ ಪಾತ್ರಗಳು ಸವೆಸಿದ ಹಾದಿಯಲ್ಲಿ ಸಾಗುವ ಅನನ್ಯ ಅನುಭವ. ಸುಮಾರು 75 ವರುಷಗಳ ಕೆಳಗೆ ತಾಯಿಯೊಂದಿಗೆ ನಡೆದು ಬಂದ ವಾಸುದೇವ ಹೆಗಡೆಯವರೊಂದಿಗೆ ಸಂವಾದಿಸುವ ಅಪೂರ್ವ ಅವಕಾಶ. ತೇಜಸ್ವಿ ಕಾದಂಬರಿ ಬಿಟ್ಟರೆ ಇದೇ ಮೊದಲು ಕಾದಂಬರಿಯ ಪಾತ್ರವೊಂದು ಓದುಗರೊಂದಿಗೆ, ಲೇಖಕರೊಂದಿಗೆ ಸಂವಾದಿಸಿದ ವಿಶೇಷ ಸಂದರ್ಭವೊಂದು ಸೃಷ್ಟಿಯಾಯಿತು! ಎಲ್ಲದಕ್ಕೂ ಕಳವೆಯವರು (ಮಧ್ಯಘಟ್ಟದ ಲೇಖಕರು) ಮೂಲ ಸೇತುವಾದರು. ಬನ್ನಿ ಕಥನದ ಜಾಡು ಹಿಡಿಯೋಣ.

ಕಥನದ ಜಾಡು ಹಿಡಿದು ಸಾಗಿದ್ದು ವೆಂಕಟರಮಣ ವೈದ್ಯರ ಮನೆಯಿಂದ. ದೇಸಿ ತಿಂಡಿಯಾದ ಕಡಬು, ಅವಲಕ್ಕಿ, ಜೋನಿ ಬೆಲ್ಲ, ತುಪ್ಪದ ನೈವೇದ್ಯ ನಡೆದು ಪನಿವಾರ ಸೇವಿಸಿ ಕಾಡು ಹರಟೆಯಲಿ ಲೀನವಾಗಿ ವಾಸುದೇವ ಹೆಗಡೆ ಮನೆಯತ್ತ ಕಾಲಿರಿಸಿದೆವು. ಮನೆಯ ಸನಿಹ ಹರಿವ ಹಸೆ ಹಳ್ಳದ ಆರ್ಭಟವ ಆಲಿಸುತ್ತಾ ಮುಂದೆ ಸಾಗಿ ಬಂದೆವು. ಹಸೆ ಹಳ್ಳ ಭೋರ್ಗರೆಯುತ್ತಾ ಕಣಿವೆಗೆ ಮುಖಮಾಡಿ ಧುಮುಕುವ ಸೊಬಗೇ ಆಪ್ಯಾಯಮಾನ. ಮುಖಚಿತ್ರಕ್ಕೆ ಅಂಟಿಸುವ ಸಲುವಾಗಿ ಕೆಲವು ಚಿತ್ರಗಳನ್ನು ವಾಸುದೇವರ ಮನೆಯಲ್ಲಿ ತೆಗೆದುಕೊಂಡೆವು. ವಯಸ್ಸಿನ ಕಾರಣದಿಂದ ವಾಸುದೇವ ಹೆಗಡೆಯವರು ಬೆಂಗಳೂರಿನ ತಮ್ಮ ಮಗನ ಮನೆಯಲ್ಲಿ ವಾಸವಾಗಿದ್ದಾರೆ. ಹಾಗಾಗಿ ಆ ಮನೆ ಈಗ ಖಾಲಿ.





ಗೋಪಯ್ಯ ಹೆಗಡೆ ಅವರ ಮನೆಯ ವಿಶಾಲ ಜಗಲಿ

ಮುಂದೆ ವಾಸುದೇವ ಹೆಗಡೆಯವರ ಅಕ್ಕನ ಮನೆ ಅಂದರೆ ಗೋಪಯ್ಯ ಹೆಗಡೆ ಮನೆಗೆ ಪಯಣ. ಅವರದು ಮೂರಂತಸ್ತಿನ ಹೆಂಚಿನ ಮನೆ. ಮಣ್ಣು ಕಲ್ಲಿನ ಮಿಶ್ರಣಕ್ಕೆ ಸಿಮೆಂಟ್‌ನ ಹೊದಿಕೆ. 75-80 ವರುಷ ಸಂದರೂ ಗಟ್ಟಿ ಮುಟ್ಟಾಗಿದೆ. ದೇಸಿ ತಂತ್ರಜ್ಞಾನದಲ್ಲಿ ಅರಳಿದ ಮನೆ. ವಿಶಾಲವಾದ ಜಗಲಿ, ವಿಶಾಲ ತಂಪಾದ ಹಜಾರ, ಸ್ವಚ್ಛ ಉಪ್ಪರಿಗೆ, ಅಡಿಕೆ ಒಣಗಿಸೊ ಚಾವಣಿ, ಮನೆ ಸುತ್ತ ಹೂವಿನ ಗಿಡಗಳು, ಅದರಲ್ಲೂ ವಿಶೇಷವಾಗಿ ಆಕರ್ಷಿಸಿದ್ದು 20 ವಿಧದ ಮಲ್ಲಿಗೆ ತಳಿಗಳು, ತರಾವರಿ ತರಕಾರಿಗಳು ಕಣ್ಮನ ಸೆಳೆದವು. ಗೋಪಯ್ಯ ಹೆಗಡೆಯವರ ಮಗ ಗಜಪತಿ ಹೆಗಡೆ ಮತ್ತು ಶೋಭಾ ಅವರು ತಮ್ಮ ನೆನಪ ಕನ್ನಡಿಯ ಬಿಂಬಗಳಿಂದ ನಮ್ಮನ್ನು ತೋಯಿಸಿದರು. 250 ಹಲಸಿನ ಹಣ್ಣಿನ ಸೊಳೆ ಹಿಡಿಸುವ ದೊಡ್ಡ ಹಲಸಿನ ಮರದ ಚರಿಗೆಯೊಂದು ನಮ್ಮ ಪರಂಪರಾಗತ ಜ್ಞಾನದ ಕೊಂಡಿಯಾಗಿ ಇನ್ನೂ ಅವರ ಮನೆ ಎದುರಿಗೆ ಮೂಕ ಸಾಕ್ಷಿಯಾಗಿ ನಿಂತಿದೆ. ಇಂತಹ ಹಲವಾರು ವಸ್ತುಗಳು ಅವರ ಮನೆಯಲ್ಲಿವೆ. ಅಡಿಕೆ ಬೆಳೆಗಾರರಾಗಿದ್ದ ಅವರು ಮಳೆಗಾಲದಲ್ಲಿ ಹೊರ ಹೋಗಲು ಆಗದೇ ಊಟಕ್ಕೆ ಅಕ್ಕಿಯ ದಾಸ್ತಾನು ಮುಗಿದಾಗ, ಲಭ್ಯವಿಲ್ಲದಾದಾಗ ಹಲಸಿನ ಹಣ್ಣಿನ ಸೊಳೆ ತಿಂದು ದಿನ ದೂಡಿದ ನೆನಪುಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಹಿಂದಿನವರಿಗೆ ತಿಳಿದ ವಿಜ್ಞಾನದ ಜ್ಞಾನ, ಸಾಮಾನ್ಯ ಜ್ಞಾನ ಇಂದಿನವರಿಗೆ ಇಲ್ಲ! ಹಾಗೆಯೇ ಬಾಳೆ ಕಾಯಿ ತಿಂದು ಬದುಕಿದ ನೆನಪುಗಳು ಸಹ ಹರಿದು ಬಂದವು.

ನಮ್ಮ ಹಿಂದಿನವರು ವಸ್ತು ವಿಜ್ಞಾನದಲ್ಲಿ ಪಳಗಿದವರು, ಹಲಸಿನ ಸೊಳೆ ಒಣಗಿಸಲು ಒಂದು ಜಾತಿಯ ಮರವಾದರೆ, ದೋಣಪೆಗೆ ಒಂದು ಜಾತಿ, ಮನೆಯ ಪಕಾಸಿ, ಜಂತಿ, ತೊಲೆ, ದಿಂಡುಗಳಿಗೆ ಬಳಸಿದ ಮರಗಳು ಬೇರೆ ಬೇರೆ. ಯಾವ ಮರವೂ ಒರಲೆ ಹಿಡಿಯದೆ ಹಾಗೆಯೇ ಉಳಿದು ನಮ್ಮನ್ನು ಅಚ್ಚರಿಗೆ ಕೆಡವಿದೆ. ಕಡಿಯುವ ಸಮಯ, ನಾಜೂಕು ಎಲ್ಲವೂ ಮರದ ಭವಿಷ್ಯವನ್ನು ನಿರ್ಧರಿಸುತ್ತವೆ ಎನ್ನುತ್ತಾರೆ ಶಿವಾನಂದ ಅವರು. ಮರ ಕೊಯ್ಯುವಾಗಲೂ ಹುಣ್ಣಿಮೆ, ಅಮಾವಾಸ್ಯೆಯನ್ನು ಗಮನದಲ್ಲಿರಿಸಿ ಕಡಿಯಲಾಗುತ್ತದೆ! ಇಂತಹ ಪಾರಂಪರಿಕ ಜ್ಞಾನಕ್ಕೆ ನಾವು ಬೆರಗಾದೆವು.

ಚಾರಣ

ಮುಂದಿನ ಕಾಡಿನ ಹಾದಿಯಲಿ ಪರಿಚಯಗೊಂಡ ಗಿಡ ಮೂಲಿಕೆಗಳು ಅನೇಕ. ಬಾಯಾರಿಕೆ ನೀಗಿಸಲು ಬಳಸುತ್ತಿದ್ದ ನುರುಕಲು ಗಿಡ, ನೀರನ್ನು ಒಸರುವ ಮರಗಳ ಪರಿಚಯವನ್ನು ಶಿವಾನಂದ ಕಳವೆಯವರು ಮಾಡಿಕೊಟ್ಟರು. ಕಣಗಿಲೆ, ಬಿಳಿಸಾರೆ ಮರ, ಕರಿ ಮತ್ತಿ, ಬಿಳಿ ಮತ್ತಿ, ಹಿಂದಿನವರು ಸೋಪಿನಂತೆ ಬಳಸುತ್ತಿದ್ದ ಗಣಪೆ ಬಳ್ಳಿ ಪರಿಚಯಗೊಂಡ ಮರ ಬಳ್ಳಿಗಳು. ತಂಬುಳಿ ಮಾಡಬಹುದಾದ ನಡೆತೆ ಕುಡಿ, ಕೆಂದಿಗೆ ಕುಡಿಯನ್ನು ಪರಿಚಯಿಸಿದರು. ದಕ್ಷಿಣ ಆಫ್ರಿಕಾದಿಂದ ಬಂದ ಸಿದ್ದಿಗಳ ಹಬ್ಬ, ಅವರ ದೇವರಾದ ಸಿದ್ದಿ ನ್ಯಾಸದ ಕುರಿತೂ ಮಾತು ಕತೆಯಾಯಿತು.

ಮತ್ತೆ ಮತ್ತೆ ನೆನಪ ಜೋಳಿಗೆಯಿಂದ ಮೊಗೆವಷ್ಟು ಸಂತಸವನ್ನು ಕೊಟ್ಟ 8 ಕಿ.ಮೀ ಚಾರಣವು ಪ್ರಮೋದ್ ವೈದ್ಯರ ಮನೆ ವಸತಿಯಲ್ಲಿ ಕೊನೆಗೊಂಡಿತು. ಮಾತಿಗೆಮಾತು ಜೋಡಿಸಿಕೊಂಡು ಮುಗಿದಂತೆ ಕಂಡರೂ ಅವರವರ ನೆನಪ ಬುತ್ತಿಯಲಿ ಅನುರಣಿಸತೊಡಗಿತು. ಹೊಸ ಕಲಿಕೆಗೆ ಹಾದಿ ತೆರೆಯಿತು. ❖



ದಟ್ಟ ಕಾನನದ ನಡುವೆ ಕಲಿಕೆಯ ಚಾರಣ



ಬತ್ತೀಸ್ ರಾಗ ಮತ್ತು 80 ಪ್ರಮಾದ

ಬಿ.ಎಸ್. ಶೈಲಜಾ

ಗಣಿತಕ್ಕೂ ಸಂಗೀತಕ್ಕೂ ನಂಟು ಇದ್ದದ್ದೇ. ಹಾಗೇ, ಎಲ್ಲ ವಿಷ್ಣು ದೇವಾಲಯಗಳಲ್ಲೂ ದೇವರ ಹೆಸರು ಬೇರೆಬೇರೆ ಇರುವುದಕ್ಕೂ ಶಿವನಿಗೆ ಹತ್ತು ಕೈಗಳು ಇರುವುದರ ಹಿಂದೆಯೂ ಗಣಿತದ ಸೂತ್ರ ಕೆಲಸ ಮಾಡಿದೆ ಎಂಬುದು ಗೊತ್ತೇ? ಅದನ್ನು ಅರಿಯುವುದರಲ್ಲಿ ಅಡಗಿದೆ ಸ್ವಾರಸ್ಯ

ಆಕಾಶವಾಣಿಯಲ್ಲಿ ಹಿಂದೆ ಮುಂಜಾವುಗಳಲ್ಲಿ ಮೂಡಿಬರುತ್ತಿದ್ದ 'ಗೀತಾರಾಧನ' ಎಂಬ ಸುಶ್ರಾವ್ಯ ಗೀತೆಗಳ ಕಾರ್ಯಕ್ರಮದಲ್ಲಿ ಆಗಾಗ್ಗೆ ಒಂದು ವಚನ ಕೇಳಿಬರುತ್ತಿತ್ತು. ಸಿದ್ಧರಾಮ ಜಂಬಲದಿನ್ನಿಯವರ ಅಥವಾ ಮಲ್ಲಿಕಾರ್ಜುನ ಮನ್ಸೂರರ ಸುಮಧುರ ಕಂಠದಲ್ಲಿ ಬಿತ್ತರವಾಗುತ್ತಿದ್ದ ವಚನವೊಂದರಲ್ಲಿ – ಬತ್ತೀಸ್ ರಾಗವ ಹಾಡಯ್ಯ - ಎಂದು ಕೇಳಿಸಿಕೊಂಡಾಗಲೆಲ್ಲ ಇದ್ಯಾವ ರಾಗ ಎಂದು (ಹಿಂದಿ ಕಲಿಯುವ ಮುನ್ನ) ತಲೆ ಕೆಡಿಸಿಕೊಂಡಿದ್ದುಂಟು. ಆಮೇಲೆ ಹಿಂದಿ ಭಾಷೆಯಲ್ಲಿ (ವ್ಯಾಕರಣದ) ವಚನ ಮತ್ತು ವಿಭಕ್ತಿ ಪ್ರತ್ಯಯಗಳ ಗೊಂದಲವೇ ಇಲ್ಲ ಎಂದು ತಿಳಿದಾಗ ರಾಗ ಎಂಬ ಪದದ ಬಹುವಚನ; ರಾಗಗಳು ಎಂಬ ಜ್ಞಾನೋದಯವಾಯಿತು. ಕಂಪಲ್ಸರಿ ಹಿಂದಿಗೆ 20ರವರೆಗೆ ಸಂಖ್ಯೆಗಳು ತಿಳಿದಿದ್ದರೆ ಸಾಕಾಗಿದ್ದರಿಂದ ಬತ್ತೀಸ್ ಎಂದರೆ 32 ಎಂದು ತಿಳಿಯಲು ಇನ್ನೂ ಕೆಲವು ವರ್ಷಗಳು ಬೇಕಾದವು. ಆಗ ಇನ್ನೊಂದು ಸಮಸ್ಯೆ ತಲೆ ಎತ್ತಿತು - ಈ 32 ರಾಗಗಳು ಯಾವುವು? ವಚನದೊಳಗೆ ತೂರಿಕೊಳ್ಳುವಂತಹ ವೈಶಿಷ್ಟ್ಯ ಏನಿದೆ? ಬಹಳ ಹುಡುಕಿದರೂ ಉತ್ತರ ಸಿಗಲಿಲ್ಲ. ಈ ಪ್ರಶ್ನೆ ತಲೆಯಲ್ಲೆಲ್ಲೋ ಕೊರೆಯುತ್ತಲೇ ಇತ್ತು.

ಕೆಲವು ವರ್ಷಗಳ ಹಿಂದೆ ವಿಷ್ಣುವಿನ 24 ಹೆಸರುಗಳ ಮೂಲವನ್ನು ಪತ್ತೆ ಮಾಡಿಕೊಂಡಾಗ ನನ್ನ ಉತ್ಸಾಹಕ್ಕೆ ಮಿತಿಯೇ ಇರಲಿಲ್ಲ. ಕಾರಣ ಇಷ್ಟೆ: ಎಲ್ಲ ವಿಷ್ಣು ದೇವಾಲಯಗಳಲ್ಲೂ ದೇವರ ಹೆಸರು ಬೇರೆ ಬೇರೆ ಇರುತ್ತದೆ. ಕೇಶವ, ಜನಾರ್ದನ, ಮಧುಸೂದನ - ಹೀಗೆ. (ತಿರುಪತಿಯ ವಿಗ್ರಹದ ಹೊರತಾಗಿ ಉಳಿದ) ದೇವಾಲಯಗಳಲ್ಲಿ ಈ ಹೆಸರುಗಳನ್ನು ಹೇಗೆ ನಿರ್ಧರಿಸುತ್ತಾರೆ ಎಂಬ ಗುಟ್ಟು ನನಗೆ ತಿಳಿಯಿತು. ವಿಷ್ಣುವಿಗೆ ನಾಲ್ಕು ಕೈಗಳಿವೆಯಷ್ಟೆ. ನಾಲ್ಕು ವಸ್ತುಗಳೂ ಇವೆ. ಅವುಗಳೇ ಶಂಖ, ಚಕ್ರ, ಗದೆ, ಪದ್ಮ. ಯಾವ್ಯಾವ ಕೈಯಲ್ಲಿ ಏನೇನಿರಬೇಕಾಗುತ್ತದೆ ಎಂಬುದನ್ನು ಈ ಹೆಸರುಗಳು ನಿರ್ಧರಿಸುತ್ತವೆ. ಇದಕ್ಕೊಂದು ಚಿಕ್ಕ ಶ್ಲೋಕವೂ ಸಿಕ್ಕಿತು. ಇಲ್ಲಿ ಗಣಿತದ ನಂಟು ದೊರಕಿತು.

ಕ್ರಮಯೋಜನೆ ಮತ್ತು ವಿಕಲ್ಪ

ಹತ್ತು ಮಕ್ಕಳಲ್ಲಿ ಮೂವರ ತಂಡಗಳನ್ನು ಮಾಡಬೇಕಾದರೆ ಎಷ್ಟು ಸಾಧ್ಯತೆಗಳಿವೆ? ಅಥವಾ ಹತ್ತು ಬಣ್ಣದ 15 ಚೆಂಡುಗಳನ್ನು ಬಣ್ಣ ಪುನರಾವರ್ತನೆಯಾಗದಂತೆ ಮೂರರ ಗುಂಪು ಮಾಡಬೇಕಾದರೆ ಎಷ್ಟು ಗುಂಪುಗಳಿರುವುದು ಸಾಧ್ಯ? ಇಂತಹ ಲೆಕ್ಕಗಳನ್ನು ಕ್ರಮಯೋಜನೆ (ಪರ್ಮ್ಯುಟೇಷನ್) ಮತ್ತು ವಿಕಲ್ಪ (ಕಾಂಬಿನೇಷನ್) ಎಂದು ಕಲಿಸಿಕೊಡುತ್ತಾರೆ. ಇದರ ಅನ್ವಯಗಳು ಅಸಂಖ್ಯ. ಉದಾಹರಣೆಗೆ ಈಗ ದೊರೆಯುವ 'ಕಾಂಬಿನೇಷನ್ ಲಾಕ್' ಎಂಬ ಬೀಗಗಳು ವಾಸ್ತವದಲ್ಲಿ ಕ್ರಮಯೋಜನೆಗೆ ಅಂದರೆ 'ಪರ್ಮ್ಯುಟೇಷನ್ ಲಾಕ್'ಗೆ ಎಂಬುದನ್ನು ಆಗಲೇ ತಿಳಿದುಕೊಂಡದ್ದು.

ವಿಷ್ಣುವಿನ ನಾಲ್ಕು ಕೈಗಳಿಗೆ ನಾಲ್ಕು ಬೇರೆ ಬೇರೆ ವಸ್ತುಗಳನ್ನು ಜೋಡಿಸಿದ್ದರಿಂದ, 24 ಹೆಸರುಗಳ ಪಟ್ಟಿ ದೊರಕುತ್ತದೆ. ಇದನ್ನು ನಮಗೆ ಗಣಿತದಲ್ಲಿ ಕಲಿಸಲಿಲ್ಲ. ಬದಲಿಗೆ ಎ ಬಿ ಸಿ ಡಿ ಎಂದು ಹೆಸರಿಟ್ಟು ಅದೇ ಲೆಕ್ಕವನ್ನು ಮಾಡಿಸಿ ಅದಕ್ಕೊಂದು ಸೂತ್ರವನ್ನೂ ಕಲಿಸಿಕೊಟ್ಟಿದ್ದರು. 4 x 3 x 2 x 1 = 24. ಇದೇ ಸೂತ್ರ. ಹಾಗಾಗಿ 24 ಬಗೆಯ ವಿಷ್ಣುವಿನ ರೂಪಗಳು ಸಾಧ್ಯ. ವಿಷ್ಣುವಿಗೆ ನಾಲ್ಕರ ಬದಲು ಐದು ಕೈ ಇದ್ದಿದ್ದರೆ? ಇಂಥದೊಂದು ಸಮಸ್ಯೆ ಭಾಸ್ಕರಾಚಾರ್ಯರ ಲೀಲಾವತಿಯಲ್ಲಿದೆ. ಶಿವನಿಗೆ ಹತ್ತು ಕೈಗಳು - ಹತ್ತು ಆಯುಧಗಳು - ಹಾಗಾದರೆ ಎಷ್ಟು ಬಗೆಯ ಕ್ರಮಜೋಡಣೆ ಸಾಧ್ಯ? ಲೆಕ್ಕ ಹಾಕಲು ಪ್ರಯತ್ನಿಸಿ ಸ್ವಾರಸ್ಯಕರ ಉತ್ತರ ದೊರಕುತ್ತದೆ.

ಬತ್ತೀಸ್ ರಾಗಗಳು

ಇದೇ ಬಗೆಯ ಲೆಕ್ಕ ಈಗ ಸ್ವರಗಳಿಗೆ ಅನ್ವಯಿಸೋಣ. ಯಾವುದೇ (ಸಂಪೂರ್ಣ) ರಾಗಕ್ಕೆ ಏಳು ಸ್ವರಗಳಿರಬೇಕು. ಷಡ್ಜ ಮತ್ತು ಪಂಚಮಗಳಂತೂ ಇರಲೇಬೇಕು. ಉಳಿದ ಐದು ಸ್ಥಾನಗಳನ್ನು ಎಷ್ಟು ಪ್ರಕಾರಗಳಿಂದ ತುಂಬಬಹುದು? ಮೇಲೆ ವಿಷ್ಣುವಿನ ಉದಾಹರಣೆಯಂತೆ ಇದು 5 x 4 x 3 x 2 x 1 = 120. ಅಂದರೆ 120 ರಾಗಗಳಿರಬೇಕಾಗಿತ್ತಲ್ಲವೇ? ಇಲ್ಲಿ ಒಂದು ನಿರ್ಬಂಧ ಉಂಟು. ಸರಿಗಮಪದನಿ ಎಂಬ ಕ್ರಮ ತಪ್ಪಿಸುವಂತಿಲ್ಲ. ಅಂದರೆ ಷಡ್ಜ ಆದಮೇಲೆ ರಿಷಭ; ರಿಷಭ ಆದಮೇಲೆ ಗಾಂಧಾರ ಹೀಗೆ ಬರಲೇ ಬೇಕು. ನಿಷಾದ ಆಗಲಿ ಧೈವತ ಆಗಲೀ ಅಲ್ಲಿ ಬರುವಂತಿಲ್ಲ. ಹಾಗಾದರೆ ಲೆಕ್ಕ ಏಕೆ? ಒಂದೇ ರಾಗ ಸರಿಗಮಪದನಿ. ಆದರೆ, ರಿಷಭ, ಗಾಂಧಾರ, ಮಧ್ಯಮ, ಧೈವತ, ನಿಷಾದಗಳು, ಶುದ್ಧ ಮತ್ತು ಕೋಮಲ ಎಂಬುದಾಗಿ ಎರಡೆರಡಿವೆ. ಆದ್ದರಿಂದ ಎರಡರಲ್ಲಿ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕು. ಇದೀಗ ಲೆಕ್ಕ ಬೇರೆಯಾಗುತ್ತದೆ. ಎರಡು ಸ್ವರಗಳ ಆಯ್ಕೆಯ ಕಾರಣ 2 x 2 x 2 x 2 x 2 = 32. ಹೀಗೆ ಬತ್ತೀಸ್ ರಾಗಗಳ ಸಮಸ್ಯೆಗೆ ಉತ್ತರ ಸಿಕ್ಕಿಯೇ ಬಿಟ್ಟಿತು.


ಒಟ್ಟು ರಾಗಗಳೆಷ್ಟೋ ಇವೆ. ಅವುಗಳಲ್ಲಿ ಏಳೂ ಸ್ವರಗಳಿರುವ ರಾಗಗಳೂ ಸಾಕಷ್ಟಿವೆ. ಆದರೆ ಎಲ್ಲ ರಾಗಗಳ ಆಧಾರವನ್ನಾಗಿ ಥಟ್ ಎಂದು ಹೆಸರಿಸಿರುವ ರಾಗಗಳು ಹತ್ತು ಮಾತ್ರ. 32 ರಿಂದ ಹತ್ತಕ್ಕೆ ಯಾವಾಗ ಇಳಿಯಿತು? ಏಕೆ ಇಳಿಯಿತು? ಇದು ಗೊತ್ತಿಲ್ಲ. ಇತ್ತೀಚೆಗೆ ಕಣ್ಣಿಗೆ ಬಿದ್ದ ಡಾ.ಸುಕನ್ಯಾ ಪ್ರಭಾಕರ್ ಅವರ ಪುಸ್ತಕದಲ್ಲಿ 32 ರಾಗಗಳ ಬಗ್ಗೆ ಚರ್ಚೆಯೂ ಇದೆ. 15 - 16 ನೆಯ ಶತಮಾನದಲ್ಲಿ ಪುರಂದರದಾಸರು ಮತ್ತು ನಿಜಗುಣ ಶಿವಯೋಗಿಗಳು ಈ 32 ರಾಗಗಳನ್ನು ಹೆಸರಿಸಿದ್ದರ ಉಲ್ಲೇಖಗಳನ್ನು ಕೊಟ್ಟಿದ್ದಾರೆ. ಕಾಲಾನುಕಾಲಕ್ಕೆ ಬದಲಾದ 32 ರಾಗಗಳ ಪಟ್ಟಿಯೂ ಇದೆ.

ಆದರೆ, ಈ ಲೆಕ್ಕದಿಂದ ಪೂರ್ಣ ಸಮಾಧಾನವಾಗಲಿಲ್ಲ. ಏಕೆಂದರೆ ಕರ್ನಾಟಕ ಸಂಗೀತ ಪದ್ಧತಿಯಲ್ಲಿ ಮೇಳಕರ್ತ ಎಂಬ 72 ರಾಗಗಳಿವೆ. ಇವು ಹೇಗೆ ಉತ್ಪತ್ತಿಯಾದವು? ಇಲ್ಲಿ ಯಾವ ಗಣಿತ ಅಡಗಿದೆ ಎಂದು ಹುಡುಕುತ್ತಾ ಹೊರಟಾಗ ಅಲ್ಲೊಂದು ವಿಶೇಷ ಸೌಲಭ್ಯ ಮಾಡಿಕೊಂಡಿರುವುದು ಕಂಡಿತು. ಇಲ್ಲಿ ಮೊದಲನೆಯ ಗಾಂಧಾರವನ್ನು ಮೂರನೆಯ ರಿಷಭ ಎಂದು ಪರಿಗಣಿಸುತ್ತಾರೆ. ಅಂದರೆ ರಿಷಭಕ್ಕೆ ಮೂರು ಆಯ್ಕೆಗಳಿವೆ. ಇದೇ ರೀತಿ ಧೈವತ ನಿಷಾದಗಳ ಮಧ್ಯೆಯೂ ಹೊಂದಾಣಿಕೆ ಇದೆ. ಹಾಗಾದರೆ ಈ ಹೊಸ ಅಳವಡಿಕೆಯ ಕಾರಣ ಎಷ್ಟು ರಾಗಗಳು ಸಾಧ್ಯ? ಮೇಲಿನ ಸೂತ್ರದಂತೆ 3 x 2 x 2 x 3 x 2 = 72 ರಾಗಗಳಾಗುತ್ತವೆ.

ಗಣಿತಕ್ಕೂ ಸಂಗೀತಕ್ಕೂ ನಂಟು ಇದ್ದದ್ದೇ. ಈ ಮೇಳಕರ್ತ ರಾಗಗಳ ಹೆಸರಿನಲ್ಲೇ ಕಟಪಯಾದಿ ಎಂಬ ಸಂಖ್ಯಾವಾಚಕ ಸೂತ್ರ ಅಡಗಿದೆ. ಶಂಕರಾಭರಣಕ್ಕೆ ಧೀರ ಎಂಬ ಅಕ್ಷರಗಳನ್ನು ಅಂಟಿಸಿರುವುದೂ ಇದೇ ಕಾರಣಕ್ಕೆ. ಶತಮಾನಗಳ ಹಿಂದಿನ ಎಲ್ಲ ಖಗೋಳ ಮತ್ತು ಗಣಿತಗ್ರಂಥಗಳಲ್ಲಿ ಅಷ್ಟೇ ಅಲ್ಲ ಶಾಸನಗಳಲ್ಲಿಯೂ ಈ ಪದ್ಧತಿ ಅಳವಡಿಸಿರುವುದರಿಂದ ತಪ್ಪಿಗೆ ಆಸ್ಪದವೇ ಇಲ್ಲ.

80 ಬಗೆಯ ಪ್ರಮಾದಗಳು!

ಹತ್ತನೆಯ ಶತಮಾನದ ಜೈನ ಸಿದ್ಧಾಂತಿ ಮತ್ತು ಕರ್ತೃ ನೇಮಿಚಂದ್ರ 15 ಬಗೆಯ ಪ್ರಮಾದಗಳನ್ನು ಪಟ್ಟಿ ಮಾಡಿದ್ದಾನೆ. ಒಂದೊಂದು ಬಗೆಯ ಪ್ರಮಾದದಲ್ಲಿ ಹಲವಾರು ಉಪವರ್ಗಗಳಿವೆ. ಪ್ರಮಾದಗಳ ಹೆಸರುಗಳು ಹೀಗಿವೆ ವಿಕಥಾ - ಅಂದರೆ ತಪ್ಪು ಮಾತು - ಇದರಲ್ಲಿ ನಾಲ್ಕು ವಿಭಾಗಗಳು; ಕಾಷಾಯ ಅಂದರೆ ಪಿಪಾಸೆ ಎನ್ನಬಹುದು ಇದರಲ್ಲಿ 4 ವಿಭಾಗಗಳು; ಇಂದ್ರಿಯ ಅಂದರೆ ದುರಾಸೆ ಎನ್ನಬಹುದು - ಇದರಲ್ಲಿ 5 ವಿಭಾಗಗಳು; ನಿದ್ರಾ ಮತ್ತು ಪ್ರಣಯ (ಲೋಲುಪತೆ ಎನ್ನಬಹುದು) ಹೀಗೆ ಒಟ್ಟು 15 ಪ್ರಮಾದಗಳು ಸಾಧ್ಯ. ಎಷ್ಟು ರೀತಿಯಲ್ಲಿ ಪ್ರಮಾದಗಳು ಸಾಧ್ಯ? ಇದಕ್ಕೂ ಲೆಕ್ಕವಿದೆ. 4 x 4 x 5 x 1 x 1 = 80. ಗೊಮ್ಮಟಸಾರ ಎಂಬ ಜೈನ ಗ್ರಂಥದಲ್ಲಿ ಈ ಎಂಬತ್ತೂ ವಿಧಗಳ ಪಟ್ಟಿಯೇ ಲಭ್ಯವಿದೆ.



ಮಲ್ಲಿಕಾರ್ಜುನ ಮನ್ಸೂರ

32 ಎಂಬ ಸಂಖ್ಯೆ ಕೇಳಿದೊಡನೆಯೇ ನೆನಪಾಗುವುದು ಹಲ್ಲುಗಳು. ನಮಗೇಕೆ 32 ಹಲ್ಲುಗಳು? ಹಾಗೆ ನೋಡಿದರೆ 32 ಹಲ್ಲಿರುವವರ ಸಂಖ್ಯೆ ಕಡಿಮೆಯೇ. ಸಾಧಾರಣವಾಗಿ ಎಲ್ಲರಿಗೂ 30 ಹಲ್ಲುಗಳು ಮಾತ್ರ ಇರುತ್ತವೆ. ಆಮೇಲೆ ಬರುವ ಬುದ್ಧಿ ಹಲ್ಲು ಡಾಕ್ಟರರ ಇಕ್ಕಳಕ್ಕೆ ಬಲಿಯಾಗಿಬಿಡುತ್ತದೆ. ಹಲ್ಲುಗಳ ಜೋಡಣೆಯನ್ನು ಗಮನಿಸಿದಾಗ ಆಲಂಕಾರಿಕ 8 ಹಲ್ಲುಗಳಿಗೆ ಮಾತ್ರ ಪ್ರಾಶಸ್ತ್ಯ ಸಿಕ್ಕಿದೆ ಎನ್ನಿಸುತ್ತದೆ. ಅವಶ್ಯಕತೆಯೇ ಇಲ್ಲದ ಸಿಗಿಯುವ ಹಲ್ಲುಗಳಿಗೂ ಪ್ರಾಶಸ್ತ್ಯ ಸಿಕ್ಕಿದೆ. ಆದರೆ ಕಷ್ಟಪಟ್ಟು ಆಹಾರವನ್ನು ಜಗಿಯುವ ದವಡೆ ಹಲ್ಲುಗಳ ಸಂಖ್ಯೆ ಕಡಿಮೆಯೇ ಇದೆ. ಇಲ್ಲಿ 32 ಏಕೆ ಎಂಬ ಗಣಿತವನ್ನು ಯಾರಾದರೂ ದಂತವೈದ್ಯರು ಪರಿಶೀಲಿಸಬಹುದು.

32 ಎಂಬುದು ಗಣಪತಿಯ ಅವತಾರಗಳ ಸಂಖ್ಯೆಯೂ ಹೌದು. ನಮ್ಮ ಲೆಕ್ಕವನ್ನು ಅದಕ್ಕೂ ವಿಸ್ತರಿಸಲು ನಾಲ್ಕು ಕೈಗಳ ಜೊತೆಗೆ ಸೊಂಡಿಲನ್ನೂ ಸೇರಿಸಿಕೊಂಡು ಹಣ್ಣು ಹಂಪಲು ಮೋದಕ ಇವುಗಳನ್ನು ಹಂಚಿಬಿಡಬಹುದಾಗಿತ್ತು. ಆದರೆ ಹಾಗಾಗುವುದಿಲ್ಲ. ಏಕೆಂದರೆ ನಂಜನಗೂಡಿನಲ್ಲಿರುವ 32 ಗಣಪತಿಗಳ ವಿಗ್ರಹದಲ್ಲಿ ಕೆಲವಕ್ಕೆ ಹತ್ತು ತಲೆಗಳೂ ಇವೆ!

32 ಎಂಬ ಸಂಖ್ಯೆಗೆ ಹ್ಯಾಪಿ ನಂಬರ್ ಎಂಬ ಹೆಸರೂ ಇದೆ. 3 ಮತ್ತು 2, ಇವುಗಳ ವರ್ಗಗಳ ಮೊತ್ತ 13: 1 ಮತ್ತು 3ರ ವರ್ಗಗಳ ಮೊತ್ತ 10. 1ರ ವರ್ಗ 1 ಎಂಬ ಕಾರಣಕ್ಕೆ. ಇದು ಲೆಕ್ಕಿಗರ ವ್ಯಾಖ್ಯೆ. ಇದನ್ನು ಸಂತೋಷದ ಸಂಖ್ಯೆ ಎಂದು ಅನುವಾದಿಸಲಾಗದು. ಏಕೆಂದರೆ ಆಗ ಕೊನೆಗೆ 1 ಎಂಬ ಉತ್ತರ ಕೊಡಲಾಗದ ದುಃಖದ ಸಂಖ್ಯೆಗಳೇ ಹೆಚ್ಚಾಗಿಬಿಡುವುವು.



• ಎಂ.ಎಸ್.ಪೂಜಾರ

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ ಕೆಲವು ಅಪೂರ್ಣ ಪದಗಳಲ್ಲಿ ಕೆಲವು ದೇಶ, ರಾಜ್ಯ, ಜಿಲ್ಲೆಗಳ ಹೆಸರು ತುಂಬಿ ಓದಿದರೆ ಅರ್ಥಪೂರ್ಣ ಪದಗಳಾಗುತ್ತವೆ. ಪ್ರಯತ್ನಿಸಿ


1. ಗುಲಾ __ __ __
2. ಸಿಂ __ __ __
3. ಜ __ __ __ ಲ
4. __ ಪಿಲಿನಾದ
5. ಕಲಾನಿ __ __ __
6. ಸಾದಾ __ __ __ನ ಸುಂದರಿ

ಮಜ ಮಜ ಮಜಕೂರದ ಮಾರ್ಚ್ 14ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ


ದಸ್ಕು ಚಕ್ಕು ಶ್ರೇಷ್ಠ ಕಥೆಯ

ತೆನಾಲಿ ರಾಮ ಮತ್ತು ಕಳ್ಳರು


• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ತೆನಾಲಿ ರಾಮಕೃಷ್ಣ ಒಂದು ದಿನ ಕೃಷ್ಣದೇವರಾಯನ ಆಸ್ಥಾನದಿಂದ ಮನೆಗೆ ಬರುವುದು ತುಂಬಾ ತಡವಾಯಿತು




ಕಳ್ಳರಿಬ್ಬರು ತೆನಾಲಿ ರಾಮನ ಮನೆಯನ್ನು ದೋಚಲು ಸಂಚು ಹಾಕಿ ಕಾಯುತ್ತಿದ್ದರು



ಕಳ್ಳರು ಬಂದಿರುವುದನ್ನು ಅರಿತ ತೆನಾಲಿ ರಾಮ ಅವರನ್ನು ಓಡಿಸಲು ಉಪಾಯ ಮಾಡಿದ. ಆ ಬಗ್ಗೆ ಪತ್ನಿಗೆ ತಿಳಿಸಿದ



ಪೆಟ್ಟಿಗೆಯಲ್ಲಿ ಚಿನ್ನವನ್ನು ತುಂಬಿ ಅದನ್ನು ಬಾವಿಯಲ್ಲಿ ಬಿಡೋಣ ಎಂದು ಕಳ್ಳರಿಗೆ ಕೇಳುವಂತೆ ಜೋರಾಗಿ ಹೇಳಿದ. ಪೆಟ್ಟಿಗೆಯಲ್ಲಿ ಮಾತ್ರ ಕಲ್ಲು ತುಂಬಿದ



ಬಾವಿಯಲ್ಲಿ ಬಿಟ್ಟ 'ಚಿನ್ನದ ಪೆಟ್ಟಿಗೆ'ಯನ್ನು ಹೊರತೆಗೆಯಲು ಕಳ್ಳರು ನೀರನ್ನು ಖಾಲಿ ಮಾಡತೊಡಗಿದರು



ಕಳ್ಳರು ಬಾವಿಯಿಂದ ತೆಗೆದು ಹಾಕಿದ್ದ ನೀರು ತೆನಾಲಿ ರಾಮನ ತೋಟದ ಸಸಿಗಳಿಗೆ ಹರಿಯಿತು. ಅಷ್ಟರಲ್ಲಿ ತೆನಾಲಿ ರಾಮನು ರಾಜ ಭಟರನ್ನು ಕರೆಸಿ ಕಳ್ಳರನ್ನು ಅವರಿಗೆ ಒಪ್ಪಿಸಿದ

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ 'ಭಲೇ ಜೋಡಿ'

1. 308 x 25 = 77,00
2. 88 x88 = 7744
3. 5214 x23 = 11,99,22
4. 61853 x9 = 55,66,77
5. 86295 x9 = 77,66,55
6. 86174 x9 = 77,55,66
7. 73953 x9 = 66,55,77
8. 74195 x9 = 66,77,55
9. 61974 x9 = 55,77,66
10. 74162 x74162 = 55,00,00,22,44
11. 124703828407532 x9 = 11,22,33,44,55,66,77,88

ಟ್ವೆಂಟಿ – 20 ಮ್ಯಾಚ್

ರಾಜ್ಯಕ್ಕೂ ರಾಜಧಾನಿಗೂ ಹೊಂದಿಸಿ

1	ಆಂಧ್ರಪ್ರದೇಶ	A	ಶಿಮ್ಲಾ
2	ಅರುಣಾಚಲ ಪ್ರದೇಶ	B	ಪಣಜಿ
3	ಬಿಹಾರ	C	ಹೈದರಾಬಾದ್
4	ಗೋವಾ	D	ಪಟ್ನಾ
5	ಹರಿಯಾಣ	E	ರಾಂಚಿ
6	ಹಿಮಾಚಲ ಪ್ರದೇಶ	F	ಭೋಪಾಲ
7	ಜಾರ್ಖಂಡ್	G	ಇಂಫಾಲ
8	ಕರ್ನಾಟಕ	H	ಬೆಂಗಳೂರು
9	ಕೇರಳ	I	ಚಂಡೀಗಡ
10	ಮಧ್ಯಪ್ರದೇಶ	J	ಇಟಾನಗರ
11	ಮಹಾರಾಷ್ಟ್ರ	K	ಮುಂಬೈ
12	ಮಣಿಪುರ	L	ಜೈಪುರ
13	ಮೇಘಾಲಯ	M	ಕೋಲ್ಕತ್ತ
14	ಪಶ್ಚಿಮ ಬಂಗಾಳ	N	ಲಖನೌ
15	ಉತ್ತರ ಪ್ರದೇಶ	O	ಚೆನ್ನೈ
16	ತಮಿಳುನಾಡು	P	ಶಿಲ್ಲಾಂಗ್
17	ರಾಜಸ್ಥಾನ	Q	ಗಾಂಧಿನಗರ
18	ನಾಗಾಲ್ಯಾಂಡ್	S	ಕೊಹಿಮಾ
19	ಉತ್ತರಾಖಂಡ	T	ಡೆಹ್ರಾಡೂನ್
20	ಗುಜರಾತ್	U	ತಿರುವನಂತಪುರ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ಕ ಸಿ ಚು ಕೆ ರು
ಡ ಚು ಹ ಪು ತೆ

- ( ) ಂ ( ) ಸಿವುಡು
- ( ) ಂ ( ) ಕೊಕ್ಕು
- ( ) ಂ ( ) ಒಂದು ಪ್ರಾಣಿ
- ( ) ಂ ( ) ಒಂದು ಬಣ್ಣ
- ( ) ಂ ( ) ಶಿರ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1. ಜಂಗು, 2. ಗುಂಪು, 3. ಹಂಸ, 4. ಹೊಂಡ, 5. ತುಂಡು

ಟ್ವೆಂಟಿ–20 ಮ್ಯಾಚ್

1–B, 2–F, 3–D, 4–M, 5–L, 6–N, 7–E, 8–A, 9–T, 10–G, 11–C, 12–P, 13–K, 14–H, 15-O, 16–R, 17–I, 18–S, 19–Q, 20–J

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು



ಧನ್ಯಶ್ರೀ ಎಸ್ ಅಂಗಡಿ
ರಾಣೆಬೆನ್ನೂರು



ಗಿರಿಧರ್ ಸಿಂಗ್ ಆರ್.
ಕೋಲಾರ



ಸಾನ್ವಿ ಕೆ.ಆರ್.
ಕೊಣನೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸತತ ಐದನೇ ದಿನವೂ ಸಾವಿರ ದಾಟಿದ ಸೋಂಕಿತರ ಸಂಖ್ಯೆ

ಕೋವಿಡ್: ಮತ್ತಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, ಶನಿವಾರ 1,798 ಪ್ರಕರಣಗಳು ದೃಢಪಟ್ಟಿವೆ.

ಕಳೆದ ನ.24ರಂದು ರಾಜ್ಯದಲ್ಲಿ 1,870 ಪ್ರಕರಣಗಳು ವರದಿಯಾಗಿದ್ದವು. ಈಗ ಮತ್ತೆ ಹೊಸ ಪ್ರಕರಣಗಳ ಸಂಖ್ಯೆ ಎರಡು ಸಾವಿರದ ಗಡಿಯ ಆಸುಪಾಸಿಗೆ ತಲುಪಿದೆ. ರಾಜ್ಯದಲ್ಲಿ ಸತತ ಐದನೇ ದಿನ ಕೂಡ ಸೋಂಕಿತರ ಸಂಖ್ಯೆ ಸಾವಿರದ ಗಡಿ ದಾಟಿದ್ದು, ಈ ಅವಧಿಯಲ್ಲಿ 7,285 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ.

ಈ ತಿಂಗಳು 20 ದಿನಗಳಲ್ಲಿ 17,362 ಮಂದಿ ಕೊರೊನಾ ಸೋಂಕಿತರಾಗಿದ್ದಾರೆ. ಹೊಸ ಪ್ರಕರಣಗಳು ಏರುಗತಿ ಪಡೆದ ಕಾರಣ ಸಕ್ರಿಯ ಪ್ರಕರಣಗಳು ಮತ್ತಷ್ಟು ಹೆಚ್ಚಳವಾಗಿದ್ದು, 12,828 ಮಂದಿ ಆಸ್ಪತ್ರೆ ಸೇರಿದಂತೆ ವಿವಿಧೆಡೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಅವರಲ್ಲಿ 134 ಮಂದಿ ತೀವ್ರ ನಿಗಾ ಘಟಕದಲ್ಲಿ ಇದ್ದಾರೆ.

ಸೋಂಕಿತರಲ್ಲಿ ಬೆಂಗಳೂರಿನಲ್ಲಿ 5 ಮಂದಿ, ಬೀದರ್ ಹಾಗೂ ವಿಜಯಪುರದಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಈವರೆಗೆ ಸಾವಿಗೀಡಾದವರ ಸಂಖ್ಯೆ 12,432ಕ್ಕೆ ತಲುಪಿದೆ. ಕೋವಿಡ್ ಪೀಡಿತರಲ್ಲಿ ಮತ್ತೆ 1,030 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 9.43 ಲಕ್ಷ ದಾಟಿದೆ. ಒಂದು ದಿನದ ಅವಧಿಯಲ್ಲಿ 94,043 ಮಂದಿಗೆ ಪರೀಕ್ಷೆ ಮಾಡಲಾಗಿದೆ. ಈವರೆಗೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 2.02 ಕೋಟಿ ಗಡಿ ದಾಟಿದೆ.

ಬೆಂಗಳೂರಿನಲ್ಲಿ ಏರಿಕೆ: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿವೆ. ಬೆಂಗಳೂರಿನಲ್ಲಿ ಸೋಂಕಿತರ ಸಂಖ್ಯೆ ಏರುಗತಿ ಪಡೆದುಕೊಂಡಿದೆ. ಹೊಸದಾಗಿ 1,186 ಪ್ರಕರಣಗಳು ವರದಿಯಾಗಿದ್ದು, ನಾಲ್ಕು ತಿಂಗಳ ಬಳಿಕ 24 ಗಂಟೆಗಳ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ. 48 ಗಂಟೆಗಳ ಅವಧಿಯಲ್ಲಿ 2,223 ಮಂದಿ ಸೋಂಕಿತರಾಗಿದ್ದಾರೆ. ಈವರೆಗೆ ಸೋಂಕಿತರಾದವರ ಸಂಖ್ಯೆ 4.16 ಲಕ್ಷ ದಾಟಿದೆ.

ಮೈಸೂರಿನಲ್ಲಿ ಮತ್ತೆ 59 ಪ್ರಕರಣಗಳು ದೃಢಪಟ್ಟಿವೆ. ಅಲ್ಲಿ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 54,741ಕ್ಕೆ ತಲುಪಿದೆ. ಉಡುಪಿಯಲ್ಲಿ 66, ಕಲಬುರ್ಗಿಯಲ್ಲಿ 61, ದಕ್ಷಿಣ ಕನ್ನಡದಲ್ಲಿ 52, ಬೀದರ್‌ನಲ್ಲಿ 49, ತುಮಕೂರಿನಲ್ಲಿ 43 ಪ್ರಕರಣಗಳು ಹೊಸದಾಗಿ ವರದಿಯಾಗಿವೆ.

10 ಲಕ್ಷ ಹಿರಿಯ ನಾಗರಿಕರಿಗೆ ಲಸಿಕೆ

ರಾಜ್ಯದಲ್ಲಿ ಶನಿವಾರ 3,404 ಕೇಂದ್ರಗಳಲ್ಲಿ ಕೋವಿಡ್ ಲಸಿಕೆ ವಿತರಣೆ ಅಭಿಯಾನ ನಡೆದಿದ್ದು, 72,024 ಲಕ್ಷ ಮಂದಿಗೆ ಲಸಿಕೆ ವಿತರಣೆ ಮಾಡಲಾಗಿದೆ. ಲಸಿಕೆ ಪಡೆದವರಲ್ಲಿ 50,880 ಮಂದಿ ಹಿರಿಯ ನಾಗರಿಕರಾಗಿದ್ದಾರೆ. ಈವರೆಗೆ 23.34 ಲಕ್ಷ ಡೋಸ್ ಲಸಿಕೆಯನ್ನು ಫಲಾನುಭವಿಗಳಿಗೆ ನೀಡಲಾಗಿದೆ. 5.15 ಲಕ್ಷ ಆರೋಗ್ಯ ಕಾರ್ಯಕರ್ತರು ಮೊದಲ ಡೋಸ್ ಲಸಿಕೆ ಪಡೆದುಕೊಂಡಿದ್ದಾರೆ. ಇವರಲ್ಲಿ 3.13 ಲಕ್ಷ ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ. ಲಸಿಕೆ ಪಡೆದುಕೊಂಡ ಹಿರಿಯ ನಾಗರಿಕರ ಸಂಖ್ಯೆ 10 ಲಕ್ಷದ ಗಡಿ ದಾಟಿದೆ.

45ರಿಂದ 60 ವರ್ಷದೊಳಗಿನ ಕೋವಿಡೇತರ ಕಾಯಿಲೆ ಎದುರಿಸುತ್ತಿರುವವರಲ್ಲಿ 2.54 ಲಕ್ಷ ಮಂದಿ ಲಸಿಕೆ ಪಡೆದುಕೊಂಡಿದ್ದಾರೆ. ಕೋವಿಡ್ ಮುಂಚೂಣಿ ಯೋಧರಲ್ಲಿ 1.94 ಲಕ್ಷ ಮಂದಿ ಮೊದಲ ಡೋಸ್ ಪಡೆದಿದ್ದಾರೆ. ಅವರಲ್ಲಿ 47,207 ಮಂದಿ ಎರಡನೇ ಡೋಸ್ ಪೂರ್ಣಗೊಳಿಸಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ.

8 ರಾಜ್ಯಗಳಲ್ಲಿ ಸೋಂಕು ಏರುಗತಿ

ನವದೆಹಲಿ (ಪಿಟಿಐ, ರಾಯಿಟರ್ಸ್): ಕೋವಿಡ್– 19 ಹೊಸ ಪ್ರಕರಣಗಳು ದೆಹಲಿ ಮತ್ತು ಮಹಾರಾಷ್ಟ್ರ ಸೇರಿ ಎಂಟು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಪ್ರತಿದಿನವೂ ಏರುಗತಿಯಲ್ಲಿದ್ದು, ಕೇರಳದಲ್ಲಿ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಶನಿವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ತಾಸುಗಳಲ್ಲಿ ದೇಶದಲ್ಲಿ 40,953 ಪ್ರಕರಣಗಳು ದಾಖಲಾಗಿವೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ದೇಶದಲ್ಲಿ ಸಕ್ರಿಯ ಪ್ರಕರಣಗಳ ಒಟ್ಟು ಸಂಖ್ಯೆಯಲ್ಲಿ ಮಹಾರಾಷ್ಟ್ರ, ಕೇರಳ ಹಾಗೂ ಪಂಜಾಬ್ ರಾಜ್ಯಗಳದ್ದೇ ಶೇ 76.22ರಷ್ಟಿವೆ. ಇದರಲ್ಲಿ ಮಹಾರಾಷ್ಟ್ರದಲ್ಲಿ ಕೋವಿಡ್-19 ಪ್ರಕರಣಗಳ ಸಂಖ್ಯೆ ಶೇ 62 ರಷ್ಟಾದರೆ, ಕೇರಳ ಶೇ 8.83 ಮತ್ತು ಪಂಜಾಬ್ ರಾಜ್ಯದ್ದು ಶೇ 5.36 ರಷ್ಟು ಪ್ರಕರಣಗಳಿವೆ.

ಹೊಸ ಪ್ರಕರಣಗಳು ಏರುಗತಿಯಲ್ಲಿರುವ ಉಳಿದ ಆರು ರಾಜ್ಯಗಳೆಂದರೆ ತಮಿಳುನಾಡು, ಪಂಜಾಬ್, ಮಧ್ಯಪ್ರದೇಶ, ಗುಜರಾತ್, ಕರ್ನಾಟಕ ಹಾಗೂ ಹರಿಯಾಣ.

ಕಳೆದ 24 ತಾಸುಗಳಲ್ಲಿ ಕೋವಿಡ್- 19ನಿಂದ ಮೃತಪಟ್ಟವರ ಸಂಖ್ಯೆಯೂ ಐದು ರಾಜ್ಯಗಳಲ್ಲಿ ಹೆಚ್ಚಿದ್ದು, ಮಹಾರಾಷ್ಟ್ರ ರಾಜ್ಯವೊಂದರಲ್ಲೇ 70 ಮಂದಿ, ಪಂಜಾಬ್‌ನಲ್ಲಿ 38 ಹಾಗೂ ಕೇರಳದಲ್ಲಿ 17 ಮಂದಿ ಸಾವಿಗೀಡಾಗಿದ್ದಾರೆ. 15 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಳೆದ 24 ತಾಸುಗಳಲ್ಲಿ ಕೋವಿಡ್‌ನಿಂದ ಯಾವುದೇ ಸಾವು ಸಂಭವಿಸಿಲ್ಲ.

ಕೋವಿಡ್- 19 ವಿರುದ್ಧ ಹೋರಾಟದಲ್ಲಿ ದೇಶವು ಉತ್ತುಂಗದಲ್ಲಿದ್ದು, ಈವರೆಗೆ 4 ಕೋಟಿ ಮಂದಿಗೆ ಲಸಿಕೆ ಹಾಕಲಾಗಿದೆ ಎಂದು ಆರೋಗ್ಯ ಸಚಿವಾಲಯ ಹೇಳಿದೆ.

ಹುಣಸೆ, ಹಲಸಿನ ಹೊಸ ತಳಿ

ಪ್ರಜಾವಾಣಿ ವಾರ್ತೆ

ತುಮಕೂರು: ನಗರದ ಹೊರವಲಯ ಹಿರೇಹಳ್ಳಿಯಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರವು (ಐಐಎಚ್‌ಆರ್) ತಾಲ್ಲೂಕಿನ ನಂದಿಹಳ್ಳಿ ಗ್ರಾಮದಲ್ಲಿ ಹೊಸ ಹುಣಸೆ ಹಣ್ಣಿನ ತಳಿಯನ್ನು ಗುರುತಿಸಿದೆ.

ಹುಣಸೆ ಬೆಳೆದ 'ಲಕ್ಷ್ಮಣ' ಎಂಬ ರೈತನ ಹೆಸರನ್ನೇ ಈ ತಳಿಗೆ ಇಡಲಾಗಿದೆ. ಈ ತಳಿಯ ಹುಣಸೆಯಲ್ಲಿ ತಿರುಳು ಹೆಚ್ಚಾಗಿದ್ದು, ಹುಳಿ ಅಧಿಕ ಪ್ರಮಾಣದಲ್ಲಿರುತ್ತದೆ ಎಂದು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಕರುಣಾಕರನ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

ಹುಣಸೆ ಜತೆ 'ಶ್ರೀ' ಎಂಬ ಹೊಸ ತಳಿಯ ಹಲಸಿನ ಹಣ್ಣನ್ನೂ ಪರಿಚಯಿಸಿದೆ ಬೆಂಗಳೂರಿನ ಹೆಸರುಘಟ್ಟದಲ್ಲಿರುವ ಐಐಎಚ್‌ಆರ್‌ನಲ್ಲಿ ಶನಿವಾರ ಈ ತಳಿಗಳನ್ನು ಬಿಡುಗಡೆ ಮಾಡಲಾಯಿತು.

ತುಮಕೂರು ತಾಲ್ಲೂಕು ಗೂಳೂರು ಹೋಬಳಿ ಎ.ಕೆ.ಕಾವಲ್ ಗ್ರಾಮದ ರವೀಂದ್ರ ಅವರ ಜಮೀನಿನಲ್ಲಿ ಈ ತಳಿ ಗುರುತಿಸಲಾಗಿದೆ. ಈ ಮರಕ್ಕೆ ಈಗ 12 ವರ್ಷ.



ಲಕ್ಷ್ಮಣ ಹೊಸ ಹುಣಸೆ ತಳಿ



'ಶ್ರೀ' ತಳಿ ಹಲಸಿನ ಹಣ್ಣು

ಹಲಸಿನ ವೈಶಿಷ್ಟ್ಯ: ಹಣ್ಣಿನ ತೊಳೆ ಕೆಂಪು ಬಣ್ಣದಿಂದ ಕೂಡಿದ್ದು, ತಿನ್ನಲು ಬಲು ರುಚಿಕರ. ಕೆಂಪು ಬಣ್ಣದ ಹಲಸು ಮೇ ನಂತರ ಹಣ್ಣಾಗುತ್ತದೆ. ಆದರೆ ಹೊಸದಾಗಿ ಗುರುತಿಸಿರುವ 'ಶ್ರೀ' ಹಲಸು ಫೆಬ್ರುವರಿ ವೇಳೆಗೆ ಹಣ್ಣಾಗುವುದು ವಿಶೇಷ. ಹಳದಿ, ಬಿಳಿ ಬಣ್ಣದ ಹಲಸು ಮಾರ್ಚ್ ವೇಳೆಗೆ ಹಣ್ಣಾಗುತ್ತದೆ.

'ಶ್ರೀ ತಳಿಯ ಹಣ್ಣಿನಲ್ಲಿ ಕ್ಯಾರೊಟಿನಾಯ್ಡ್ ಪೋಷಕಾಂಶ ಅಧಿಕ ಪ್ರಮಾಣದಲ್ಲಿ ಇದೆ. 100 ಗ್ರಾ ಹಣ್ಣಿನಲ್ಲಿ ಶೇ 8.6ರಷ್ಟು ಈ ಅಂಶ ಇದೆ. ಇದು ಆಂಟಿ ಆಕ್ಸಿಡೆಂಟ್ ಹೊಂದಿದೆ' ಎಂದು ಕರುಣಾಕರನ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಈಗಾಗಲೇ 'ಸಿದ್ದು' ಹಾಗೂ 'ಶಂಕರ' ಹೆಸರಿನಲ್ಲಿ ಕೆಂಪು ಹಲಸಿನ ತಳಿಗಳು ಬಿಡುಗಡೆಯಾಗಿವೆ.

ಎಲ್‌ಐಸಿ: ಕ್ಲೇಮ್ ದಾಖಲೆ ಸಲ್ಲಿಕೆ ಸುಲಭ

ಬೆಂಗಳೂರು: ಪಾಲಿಸಿದಾರರು ಮೆಚ್ಯೂರಿಟಿ ಕ್ಲೇಮ್‌ಗೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ದೇಶದಲ್ಲಿ ತಮಗೆ ಹತ್ತಿರವಿರುವ ಯಾವುದೇ ಎಲ್‌ಐಸಿ ಕಚೇರಿಯಲ್ಲಿಯೂ ಸಲ್ಲಿಸಬಹುದು ಎಂದು ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ತಿಳಿಸಿದೆ.

ಕೋವಿಡ್–19 ಸಾಂಕ್ರಾಮಿಕದ ಸಂದರ್ಭದಲ್ಲಿ ಗ್ರಾಹಕರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಈ ಕ್ರಮ ಕೈಗೊಂಡಿರುವುದಾಗಿ ಅದು ಹೇಳಿದೆ. ಇದು ಪ್ರಾಯೋಗಿಕವಾಗಿದ್ದು, ಈ ತಿಂಗಳ 31ರವರೆಗೆ ಮಾತ್ರವೇ ಲಭ್ಯವಿರಲಿದೆ ಎಂದೂ ತಿಳಿಸಿದೆ.

ಕ್ಲೇಮ್ ಪಾವತಿ ಪ್ರಕ್ರಿಯೆಯನ್ನು ಸೇವಾ ಶಾಖೆಗಳು ಮಾತ್ರವೇ ನಿರ್ವಹಿಸಲಿವೆ ಎಂದು ಹೇಳಿದೆ.

'ಪೆಟ್ರೋಲ್, ಡೀಸೆಲ್ ಮೇಲಿನ ತೆರಿಗೆ ಪರಿಷ್ಕರಿಸಿ'

ನವದೆಹಲಿ: ಇಂಧನ ಬೆಲೆ ಗಗನಮುಖಿ ಆಗಿರುವ ಹಿಂದೆಯೇ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ವಿಧಿಸಲಾಗುತ್ತಿರುವ ತೆರಿಗೆ ಪ್ರಮಾಣವನ್ನು ಪರಿಷ್ಕರಿಸಬೇಕು ಎಂದು ಸಂಸದೀಯ ಸಮಿತಿ ಸರ್ಕಾರವನ್ನು ಕೋರಿದೆ.

ತೃಣಮೂಲ ಕಾಂಗ್ರೆಸ್ ಪಕ್ಷದ ಸಂಸದ ಸುದೀಪ್ ಬಂಡೋಪಧ್ಯಾಯ ಅಧ್ಯಕ್ಷತೆಯ ಆಹಾರ, ಗ್ರಾಹಕ ವ್ಯವಹಾರ, ಸಾರ್ವಜನಿಕ ವಿತರಣೆ ಕುರಿತ ಸಂಸದೀಯ ಸಮಿತಿ ಈ ಸಲಹೆ ಮಾಡಿದೆ.

ವಾಟ್ಸ್‌ಆ್ಯಪ್, ಇನ್‌ಸ್ಟಾಗ್ರಾಂನಲ್ಲಿ ತಾಂತ್ರಿಕ ದೋಷ : ಫೇಸ್‌ಬುಕ್ ಕ್ಷಮೆ

ನವದೆಹಲಿ (ಪಿಟಿಐ): ಸಾಮಾಜಿಕ ಮಾಧ್ಯಮಗಳಾದ ವಾಟ್ಸ್‌ಆ್ಯಪ್ ಮತ್ತು ಇನ್‌ಸ್ಟಾಗ್ರಾಂನಲ್ಲಿ ಶುಕ್ರವಾರ ರಾತ್ರಿ ತಾಂತ್ರಿಕ ದೋಷ ಉಂಟಾಗಿ, 45 ನಿಮಿಷಗಳವರೆಗೆ ಬಳಕೆದಾರರು ತೊಂದರೆ ಎದುರಿಸುವಂತಾಗಿತ್ತು. ಬಳಿಕ ಸಮಸ್ಯೆ ಬಗೆಹರಿಸಿರುವುದಾಗಿ ಫೇಸ್‌ಬುಕ್ ತಿಳಿಸಿದೆ.

ಭಾರತ ಸೇರಿದಂತೆ ವಿಶ್ವದಾದ್ಯಂತ ಬಳಕೆದಾರರು ಸಮಸ್ಯೆ ಎದುರಿಸಿದ್ದರು. ವಾಟ್ಸ್‌ಆ್ಯಪ್ ಬಳಸುವ ಹಲವರಿಗೆ ಮೆಸೇಜ್ ಕಳುಹಿಸಲು ಮತ್ತು ಸ್ವೀಕರಿಸಲು ಸಾಧ್ಯವಾಗಲಿಲ್ಲ. ಇನ್‌ಸ್ಟಾಗ್ರಾಂನಲ್ಲಿಯೂ ಇದೇ ರೀತಿಯ ಸಮಸ್ಯೆ ಎದುರಾಗಿತ್ತು.



'ತಾಂತ್ರಿಕ ಸಮಸ್ಯೆಯಿಂದಾಗಿ ಬಳಕೆದಾರರಿಗೆ ಫೇಸ್‌ಬುಕ್ ಸೇವೆಗಳನ್ನು ಪಡೆಯಲು ತೊಂದರೆ ಆಗಿತ್ತು. ಅನನುಕೂಲಕ್ಕಾಗಿ ಕ್ಷಮೆಯಾಚಿಸುತ್ತೇವೆ' ಎಂದು ಫೇಸ್‌ಬುಕ್‌ನ ವಕ್ತಾರರೊಬ್ಬರು ತಿಳಿಸಿದ್ದಾರೆ.

'ನಿಮ್ಮ ತಾಳ್ಮೆಗೆ ಧನ್ಯವಾದ, 45 ನಿಮಿಷಗಳ ಬಳಿಕ ಮತ್ತೆ ನಾವು ಹಿಂದಿರುಗಿದ್ದೇವೆ' ಎಂದು ವಾಟ್ಸ್‌ಆ್ಯಪ್ ಕಂಪನಿಯು ಟ್ವಿಟರ್‌ನಲ್ಲಿ ಪೋಸ್ಟ್ ಮಾಡಿದೆ.

ಭಾರತವನ್ನೂ ಒಳಗೊಂಡು ಹಲವು ದೇಶಗಳಲ್ಲಿ ಫೇಸ್‌ಬುಕ್ ಮೆಸೆಂಜರ್ ಮತ್ತು ವಾಟ್ಸ್‌ಆ್ಯಪ್ ಸೇವೆಯಲ್ಲಿ ವ್ಯತ್ಯಯ ಆಗಿರುವ ಕುರಿತಾಗಿಯೂ ಟ್ವೀಟ್ ಮಾಡಲಾಗಿತ್ತು. ಟ್ವಿಟರ್‌ನಲ್ಲಿ #whatsappoutage #whatsappdown ಎಂಬ ಹ್ಯಾಶ್‌ಟ್ಯಾಗ್‌ಗಳು ಟ್ರೆಂಡ್ ಆಗಿವೆ.

10 ಲಕ್ಷಕ್ಕೂ ಅಧಿಕ ಇನ್‌ಸ್ಟಾಗ್ರಾಂ ಬಳಕೆದಾರರು ಸಮಸ್ಯೆಯಾಗಿದೆ ಎಂದು ಹೇಳಿದ್ದರೆ, ವಾಟ್ಸ್‌ಆ್ಯಪ್‌ನಲ್ಲಿ 20,000 ಬಳಕೆದಾರರು ಸಮಸ್ಯೆಯನ್ನು ಎದುರಿಸಿದ್ದಾರೆ ಎಂದು ಡೌನ್‌ಡಿಟೆಕ್ಟರ್ ಡಾಟ್ ಕಾಮ್ ವೆಬ್‌ಸೈಟ್ ವರದಿ ಮಾಡಿವೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹385
12 ಮೊಟ್ಟೆಗೆ ₹52
ಮೈಸೂರು
100 ಮೊಟ್ಟೆಗೆ ₹388

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1580)
ಸೋಯಾ (ರಿಫೈನ್ಡ್)	₹1230 (1225)
ಸೂರ್ಯಕಾಂತಿ (ರಿಫೈನ್ಡ್)	₹1730 (1750)
ಪಾಮೋಲಿನ್	₹1200 (1198)

ಮುಂಬೈ ಧಾರಣೆ

ಶೇಂಗಾ

20-3-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10400-10450
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9000-9100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1590)
ಒಂದು ವಾರದ ಡೆಲಿವರಿ	1555 (1575)
ಸೋಯಾ ಕಚ್ಚಾ	1235 (1230)
ಪಾಮ್ ವಾರದ ಡೆಲಿವರಿ	1198 (1196)
ಸೂರ್ಯಕಾಂತಿ ಎಣ್ಣೆ ಕಚ್ಚಾ	1680 (1710)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
45,100 (44,650)
ಬೆಳ್ಳಿ ಕೆ.ಜಿ 67,000 (66,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	900-950
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	370

ಅಡಿಕೆ

ಬಂಟ್ವಾಳ

ಕೋಕ	10000-22500
ಹೊಸತು	23500-40500
ಹಳತು	42500-50500

ಪುತ್ತೂರು

ಕೋಕ	9500-24000
ಹೊಸತು	28500-40500

ಸಿದ್ದಾಪುರ

ಬಿಳಿಗೋಟು	21899-29599
ಚಾಲಿ	34099-36399
ಕೋಕ	19899-30508
ಕೆಂಪುಗೋಟು	24799-28689
ರಾಶಿ	39389-41899
ತಟ್ಟಿಬೆಟ್ಟೆ	36289-38089

ಶಿರಸಿ

ಬಿಳಿಗೋಟು	21299-31986
ಚಾಲಿ	30899-37761
ರಾಶಿ	38009-42399

ಕಾರ್ಕಳ

ಹೊಸತು	35000-40000

ಕುಂದಾಪುರ

ಹೊಸಚಾಲಿ	32000-40500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ / ಹಾಸನ

	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	9950	9900	9875	129 ಸೆಂಟ್ಸ್
ಎಸಿ	4060	3800	3850	
ಆರ್‌ಪಿ	5150	5100	5175	
ಆರ್‌ಸಿ	3000	3050	2925	1380 ಡಾಲರ್ಸ್

ಕೊಹ್ಲಿ–ರೋಹಿತ್ ಜೋಡಿ ಸೂಪರ್ ಹಿಟ್; ಮಿಂಚಿದ ಶಾರ್ದೂಲ್, ಭುವನೇಶ್ವರ ಕುಮಾರ್

ವಿರಾಟ್ ಪಡೆಗೆ ಸರಣಿ ಕಿರೀಟ

ಅಹಮದಾಬಾದ್: ನಾಯಕ ವಿರಾಟ್ ಕೊಹ್ಲಿ ಮತ್ತು ಉಪನಾಯಕ ರೋಹಿತ್ ಶರ್ಮಾ ಹಾಕಿದ ಅಡಿಪಾಯದ ಮೇಲೆ ಭಾರತ ತಂಡವು ಇಂಗ್ಲೆಂಡ್ ವಿರುದ್ಧದ ಕೊನೆಯ ಟಿ20 ಪಂದ್ಯದಲ್ಲಿ ಗೆದ್ದು ಸರಣಿ ಕಿರೀಟ ಧರಿಸಿತು.

ಶನಿವಾರ ರಾತ್ರಿ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಇಂಗ್ಲೆಂಡ್ ತಂಡದ ನಾಯಕ ಏಯಾನ್ ಮಾರ್ಗನ್ ಕೈಕೈ ಹಿಸುಕಿಕೊಳ್ಳಬೇಕಾಯಿತು. ಸತತ ವೈಫಲ್ಯ ಅನುಭವಿಸಿದ ಕೆ.ಎಲ್. ರಾಹುಲ್ ಅವರನ್ನು ಈ ಪಂದ್ಯದಲ್ಲಿ ಕೈಬಿಡಲಾಯಿತು. ಆದ್ದರಿಂದ ವಿರಾಟ್ ಕೊಹ್ಲಿಯೇ ರೋಹಿತ್ ಜೊತೆಗೆ ಇನಿಂಗ್ಸ್ ಆರಂಭಿಸಿದರು. ಇವರಿಬ್ಬರ ಬಿರುಸಿನ ಅರ್ಧಶತಕಗಳ ಬಲದಿಂದ ತಂಡವು 20 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 224 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಇಂಗ್ಲೆಂಡ್ ತಂಡಕ್ಕೆ ಜೋಸ್ ಬಟ್ಲರ್ (52; 34ಎ) ಮತ್ತು ಡೇವಿಡ್ ಮಲಾನ್ (68; 46ಎ) ಅವರ ಅರ್ಧಶತಕಗಳನ್ನು ಬಾರಿಸಿ ಭರವಸೆ ಮೂಡಿಸಿದ್ದರು. ಆದರೆ, ಆತಿಥೇಯ ತಂಡದ ಮಧ್ಯಮವೇಗಿ ಭುವನೇಶ್ವರ್ ಕುಮಾರ್ (15ಕ್ಕೆ2) ಮತ್ತು ಶಾರ್ದೂಲ್ ಠಾಕೂರ್ (45ಕ್ಕೆ3) ಅಡ್ಡಗಾಲು ಹಾಕಿದರು. ಇದರಿಂದಾಗಿ ಇಂಗ್ಲೆಂಡ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 188 ರನ್ ಗಳಿಸಿತು. 36 ರನ್‌ಗಳಿಂದ ಸೋತಿತು. ಆತಿಥೇಯ ಬಳಗವು 3–2ರಿಂದ ಸರಣಿ ಗೆದ್ದಿತು. ಭಾರತ ತಂಡವು ಕಳೆದ ಎಂಟು ಸರಣಿಗಳಲ್ಲಿ ಸೋತಿಲ್ಲ.

ಕೊಹ್ಲಿ–ಶರ್ಮಾ ಜೊತೆಯಾಟ: ರೋಹಿತ್ (64; 34 ಎಸೆತ) ಮತ್ತು ವಿರಾಟ್ (ಔಟಾಗದೆ 80; 52ಎ) ಇಬ್ಬರು ಮೊದಲ ವಿಕೆಟ್‌ಗೆ 94 ರನ್ ಸೇರಿಸಿದರು. ಕಳೆದ ಎರಡು ಪಂದ್ಯಗಳಲ್ಲಿ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗದ ನಿರಾಶೆಯನ್ನು ಹೊಡೆದೋಡಿಸುವಂತೆ ಹಿಟ್‌ಮ್ಯಾನ್ ಅಬ್ಬರಿಸಿದರು. 20 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು.



ಭುವನೇಶ್ವರ ಕುಮಾರ್ (ಎಡ) ಅವರೊಂದಿಗೆ ಗೆಲುವಿನ ಸಂಭ್ರಮ ಆಚರಿಸಿದ ವಿರಾಟ್ ಕೊಹ್ಲಿ–ಪಿಟಿಐ ಚಿತ್ರ

ಐದು ಸಿಕ್ಸರ್ ಮತ್ತು ನಾಲ್ಕು ಬೌಂಡರಿ ಬಾರಿಸಿದರು. ಒಂಬತ್ತನೇ ಓವರ್‌ನಲ್ಲಿ ಬೆನ್ ಸ್ಟೋಕ್ಸ್ ಎಸೆತದಲ್ಲಿ ರೋಹಿತ್ ಬೌಲ್ಡ್ ಆದರು.

ಕ್ರೀಸ್‌ಗೆ ಬಂದ ಮತ್ತೊಬ್ಬ ಮುಂಬೈಕರ್ ಸೂರ್ಯಕುಮಾರ್ ಯಾದವ್ (32; 17ಎ) ತಮ್ಮ ನಿರ್ಭೀತ ಬ್ಯಾಟಿಂಗ್ ಕೌಶಲವನ್ನು ಮತ್ತೊಮ್ಮೆ ಮೆರೆದರು. ನಾಯಕ ವಿರಾಟ್ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 49 ರನ್ ಸೇರಿಸಿದರು. ಅವರ ರನ್ ಗಳಿಕೆಯ ವೇಗದ ಮುಂದೆ ಬೌಲರ್‌ಗಳು ನಿರುತ್ತರರಾಗಿದ್ದರು. ಹತ್ತು ಓವರ್‌ಗಳು ಮುಗಿಯುವ ಮುನ್ನವೇ ತಂಡದ ಮೊತ್ತ ನೂರರ ಗಡಿ ದಾಟಿತು. ಸ್ಪಿನ್ನರ್ ಆದಿಲ್ ರಶೀದ್ ಹಾಕಿದ 14ನೇ ಓವರ್‌ನಲ್ಲಿ ಬೌಂಡರಿಲೈನ್‌ನಲ್ಲಿ ಕ್ರಿಸ್ ಜೋರ್ಡಾನ್ ಮತ್ತು ಜೇಸನ್ ರಾಯ್ ಅವರ ಸಂಘಟಿತ ಪ್ರಯತ್ನದ ಫಲವಾಗಿ ಸೂರ್ಯ ಆಟಕ್ಕೆ ತೆರೆಬಿತ್ತು. ಸೂರ್ಯ ಹೊಡೆತಕ್ಕೆ ಚೆಂಡು ಬೌಂಡರಿಗೆರೆ ದಾಟುವತ್ತ ಸಾಗಿತ್ತು. ಆದರೆ ವೇಗವಾಗಿ ಓಡಿಬಂದ ಜೋರ್ಡಾನ್ ತಮ್ಮ ಬಲಗೈನಲ್ಲಿ ಚೆಂಡನ್ನು ಕ್ಯಾಚ್ ಮಾಡಿದರು. ತಮ್ಮ ಓಟಕ್ಕೆ ಕಡಿವಾಣ ಹಾಕಲು ಸಾಧ್ಯವಾಗದ ಅವರು, ಬೌಂಡರಿ ಗೆರೆಯಾಚೆ ಹೆಜ್ಜೆ ಇಡುವ ಮುನ್ನ ಇನ್ನೊಬ್ಬ ಫೀಲ್ಡರ್ ಜೇಸನ್ ರಾಯ್‌ಗೆ ಚೆಂಡು ಎಸೆದರು. ರಾಯ್ ಹಿಡಿತಕ್ಕೆ ಪಡೆದರು.

ಮಾರ್ಗನ್ ಬಳಗಕ್ಕೆ ಇದರ ನಂತರ ಸಂಭ್ರಮಿಸುವ ಅವಕಾಶವನ್ನು ವಿರಾಟ್ ಮತ್ತು ಹಾರ್ದಿಕ್ ಪಾಂಡ್ಯ ಕೊಡಲಿಲ್ಲ. ಕೊಹ್ಲಿ ತಮ್ಮ ಆಟದ ವೇಗ ಹೆಚ್ಚಿಸಿಕೊಂಡರು. ಚುಟುಕು ಕ್ರಿಕೆಟ್‌ನಲ್ಲಿ 28ನೇ ಅರ್ಧಶತಕ ಪೂರೈಸಿದರು. ಅದಕ್ಕಾಗಿ 36 ಎಸೆತಗಳನ್ನು ಎದುರಿಸಿದರು. ಈ ಸರಣಿಯಲ್ಲಿ ಅವರು ಮೂರನೇ ಸಲ 50ರ ಗಡಿ ದಾಟಿದರು.

ಬ್ಯಾಟಿಂಗ್ ಕ್ರಮಾಂಕದಲ್ಲಿ ಬಡ್ತಿ ಪಡೆದು ಬಂದಿದ್ದ ಹಾರ್ದಿಕ್ ಪಾಂಡ್ಯ(39; 17ಎಸೆತ) ಕೂಡ ತಮ್ಮ ಭುಜಬಲ ಪರಾಕ್ರಮ ಮೆರೆದರು. ಹಾರ್ದಿಕ್ ಮತ್ತು ವಿರಾಟ್ ಅಬ್ಬರದ ಆಟದಿಂದಾಗಿ ಕೊನೆಯ ಐದು ಓವರ್‌ಗಳಲ್ಲಿ 67 ರನ್‌ಗಳು ಹರಿದು ಬಂದವು.

ಭುವನೇಶ್ವರ್ ಕುಮಾರ್ ಅವರಿಗೆ ಪಂದ್ಯಶ್ರೇಷ್ಠ ಗೌರವ ನೀಡಲಾಯಿತು. ವಿರಾಟ್ ಸರಣಿಯ ಶ್ರೇಷ್ಠ ಆಟಗಾರ ಎನಿಸಿಕೊಂಡರು.

ಸ್ಕೋರ್‌ಕಾರ್ಡ್

ಭಾರತ 2ಕ್ಕೆ 224 (20 ಓವರ್‌ಗಳಲ್ಲಿ)

ರೋಹಿತ್ ಶರ್ಮಾ ಬಿ ಬೆನ್ ಸ್ಟೋಕ್ಸ್	64
ವಿರಾಟ್ ಕೊಹ್ಲಿ ಔಟಾಗದೆ	80
ಸೂರ್ಯಕುಮಾರ್ ಯಾದವ್ ಸಿ ಜೇಸನ್ ರಾಯ್ ಬಿ ಆದಿಲ್ ರಶೀದ್	32
ಹಾರ್ದಿಕ್ ಪಾಂಡ್ಯ ಔಟಾಗದೆ	39
ಇತರೆ (ಲೆಗ್ ಬೈ 3, ವೈಡ್ 6)	9

ವಿಕೆಟ್ ಪತನ: 1-94 (ರೋಹಿತ್ ಶರ್ಮಾ, 8.6), 2-143 (ಸೂರ್ಯಕುಮಾರ್ ಯಾದವ್, 13.2)

ಬೌಲಿಂಗ್: ಆದಿಲ್ ರಶೀದ್ 4–0–31–1, ಜೊಫ್ರಾ ಆರ್ಚರ್ 4–0–43–0, ಮಾರ್ಕ್ ವುಡ್ 4–0–53–0, ಕ್ರಿಸ್ ಜೋರ್ಡಾನ್ 4–0–57–0, ಸ್ಯಾಮ್ ಕರನ್ 1–0–11–0, ಬೆನ್ ಸ್ಟೋಕ್ಸ್ 3–0–26–1

ಇಂಗ್ಲೆಂಡ್ 8ಕ್ಕೆ 188 (20 ಓವರ್‌ಗಳಲ್ಲಿ)

ಜೇಸನ್ ರಾಯ್ ಬಿ ಭುವನೇಶ್ವರ್ ಕುಮಾರ್	0
ಜೋಸ್ ಬಟ್ಲರ್ ಸಿ ಹಾರ್ದಿಕ್ ಪಾಂಡ್ಯ ಬಿ ಭುವನೇಶ್ವರ್ ಕುಮಾರ್	52
ಡೇವಿಡ್ ಮಲಾನ್ ಬಿ ಶಾರ್ದೂಲ್ ಠಾಕೂರ್	68
ಜಾನಿ ಬೆಸ್ಟೊ ಸಿ ಸೂರ್ಯಕುಮಾರ್ ಯಾದವ್ ಬಿ ಶಾರ್ದೂಲ್ ಠಾಕೂರ್	7
ಏಯಾನ್ ಮಾರ್ಗನ್ ಸಿ ರಾಹುಲ್ (ಬದಲಿ ಆಟಗಾರ) ಬಿ ಹಾರ್ದಿಕ್ ಪಾಂಡ್ಯ	1
ಬೆನ್ ಸ್ಟೋಕ್ಸ್ ಸಿ ರಿಷಭ್ ಪಂತ್ ಬಿ ಟಿ.ನಟರಾಜನ್	14
ಕ್ರಿಸ್ ಜೋರ್ಡಾನ್ ಸಿ ಸೂರ್ಯಕುಮಾರ್ ಯಾದವ್ ಬಿ ಶಾರ್ದೂಲ್ ಠಾಕೂರ್	11
ಜೊಫ್ರಾ ಆರ್ಚರ್ ರನ್ ಔಟ್ (ಸೂರ್ಯಕುಮಾರ್ ಯಾದವ್/ರಿಷಭ್ ಪಂತ್)	1
ಸ್ಯಾಮ್ ಕರನ್ ಔಟಾಗದೆ	14
ಆದಿಲ್ ರಶೀದ್ ಔಟಾಗದೆ	0
ಇತರೆ (ಲೆಗ್ ಬೈ 9, ವೈಡ್ 11)	20

ವಿಕೆಟ್ ಪತನ: 1-0 (ಜೇಸನ್ ರಾಯ್, 0.2), 2-130 (ಜೋಸ್ ಬಟ್ಲರ್, 12.5), 3-140 (ಜಾನಿ ಬೆಸ್ಟೊ, 14.3), 4-142 (ಡೇವಿಡ್ ಮಲಾನ್, 14.6), 5-142 (ಏಯಾನ್ ಮಾರ್ಗನ್, 15.3), 6-165 (ಬೆನ್ ಸ್ಟೋಕ್ಸ್, 18.3), 7-168 (ಜೊಫ್ರಾ ಆರ್ಚರ್, 18.6), 8-174 (ಕ್ರಿಸ್ ಜೋರ್ಡಾನ್, 19.3)

ಬೌಲಿಂಗ್: ಭುವನೇಶ್ವರ್ ಕುಮಾರ್ 4–0–15–2, ಹಾರ್ದಿಕ್ ಪಾಂಡ್ಯ 4–0–34–1, ವಾಷಿಂಗ್ಟನ್ ಸುಂದರ್ 1–0–13–0, ಶಾರ್ದೂಲ್ ಠಾಕೂರ್ 4–0–45–3, ಟಿ.ನಟರಾಜನ್ 4–0–39–1, ರಾಹುಲ್ ಚಾಹರ್ 3–0–33–0.

ಫಲಿತಾಂಶ: ಭಾರತಕ್ಕೆ 36 ರನ್‌ಗಳ ಜಯ; 3–2ರಲ್ಲಿ ಸರಣಿ ಗೆಲುವು

ಏಕದಿನ ಸರಣಿ ಆರಂಭ: ಮಾರ್ಚ್ 23; ಪುಣೆಯಲ್ಲಿ

ಟೆನಿಸ್: ಕೃಷ್ಣಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಕೃಷ್ಣ ತ್ಯಾಗಿ, ಮುಂಬೈನಲ್ಲಿ ನಡೆದ ರಾಷ್ಟ್ರೀಯ 14 ವರ್ಷದೊಳಗಿನವರ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಶನಿವಾರ ಪ್ರಶಸ್ತಿ ಜಯಿಸಿದ್ದಾರೆ. ಫೈನಲ್ ಹಣಾಹಣಿಯಲ್ಲಿ ಎರಡನೇ ಶ್ರೇಯಾಂಕದ ಕೃಷ್ಣ 6–4, 7–6ರಿಂದ ಅಗ್ರಶ್ರೇಯಾಂಕದ, ತಮಿಳುನಾಡಿನ ರೇತಿನ್ ಪ್ರಣವ್ ಅವರನ್ನು ಸೋಲಿಸಿದರು. ಕೃಷ್ಣ ಮೊದಲ ಬಾರಿ ರಾಷ್ಟ್ರೀಯ ಟೂರ್ನಿಯೊಂದರ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.ದೆಹಲಿ ಬಳಿಕ ಮುಂಬೈನಲ್ಲಿ ನಡೆದ ಎರಡನೇ ರಾಷ್ಟ್ರೀಯ ಚಾಂಪಿಯನ್‌ಷಿಪ್ ಇದಾಗಿತ್ತು. ಅರ್ಹತಾ ಮತ್ತು ಮುಖ್ಯ ಸುತ್ತುಗಳು ಸೇರಿ ಒಟ್ಟು 64 ಮಂದಿ ಇಲ್ಲಿ ಅದೃಷ್ಟಪರೀಕ್ಷೆಗಳಿದಿದ್ದರು.

ಫೈನಲ್ ಪಂದ್ಯ ತೀವ್ರ ಪೈಪೋಟಿಯಿಂದ ಕೂಡಿತ್ತು. ಮೊದಲ ಸೆಟ್‌ನಲ್ಲಿ ಉಭಯ ಆಟಗಾರರು ಬ್ರೇಕ್ ಪಾಯಿಂಟ್ ಗಳಿಸಿದರು. 10ನೇ ಗೇಮ್‌ನಲ್ಲಿ ಕೃಷ್ಣ ಎದುರಾಳಿಯ ಸರ್ವ್ ಮುರಿದು ಸೆಟ್ ತಮ್ಮದಾಗಿಸಿಕೊಂಡರು. ಟೈಬ್ರೇಕರ್‌ನಲ್ಲಿ ಕೊನೆಗೊಂಡ ಎರಡನೇ ಸೆಟ್‌ನಲ್ಲೂ ಜಯ ಸಾಧಿಸಿದ ಬೆಂಗಳೂರು ಆಟಗಾರ ಪಂದ್ಯವನ್ನೂ ಗೆದ್ದು ಬೀಗಿದರು. ಕಳೆದ ವರ್ಷ ರೇತಿನ್ ಎದುರು ಎಡವಿದ್ದ ಕೃಷ್ಣ ಇಲ್ಲಿ ಮುಯ್ಯಿ ತೀರಿಸಿಕೊಂಡರು.

ಬೆಂಗಳೂರಿನ ಸೋಲ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಕೃಷ್ಣ ತರಬೇತಿ ಪಡೆಯುತ್ತಿದ್ದಾರೆ.



ಪ್ರಶಸ್ತಿಯೊಂದಿಗೆ ಕೃಷ್ಣ ತ್ಯಾಗಿ

ಐಪಿಎಲ್ ಮಾರ್ಗಸೂಚಿ: ಆಟಗಾರರು ಕ್ವಾರಂಟೈನ್‌ಗೆ ತೆರಳುವ ಅಗತ್ಯವಿಲ್ಲ

ನವದೆಹಲಿ (ಪಿಟಿಐ): ಸದ್ಯ ನಡೆಯುತ್ತಿರುವ ಭಾರತ-ಇಂಗ್ಲೆಂಡ್ ಸರಣಿ ಮುಕ್ತಾಯದ ಬಳಿಕ ಉಭಯ ತಂಡಗಳ ಆಟಗಾರರು ಏಳು ದಿನಗಳ ಕ್ವಾರಂಟೈನ್ ಪಾಲಿಸದೆಯೇ ಅವರವರ ಐಪಿಎಲ್ ತಂಡಗಳ ಜೀವ ಸುರಕ್ಷಾ ವಲಯಕ್ಕೆ (ಬಯೋ ಬಬಲ್) ನೇರವಾಗಿ ಪ್ರವೇಶಿಸಬಹುದಾಗಿದೆ. ಐಪಿಎಲ್ ಟೂರ್ನಿಗಾಗಿ ಶನಿವಾರ ಬಿಡುಗಡೆ ಮಾಡಿರುವ ಕೋವಿಡ್–19 ತಡೆ ಮಾರ್ಗಸೂಚಿಗಳಲ್ಲಿ (ಎಸ್‌ಒಪಿ) ಈ ವಿಷಯ ತಿಳಿಸಲಾಗಿದೆ.

ಏಪ್ರಿಲ್ 9ರಿಂದ ಮೇ 30ರವರೆಗೆ 14ನೇ ಆವೃತ್ತಿಯ ಐಪಿಎಲ್ ನಡೆಯಲಿದೆ. ಟೂರ್ನಿಯಲ್ಲಿ ಆಡಲಿರುವ ಯಾವ ಆಟಗಾರರೂ ಕೋವಿಡ್–19 ಲಸಿಕೆ ತೆಗೆದುಕೊಳ್ಳಬೇಕಿಲ್ಲ ಎಂದೂ ಬಿಸಿಸಿಐ ಹೇಳಿದೆ.



ಪ್ರಜಾವಾಣಿ ದಿನಪತ್ರಿಕೆಯು ಬೆಂಗಳೂರು ಟರ್ಫ್ ಕ್ಲಬ್‌ನ (ಬಿಟಿಸಿ) 2019–20ನೇ ಸಾಲಿನ ದಿನಪತ್ರಿಕೆ ವಿಭಾಗದ ಟಿಪ್‌ಸ್ಟರ್ ಟ್ಯಾಲಿ ಪ್ರಶಸ್ತಿ ಜಯಿಸಿದೆ. ಶನಿವಾರ ನಡೆದ ಕಾರ್ಯಕ್ರಮದಲ್ಲಿ ಬಿಟಿಸಿ ಮುಖ್ಯಸ್ಥ ಡಿ.ವಿನೋದ್ ಶಿವಪ್ಪ ಅವರಿಂದ ಪತ್ರಿಕೆಯ ಕ್ರೀಡಾ ವಿಭಾಗದ ಮುಖ್ಯ ವರದಿಗಾರ ಗಿರೀಶ ದೊಡ್ಡಮನಿ ಟ್ರೋಫಿ ಸ್ವೀಕರಿಸಿದರು. ಸ್ಟೇವರ್ಡ್ ಉದಯ್ ಈಶ್ವರನ್ ಮತ್ತು ಸಮಿತಿಯ ಸದಸ್ಯ ಜಿ. ಶಿವಕುಮಾರ್ ಇದ್ದಾರೆ –ಪ್ರಜಾವಾಣಿ ಚಿತ್ರ

ಮಹಿಳಾ ಟಿ20: ದಕ್ಷಿಣ ಆಫ್ರಿಕಾಕ್ಕೆ ಮಣಿದ ಭಾರತ

ಲಖನೌ (ಪಿಟಿಐ): ಏಕದಿನ ಸರಣಿಯಲ್ಲಿ ಭರ್ಜರಿ ಗೆಲುವು ಸಾಧಿಸಿದ ದಕ್ಷಿಣ ಆಫ್ರಿಕಾ ಮಹಿಳೆಯರು ಭಾರತದ ಎದುರಿನ ಟಿ20 ಸರಣಿಯಲ್ಲೂ ಶುಭಾರಂಭ ಮಾಡಿದರು. ಶನಿವಾರ ರಾತ್ರಿ ನಡೆದ ಮೊದಲ ಪಂದ್ಯದಲ್ಲಿ ಅನೆಕಿ ಬಾಶ್ (66; 48 ಎಸೆತ, 9 ಬೌಂಡರಿ, 1 ಸಿಕ್ಸರ್) ಮತ್ತು ನಾಯಕಿ ಸೂನ್ ಲೂಜ್ (43; 49 ಎ, 5 ಬೌಂ, 1 ಸಿ) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಪ್ರವಾಸಿ ತಂಡ ಎಂಟು ವಿಕೆಟ್‌ಗಳಿಂದ ಜಯಿಸಿತು.

ಯುವ ಬ್ಯಾಟರ್ ಹರ್ಲೀನ್ ಡಿಯೋಲ್ (52; 47 ಎಸೆತ, 6 ಬೌಂಡರಿ), ಶಫಾಲಿ ವರ್ಮಾ ಮತ್ತು ಜೆಮಿಮಾ ರಾಡ್ರಿಗಸ್ ಮಿಂಚಿದರೂ ಭಾರತ ತಂಡ 20 ಓವರ್‌ಗಳಲ್ಲಿ ಗಳಿಸಿದ್ದು 130 ರನ್ ಮಾತ್ರ. ಶಫಾಲಿ ವರ್ಮಾ ಜೊತೆ ಇನಿಂಗ್ಸ್ ಆರಂಭಿಸಿದ ಹಂಗಾಮಿ ನಾಯಕಿ ಸ್ಮೃತಿ ಮಂದಾನ ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ಉಳಿಯಲಿಲ್ಲ. ತಂಡದ ಮೊತ್ತ 11 ಆಗಿದ್ದಾಗ ಅವರು ಮರಳಿದರು. ನಂತರ ಶಫಾಲಿ ಮತ್ತು 22 ವರ್ಷದ ಹರ್ಲೀನ್ ಡಿಯೋಲ್ ಭರ್ಜರಿ ಬ್ಯಾಟಿಂಗ್ ಮಾಡಿದರು. ಎರಡನೇ ವಿಕೆಟ್‌ಗೆ ಇಬ್ಬರೂ 45 ರನ್ ಸೇರಿಸಿದರು. ಶಫಾಲಿ ಔಟಾದ ನಂತರ ಹರ್ಲೀನ್ ಮತ್ತು ಜೆಮಿಮಾ ರಾಡ್ರಿಗಸ್ (30; 27 ಎ, 3 ಬೌಂ) ಎದುರಾಳಿ ಬೌಲರ್‌ಗಳನ್ನು ಮತ್ತಷ್ಟು ಕಾಡಿದರು. 60 ರನ್‌ಗಳ ಜೊತೆಯಾಟ ಆಡಿದ ಇವರಿಬ್ಬರು ತಂಡದ ಮೊತ್ತವನ್ನು ಮೂರಂಕಿ ದಾಟಿಸಿದರು. ಈ ನಡುವೆ ಹರ್ಲೀನ್ ಅರ್ಧಶತಕ ಪೂರೈಸಿದರು. 44 ಎಸೆತಗಳಲ್ಲಿ ಅವರ ಅರ್ಧಶತಕ ಮೂಡಿಬಂದಿತ್ತು. ಮೂರು ಎಸೆತಗಳ ಅಂತರದಲ್ಲಿ ಇವರಿಬ್ಬರನ್ನು ಅನೆಕಿ ಬಾಶ್ ವಾಪಸ್ ಕಳುಹಿಸಿದರು.

ನಾಯಕಿ ಹರ್ಮನ್‌ಪ್ರೀತ್ ಕೌರ್ ಮೊಣಕಾಲಿನ ನೋವಿನಿಂದಾಗಿ ಮೊದಲ ಪಂದ್ಯದಲ್ಲಿ ಆಡದೇ ಇರಲು ನಿರ್ಧರಿಸಿದ್ದರು. ಅವರ ಬದಲಿಗೆ ತಂಡವನ್ನು ಮುನ್ನಡೆಸಿದ ಮಂದಾನ ಮೊದಲ ಓವರ್‌ನಲ್ಲಿ ಎರಡು ಬೌಂಡರಿ ಸಿಡಿಸಿ ಮಿಂಚಿದರು. ಆದರೆ ಎರಡನೇ ಓವರ್‌ನಲ್ಲಿ ಕ್ಯಾಚ್ ನೀಡಿ ಮರಳಿದರು.

ಪವರ್ ಪ್ಲೇ ಮುಕ್ತಾಯದ ವೇಳೆ ಭಾರತ ಒಂದು ವಿಕೆಟ್ ಕಳೆದುಕೊಂಡು 41 ರನ್ ಗಳಿಸಿತ್ತು. 10 ಓವರ್‌ಗಳು ಮುಕ್ತಾಯಗೊಂಡಾಗ ಮೊತ್ತ ಎರಡು ವಿಕೆಟ್‌ಗಳಿಗೆ 59 ಆಗಿತ್ತು. ಸಿಕ್ಸರ್ ಸಿಡಿಸಿ ಖಾತೆ ತೆರೆದ ಶಫಾಲಿ ವರ್ಮಾ 10ನೇ ಓವರ್‌ನಲ್ಲಿ ಸ್ಟಂಪ್ ಔಟಾದರು. ಸುನೆ ಲೂಜ್ ಹಾಕಿದ 11ನೇ ಓವರ್‌ನಲ್ಲಿ ತಂಡ 13 ರನ್ ಕಲೆ ಹಾಕಿತು. ಆದರೆ ಕೊನೆಯ ಐದು ಓವರ್‌ಗಳಲ್ಲಿ 26 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 6ಕ್ಕೆ130 (ಸ್ಮೃತಿ ಮಂದಾನ 11, ಶಫಾಲಿ ವರ್ಮಾ 23, ಹರ್ಲೀನ್ ಡಿಯೋಲ್ 52, ಜೆಮಿಮಾ ರಾಡ್ರಿಗಸ್ 30; ನೊಂಕುಲೆಕೊ ಮಾಬ 28ಕ್ಕೆ1, ಶಬ್ನಿಮ್ ಇಸ್ಮಾಯಿಲ್ 14ಕ್ಕೆ3, ಅನೆಕಿ ಭಾಶ್ 11ಕ್ಕೆ2); ದಕ್ಷಿಣ ಆಫ್ರಿಕಾ: 19.1 ಓವರ್‌ಗಳಲ್ಲಿ 2ಕ್ಕೆ 133 (ಅನೆಕಿ ಬಾಶ್ ಔಟಾಗದೆ 66, ಸೂನ್ ಲೂಜ್ 43; ಅರುಂಧತಿ ರೆಡ್ಡಿ 20ಕ್ಕೆ1, ಹರ್ಲೀನ್ ಡಿಯೋಲ್ 21ಕ್ಕೆ1). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 8 ವಿಕೆಟ್‌ಗಳ ಜಯ.

ಡಿಜಿಟಲ್ ಸುದ್ದಿ ನಿಯಮಾವಳಿ: ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್‌ಗೆ ಪತ್ರ

ವಿನಾಯಿತಿಗೆ ಐಎನ್‌ಎಸ್ ಒತ್ತಾಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಡಿಜಿಟಲ್ ಸುದ್ದಿ ನಿಯಮಾವಳಿಗಳಿಂದ ದಿನಪತ್ರಿಕೆಗಳ ವೆಬ್‌ಸೈಟ್‌ಗಳಿಗೆ ವಿನಾಯಿತಿ ನೀಡುವಂತೆ ಇಂಡಿಯನ್ ನ್ಯೂಸ್‌ಪೇಪರ್ ಸೊಸೈಟಿ (ಐಎನ್‌ಎಸ್) ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಐಎನ್‌ಎಸ್ 800 ದಿನಪತ್ರಿಕೆಗಳು, ನಿಯತಕಾಲಿಕೆಗಳ ಸಮೂಹವನ್ನು ಒಳಗೊಂಡಿದೆ. ಡಿಜಿಟಲ್ ಸುದ್ದಿ ಸೇರಿದಂತೆ ಮಾಧ್ಯಮಗಳಿಗೆ ಸಮಾನಂತರ ವೇದಿಕೆ ರೂಪಿಸುವ ಸರ್ಕಾರದ ಪ್ರಯತ್ನವನ್ನು ಐಎನ್‌ಎಸ್ ಸ್ವಾಗತಿಸಿದೆ.

‘ಪ್ರತಿ ದಿನವೂ ಸುದ್ದಿಗಳ ನಿಖರತೆ, ಸತ್ಯಾಸತ್ಯತೆ ಅರಿಯುವುದು ಮತ್ತು ಪರಿಶೀಲಿಸಲು ರೂಪಿಸಿರುವ ವ್ಯವಸ್ಥೆಯಿಂದಾಗಿ ದಿನಪತ್ರಿಕೆಗಳು ಅತಿ ಹೆಚ್ಚು ಜವಾಬ್ದಾರಿ ಮತ್ತು ವಿಶ್ವಾಸಾರ್ಹತೆ ಹೊಂದಿವೆ. ನಮ್ಮ ದಿನಪತ್ರಿಕೆಗಳ ಡಿಜಿಟಲ್ ವೆಬ್‌ಸೈಟ್‌ಗಳು ಸಹ ಇದೇ ನಿಯಮಾವಳಿಗಳನ್ನು ಅನುಸರಿಸುತ್ತಿವೆ. ಹೀಗಾಗಿ, ಪ್ರಕಾಶಕರ ವೆಬ್‌ಸೈಟ್‌ಗಳಿಗೆ ಹೊಸ ಡಿಜಿಟಲ್ ಸುದ್ದಿ ನಿಯಮಾವಳಿಗಳಿಂದ ವಿನಾಯಿತಿ ನೀಡಬೇಕು ಮತ್ತು ದಿನಪತ್ರಿಕೆಗಳು ಈಗ ಅನುಸರಿಸುತ್ತಿರುವ ಸ್ವಯಂ ನಿಯಂತ್ರಣ ನಿಯಮಾವಳಿಗಳನ್ನು ಮುಂದುವರಿಸಲು ಅವಕಾಶ ಕಲ್ಪಿಸಬೇಕು’ ಎಂದು ಐಎನ್‌ಎಸ್ ಅಧ್ಯಕ್ಷ ಎಲ್. ಆದಿಮೂಲಂ ಕೋರಿದ್ದಾರೆ.

ಮುಖ್ಯಾಂಶಗಳು

- ಮಾಧ್ಯಮಗಳಿಗೆ ಸಮಾನಂತರ ವೇದಿಕೆ ರೂಪಿಸುವ ಸರ್ಕಾರದ ಪ್ರಯತ್ನಕ್ಕೆ ಸ್ವಾಗತ
- 800 ದಿನಪತ್ರಿಕೆಗಳು, ನಿಯತಕಾಲಿಕೆಗಳ ಸಮೂಹವನ್ನು ಒಳಗೊಂಡಿರುವ ಐಎನ್‌ಎಸ್

ಈ ಬಗ್ಗೆ ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವ ಪ್ರಕಾಶ್ ಜಾವಡೇಕರ್ ಅವರಿಗೆ ಆದಿಮೂಲಂ ಅವರು ಪತ್ರ ಬರೆದಿದ್ದಾರೆ.

‘ಪ್ರಕಾಶಕರ ವೆಬ್‌ಸೈಟ್‌ಗಳು ದಿನ ಪತ್ರಿಕೆಗಳ ವಿಸ್ತೃತರೂಪವಾಗಿವೆ. ಈಗಿರುವ ಅದೇ ಸುದ್ದಿ ಮನೆಯಿಂದಲೇ ಸುದ್ದಿಯನ್ನು ಸಿದ್ಧಪಡಿಸಲಾಗುತ್ತದೆ. ಸುದ್ದಿಗಳನ್ನು ಖಚಿತತೆಗಾಗಿ ನಿರಂತರ ಪರಿಶೀಲನೆಗೆ ಒಳಪಡಿಸಿ ಸಂಪಾದಕೀಯ ಗುಣಮಟ್ಟವನ್ನು ಕಾಪಾಡಿಕೊಳ್ಳಲಾಗುತ್ತದೆ. ಏಕೆಂದರೆ ವಿಶ್ವಾಸಾರ್ಹತೆಯೇ ಮುಖ್ಯ ಮತ್ತು ಶ್ರೇಷ್ಠ. ದಿನಪತ್ರಿಕೆಗಳ ವೆಬ್‌ಸೈಟ್‌ಗಳಲ್ಲಿನ ಸುದ್ದಿಗಳು ಸಹ ಮುದ್ರಣ ಆವೃತ್ತಿಯ ರೀತಿಯಲ್ಲೇ ಸಂಪಾದಕೀಯ ಪರಿಶೀಲನೆಗೆ ಒಳಪಡುತ್ತವೆ’ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

‘ಮುದ್ರಣ ಅಥವಾ ಟಿ.ವಿ. ಚಾನಲ್‌ಗಳ ವಿಸ್ತರಣೆಯನ್ನು ರೂಪಿಸಿಕೊಂಡಿರುವ ಡಿಜಿಟಲ್ ಸುದ್ದಿ ಪ್ರಕಾಶಕರು, ಈಗಾಗಲೇ ಸ್ವಯಂ ನಿಯಂತ್ರಣ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದಾರೆ ಮತ್ತು ಹಲವಾರು ನಿಯಮಾವಳಿಗಳಿಗೆ, ನೀತಿ ಸಂಹಿತೆಗಳಿಗೆ ಹಾಗೂ ಈ ನೆಲದ ಕಾನೂನುಗಳಿಗೆ ಉತ್ತರದಾಯಿತ್ವ ಹೊಂದಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ದಿನಪತ್ರಿಕೆಗಳು ಅನುಸರಿಸುತ್ತಿರುವಂತೆಯೇ ದಿನಪತ್ರಿಕೆಗಳ ವೆಬ್‌ಸೈಟ್‌ಗಳು ಸ್ವಯಂ ನಿಯಂತ್ರಣ ನಿಯಮಾವಳಿಗಳನ್ನು ರೂಪಿಸಿಕೊಳ್ಳಬೇಕು ಎಂದು ಐಎನ್‌ಎಸ್ ಪ್ರಸ್ತಾವ ಸಲ್ಲಿಸುತ್ತದೆ. ಏಕೆಂದರೆ ಈ ವೆಬ್‌ಸೈಟ್‌ಗಳು ಎಲ್ಲ ದೃಷ್ಟಿಕೋನದಿಂದಲೂ ದಿನಪತ್ರಿಕೆಗಳ ವಿಸ್ತರಣೆಯ ಭಾಗವಾಗಿವೆ. ಕೇವಲ ಪ್ರಕಟಿಸುವ ಅವಧಿಯಲ್ಲಿ ಮಾತ್ರ ವ್ಯತ್ಯಾಸವಾಗುತ್ತದೆ. ದಿನಪತ್ರಿಕೆಗಳು ಕಠಿಣ ಸ್ವಯಂ ನಿಯಂತ್ರಣ ನಿಯಮಾವಳಿಗಳನ್ನು ಅನುಸರಿಸುತ್ತವೆ. ಜತೆಗೆ, ಭಾರತೀಯ ಪತ್ರಿಕಾ ಮಂಡಳಿಯು ಪತ್ರಕರ್ತರಿಗೆ ರೂಪಿಸಿರುವ ನಡವಳಿಕೆಗಳಿಗೆ ಬದ್ಧವಾಗಿವೆ. ಆದ್ದರಿಂದ, ಇವರಿಗೆ ಇನ್ನೊಂದು ನಿಯಮಾವಳಿಗಳನ್ನು ರೂಪಿಸುವ ಅಗತ್ಯವಿಲ್ಲ’ ಎಂದು ಪ್ರತಿಪಾದಿಸಿದ್ದಾರೆ.

‘ಹೊಸ ಡಿಜಿಟಲ್ ನಿಯಮಾವಳಿಗಳಿಗೆ ತಕ್ಷಣವೇ ತಿದ್ದುಪಡಿ ಮಾಡಬೇಕು. ಪತ್ರಿಕೆ ಮತ್ತು ಪುಸ್ತಕಗಳ ನೋಂದಣಿ (ಪಿಆರ್‌ಬಿ) ಕಾಯ್ದೆ ಅಡಿಯಲ್ಲಿ ಆರ್‌ಎನ್‌ಐನಲ್ಲಿ ನೋಂದಣಿಯಾಗಿರುವ ದಿನಪತ್ರಿಕೆಗಳ ವೆಬ್‌ಸೈಟ್‌ಗಳು ಮತ್ತು ನಿಯತಕಾಲಿಕೆಗಳಿಗೆ ಈ ನಿಯಮಾವಳಿಗಳಿಂದ ವಿನಾಯಿತಿ ನೀಡಬೇಕು’ ಎಂದು ಅವರು ಕೋರಿದ್ದಾರೆ.

‘ಪ್ರಕಾಶಕರು ಅತ್ಯುನ್ನತ ಪತ್ರಿಕಾ ಮೌಲ್ಯಗಳನ್ನು ಪಾಲಿಸುತ್ತಿದ್ದಾರೆ. ಆದ್ದರಿಂದ, ಸಾಮಾಜಿಕ ಮಾಧ್ಯಮಗಳು ಮತ್ತು ಒಟಿಟಿಗಳ ಜತೆಯಲ್ಲಿ ಸುದ್ದಿ ವೆಬ್‌ಸೈಟ್‌ಗಳನ್ನು ಸೇರಿಸಬಾರದು’ ಎಂದು ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ರೈಲಿನಲ್ಲಿ ಧೂಮಪಾನ: ಕಠಿಣ ಕ್ರಮ, ಭಾರಿ ದಂಡಕ್ಕೆ ರೈಲ್ವೆ ಇಲಾಖೆ ಚಿಂತನೆ

ನವದೆಹಲಿ (ಪಿಟಿಐ): ರೈಲಿನಲ್ಲಿ ಧೂಮಪಾನ ಮತ್ತು ಇದರಿಂದಾಗಿ ಸಾರ್ವಜನಿಕ ಆಸ್ತಿಗೆ ಹಾನಿ ಉಂಟಾದ ಸಂದರ್ಭದಲ್ಲಿ ಲೋಪ ಎಸಗುವ ಪ್ರಯಾಣಿಕನ ಬಂಧನ ಸೇರಿದಂತೆ ಭಾರಿ ಮೊತ್ತದ ದಂಡ ವಿಧಿಸಲು ಚಿಂತನೆ ನಡೆದಿದೆ ಎಂದು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನ ಬೋಗಿಯೊಂದರಲ್ಲಿ ಈಚೆಗೆ ಸಂಭವಿಸಿದ್ದ ಬೆಂಕಿ ಆಕಸ್ಮಿಕ ಘಟನೆಯ ಹಿಂದೆಯೇ ಜಾಗೃತಗೊಂಡಿರುವ ಇಲಾಖೆಯು ಈ ಸಂಬಂಧ ತಪಾಸಣೆಯನ್ನು ಚುರುಕುಗೊಳಿಸಲು ತೀರ್ಮಾನಿಸಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಪ್ರಾಥಮಿಕ ತನಿಖೆ ಪ್ರಕಾರ, ಮಾರ್ಚ್ 13ರಂದು ನವದೆಹಲಿ–ಡೆಹ್ರಾಡೂನ್ ನಡುವಣ ಶತಾಬ್ದಿ ಎಕ್ಸ್‌ಪ್ರೆಸ್‌ನ ಎಸ್5 ಬೋಗಿಯಲ್ಲಿ ಬೆಂಕಿ ಕಾಣಿಸಿಕೊಳ್ಳಲು ಕಿಡಿ ಇದ್ದ ಸಿಗರೇಟು ಅಥವಾ ಬೀಡಿಯನ್ನು ಶೌಚಾಲಯದ ಕಸದಬುಟ್ಟಿಗೆ ಎಸೆದಿರುವುದು ಕಾರಣ. ಇದು, ಅಲ್ಲಿನ ಟಿಷ್ಯೂ ಕಾಗದದ ಜೊತೆಗೆ ಸಂಪರ್ಕಕ್ಕೆ ಬಂದು ಬೆಂಕಿ ಹೊತ್ತಿಕೊಂಡಿದೆ.ರೈಲ್ವೆ ಕಾಯ್ದೆಯ ಸೆಕ್ಷನ್ 167ರ ಪ್ರಕಾರ, ನಿರ್ಬಂಧದ ನಡುವೆಯೂ ಯಾರಾದರೂ ಧೂಮಪಾನ ಮಾಡುತ್ತಿದ್ದು, ಸಹ ಪ್ರಯಾಣಿಕರು ಆಕ್ಷೇಪವಿದ್ದಲ್ಲಿ ₹ 100ವರೆಗೂ ದಂಡ ವಿಧಿಸಲು ಅವಕಾಶವಿದೆ.

ಕೇಂದ್ರ ರೈಲ್ವೆ ಸಚಿವ ಪೀಯೂಶ್ ಗೋಯಲ್ ಅವರು ಈಚೆಗೆ ರೈಲ್ವೆ ಮಂಡಳಿಯ ಸದಸ್ಯರು ಮತ್ತು ವಲಯಗಳ ಪ್ರಧಾನ ವ್ಯವಸ್ಥಾಪಕರ ಜೊತೆಗೆ ಚರ್ಚಿಸಿದ್ದು, ಇಂಥ ಪ್ರಕರಣ ತಡೆಗೆ ಕ್ರಮವಹಿಸುವಂತೆ ಸೂಚಿಸಿದ್ದರು.

ನಾವು ವಿವಿಧ ದಂಡ ಪ್ರಯೋಗಿಸಲು ಚಿಂತನೆ ನಡೆಸಿದ್ದೇವೆ. ಕೆಲ ಪ್ರಕರಣಗಳಲ್ಲಿ, ಸಾರ್ವಜನಿಕ ಆಸ್ತಿ ಜಖಂಗೊಳಿಸಿದ ಹಾಗೂ ಸಹ ಪ್ರಯಾಣಿಕರ ಜೀವಕ್ಕೆ ಆಪತ್ತು ತರುವುದು ಸೇರಿದಂತೆ ವಿವಿಧ ಪ್ರಕರಣಗಳಲ್ಲಿ ಲೋಪ ಎಸಗುವ ಪ್ರಯಾಣಿಕರ ಮೇಲೆ ಹೆಚ್ಚಿನ ದಂಡ ವಿಧಿಸಲು ಚಿಂತನೆ ನಡೆದಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಶತಾಬ್ದಿ ಎಕ್ಸ್‌ಪ್ರೆಸ್ ರೈಲಿನ ಬೆಂಕಿ ಆಕಸ್ಮಿಕ ಘಟನೆಯ ತನಿಖೆ ಇನ್ನೂ ಪ್ರಗತಿಯಲ್ಲಿದೆ. ಸಹ ಪ್ರಯಾಣಿಕರೊಬ್ಬರು ಈ ಕುರಿತು ನಾಲ್ವರು ಸದಸ್ಯರ ತನಿಖಾ ತಂಡಕ್ಕೆ ಲಿಖಿತ ಹೇಳಿಕೆ ನೀಡಿದ್ದಾರೆ.

ಇಶ್ರತ್ ಎನ್‌ಕೌಂಟರ್ ಪ್ರಕರಣ: ಗುಜರಾತ್ ಸರ್ಕಾರದ ಕ್ರಮ

ಸಿಬಿಐ ವಿಚಾರಣೆಗೆ ಅನುಮತಿ ನಿರಾಕರಣೆ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಇಶ್ರತ್ ಜಹಾನ್ ಎನ್‌ಕೌಂಟರ್ ಪ್ರಕರಣದಲ್ಲಿ ಭಾಗಿಯಾದ ಬಾಕಿ ಮೂವರು ಆರೋಪಿ ಪೊಲೀಸ್ ಅಧಿಕಾರಿಗಳ ವಿಚಾರಣೆ ನಡೆಸಲು ಗುಜರಾತ್ ಸರ್ಕಾರ ಸಿಬಿಐಗೆ ಅನುಮತಿ ನಿರಾಕರಿಸಿದೆ.

ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಗಿರೀಶ್ ಎಲ್. ಸಿಂಘಾಲ್, ಮಾಜಿ ಡಿವೈಎಸ್‌ಪಿ ತರುಣ್ ಬರೋಟ್ ಮತ್ತು ಸಹಾಯಕ ಸಬ್ ಇನ್ಸ್‌ಪೆಕ್ಟರ್ ಅಣಜು ಚೌಧರಿಯವರ ವಿಚಾರಣೆಗೆ ಅನುಮತಿ ನಿರಾಕರಿಸಿರುವುದು, ಸಿಬಿಐ ವಿಶೇಷ ನ್ಯಾಯಾಲಯಕ್ಕೆ ಸರ್ಕಾರದ ಪತ್ರವನ್ನು ಶನಿವಾರ ಸಲ್ಲಿಸಿದಾಗ ಬಹಿರಂಗಗೊಂಡಿದೆ.

ಈ ಹಿಂದೆ ಮಾಜಿ ಐಪಿಎಸ್ ಅಧಿಕಾರಿ ಡಿ.ಜಿ. ವಂಜಾರ ಮತ್ತು



ಇಶ್ರತ್ ಜಹಾನ್

ಮಾಜಿ ಪೊಲೀಸ್ ವರಿಷ್ಠಾಧಿಕಾರಿ ಎನ್.ಕೆ. ಅಮೀನ್ ಅವರ ವಿಚಾರಣೆಗೆ ಸರ್ಕಾರ ಅನುಮತಿ ನಿರಾಕರಿಸಿದ್ದರಿಂದ ಅವರನ್ನು ಪ್ರಕರಣದಿಂದ ಕೈಬಿಡಲಾಗಿತ್ತು. ಆರೋಪಿಯಾಗಿದ್ದ ಮಾಜಿ ಡಿಜಿಪಿ ಪಿ.ಪಿ. ಪಾಂಡೆ ಅವರನ್ನು ಮೊದಲ ಬಾರಿಗೆ ಇದೇ ರೀತಿ ಪ್ರಕರಣದಿಂದ ಕೈಬಿಡಲಾಗಿತ್ತು. ಇನ್ನು ಮತ್ತೊಬ್ಬ ಆರೋಪಿ ಜೆ.ಜಿ. ಪರ್ಮಾರ್ ಕಳೆದ ವರ್ಷ ನಿಧನರಾದರು.

ವಿಚಾರಣೆಯಿಂದ ಆರೋಪಿಗಳನ್ನು ಕೈಬಿಡುವ ಸರ್ಕಾರದ ಆದೇಶಗಳ ವಿರುದ್ಧ ಸಿಬಿಐ ಮೇಲ್ಮನವಿ ಸಲ್ಲಿಸದ ಕಾರಣ ಮತ್ತು ‘ಈ ಆದೇಶಗಳನ್ನು ಅಂಗೀಕರಿಸಲಾಗಿದೆ’ ಎಂದು ನ್ಯಾಯಾಲಯಕ್ಕೆ ಲಿಖಿತವಾಗಿ ಸಲ್ಲಿಸಿರುವುದರಿಂದ ಉಳಿದ ಮೂವರು ಅಧಿಕಾರಿಗಳನ್ನು ಸಹ ಪ್ರಕರಣದಿಂದ ಕೈಬಿಡುವ ಸಾಧ್ಯತೆಯಿದೆ. ವಿಚಾರಣೆ ಆರಂಭವಾಗುವ ಮೊದಲೇ ಎನ್‌ಕೌಂಟರ್ ಪ್ರಕರಣ ಮುಚ್ಚಿಹೋಗುವ ಸಾಧ್ಯತೆ ಇದೆ. ಈ ವಿಶೇಷ ಪ್ರಕರಣದ ಆದೇಶವನ್ನು ಇದೇ 31ರಂದು ಸಿಬಿಐ ವಿಶೇಷ ನ್ಯಾಯಾಲಯ ಪ್ರಕಟಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.ಸಿಬಿಐ, ಗುಜರಾತ್ ಸರ್ಕಾರದ ಪತ್ರದ ಪ್ರತಿಗಳನ್ನು ಸಿಬಿಐ ವಿಶೇಷ ನ್ಯಾಯಾಲಯದಲ್ಲಿ ಹಾಜರುಪಡಿಸಿ, ಸಿಂಘಾಲ್, ಬರೋಟ್ ಮತ್ತು ಚೌಧರಿ ವಿರುದ್ಧ ಕಾನೂನು ಕ್ರಮ ಜರುಗಿಸಲು ಸರ್ಕಾರ ಅನುಮತಿ ನಿರಾಕರಿಸಿದೆ ಎಂಬ ಮಾಹಿತಿಯನ್ನು ನ್ಯಾಯಾಲಯದ ಗಮನಕ್ಕೆ ತಂದಿತು. ಸರ್ಕಾರಿ ನೌಕರರ ಮೇಲೆ ಕಾನೂನು ಕ್ರಮ ಜರುಗಿಸಲು ಸಿಆರ್‌ಪಿಸಿಯ 197ರ ಸಂಹಿತೆಯಡಿ ಮೊದಲು ಸರ್ಕಾರದ ಅನುಮತಿ ಪಡೆಯಬೇಕಿದೆ.

‘ಮಹಿಳಾ ವಾಸ್ತುಶಿಲ್ಪಿ ಮೇಲಿನ ಅನಧಿಕೃತ ಕಣ್ಗಾವಲು’ ಪ್ರಕರಣದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ ಗಿರೀಶ್ ಎಲ್. ಸಿಂಘಾಲ್ ಹೆಸರು ಪ್ರಮುಖವಾಗಿ ಕೇಳಿಬಂದಿತ್ತು.

ಇಶ್ರತ್ ಎನ್‌ಕೌಂಟರ್ ಪ್ರಕರಣದಲ್ಲಿ ಸಿಂಘಾಲ್ ಘಟನಾ ಸ್ಥಳದಲ್ಲಿ ಇರಲಿಲ್ಲ, ಆದರೆ ಪಿತೂರಿಯ ಭಾಗವಾಗಿದ್ದರು. ಚೌಧರಿ ತನ್ನ ಸ್ಟೆನ್‌ಗನ್‌ನಿಂದ 10 ಸುತ್ತು ಗುಂಡು ಹಾರಿಸಿದ್ದಾರೆ. ಬರೋಟ್ ತನ್ನ ರಿವಾಲ್ವರ್‌ನಿಂದ ಆರು ಸುತ್ತು ಮತ್ತು ಇನ್ನೊಬ್ಬ ಸಹೋದ್ಯೋಗಿಯ ರಿವಾಲ್ವರ್‌ನಿಂದ 3 ಸುತ್ತು ಗುಂಡು ಹಾರಿಸಿದ್ದಾರೆ ಎಂದು ಸಿಬಿಐ ದೋಷಾರೋಪ ಪಟ್ಟಿಯಲ್ಲಿ ದಾಖಲಿಸಿದೆ.

ಸಂಕ್ಷಿಪ್ತ ಸುದ್ದಿ

ಬೊಬಡೆ ಉತ್ತರಾಧಿಕಾರಿ ಶಿಫಾರಸಿಗೆ ಕೋರಿಕೆ

ನವದೆಹಲಿ(ಪಿಟಿಐ): ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಎಸ್.ಎ. ಬೊಬಡೆ ಅವರು ನಿವೃತ್ತಿಯಾಗಲು ಒಂದು ತಿಂಗಳು ಬಾಕಿ ಇರುವಾಗ ಮುಂದಿನ ಮುಖ್ಯ ನ್ಯಾಯಮೂರ್ತಿಗಳ ನೇಮಕ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರ ಆರಂಭಿಸಿದ್ದು, ತಮ್ಮ ಉತ್ತರಾಧಿಕಾರಿಯ ಹೆಸರು ಶಿಫಾರಸು ಮಾಡುವಂತೆ ಅವರನ್ನು ಕೋರಿದೆ ಎಂದು ಮೂಲಗಳು ತಿಳಿಸಿವೆ.



ಎಸ್.ಎ. ಬೊಬಡೆ


ಏಪ್ರಿಲ್ 23ರಂದು ನಿವೃತ್ತಿಯಾಗಲಿರುವ ಮುಖ್ಯನ್ಯಾಯಮೂರ್ತಿ ಬೊಬಡೆ ಅವರಿಗೆ ಕಾನೂನು ಸಚಿವ ರವಿಶಂಕರ್ ಪ್ರಸಾದ್ ಅವರು ಶುಕ್ರವಾರ ಈ ಸಂಬಂಧ ಪತ್ರ ಬರೆದಿದ್ದು, ಮುಂದಿನ ಮುಖ್ಯನ್ಯಾಯಮೂರ್ತಿಯ ಹೆಸರು ಸೂಚಿಸಲು ಕೋರಿದ್ದಾರೆ ಎಂದು ಮೂಲಗಳು ಹೇಳಿವೆ.

ಈ ಹಿಂದಿನಿಂದಲೂ ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ನಿವೃತ್ತಿ ಆಗುವ ಸಮಯದಲ್ಲಿ ಉನ್ನತ ನ್ಯಾಯಾಲಯದ ಅತ್ಯಂತ ಹಿರಿಯ ನ್ಯಾಯಮೂರ್ತಿಯನ್ನು ತಮ್ಮ ಮುಂದಿನ ಉತ್ತರಾಧಿಕಾರಿಯಾಗಿ ಶಿಫಾರಸು ಮಾಡುವುದು ಸಂಪ್ರದಾಯ.

ಸುಪ್ರೀಂಕೋರ್ಟ್‌ನಲ್ಲಿ ಮುಖ್ಯನ್ಯಾಯಮೂರ್ತಿಗಳ ನಂತರ ಅತ್ಯಂತ ಹಿರಿಯ ನ್ಯಾಯಮೂರ್ತಿಗಳ ಸ್ಥಾನದಲ್ಲಿ ಎನ್.ವಿ. ರಮಣ ಇದ್ದಾರೆ. 1957ರ ಆಗಸ್ಟ್ 27ರಂದು ಜನಿಸಿದ ರಮಣ ಅವರ ಸೇವಾವಧಿ 2022ರ ಆಗಸ್ಟ್ 26ರವರೆಗೆ ಇದೆ.

ಸಿಪಿಐ ಹಿರಿಯ ಮುಖಂಡ ಕುರಿಯನ್ ನಿಧನ

ಇಡುಕ್ಕಿ(ಪಿಟಿಐ): ಸಿಪಿಐನ ಹಿರಿಯ ಮುಖಂಡ, ಕೇರಳ ವಿಧಾನಸಭೆಯ ಮಾಜಿ ಡೆಪ್ಯುಟಿ ಸ್ಪೀಕರ್ ಸಿ.ಎ. ಕುರಿಯನ್ (88) ಅವರು ವಯೋಸಹಜ ಅನಾರೋಗ್ಯದಿಂದಾಗಿ ಮುನ್ನಾರ್‌ನ ತಮ್ಮ ನಿವಾಸದಲ್ಲಿ ಶನಿವಾರ ನಿಧನರಾದರು ಎಂದು ಪಕ್ಷದ ಮೂಲಗಳು ತಿಳಿಸಿವೆ.



ಕುರಿಯನ್

ಸಿಪಿಐನ ಟ್ರೇಡ್ ಯೂನಿಯನ್ ವಿಭಾಗದ ಎಐಟಿಯುಸಿ ಸಂಘಟನೆಯ ಹಿರಿಯ ಮುಖಂಡರಾದ ಕುರಿಯನ್ ಅವರು, ಪಿರುಮೇಡ್ ಕ್ಷೇತ್ರದಿಂದ 1977, 1980 ಮತ್ತು 1996ರಲ್ಲಿ ವಿಧಾನಸಭೆಗೆ ಆಯ್ಕೆಯಾಗಿದ್ದರು. ಕೋಟಯಂ ಜಿಲ್ಲೆಯ ಪುತ್ತುಪ್ಪಳ್ಳಿಯವರಾದ ಕುರಿಯನ್ ಅವರು, ಬ್ಯಾಂಕ್ ಉದ್ಯೋಗವನ್ನು ತ್ಯಜಿಸಿ, ರಾಜಕೀಯ ಪ್ರವೇಶಿಸಿದ್ದರು. 1960ರಲ್ಲಿ ಟ್ರೇಡ್ ಯೂನಿಯನ್ ಕಾರ್ಯಕರ್ತರಾಗಿ ತಮ್ಮ ರಾಜಕೀಯ ಜೀವನ ಆರಂಭಿಸಿದ ಕುರಿಯನ್, ಕೃಷಿ ಕಾರ್ಮಿಕರ ಹೋರಾಟದಲ್ಲಿ, ಜೈಲುವಾಸ ಅನುಭವಿಸಿದ್ದರು.

ಪಾಕ್: ಗುಂಡು ಹಾರಿಸಿ ಹಿಂದೂ ಪತ್ರಕರ್ತನ ಹತ್ಯೆ

ಕರಾಚಿ: ಅಪರಿಚಿತ ದುಷ್ಕರ್ಮಿಗಳು ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ 31 ವರ್ಷದ ಹಿಂದೂ ಪತ್ರಕರ್ತನನ್ನು ಗುಂಡಿಕ್ಕಿ ಹತ್ಯೆ ಮಾಡಿರುವ ಘಟನೆ ನಡೆದಿದೆ. ಪತ್ರಕರ್ತ ಸಲೂನ್‌ನಲ್ಲಿ ಹೇರ್ ಕಟಿಂಗ್ ಮಾಡಿಸಿಕೊಳ್ಳುವಾಗ ಕೃತ್ಯ ನಡೆದಿದೆ. ಖಾಸಗಿ ರಾಯಲ್ ನ್ಯೂಸ್ ಟಿ.ವಿ.ವಾಹಿನಿ ಮತ್ತು ಉರ್ದು ಭಾಷೆ ಪತ್ರಿಕೆಯ ವರದಿಗಾರ ಅಜಯ್ ಲಾಲ್ವಾನಿ ಮೃತ ಪತ್ರಕರ್ತ. ಪತ್ರಕರ್ತನ ಹೊಟ್ಟೆ, ಕೈ ಮತ್ತು ಮಂಡಿಯ ಭಾಗದಲ್ಲಿ ಗುಂಡಿನೇಟು ಬಿದ್ದಿತು. ಲಾಲ್ವಾನಿ ಅವರನ್ನು ಆಸ್ಪತ್ರೆಗೆ ಒಯ್ಯಲಾಗಿದ್ದು, ಆ ವೇಳೆಗೆ ಅವರು ಮೃತಪಟ್ಟಿದ್ದರು.

ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ಸೌರಭ್‌ಗೆ ಬೆಳ್ಳಿ; ಅಭಿಷೇಕ್‌ಗೆ ಕಂಚು

ಮನು ಹಿಂದಿಕ್ಕಿದ ಯಶಸ್ವಿನಿಗೆ ಚಿನ್ನ

ನವದೆಹಲಿ (ಪಿಟಿಐ): ಯಶಸ್ವಿನಿ ಸಿಂಗ್ ದೇಸ್ವಾಲ್ ಅವರು ಈ ಬಾರಿಯ ಐಎಸ್‌ಎಸ್‌ಎಫ್ ವಿಶ್ವಕಪ್ ಶೂಟಿಂಗ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನದ ಪದಕ ತಂದುಕೊಟ್ಟಿದ್ದಾರೆ.

ಕರ್ಣಿ ಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯುತ್ತಿರುವ ಟೂರ್ನಿಯಲ್ಲಿ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಅವರು ಭಾರತದ ಮನು ಭಾಕರ್ ಅವರನ್ನು ಹಿಂದಿಕ್ಕಿ ಶನಿವಾರ ಅಗ್ರಸ್ಥಾನ ಗಳಿಸಿದರು.

ಎಂಟು ಸ್ಪರ್ಧಿಗಳ ಫೈನಲ್‌ನಲ್ಲಿ ಯಶಸ್ವಿನಿ 238.8 ಪಾಯಿಂಟ್ಸ್ ಕಲೆಹಾಕಿದರು. 236.7 ಪಾಯಿಂಟ್ಸ್ ಗಳಿಸಿದ ಮನು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಬೆಲಾರಸ್‌ನ ವಿಕ್ಟೋರಿಯಾ ಚೈಕಾ (236.7) ಅವರಿಗೆ ಕಂಚು ಒಲಿಯಿತು.

ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ಶ್ರೀ ನಿವೇದಾ (193.5) ನಾಲ್ಕನೇ ಸ್ಥಾನ ಪಡೆದರು.

ಯಶಸ್ವಿನಿ ಹಾಗೂ ಮನು ಇಬ್ಬರೂ ಟೋಕಿಯೊ ಒಲಿಂಪಿಕ್ಸ್‌ಗೆ ಈಗಾಗಲೇ ಟಿಕೆಟ್ ಗಿಟ್ಟಿಸಿದ್ದಾರೆ.


ಯಶಸ್ವಿನಿ ದೇಸ್ವಾಲ್–ಪಿಟಿಐ ಚಿತ್ರ

ಪುರುಷರ 10 ಮೀ. ಏರ್ ಪಿಸ್ತೂಲ್ ವಿಭಾಗದಲ್ಲಿ ಭಾರತದ ಸೌರಭ್ ಚೌಧರಿ ಹಾಗೂ ಅಭಿಷೇಕ್ ವರ್ಮಾ ಕ್ರಮವಾಗಿ ಬೆಳ್ಳಿ ಹಾಗೂ ಕಂಚಿನ ಪದಕಗಳನ್ನು ಗೆದ್ದುಕೊಂಡರು. ಈ ವಿಭಾಗದ ಚಿನ್ನ ಇರಾನ್‌ನ ಜಾವೇದ್ ಫಾರೂಗಿ ಅವರ ಪಾಲಾಯಿತು.

ಫಾರೂಗಿ 243.6 ಪಾಯಿಂಟ್ಸ್ ಗಳಿಸಿದರು. ಚೌಧರಿ (243.2) ಮತ್ತು ಅಭಿಷೇಕ್ (221.8) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರು.

ಪನ್ವರ್‌ಗೆ ಕಂಚು: ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನದಲ್ಲಿರುವ ಭಾರತದ ದಿವ್ಯಾಂಶ್ ಸಿಂಗ್ ಪನ್ವರ್, ಪುರುಷರ 10 ಮೀಟರ್ ಏರ್ ರೈಫಲ್ ವಿಭಾಗದಲ್ಲಿ ಕಂಚಿನ ಪದಕ ಗಳಿಸಿದರು.

18 ವರ್ಷದ ಪನ್ವರ್ 228.1 ಪಾಯಿಂಟ್ಸ್ ಕಲೆಹಾಕಿದರು. ಇದೇ ವಿಭಾಗದಲ್ಲಿ ಫೈನಲ್ಸ್‌ಗೆ ತಲುಪಿದ್ದ ಅರ್ಜುನ್ ಬಬುತಾ (185.5) ಐದನೇ ಸ್ಥಾನ ಗಳಿಸಿದರು. ಅಮೆರಿಕದ ಲೂಕಾಸ್ ಕೊಜಿನೆಸ್ಕಿ (249.8) ಚಿನ್ನ ಹಾಗೂ ಹಂಗರಿಯ ಇಸ್ತವಾನ್ ಪೆನಿ (249.7 ಬೆಳ್ಳಿ ಪದಕಗಳನ್ನು ತಮ್ಮದಾಗಿಸಿಕೊಂಡರು.

ಮಹಿಳೆಯರ 10 ಮೀ. ಏರ್ ರೈಫಲ್ ವಿಭಾಗದ ಸ್ಪರ್ಧೆಯಲ್ಲಿ ಅಂಜುಮ್ ಮೌದ್ಗಿಲ್ (187.8 ಪಾಯಿಂಟ್ಸ್) ಐದನೇ ಸ್ಥಾನಕ್ಕೆ ಸಮಾಧಾನಪಟ್ಟುಕೊಂಡರು. ಅಮೆರಿಕದ ಮೇರಿ ಕರೋಲಿನ್ ಟಕ್ಕರ್ (251.5) ಹಾಗೂ ಅಲಿಸನ್ ಮೇರಿ ವೇಜ್ (250.4) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಹಂಗರಿಯ ಈಸ್ತರ್ ಡೆನೆಸ್ (230.2) ಕಂಚು ತಮ್ಮದಾಗಿಸಿಕೊಂಡರು.

ಮೂವರಿಗೆ ಕೋವಿಡ್–19

ಟೂರ್ನಿಯಲ್ಲಿ ಸ್ಪರ್ಧಿಸಲಿದ್ದ ಭಾರತದ ಇಬ್ಬರು ಸೇರಿದಂತೆ ಮೂವರು ಶೂಟಿಂಗ್ ಸ್ಪರ್ಧಿಗಳಲ್ಲಿ ಕೋವಿಡ್ ದೃಢಪಟ್ಟಿದೆ ಎಂದು ರಾಷ್ಟ್ರೀಯ ರೈಫಲ್ ಸಂಸ್ಥೆಯ (ಎನ್‌ಆರ್‌ಎಐ) ಮೂಲಗಳು ತಿಳಿಸಿವೆ. ಸದ್ಯಕ್ಕೆ ಸೋಂಕಿತರನ್ನು ಪ್ರತ್ಯೇಕವಾಸದಲ್ಲಿರಿಸಲಾಗಿದ್ದು, ಹೆಸರುಗಳನ್ನು ಬಹಿರಂಗಪಡಿಸಲಾಗಿಲ್ಲ.


ಸೌರಭ್ ಚೌಧರಿ


ಮನು ಭಾಕರ್

ಸೆಮಿಯಲ್ಲಿ ಸಿಂಧುಗೆ ಸೋಲು

ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್

ಬರ್ಮಿಂಗ್‌ಹ್ಯಾಂ (ಪಿಟಿಐ): ಭಾರತದ ಪಿ.ವಿ.ಸಿಂಧು ಮತ್ತೊಮ್ಮೆ ಸೆಮಿಫೈನಲ್‌ನಲ್ಲಿ ಎಡವಿದರು. ಶನಿವಾರ ನಡೆದ ಆಲ್ ಇಂಗ್ಲೆಂಡ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ನಾಲ್ಕರ ಘಟ್ಟದ ಪಂದ್ಯದಲ್ಲಿ ಅವರು ಥಾಯ್ಲೆಂಡ್‌ನ ಪೊರ್ನಾಪವಿ ಚೊಚುವಾಂಗ್ ಎದುರು ಸೋತು ಹೊರಬಿದ್ದರು.

ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದಿರುವ ವಿಶ್ವ ಚಾಂಪಿಯನ್ ಸಿಂಧು ವಿಶ್ವದ 11ನೇ ಕ್ರಮಾಂಕದ ಆಟಗಾರ್ತಿಯ ಚುರುಕಿನ ಆಟ ಮತ್ತು ಶಕ್ತಿಶಾಲಿ ಶಾಟ್‌ಗಳಿಗೆ ಉತ್ತರ ನೀಡಲಾಗದೆ 17-21, 9-21ರಲ್ಲಿ ಸೋಲುಂಡರು. ಪಂದ್ಯ ಕೇವಲ 43 ನಿಮಿಷಗಳಲ್ಲಿ ಮುಕ್ತಾಯಗೊಂಡಿತು. ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಸಿಂಧು ಆಲ್ ಇಂಗ್ಲೆಂಡ್ ಓಪನ್‌ನ 2018ರ ಆವೃತ್ತಿಯಲ್ಲೂ ಸೆಮಿಫೈನಲ್‌ನಲ್ಲಿ ಸೋತಿದ್ದರು. ಥಾಯ್ಲೆಂಡ್‌ನಲ್ಲಿ ನಡೆದ ಮೂರು ಟೂರ್ನಿಗಳು ಒಳಗೊಂಡಂತೆ ಕೋವಿಡ್ ನಂತರದ ಯಾವ ಟೂರ್ನಿಯಲ್ಲೂ ಅವರು ನಿರೀಕ್ಷೆಗೆ ತಕ್ಕಂತೆ ಆಡಲಿಲ್ಲ.


ಪೊರ್ನಾಪವಿ ಚೊಚುವಾಂಗ್ ಎದುರಿನ ಪಂದ್ಯದಲ್ಲಿ ಷಟಲ್ ಹಿಂದಿರುಗಿಸುವ ಪ್ರಯತ್ನ ಮಾಡಿದ ಭಾರತದ ಪಿ.ವಿ.ಸಿಂಧು –ಎಎಫ್‌ಪಿ ಚಿತ್ರ

ಸಿಂಧು ಮತ್ತು ಚೊಚುವಾಂಗ್ ಈ ಹಿಂದೆ ಒಟ್ಟು ಐದು ಬಾರಿ ಮುಖಾಮುಖಿಯಾಗಿದ್ದು ಸಿಂಧು ನಾಲ್ಕರಲ್ಲಿ ಗೆದ್ದಿದ್ದರು. ಜನವರಿಯಲ್ಲಿ ನಡೆದ ವಿಶ್ವ ಟೂರ್ ಫೈನಲ್ಸ್‌ನಲ್ಲೂ ಸಿಂಧು ಮೇಲುಗೈ ಸಾಧಿಸಿದ್ದರು. ಆದರೆ ಶನಿವಾರದ ಪಂದ್ಯದಲ್ಲಿ ಚೊಚೊವಾಂಗ್ ಭರ್ಜರಿ ಆಟವಾಡಿದರು.

ಶುಕ್ರವಾರ ರಾತ್ರಿ ಜಪಾನ್‌ನ ಅಕಾನೆ ಯಮಗುಚಿ ಎದುರು 16-21, 21-16, 21-19ರಲ್ಲಿ ಗೆದ್ದು ಸಿಂಧು ಸೆಮಿಫೈನಲ್ ಪ್ರವೇಶಿಸಿದ್ದರು.

ಮುಂಬೈ ರೇಸ್

‘ಕಿಲ್ಡೇರ್’ ಗೆಲ್ಲುವ ನಿರೀಕ್ಷೆ

‘ಡಾಕ್ಟರ್ ಎಸ್. ಸಿ. ಜೈನ್ ಸ್ಪ್ರಿಂಟರ್ಸ್ ಚಾಂಪಿಯನ್‌ಷಿಪ್’ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ‘ಕಿಲ್ಡೇರ್’ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ಟಾರ್ಸ್ ಫಾರ್ ಯು 1, ಟ್ರಿಸ್ಟಾರ್ 2, ಅರ್ರೆಸಿಫ್ 5
2ನೇ ರೇಸ್: ಸರ್ಕಲ್ ಆಫ್ ಲವ್ 9, ಐರನ್ ಥ್ರೋನ್ 1, ಮರಾಕೇಶ್ 2
3ನೇ ರೇಸ್: ಸುಫಿಯಾ 7, ಸರ್ಗಿಯೊ 1, ಹೈಆಕ್ಟೇನ್ 9
4ನೇ ರೇಸ್: ಬಿರ್ಕಿನ್ ಬ್ಲೋವರ್ 1, ಥಿಯೊಡೊರಾ 3, ಧಾರಾಸನ 7
5ನೇ ರೇಸ್: ಥಿಯಾನ್ 1, ಫ್ಲೇಮಿಂಗ್ ಲಂಬೋರ್ಗಿನಿ 7, ಮ್ಯಾಪಲ್‌ವುಡ್ 2
6ನೇ ರೇಸ್: ಕಿಲ್ಡೇರ್ 6, ಕಾರ್ಫೆ ಕ್ಯಾಸ್ಲ್ 3, ಕ್ಯಾವಾಲೋ ವೆಲೋಸ್ 2
7ನೇ ರೇಸ್: ಫುಲ್ ಆಫ್ ಗ್ರೇಸ್ 8, ಫ್ಲೈಯಿಂಗ್ ಸ್ಕಾಟ್‌ಸ್‌ಮ್ಯಾನ್ 2, ಆಹ್ ಬೆಲ್ಲಾ 6
8ನೇ ರೇಸ್: ಗ್ರ್ಯಾಂಡ್ ಆರ್ಕಿಟೆಕ್ಟ್ 3, ಟೈಟಾನಿಯಮ್ ಆನ್ ವಾ ಡಾನ್ಸರ್ 7

ಅತ್ಯುತ್ತಮ ಬೆಟ್: ಸ್ಟಾರ್ಸ್ ಫಾರ್ ಯು

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ನಡಿಗೆಯಲ್ಲಿ ವಾಂಗ್ ದಾಖಲೆ

ಬೆಂಗಳೂರು (ರಾಯಿಟರ್ಸ್): ಚೀನಾದ ವಾಂಗ್ ಕೈಹುವಾ ಅವರು 20 ಕಿಲೋಮೀಟರ್ ವೇಗ ನಡಿಗೆಯಲ್ಲಿ ಅಮೋಘ ಸಾಧನೆ ಮಾಡಿದರು.

ಚೀನಾ ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಒಂದು ತಾಸು 16 ನಿಮಿಷ ಮತ್ತು 54 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಮೂರನೇ ಅತಿವೇಗದ ವ್ಯಕ್ತಿ ಎನಿಸಿಕೊಂಡರು. ಒಲಿಂಪಿಕ್ಸ್‌ಗೂ ಅರ್ಹರಾದರು.

2016ರ ಒಲಿಂಪಿಕ್ ಚಾಂಪಿಯನ್ ವಾಂಗ್ ಜೆನ್ ಅವರ ಹೆಸರಿನಲ್ಲಿದ್ದ ರಾಷ್ಟ್ರೀಯ ದಾಖಲೆಯನ್ನು ವಾಂಗ್ ಕೈಹುವಾ ಮುರಿದರು.

20 ಕಿಲೋಮೀಟರ್ ನಡಿಗೆಯ ವಿಶ್ವ ದಾಖಲೆ ಜಪಾನ್‌ನ ಯುಸುಕೆ ಸುಜುಕಿ ಹೆಸರಿನಲ್ಲಿದೆ. 2015ರ ಕೂಟವೊಂದರಲ್ಲಿ ಅವರು ಒಂದು ತಾಸು 16 ನಿಮಿಷ 36 ಸೆಕೆಂಡುಗಳಲ್ಲಿ ನಡಿಗೆ ಪೂರ್ಣಗೊಳಿಸಿದ್ದರು. ರಷ್ಯಾದ ಸರ್ಜಿ ಮೊರೊಜೊವ್ (ಒಂದು ತಾಸು 16 ನಿಮಿಷ 43 ಸೆಕೆಂಡು) ವೇಗದ ಎರಡನೇ ವ್ಯಕ್ತಿಯಾಗಿದ್ದಾರೆ.

‘ರಾಷ್ಟ್ರೀಯ ದಾಖಲೆ ಮುರಿಯಬೇಕು ಎಂಬ ಛಲದೊಂದಿಗೆ ಕಣಕ್ಕೆ ಇಳಿದಿದ್ದೆ. ಅದು ಸಾಧ್ಯವಾಯಿತು’ ಎಂದು ವಾಂಗ್ ಕೈಹುವಾ ಹೇಳಿದರು.

ಲಸಿಕೆ ಕೇಳಿದ ಡೆಲ್ಲಿ ಕ್ಯಾಪಿಟಲ್ಸ್

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಫ್ರಾಂಚೈಸ್ ಕೋವಿಡ್–19ರ ಲಸಿಕೆಗಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ (ಬಿಸಿಸಿಐ) ಮನವಿ ಸಲ್ಲಿಸಿದೆ.

ಈ ಬಾರಿಯ ಐಪಿಎಲ್ ಟೂರ್ನಿ ಏಪ್ರಿಲ್ ಒಂಬತ್ತರಂದು ಆರಂಭಗೊಳ್ಳಲಿದ್ದು ಮುಂದಿನ ವಾರ ಆಟಗಾರರು ಜೀವ ಸುರಕ್ಷಾ ವಲಯ ಪ್ರವೇಶಿಸಲಿದ್ದಾರೆ. ಒಂದು ವಾರ ಕಠಿಣ ಕ್ವಾರಂಟೈನ್‌ಗೆ ಒಳಗಾಗಲಿದ್ದಾರೆ.

ಇದಕ್ಕೂ ಮೊದಲು ಭಾರತದ ಆಟಗಾರರಿಗೆ ಲಸಿಕೆ ಹಾಕಲು ವ್ಯವಸ್ಥೆ ಮಾಡಬೇಕು ಎಂದು ಕ್ಯಾಪಿಟಲ್ಸ್ ಮನವಿ ಸಲ್ಲಿಸಿದೆ.

ಒಲಿಂಪಿಕ್ಸ್‌ಗೆ ಮಣಿಕಾ–ಶರತ್

ದೋಹಾ (ಪಿಟಿಐ): ಭಾರತದ ಟೇಬಲ್ ಟೆನಿಸ್ ಪಟುಗಳಾದ ಮಣಿಕಾ ಬಾತ್ರಾ ಮತ್ತು ಶರತ್ ಕಮಲ್ ಮಿಶ್ರ ಡಬಲ್ಸ್ ವಿಭಾಗದಲ್ಲಿ ಟೋಕಿಯೊ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿದ್ದಾರೆ.

ಏಷ್ಯನ್ ಅರ್ಹತಾ ಟೂರ್ನಿಯ ಫೈನಲ್‌ನಲ್ಲಿ ಮಣಿಕಾ–ಶರತ್ ಜೋಡಿ ಕೊರಿಯದ ಸ್ಯಾಂಗ್ ಸು ಲೀ–ಜೀ ಜಿಯೊನ್ ಅವರನ್ನು ಸೋಲಿಸಿದರು. ಡಬಲ್ಸ್ ವಿಭಾಗದಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ ಭಾರತದ ಮೊದಲ ಜೋಡಿ ಎಂಬ ಶ್ರೇಯ ಅವರದಾಯಿತು.

ಅಂತಿಮ ಪಂದ್ಯದಲ್ಲಿ ಎರಡು ಸೆಟ್‌ಗಳ ಹಿನ್ನಡೆಯಿಂದ ಚೇತರಿಸಿಕೊಂಡ ಭಾರತದ ಜೋಡಿಯು 8–11,6-11, 11-5, 11-6, 13-11, 11-8ರಿಂದ ಎದುರಾಳಿಗಳನ್ನು ಪರಾಭವಗೊಳಿಸಿದರು.


ನಿಖತ್ ಜರೀನ್ –ಪಿಟಿಐ ಚಿತ್ರ

ನಿಖತ್, ಗೌರವ್‌ಗೆ ಕಂಚಿನ ಪದಕ

ನವದೆಹಲಿ: ಪ್ರಿ ಕ್ವಾರ್ಟರ್ ಫೈನಲ್ ಮತ್ತು ಕ್ವಾರ್ಟರ್ ಫೈನಲ್ ಬೌಟ್‌ಗಳಲ್ಲಿ ವಿಶ್ವ ಚಾಂಪಿಯನ್ನರನ್ನು ಮಣಿಸಿದ್ದ ಭಾರತದ ನಿಖತ್ ಜರೀನ್ ಅವರು ಇಸ್ತಾಂಬುಲ್‌ನಲ್ಲಿ ನಡೆಯುತ್ತಿರುವ ಬೋಸ್ಪೊರಸ್ ಬಾಕ್ಸಿಂಗ್ ಟೂರ್ನಿಯಲ್ಲಿ ಶುಕ್ರವಾರ ರಾತ್ರಿ ನಿರಾಸೆ ಅನುಭವಿಸಿದರು. ಪುರುಷರ ವಿಭಾಗದಲ್ಲಿ ಗೌರವ್ ಸೋಳಂಕಿ ಕೂಡ ಸೋಲುಂಡು ಮರಳಿದರು.

ಮಹಿಳೆಯರ 51 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ನಿಖತ್ ಜರೀನ್ ಸೆಮಿಫೈನಲ್‌ನಲ್ಲಿ ಟರ್ಕಿಯ ಬುಸೆನಾಸ್ ಕಕಿರೊಗುಲು ಎದುರು 0–5ರಲ್ಲಿ ಸೋಲುಂಡರು. ಬುಸೆನಾಸ್, 2019ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ಪ್ರಿ ಕ್ವಾರ್ಟರ್‌ನಲ್ಲಿ ವಿಶ್ವ ಚಾಂಪಿಯನ್ ರಷ್ಯಾದ ಪಲ್ಟ್‌ಸೆವಾ ಎಕಟೇರಿನಾ ಅವರನ್ನು ಮಣಿಸಿದ್ದ ನಿಖತ್ ಎಂಟರ ಘಟ್ಟದಲ್ಲಿ ಮಾಜಿ ವಿಶ್ವ ಚಾಂಪಿಯನ್ ಕಜಕಸ್ತಾನದ ನಜೀಂ ಕೈಜಬೆ ಅವರನ್ನು ಮಣಿಸಿದ್ದರು.

ಸೆಮಿಫೈನಲ್‌ನ ಮೊದಲ ಸುತ್ತಿನಲ್ಲಿ ಇಬ್ಬರೂ ತಾಳ್ಮೆಯಿಂದ ಆಡಿದರು. ಮುಂದಿನ ಸುತ್ತುಗಳಲ್ಲಿ ಆಕ್ರಮಣಕಾರಿ ಆಟಕ್ಕೆ ಮುಂದಾದರು. ಆದರೆ ಪಾಯಿಂಟ್‌ಗಳನ್ನು ಗಳಿಸುವಲ್ಲಿ ನಿಖತ್ ವಿಫಲರಾದರು. ಪ್ರಬಲ ಪಂಚ್‌ಗಳೊಂದಿಗೆ ಮಿಂಚಿದ ಸ್ಥಳೀಯ ಕ್ರೀಡಾಪಟು ಸುಲಭವಾಗಿ ಗೆಲುವು ಸಾಧಿಸಿದರು.

ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಚಿನ್ನ ಗೆದ್ದಿದ್ದ ಸೋಳಂಕಿ ಕೂಡ ಈ ಹಿಂದಿನ ಸುತ್ತುಗಳಲ್ಲಿ ಅಮೋಘ ಸಾಧನೆ ಮಾಡಿದ್ದರು. ಆದರೆ ಸೆಮಿಫೈನಲ್‌ನಲ್ಲಿ ಅರ್ಜೆಂಟೀನಾದ ನಿರ್ಕೊ ಕುಯೆಲೊಗೆ 0–5ರಲ್ಲಿ ಮಣಿದರು. ಆರಂಭದಲ್ಲಿ ಆಕ್ರಮಣಕಾರಿಯಾಗಿ ಮುನ್ನುಗ್ಗಿದ ಸೋಳಂಕಿ ಭರ್ಜರಿ ಪಂಚ್‌ಗಳ ಮೂಲಕ ಎದುರಾಳಿಗೆ ಸವಾಲೊಡ್ಡಿದರು. ಆದರೆ ನಂತರ ಎದುರಾಳಿ ಚೇತರಿಸಿಕೊಂಡು ಸತತ ಪಾಯಿಂಟ್ ಕಲೆ ಹಾಕಿದರು.

ಎರಡು ಕಂಚಿನ ಪದಕಗಳೊಂದಿಗೆ ಟೂರ್ನಿಯಲ್ಲಿ ಭಾರತದ ಅಭಿಯಾನ ಮುಕ್ತಾಯಗೊಂಡಿತು.